ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜೂನ್ 23 ಭಾನುವಾರ 2024

ಸಂಪುಟ: 45 | ಸಂಚಿಕೆ: 68 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ವೃತ್ತಿಪರ ಕೋರ್ಸ್‌ಗಳಿಗೆ ಪ್ರವೇಶಾತಿ; ವಿವಿಧ ಹುದ್ದೆಗಳ ನೇಮಕಾತಿಗೆ ನಡೆಸುವ ಪರೀಕ್ಷಾ ಪ್ರಶ್ನೆ ಪತ್ರಿಕೆಗಳ ಸೋರಿಕೆ ಪ್ರಕರಣದಿಂದ ಎಚ್ಚೆತ್ತ ಕೇಂದ್ರ ಸರ್ಕಾರದಿಂದ 'ಸಾರ್ವಜನಿಕ ಪರೀಕ್ಷಾ ಕಾಯ್ದೆ 2024' ಜಾರಿ

ಪರೀಕ್ಷಾ ಅಕ್ರಮಕ್ಕೆ 10 ವರ್ಷ ಜೈಲು; ಕೋಟಿ ರೂ. ದಂಡ

ನವದೆಹಲಿ, ಜೂ.22– ಶಿಕ್ಷಣ ಸಂಸ್ಥೆಗಳಲ್ಲಿ ಪ್ರವೇಶ ಮತ್ತು ಉದ್ಯೋಗಗಳ ನೇಮಕಾತಿಗಾಗಿ ನಡೆಯುವ ಎಲ್ಲಾ ಸ್ಪರ್ಧಾತ್ಮಕ ಪರೀಕ್ಷೆಗಳ ಪ್ರಶ್ನೆ ಪತ್ರಿಕೆಗಳ ಸೋರಿಕೆ ಸೇರಿದಂತೆ ನಾನಾ ಅಕ್ರಮಗಳ ಬೆನ್ನಲ್ಲೇ ಶುಕ್ರವಾರ ದೇಶದಲ್ಲಿ ಪತ್ರಿಕೆ ಸೋರಿಕೆ ಕಾನೂನನ್ನು ಜಾರಿಗೊಳಿಸಲಾಗಿದೆ.

ಈ ವರ್ಷದ ಫೆಬ್ರವರಿಯಲ್ಲಿ ಪತ್ರಿಕೆ ಸೋರಿಕೆ ಕಾಯ್ದೆಯನ್ನು ಅಂಗೀಕರಿಸಲಾಗಿತ್ತು. ಸರ್ಕಾರ ಶುಕ್ರವಾರ ಅಧಿಸೂಚನೆ ಹೊರಡಿಸಿದ್ದು, ಇದನ್ನು 'ಸಾರ್ವಜನಿಕ ಪರೀಕ್ಷಾ ಕಾಯ್ದೆ 2024' ಎಂದು ಹೆಸರಿಸಲಾಗಿದೆ.

ಇದರ ಅನುಷ್ಠಾನದ ನಂತರ, ಸಾರ್ವಜನಿಕ ಪರೀಕ್ಷೆಗಳಲ್ಲಿ ಅಕ್ರಮ ವಿಧಾನಗಳನ್ನು ಬಳಸಿದರೆ ಮೂರರಿಂದ ಐದು ವರ್ಷಗಳವರೆಗೆ ಜೈಲು ಶಿಕ್ಷೆ ಮತ್ತು 10 ಲಕ್ಷ ರೂ.ವರೆಗೆ ದಂಡ ವಿಧಿಸಲು ಅವಕಾಶ ಕಲ್ಪಿಸಲಾಗಿದೆ. ಸಂಘಟಿತವಾಗಿ ಇಂತಹ ಅಪರಾಧ ಎಸಗಿದರೆ 1 ಕೋಟಿ ರೂ.ವರೆಗೆ ● 5ನೇ ಪುಟಕ್ಕೆ

ಪಾರದರ್ಶಕ, ಸುಗಮ ಪರೀಕ್ಷೆಗಾಗಿ ಉನ್ನತ ಮಟ್ಟದ ಸಮಿತಿ ರಚಿಸಿದ ಕೇಂದ್ರ ಸರ್ಕಾರ

ನವದೆಹಲಿ: NEET ಮತ್ತು UGC-NET ವಿವಾದದ ನಡುವೆ ಪಾರದರ್ಶಕ, ಸುಗಮ ಮತ್ತು ನ್ಯಾಯಯುತವಾಗಿ ಪರೀಕ್ಷೆ ನಡೆಸುವುದರ ಖಾತ್ರಿಗಾಗಿ ಇಸ್ರೋ ಮಾಜಿ ಅಧ್ಯಕ್ಷ ಡಾ.ಕೆ.ರಾಧಾಕೃಷ್ಣನ್ ಅವರ ಅಧ್ಯಕ್ಷತೆಯಲ್ಲಿ ಕೇಂದ್ರ ಶಿಕ್ಷಣ ಸಚಿವಾಲಯ ಶನಿವಾರ ಉನ್ನತ ಮಟ್ಟದ ತಜ್ಞರ ಸಮಿತಿಯನ್ನು ರಚಿಸಿದೆ.

ಸಮಿತಿಯ ಅಧ್ಯಕ್ಷರು, ಸದಸ್ಯರು ಈ ಕೆಳಗಿನಂತಿದ್ದಾರೆ

ಅಧ್ಯಕ್ಷರು: **ಡಾ.ಕೆ.ರಾಧಾಕೃಷ್ಣನ್,** ಇಸ್ರೋ ಮಾಜಿ ಅಧ್ಯಕ್ಷ ಮತ್ತು BoG, ಐಐಟಿ ಕಾನ್ಪುರ ಅಧ್ಯಕ್ಷರು, **ಸದಸ್ಯರುಗಳಾದ:** **ಡಾ.ರಂದೀಪ್ ಗುಲೇರಿಯಾ,** ಮಾಜಿ ನಿರ್ದೇಶಕ, ಏಮ್ಸ್ ದೆಹಲಿ, **ಪ್ರೊ. ಬಿ.ಜೆ.ರಾವ್,** ಉಪ ಕುಲಪತಿ, ಹೈದರಾಬಾದ್ ಕೇಂದ್ರೀಯ ವಿಶ್ವವಿದ್ಯಾಲಯ, **ಪ್ರೊ.ರಾಮಮೂರ್ತಿ ಕೆ,** ಪ್ರೊಫೆಸರ್ ಎಮೆರಿಟಸ್, ಸಿವಿಲ್ ಇಂಜಿನಿಯರಿಂಗ್ ವಿಭಾಗ, ಐಐಟಿ ಮದ್ರಾಸ್, **ಪಂಕಜ್ ಬನ್ಸಾಲ್,** ಸಹ–ಸಂಸ್ಥಾಪಕ, ಪೀಪಲ್ ಸ್ಟ್ರಾಂಗ್ ಮತ್ತು ಕರ್ಮಯೋಗಿ ಭಾರತ್ ಮಂಡಳಿ ಸದಸ್ಯರು, **ಪ್ರೊ.ಆದಿತ್ಯ ಮಿತ್ತಲ್,** ವಿದ್ಯಾರ್ಥಿ ವ್ಯವಹಾರಗಳ ಡೀನ್, IIT ದೆಹಲಿ, **ಗೋವಿಂದ್ ಜೈಸ್ವಾಲ್,** ಜಂಟಿ ಕಾರ್ಯದರ್ಶಿ ಕೇಂದ್ರ ಶಿಕ್ಷಣ ಸಚಿವಾಲಯ

ನೀಟ್ ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣ: 6 ಜನರ ಬಂಧನ

ನವದೆಹಲಿ: ನೀಟ್ ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣಕ್ಕೆ ಸಂಬಂಧಿಸಿದಂತೆ ಬಿಹಾರ ಪೊಲೀಸರು ಜಾರ್ಖಂಡ್ ರಾಜ್ಯದ ದಿಯೋಘರ್ ಜಿಲ್ಲೆಯಲ್ಲಿ 6 ಜನ ಶಂಕಿತರನ್ನು ಬಂಧಿಸಿದ್ದಾರೆ. ಏಮ್ಸ್ ಆಸ್ಪತ್ರೆಯ ಹತ್ತಿರದಲ್ಲಿ ಬಂಧಿತ ಆರೋಪಿಗಳು ಗೆಳೆಯನ ಮನೆಯಲ್ಲಿ ವಾಸವಾಗಿದ್ದರು. ಇವರನ್ನು ಪಟ್ನಾಕ್ಕೆ ಕರೆತಂದು ವಿಚಾರಣೆ ನಡೆಸಲಾಗುವುದು ಎಂದು ಪೊಲೀಸ್ ಅಧಿಕಾರಿ ರಿತ್ವಿಕ್ ಶ್ರೀವಾಸ್ತವ ಹೇಳಿದ್ದಾರೆ.

ಬಂಧಿತರನ್ನು ಬಿಹಾರದ ನಳಂದ ಜಿಲ್ಲೆಯ ನಿವಾಸಿಗಳಾದ ಪರಮ್‌ಜಿತ್ ಸಿಂಗ್ ಅಲಿಯಾಸ್ ಬಿಟ್ಟು, ಚಿಂಟು ಅಲಿಯಾಸ್ ಬಲ್ದೇವ್ ಕುಮಾರ್, ಪ್ರಶಾಂತ್ ಕುಮಾರ್, ಅಜಿತ್ ಕುಮಾರ್, ರಾಜೀವ್ ಕುಮಾರ್ ಮತ್ತು ಪಾಕು ಕುಮಾರ್ ಎಂದು ಪೊಲೀಸರು ಬಿಡುಗಡೆ ಮಾಡಿದ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಮೇ 5ರಂದು ನಡೆದ ಪರೀಕ್ಷೆಯಲ್ಲಿ ಸುಮಾರು 24 ಲಕ್ಷ ಅಭ್ಯರ್ಥಿಗಳು ಪರೀಕ್ಷೆ ಬರೆದಿದ್ದರು. ಜೂನ್ 4ರಂದು ಫಲಿತಾಂಶ ಪ್ರಕಟಿಸಲಾಗಿತ್ತು. ನಂತರದ ದಿನಗಳಲ್ಲಿ ಬಿಹಾರ ಸೇರಿದಂತೆ ಹಲವು ರಾಜ್ಯಗಳಲ್ಲಿ ಪರೀಕ್ಷೆ ಅಕ್ರಮಗಳು, ಪ್ರಶ್ನೆಪತ್ರಿಕೆ ಸೋರಿಕೆಯಂತಹ ಆರೋಪಗಳು ಕೇಳಿಬಂದಿದ್ದವು.

ಮೇಕೆದಾಟು, ಮಹದಾಯಿ ಜೊತೆಗೆ ರಾಜ್ಯಕ್ಕೆ ಹೊಸ ಯೋಜನೆ ತರುತ್ತೇವೆ...

ಕೇಂದ್ರ ಉಕ್ಕು, ಬೃಹತ್ ಕೈಗಾರಿಕಾ ಸಚಿವ ಎಚ್.ಡಿ.ಕುಮಾರಸ್ವಾಮಿ ಭರವಸೆ

● ಬಿಜೆಪಿಯಿಂದ ಎನ್‌ಡಿಎಯ 19 ಸಂಸದರಿಗೆ ಸನ್ಮಾನ ● ಪ್ರಧಾನಿ, ಸಂಬಂಧಪಟ್ಟ ಸಚಿವರ ಮನವೊಲಿಸಿ ಯೋಜನೆ ಜಾರಿಗೆ ಅವಿರತ ಪ್ರಯತ್ನದ ಭರವಸೆ



ಎನ್‌ಡಿಎ ಕೂಟದ ನೂತನ ಸಂಸದರಿಗೆ ರಾಜ್ಯ ಬಿಜೆಪಿ ಹಮ್ಮಿಕೊಂಡಿದ್ದ ಸನ್ಮಾನ ಕಾರ್ಯಕ್ರಮದಲ್ಲಿ ಅಭಿನಂದಿಸಲಾಯಿತು.

ಬೆಂಗಳೂರು, ಜೂ.22(ಕೆಎಂಶಿ)– ಮೇಕೆದಾಟು ಹಾಗೂ ಮಹದಾಯಿ ಸೇರಿದಂತೆ ನನೆಗುದಿಗೆ ಬಿದ್ದಿರುವ ಯೋಜನೆಗಳ ಜೊತೆಗೆ ಹೊಸ ಕಾರ್ಯಕ್ರಮಗಳನ್ನು ರಾಜ್ಯಕ್ಕೆ ತರುವ ಮೂಲಕ ಮತದಾರರ ಋಣ ತೀರಿಸುವುದಾಗಿ ಕೇಂದ್ರ ಉಕ್ಕು ಮತ್ತು ಬೃಹತ್ ಕೈಗಾರಿಕಾ ಸಚಿವ ಎಚ್.ಡಿ.ಕುಮಾರಸ್ವಾಮಿ ಇಂದಿಲ್ಲಿ ಭರವಸೆ ನೀಡಿದ್ದಾರೆ.

ಕಳೆದ ಲೋಕಸಭಾ ಚುನಾವಣೆಯಲ್ಲಿ ಎನ್‌ಡಿಎ ಕೂಟದ 19 ಸದಸ್ಯರನ್ನು ದೆಹಲಿಗೆ ಕಳುಹಿಸಿದ್ದೀರಿ. ನಾವು ಒಂದಾಗಿ ಪ್ರಧಾನಿ ನರೇಂದ್ರ ಮೋದಿ ಹಾಗೂ ಇಲಾಖೆಗಳಿಗೆ ಸಂಬಂಧಪಟ್ಟ ಕೇಂದ್ರ ಸಚಿವರ ಮನವೊಲಿಸಿ ರಾಜ್ಯದ ಅಭಿವೃದ್ಧಿಗೆ ಶ್ರಮಿಸುತ್ತೇವೆ.

ಪ್ರಹ್ಲಾದ್ ಜೋಷಿ ಅವರು ಕೇಂದ್ರ ಸಂಪುಟದಲ್ಲಿ ಹಿರಿಯರಿದ್ದಾರೆ. ಅವರು ಎಲ್ಲರ ಜೊತೆಯೂ ಒಳ್ಳೆ ಸಂಬಂಧ ಇಟ್ಟುಕೊಂಡಿದ್ದಾರೆ. ಅಲ್ಲದೆ, ಶೋಭಾ ಕರಂದ್ಲಾಜೆ ಅವರು ಕೇಂದ್ರ ಸಂಪುಟದಲ್ಲಿ ಕಾರ್ಯ ನಿರ್ವಹಿಸಿದ್ದಾರೆ. ಅವರ ಸಹಕಾರದಿಂದ ಹಳೆ ಯೋಜನೆಗಳ ಜೊತೆಗೆ ಹೊಸ ಕಾರ್ಯಕ್ರಮಗಳನ್ನು ತಂದು ರಾಜ್ಯ ಮತ್ತು ದೇಶದ ● 5ನೇ ಪುಟಕ್ಕೆ

ಯಾವುದೇ ಕ್ಷಣದಲ್ಲಿ ಸಿದ್ದರಾಮಯ್ಯ ಸರ್ಕಾರ ಪತನ

● ಕೇಂದ್ರ ಸಚಿವ ವಿ.ಸೋಮಣ್ಣ ಭವಿಷ್ಯ ● ಇದು ಮೂರು ಇಲ್ಲವೇ ಆರು ತಿಂಗಳಲ್ಲಿ ಉರುಳುತ್ತೆ!

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ದಿನಗಳನ್ನು ಎಣಿಸುತ್ತಿದ್ದು ಯಾವುದೇ ಕ್ಷಣದಲ್ಲಿ ಪತನಗೊಳ್ಳಲಿದೆ ಎಂದು ಕೇಂದ್ರ ರೈಲ್ವೆ ಜಲಶಕ್ತಿ ರಾಜ್ಯ ಸಚಿವ ವಿ.ಸೋಮಣ್ಣ ಇಂದಿಲ್ಲಿ ಭವಿಷ್ಯ ನುಡಿದಿದ್ದಾರೆ.

ಲೋಕಸಭಾ ಚುನಾವಣೆಯಲ್ಲಿ ಆಯ್ಕೆಗೊಂಡ ಎನ್‌ಡಿಎ ಕೂಟದ 19 ಸಂಸದರಿಗೆ ಅರಮನೆ ಮೈದಾನದಲ್ಲಿ ಬಿಜೆಪಿ ಹಮ್ಮಿಕೊಂಡಿದ್ದ ಸನ್ಮಾನ ಸಮಾರಂಭದಲ್ಲಿ ಮಾತನಾಡಿದ ಅವರು, ಸಿದ್ದರಾಮಯ್ಯ ಸರ್ಕಾರ ಇನ್ನು ಮೂರು ಅಥವಾ ಆರು ತಿಂಗಳೊಳಗೆ ಉರುಳುತ್ತದೆ ಎಂದರು.

ಈ ಸರ್ಕಾರದ ಭವಿಷ್ಯದ ಬಗ್ಗೆ ಕೇಂದ್ರದ ನನ್ನ ಹಿರಿಯ ಸಹೋದ್ಯೋಗಿ ಕುಮಾರಸ್ವಾಮಿ ಅವರು ● 2ನೇ ಪುಟಕ್ಕೆ

ನೀಟ್ ರದ್ದತಿಯಿಂದ ಲಕ್ಷಾಂತರ ವಿದ್ಯಾರ್ಥಿಗಳ ಮೇಲೆ ಪರಿಣಾಮ



ಧರ್ಮೇಂದ್ರ

ನವದೆಹಲಿ, ಜೂ.22– ಎನ್‌ಇಇಟಿ ರದ್ದು ಮಾಡದೇ ಇರಲು ಕೇಂದ್ರ ಸರ್ಕಾರ ನಿರ್ಧರಿಸಿದೆ. ಪ್ರಶ್ನೆ ಪತ್ರಿಕೆ ಸೋರಿಕೆಯ ಹಿನ್ನೆಲೆಯಲ್ಲಿ ನೀಟ್ ಪರೀಕ್ಷೆಯ ಕುರಿತು ದೇಶವ್ಯಾಪಿ ಚರ್ಚೆ ನಡೆಯುತ್ತಿದೆ. ಈ ಬಗ್ಗೆ ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್, ಪ್ರಶ್ನೆ ಪತ್ರಿಕೆ ಸೋರಿಕೆಯಿಂದ ಸೀಮಿತ ಸಂಖ್ಯೆಯ ವಿದ್ಯಾರ್ಥಿಗಳ ಮೇಲೆ ಮಾತ್ರ ಪರಿಣಾಮ ಬೀರಿದೆ. 2004 ಮತ್ತು 2015ರ ಹಿಂದಿನ ಘಟನೆಗಳೊಂದಿಗೆ ಹೋಲಿಕೆ ಮಾಡಿದರೆ, ಈ ಘಟನೆ ತೀವ್ರವಾಗಿ ವ್ಯತಿರಿಕ್ತವಾಗಿದೆ. ಆಗಿನ ಪರಿಸ್ಥಿತಿಯಲ್ಲಿ ವ್ಯಾಪಕವಾದ ಪ್ರಶ್ನೆ ● 5ನೇ ಪುಟಕ್ಕೆ

ಮತ್ತೆ ಪರಪ್ಪನ ಅಗ್ರಹಾರ ಜೈಲುವಾಸಿಯಾದ ದರ್ಶನ್

ಬೆಂಗಳೂರು, ಜೂ.22(ಕೆಎಂಶಿ)– ಚಿತ್ರದುರ್ಗದ ರೇಣುಕಾಸ್ವಾಮಿಯನ್ನು ಅಪಹರಿಸಿ, ಚಿತ್ರಹಿಂಸೆ ನೀಡಿ, ಹತ್ಯೆ ಮಾಡಿದ ಪ್ರಕರಣದಲ್ಲಿ ಪೊಲೀಸ್ ಕಸ್ಟಡಿಯಲ್ಲಿದ್ದ ನಟ ದರ್ಶನ್ ಸೇರಿ ನಾಲ್ವರು ಆರೋಪಿಗಳನ್ನು 14 ದಿನಗಳ ನ್ಯಾಯಾಂಗ ಬಂಧನಕ್ಕೆ ಒಳಪಡಿಸಲಾಗಿದ್ದು, ಇವರನ್ನೆಲ್ಲ ಪರಪ್ಪನ ಅಗ್ರಹಾರ ಜೈಲಿಗೆ ಸ್ಥಳಾಂತರಿಸಲಾಗಿದೆ.

ಹನ್ನೆರಡು ದಿನಗಳ ಪೊಲೀಸ್ ಕಸ್ಟಡಿ ಅಂತ್ಯಗೊಂಡ ಹಿನ್ನೆಲೆಯಲ್ಲಿ ನಟ ದರ್ಶನ್, ವಿನಯ್, ಪ್ರದೋಶ್ ಮತ್ತು ಧನರಾಜ್ ಅವರನ್ನು 24ನೇ ಎಸಿಎಂಎಂ ನ್ಯಾಯಾಲಯಕ್ಕೆ ಇಂದು ಹಾಜರುಪಡಿಸಲಾಗಿತ್ತು. ವಿಚಾರಣೆ ನಂತರ ಆರೋಪಿಗಳನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿ ನ್ಯಾಯಾಧೀಶರು ಆದೇಶ ಮಾಡಿದರು. ಪರಪ್ಪನ ಅಗ್ರಹಾರ ಜೈಲಿಗೆ ಸೇರಿದ ದರ್ಶನ್‌ಗೆ ವಿಚಾರಣಾಧೀನ ಕೈದಿ ನಂಬರ್ 6106 ನೀಡಲಾಗಿದ್ದು, ಭದ್ರತಾ ದೃಷ್ಟಿಯಿಂದ ಆತನನ್ನು ಜೈಲಿನ ಬಿ



ಬ್ಲಾಕ್‌ನಲ್ಲಿ ಇರಿಸಲಾಗಿದೆ ಎಂದು ಮೂಲಗಳು ತಿಳಿಸಿವೆ. ಇಂದು ದರ್ಶನ್ ಹಾಗೂ ಇತರರನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ ವೇಳೆ ಪೊಲೀಸರ ಪರ ವಾದ ಮಂಡಿಸಿದ ಎಸ್‌ಪಿಪಿ ಪಿ. ಪ್ರಸನ್ನಕುಮಾರ್ ಅವರು, ರೇಣುಕಾಸ್ವಾಮಿ ಹತ್ಯೆ ಪ್ರಕರಣದಲ್ಲಿ ಪರಪ್ಪನ ಅಗ್ರಹಾರ ಜೈಲು ಸೇರಿರುವ ಕೆಲವು ಆರೋಪಿಗಳಿಗೆ ಜೈಲಿನಲ್ಲಿರುವ ದರ್ಶನ್ ಅಭಿಮಾನಿಗಳಿಂದ ಜೀವ ಬೆದರಿಕೆ ಇರುವ ಕಾರಣ ಅವರನ್ನು ಬೇರೆ ಜೈಲಿಗೆ ಸ್ಥಳಾಂತರಿಸಬೇಕು ಎಂದು ಮನವಿ ಮಾಡಿದ್ದಾರೆ. ಇದಕ್ಕೆ ದರ್ಶನ್ ಪರ ವಕೀಲರು ವಿರೋಧ ವ್ಯಕ್ತಪಡಿಸಿದ್ದು, ನ್ಯಾಯಾಧೀಶರು ವಿಚಾರಣೆಯನ್ನು ಸೋಮವಾರಕ್ಕೆ ಮುಂದೂಡಿದರು. ದರ್ಶನ್ ಗೆಳತಿ ಪವಿತ್ರಾಗೌಡಳಿಗೆ ಅಶ್ಲೀಲ ಮೆಸೇಜ್ ರವಾನಿಸಿದನೆಂಬ ಕಾರಣಕ್ಕಾಗಿ ಚಿತ್ರದುರ್ಗದಿಂದ ರೇಣುಕಾಸ್ವಾಮಿಯನ್ನು ಜೂ.8ರಂದು ● 2ನೇ ಪುಟಕ್ಕೆ

ಅಸಹಜ ಲೈಂಗಿಕ ದೌರ್ಜನ್ಯ ಆರೋಪದಡಿ ಸೂರಜ್ ರೇವಣ್ಣ ವಿರುದ್ಧ ಪ್ರಕರಣ ದಾಖಲು

ಹಾಸನ, ಜೂ.22–ಹಾಸನ ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಲೈಂಗಿಕ ದೌರ್ಜನ್ಯ ಆರೋಪದಡಿ ಜೈಲು ಸೇರಿರುವ ಬೆನ್ನಲ್ಲೇ ಅವರ ಸಹೋದರ ಜೆಡಿಎಸ್‌ನ ವಿಧಾನಪರಿಷತ್ ಸದಸ್ಯ ಸೂರಜ್ ರೇವಣ್ಣ ವಿರುದ್ಧ ಅಸಹಜ ಲೈಂಗಿಕ ದೌರ್ಜನ್ಯ ಆರೋಪದಡಿ ಶನಿವಾರ ಹೊಳೆನರಸೀಪುರ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಅರಕಲಗೂಡಿನ ಜೆಡಿಎಸ್ ಕಾರ್ಯಕರ್ತ, ಸೂರಜ್ ರೇವಣ್ಣ ತನ್ನ ಮೇಲೆ ಜೂ.16ರಂದು ಅಸಹಜ ಲೈಂಗಿಕ ದೌರ್ಜನ್ಯ ನಡೆಸಿದ್ದಾರೆ ಎಂದು ಆರೋಪಿಸಿ ಕೆಲದಿನಗಳ ಹಿಂದೆ ರಾಜ್ಯ ಪೊಲೀಸ್ ಮಹಾನಿರ್ದೇಶಕರು ಹಾಗೂ ಗೃಹ ಸಚಿವರು ಮತ್ತು ಹಾಸನ ಎಸ್ಪಿಯವರಿಗೆ ಇ–ಮೇಲ್ ಮೂಲಕ ದೂರು ಸಲ್ಲಿಸಿದ್ದ.

ಸಂತ್ರಸ್ತ ಯುವಕ ಸೂರಜ್ ವಿರುದ್ಧ ದೂರು ಸಲ್ಲಿಸಿದ್ದಾನೆ ಎಂಬ ವಿಚಾರ ತಿಳಿಯುತ್ತಿದ್ದಂತೆಯೇ ಸೂರಜ್ ರೇವಣ್ಣ ಬ್ರಿಗೇಡ್ ಖಜಾಂಚಿ ಶಿವಕುಮಾರ್ ಅವರು, ಸಂತ್ರಸ್ತ ಯುವಕ ಉದ್ಯೋಗ



ಸೂರಜ್ ರೇವಣ್ಣ

ಪಡೆಯಲು ಸೂರಜ್ ಅವರನ್ನು ಭೇಟಿ ಮಾಡಬೇಕೆಂದು ಹೇಳಿದ ಹಿನ್ನೆಲೆಯಲ್ಲಿ ಆತನನ್ನು ಚನ್ನರಾಯಪಟ್ಟಣ ತಾಲೂಕು ಗನ್ನಿಗಡದಲ್ಲಿರುವ ಸೂರಜ್ ಅವರ ತೋಟದ ಮನೆಗೆ ಜೂ.16ರಂದು ಕಳುಹಿಸಲಾಗಿತ್ತು. ಆದರೆ ಆತ ತನಗೆ ಸೂರಜ್ ಅವರಿಂದ 5 ಕೋಟಿ ರೂ. ಕೊಡಿಸದಿದ್ದರೆ ಆಸ್ಪತ್ರೆಯಲ್ಲಿ ಎಂಎಲ್‌ಸಿ ಮಾಡಿಸಿ ಪೊಲೀಸರಿಗೆ ದೂರು ಕೊಡುವುದಾಗಿ ಬ್ಲಾಕ್‌ಮೇಲ್ ಮಾಡಿದ್ದ. ನಂತರ ಜೂ.18ರಂದು ಮತ್ತೆ ತನ್ನನ್ನು ಭೇಟಿಯಾದ ಆತ 3 ಕೋಟಿಯನ್ನಾದರೂ ಕೊಡಿಸಬೇಕು ಎಂದು ತಾಕೀತು ಮಾಡಿದ್ದ. ಜೂ.19ರಂದು ಕರೆ ಮಾಡಿ 2.5 ಕೋಟಿಯನ್ನಾದರೂ ಕೊಡಿಸಬೇಕು. ಇಲ್ಲದಿದ್ದರೆ ಪೊಲೀಸರಿಗೆ ದೂರು ನೀಡುವುದರ ಜೊತೆಗೆ ಪತ್ರಿಕಾಗೋಷ್ಠಿ ನಡೆಸುವುದಾಗಿ ಬ್ಲಾಕ್‌ಮೇಲ್ ಮಾಡಿದ್ದಾನೆ ಎಂದು ನಿನ್ನೆ ಶಿವಕುಮಾರ್ ಹೊಳೆನರಸೀಪುರ ಟೌನ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದರು.

ಮತ್ತೊಂದೆಡೆ ಸಂತ್ರಸ್ತನ ಇ–ಮೇಲ್ ದೂರಿನ ಆಧಾರದ ಮೇರೆಗೆ ಹೊಳೆನರಸೀಪುರ ಗ್ರಾಮಾಂತರ ಠಾಣೆಯಲ್ಲಿ ಸೂರಜ್ ವಿರುದ್ಧ ಇಂದು ಭಾರತೀಯ ದಂಡ ಸಂಹಿತೆ 377, 342 ಮತ್ತು 506ರಡಿ ಪ್ರಕರಣ ದಾಖಲಿಸಲಾಗಿದೆ.

ದೂರು ಮತ್ತು ಪ್ರತಿದೂರು ದಾಖಲಾದ ಬೆನ್ನಲ್ಲೇ ಇಂದು ಸಂಜೆ ಹೊಳೆನರಸೀಪುರ ಠಾಣೆ ಪೊಲೀಸರು ಗನ್ನಿಗಡ ತೋಟದ ಮನೆಯಿಂದ ಸೂರಜ್ ರೇವಣ್ಣ ಅವರನ್ನು, ಹಾಸನ ಜಿಲ್ಲಾ ಸೆನ್ ಠಾಣೆಗೆ ಕರೆದೊಯ್ದು ವಿಚಾರಣೆಗೊಳಪಡಿಸಿದ್ದಾರೆ. ಹೀಗಾಗಿ ● 2ನೇ ಪುಟಕ್ಕೆ

ಆನ್‌ಲೈನ್ ಟ್ರೇಡಿಂಗ್ ಹೆಸರಲ್ಲಿ ಉದ್ಯಮಿಗೆ 2.96 ಕೋಟಿ ರೂ. ಪಂಗನಾಮ

ಜೂನ್ 21ರಂದು ಒಂದೇ ದಿನ 20 ಲಕ್ಷ ರೂ. ಹಣ ಕಳೆದುಕೊಂಡ ಮೈಸೂರಿನ ನಾಲ್ವರು 'ಜಾಣರು'

ಮೈಸೂರು, ಜೂ.22(ಆರ್‌ಕೆ)– ಆನ್‌ಲೈನ್ ಟ್ರೇಡಿಂಗ್ ಮತ್ತು ಷೇರು ಮಾರುಕಟ್ಟೆ ಹೆಸರಲ್ಲಿ ಮೈಸೂರಿನ ಉದ್ಯಮಿಯೋರ್ವ 2.96 ಕೋಟಿ ರೂ. ಕಳೆದುಕೊಂಡಿರುವ ಪ್ರಕರಣ ಇಂದು ಪತ್ತೆಯಾಗಿದೆ. ಇದರೊಂದಿಗೆ ಆನ್‌ಲೈನ್ ದೋಖಾಗೆ ಮತ್ತೊಂದು ಸೇರ್ಪಡೆಯಾಗಿದೆ.

ತಾನು ಮೋಸ ಹೋಗಿರುವ ಬಗ್ಗೆ ಉದ್ಯಮಿ ಮೈಸೂರಿನ ನಜರ್‌ಬಾದ್‌ನಲ್ಲಿರುವ ಆರ್ಥಿಕ ಅಪರಾಧಗಳು ಮತ್ತು ಮಾದಕ ವಸ್ತು (ಸೆನ್) ಪೊಲೀಸ್ ಠಾಣೆಗೆ ದೂರು ನೀಡಿದ ಹಿನ್ನೆಲೆಯಲ್ಲಿ ಇನ್ಸ್‌ಪೆಕ್ಟರ್ ಪ್ರಸನ್ನಕುಮಾರ್ ಇಂದು ಪ್ರಕರಣ ದಾಖಲಿಸಿಕೊಂಡು ತನಿಖೆ ಆರಂಭಿಸಿದ್ದಾರೆ. 30 ವರ್ಷ ವಯಸ್ಸಿನ ವ್ಯಕ್ತಿ ಮೈಸೂರಿನ ವ್ಯಾಪಾರಿಯಾಗಿದ್ದು ಆರ್ಥಿಕವಾಗಿ ಸುಸ್ಥಿತಿಯಲ್ಲಿದ್ದರೂ, ಅಧಿಕ ಆಸ್ತಿ ಗಳಿಸಬೇಕೆಂಬ ಹಂಬಲದಿಂದ ಆನ್‌ಲೈನ್ ಟ್ರೇಡಿಂಗ್, ಷೇರ್ ಮಾರ್ಕೆಟ್ ಟ್ರೇಡಿಂಗ್ ಮತ್ತು ಷೇರ್ ಮಾರ್ಕೆಟಿಂಗ್‌ನಲ್ಲಿ ಆಸಕ್ತಿ ವಹಿಸಿದ್ದರು. ಮೊಬೈಲ್ ಆ್ಯಪ್‌ವೊಂದರಲ್ಲಿ ಬಂದ ಮೆಸೇಜ್ ನೋಡಿದ ಉದ್ಯಮಿ, ಅದನ್ನು ಕ್ಲಿಕ್ ಮಾಡಿದಾಗ



ಟ್ರೇಡಿಂಗ್ ಮತ್ತು ಷೇರ್ ಮಾರ್ಕೆಟಿಂಗ್ ಮೇಲೆ ಹಣ ತೊಡಗಿಸಿದಲ್ಲಿ ಒಂದು ತಿಂಗಳಿಗೆ ದ್ವಿಗುಣ ಲಾಭಾಂಶ ಬರುತ್ತದೆ. ಎಲ್ಲವೂ ಬ್ಯಾಂಕ್ ವಹಿವಾಟು ಮೂಲಕವೇ ನಡೆಯಲಿದ್ದು, ನಿಮಗೆ ಅನುಕೂಲವಾಗುತ್ತದೆ ಎಂಬ ಮಾಹಿತಿ ಇತ್ತು.

ಒಂದೇ ತಿಂಗಳಲ್ಲಿ ಹಣ ದ್ವಿಗುಣವಾಗುವುದಾದರೆ ಏಕೆ ತೊಡಗಿಸಬಾರದು ಎಂದು ನಿರ್ಧರಿಸಿ, ಮೆಸೇಜ್‌ಗೆ ಪ್ರತಿಕ್ರಿಯಿಸುತ್ತಾ ಬಂದರು. ಆನ್‌ಲೈನ್‌ನಲ್ಲಿ ಅವರು ಕೇಳಿದಂತೆ ಬ್ಯಾಂಕ್ ಅಕೌಂಟ್ ಡೀಟೇಲ್ಸ್, ಎಟಿಎಂ ಕೋಡ್, ಆಧಾರ್ ನಂಬರ್ ಮತ್ತಿತರ ಮಾಹಿತಿಗಳನ್ನು ಉದ್ಯಮಿ ಅಪ್‌ಲೋಡ್ ಮಾಡಿದರು.

ಕಳೆದ ನಾಲ್ಕು ದಿನಗಳಿಂದ ಈ ರೀತಿಯ ಪ್ರಕ್ರಿಯೆಯಲ್ಲಿ ನಿರತರಾಗಿದ್ದ ಉದ್ಯಮಿ, ಆನ್‌ಲೈನ್ ಮೂಲಕ ಸಂದೇಶಕ್ಕೆ ಉತ್ತರಿಸುತ್ತಾ ಬರುತ್ತಿದ್ದಂತೆಯೇ ಶುಕ್ರವಾರ ರಾತ್ರಿ 9 ಗಂಟೆ ವೇಳೆಗೆ ಬ್ಯಾಂಕ್‌ನ ತಮ್ಮ ಖಾತೆಯಲ್ಲಿದ್ದ 2.96 ಕೋಟಿ ರೂ. ಟ್ರಾನ್ಸ್‌ಫರ್ ಆಗಿರುವುದು ಅವರ ಮೊಬೈಲ್ ಫೋನ್‌ಗೆ ಬಂದ ಮೆಸೇಜ್‌ನಿಂದ ತಿಳಿಯಿತು.

ತಾವು ಯಾವುದೇ ವಹಿವಾಟು ನಡೆಸದಿದ್ದರೂ ಬ್ಯಾಂಕ್ ಅಕೌಂಟ್‌ನಿಂದ ಹಣ ಡೆಬಿಟ್ ಆಗಿರುವ ಬಗ್ಗೆ ಆತಂಕಗೊಂಡ ಉದ್ಯಮಿ, ಸಂಶಯಗೊಂಡು ಮೊಬೈಲ್‌ನಲ್ಲಿ ಬ್ಯಾಂಕ್ ಖಾತೆ ವಹಿವಾಟು ಪರಿಶೀಲಿಸಿದಾಗ 2.96 ಕೋಟಿ ರೂ. ಬೇರೆ ಅಕೌಂಟ್‌ಗೆ ಟ್ರಾನ್ಸ್‌ಫರ್ ಆಗಿರುವುದು ತಿಳಿಯಿತು. ತಕ್ಷಣ ಅವರು ಶುಕ್ರವಾರ ರಾತ್ರಿಯೇ ಸೆನ್ ಪೊಲೀಸ್ ಠಾಣೆಗೆ ತೆರಳಿ ಮಾಹಿತಿ ನೀಡಿ ದೂರು ದಾಖಲಿಸಿದ್ದರು. ಉದ್ಯಮಿ ನೀಡಿದ ಬ್ಯಾಂಕ್ ಡೀಟೇಲ್ಸ್ ಆಧಾರದಲ್ಲಿ ವೈಜ್ಞಾನಿಕ ತಂತ್ರಜ್ಞಾನ ಅನುಸರಿಸಿ ತನಿಖೆ ಕೈಗೊಂಡ ಪೊಲೀಸರು, ಹಣ ಯಾವ ಬ್ಯಾಂಕ್ ಖಾತೆಗೆ ಕ್ರೆಡಿಟ್ ಆಗಿದೆ ಎಂಬುದನ್ನು ಪತ್ತೆ ಮಾಡುವ ಪ್ರಕ್ರಿಯೆ ಆರಂಭಿಸಿದ್ದಾರೆ.

ಇಂದು 4ನೇ ಶನಿವಾರ ರಜೆ, ನಾಳೆ (ಜೂ. 23) ಭಾನುವಾರದ ರಜೆ ಇರುವುದರಿಂದ ಬ್ಯಾಂಕ್‌ಗಳು ತೆರೆಯುವುದಿಲ್ಲ. ಅಲ್ಲದೆ ಶುಕ್ರವಾರವೂ ಬ್ಯಾಂಕುಗಳು ಬಂದ್ ಆದ ಮೇಲೆ ರಾತ್ರಿ 9 ಗಂಟೆಗೆ ವಂಚಕರು ಉದ್ಯಮಿ ಅಕೌಂಟ್‌ನಿಂದ ಹಣ ಟ್ರಾನ್ಸ್‌ಫರ್ ಮಾಡಿಕೊಂಡು ಬುದ್ಧಿವಂತಿಕೆ ಪ್ರದರ್ಶಿಸಿದ್ದಾರೆ. ಒಬ್ಬನೇ ವ್ಯಕ್ತಿಯಿಂದ ಒಂದೇ ದಿನ 2.96 ಕೋಟಿ ರೂ. ಬೃಹತ್ ಪ್ರಮಾಣದ ಹಣವನ್ನು ಆನ್‌ಲೈನ್‌ನಲ್ಲಿ ಟ್ರಾನ್ಸ್‌ಫರ್ ಮಾಡಿಕೊಂಡು ವಂಚಿಸಿರುವುದು ಮೈಸೂರಿನಲ್ಲಿ ಇತ್ತೀಚಿನ ದಿನಗಳಲ್ಲೇ ಅಪರೂಪದ ಪ್ರಕರಣವಾಗಿದೆ ಎಂದು ಸೆನ್ ಠಾಣೆ ಪೊಲೀಸರು ತಿಳಿಸಿದ್ದಾರೆ. ಈ ಹಿಂದೆ ಅನಕ್ಷರಸ್ಥರು, ಲೋಕ ಜ್ಞಾನ ಇಲ್ಲದವರು, ಗ್ರಾಮಾಂತರ ಪ್ರದೇಶದ ● 5ನೇ ಪುಟಕ್ಕೆ

ಸೈಬರ್ ಅಪರಾಧ ಸಂತ್ರಸ್ತರ ಗೌಪ್ಯತೆ ಕಾಪಾಡಿ: ಪೊಲೀಸರ ಮನವಿ



ಬಿ.ರಮೇಶ್

ಮೈಸೂರು, ಜೂ. 22(ಆರ್‌ಕೆ)– ಸೈಬರ್ ಅಪರಾಧಗಳಿಂದ ವಂಚನೆಗೊಳಗಾದ ಸಂತ್ರಸ್ತರ ಗೌಪ್ಯತೆ ಕಾಪಾಡುವಂತೆ ಮೈಸೂರು ನಗರ ಪೊಲೀಸ್ ಆಯುಕ್ತ ಬಿ. ರಮೇಶ್ ತಿಳಿಸಿದ್ದಾರೆ.

ಆನ್‌ಲೈನ್ ಟ್ರೇಡಿಂಗ್, ಷೇರ್ ಮಾರ್ಕೆಟಿಂಗ್‌ನಂತಹ ಇನ್ನಿತರ ಸೈಬರ್ ಸ್ವರೂಪದ ಪ್ರಕರಣಗಳಲ್ಲಿ ಹಣ ಕಳೆದುಕೊಂಡು ವಂಚನೆಗೊಳಗಾದವರ ಹೆಸರು, ವಿಳಾಸಗಳಂತಹ ವೈಯಕ್ತಿಕ ಮಾಹಿತಿಗಳನ್ನು ಪ್ರಕಟಿಸದೇ ಅವರ ಗೌಪ್ಯತೆ ಕಾಪಾಡುವಂತೆ ಅವರು ಪತ್ರಿಕಾ ಪ್ರಕಟಣೆ ಮೂಲಕ ಕೇಳಿಕೊಂಡಿದ್ದಾರೆ. ಇತ್ತೀಚಿನ ದಿನಗಳಲ್ಲಿ ಹೆಚ್ಚಿನ ಸಂಖ್ಯೆಯ ಸೈಬರ್ ಕ್ರೈಂಗಳಾಗುತ್ತಿದ್ದು, ಪೊಲೀಸ್ ಠಾಣೆಗಳಲ್ಲಿ ಪ್ರಕರಣಗಳು ದಾಖಲಾಗುತ್ತಿವೆ. ಎಫ್‌ಐಆರ್ ದಾಖಲಾಗುತ್ತಿದ್ದಂತೆಯೇ ಪತ್ರಿಕೆಗಳಲ್ಲಿ ಹಣ ಕಳೆದುಕೊಂಡವರ ಹೆಸರು ಮತ್ತು ವಿಳಾಸ ಪ್ರಕಟವಾಗುತ್ತಿರುವುದರಿಂದ ಸಂತ್ರಸ್ತರಿಗೆ ಮುಜುಗರವಾಗುತ್ತಿದೆ ಎಂದು ಅವರು ಆಕ್ಷೇಪಿಸುತ್ತಿರುವುದರಿಂದ ಗೌಪ್ಯತೆ ಕಾಪಾಡುವಂತೆ ಪೊಲೀಸ್ ಆಯುಕ್ತರು ತಿಳಿಸಿದ್ದಾರೆ.

ಮೈಸೂರು ಮಿತ್ರ

ರಾಮಕೃಷ್ಣ ವಿದ್ಯಾಕೇಂದ್ರದಲ್ಲಿ ವಿಶ್ವ ಯೋಗ ದಿನಾಚರಣೆ



ರಾಮಕೃಷ್ಣ ವಿದ್ಯಾಕೇಂದ್ರ ಶಾಲೆಯಲ್ಲಿ ವಿಶ್ವ ಯೋಗ ದಿನ ಆಚರಿಸಲಾಯಿತು.

ಮೈಸೂರು, ಜೂ. 22– ಮೈಸೂರಿನ ರಾಮಕೃಷ್ಣನಗರದ ರಾಮಕೃಷ್ಣ ವಿದ್ಯಾ ಕೇಂದ್ರ ಶಾಲೆಯ ವತಿಯಿಂದ ವಿಶ್ವ ಯೋಗ ದಿನವನ್ನು ಆಚರಿಸಲಾಯಿತು. ಮುಖ್ಯ ಅತಿಥಿಗಳಾಗಿದ್ದ ತೆರಿಗೆ ಸಲಹೆ ಗಾರರು ಹಾಗೂ ಯೋಗಪಟು ಪ್ರಕಾಶ್ ಸಿ.ಎನ್ ಮಾತನಾಡಿ, ಯೋಗ ಎಂದರೆ ಜೋಡಿಸು, ಹೊಂದಿಸು, ಯುಕ್ತವಾಗುವುದು ಎಂಬ ಅರ್ಥವಿದೆ. ಅಂದರೆ ಜೀವಾತ್ಮನನ್ನು ಪರಮಾತ್ಮನಲ್ಲಿ ಸೇರಿಸುವುದೇ ಯೋಗ ಎಂದು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ ಎಂ.ಪಾಪೇಗೌಡ ಮಾತನಾಡಿ, ಯೋಗದಿಂದ ಜೀವನ ವಿಕಾಸವಾಗುತ್ತದೆ. ಯೋಗ ಬಲ್ಲವನಿಗೆ ರೋಗವಿಲ್ಲ ಎಂದು ಯೋಗದ ಮಹತ್ವವನ್ನು ತಿಳಿಸಿದರು.

ಕಾರ್ಯಕ್ರಮದಲ್ಲಿ ರಾಮಕೃಷ್ಣ ಸೇವಾ ಸಂಘದ ಖಜಾಂಚಿ ಹೆಚ್.ಜಿ.ರಮೇಶ್, ಕಾರ್ಯನಿರ್ವಾಹಕ ಅಧಿಕಾರಿ ಪ್ರೊ.ಜಿ. ಚಂದ್ರಶೇಖರ್, ಆರ್‌ಕೆವಿಕೆ ಕಾಲೇಜಿನ ಪ್ರಾಂಶುಪಾಲ ಸಿ.ಶಿವಪ್ಪ ರಾಮಕೃಷ್ಣ ವಿದ್ಯಾ ಕೇಂದ್ರದ ಪ್ರೌಢಶಾಲಾ ಮುಖ್ಯೋಪಾಧ್ಯಾಯ ಜಿ.ಎನ್.ವಿಶ್ವನಾಥ್, ಪ್ರಾಥಮಿಕ ಶಾಲೆ ಮುಖ್ಯೋಪಾಧ್ಯಾಯಿನಿ ವೀಣಾ ಕೆ.ಹೆಗಡೆ, ಪ್ರಣಮ್ಯ ಎಜುಕೇಷನ್ ಮತ್ತು ಚಾರಿಟಬಲ್ ಟ್ರಸ್ಟ್‌ನ ಅಧ್ಯಕ್ಷೆ ಸವಿತಾ ಹಾಗೂ ಶಾಲಾ ಕಾಲೇಜಿನ ವಿದ್ಯಾರ್ಥಿಗಳು, ಶಿಕ್ಷಕರು ಭಾಗವಹಿಸಿದ್ದರು.

ದಟ್ಟಗಳ್ಳಿ ನಿವಾಸಿಗಳ ಕುಡಿಯುವ ನೀರಿನ ಬವಣೆ; ಖಾಸಗಿ ಟ್ಯಾಂಕರ್‌ಗೆ ತಿಂಗಳಿಗೆ 4 ಸಾವಿರ ಖರ್ಚು

ಮೈಸೂರು, ಜೂ.22(ಬಿಎಲ್‌ಯು)– ಮೈಸೂರಿನ ದಟ್ಟಗಳ್ಳಿಯ ಜೋಡಿ ಬೇವಿನಮರ ರಸ್ತೆಯ ನಿವಾಸಿಗಳು ಕುಡಿಯುವ ನೀರಿಗಾಗಿ ತೀವ್ರ ಬವಣೆ ಪಡುತ್ತಿದ್ದು, ಖಾಸಗಿ ಟ್ಯಾಂಕರ್‌ಗಳ ಮೂಲಕ ನೀರು ಪಡೆಯಲು ಸಾವಿರಾರು ರೂ. ವ್ಯಯಿಸುತ್ತಿದ್ದಾರೆ.

ದಟ್ಟಗಳ್ಳಿಯ ಜೋಡಿ ಬೇವಿನ ಮರ ಬಳಿಯ 6ನೇ ಮುಖ್ಯ ರಸ್ತೆಯ ನಿವಾಸಿಗಳಿಗೆ ಸಮರ್ಪಕ ಕುಡಿಯುವ ನೀರಿಲ್ಲ. ಹೆಸರಿಗೆ ನಲ್ಲಿಗಳಿದ್ದರೂ ಒಂದು ತೊಟ್ಟು ನೀರು ಬರುತ್ತಿಲ್ಲ. ಹಲವು ತಿಂಗಳಿನಿಂದ ಕುಡಿಯುವ ನೀರಿಗಾಗಿ ಈ ಬವಣೆ ಪಡುತ್ತಿದ್ದರೂ ಜನಪ್ರತಿನಿಧಿಗಳಾಗಲೀ ಅಥವಾ ಅಧಿಕಾರಿಗಳಾಗಲೀ ಇತ್ತ ಗಮನಹರಿಸುತ್ತಿಲ್ಲ.

ಈ ಬಗ್ಗೆ ವಾಣಿ ವಿಲಾಸ ನೀರು ಸರಬರಾಜು ಕಾರ್ಯಾಗಾರದ ಅಧಿಕಾರಿಗಳಿಗೆ ದೂರು ನೀಡಿದ್ದರೂ ಯಾವುದೇ ಪ್ರಯೋಜನವಾಗಿಲ್ಲ. ನಲ್ಲಿಗಳಲ್ಲಿ ನೀರು ಬರುತ್ತಿಲ್ಲ ಎಂದು ಸುಮ್ಮನೆ ಕೂರಲು ಸಾಧ್ಯವಿಲ್ಲ. ಇದರಿಂದ ಬಡಾವಣೆಯ ನಿವಾಸಿಗಳು ಖಾಸಗಿ ನೀರಿನ ಟ್ಯಾಂಕರ್ ಮೊರೆ ಹೋಗಿದ್ದಾರೆ.

ಪ್ರತಿ ಮನೆಯವರು ಮೂರು ದಿನಕ್ಕೊಮ್ಮೆ ಟ್ಯಾಂಕರ್‌ಗಳಿಗೆ 400 ರೂಪಾಯಿ ಕೊಟ್ಟು ಸಂಪ್‌ಗಳಿಗೆ ಜನರು ನೀರು ತುಂಬಿಸಿಕೊಳ್ಳುತ್ತಿದ್ದಾರೆ. ಇದರಿಂದ ಕುಡಿಯುವ ನೀರಿಗಾಗಿ ತಿಂಗಳಿಗೆ ಕನಿಷ್ಠ 4 ಸಾವಿರ ರೂಪಾಯಿ ಖರ್ಚು ಮಾಡುತ್ತಿದ್ದಾರೆ.



ಮೈಸೂರಿನ ದಟ್ಟಗಳ್ಳಿಯ ಜೋಡಿ ಬೇವಿನಮರ ರಸ್ತೆಯ ನೋಟ.

ಕುಡಿಯುವ ನೀರು ಮಾತ್ರವಲ್ಲದೆ ಬೀದಿದೀಪಗಳ ವ್ಯವಸ್ಥೆ ಕೂಡ ಇಲ್ಲದಂತಾಗಿದ್ದು, ರಾತ್ರಿ ಇಡೀ ಬಡಾವಣೆ ಕಗ್ಗತ್ತಲಲ್ಲಿ ಮುಳುಗಿದೆ.

ಈ ಬಡಾವಣೆ ಮುಡಾ ಅನುಮೋದನೆ ಪಡೆದಿದ್ದರೂ ಮೂಲ ಸೌಕರ್ಯಗಳಿಲ್ಲ ಎಂದು ನಿವಾಸಿಗಳು ಆಕ್ರೋಶ ವ್ಯಕ್ತಪಡಿಸಿದ್ದಾರೆ.



ನಲ್ಲಿಯಲ್ಲಿ ನೀರು ಸರಬರಾಜು ನಿಂತಿರುವುದು.

ಬಗರ್‌ಹುಕುಂ ಸಾಗುವಳಿದಾರರಿಗೆ ಹಕ್ಕುಪತ್ರ ನೀಡಲು ಆಗ್ರಹ

ಮೈಸೂರು,ಜೂ.22(ಜಿಎ)–ರಾಜ್ಯಾದ್ಯಂತ ಬಗರ್‌ಹುಕುಂ ಸಾಗುವಳಿದಾರರ ಲಕ್ಷಾಂತರ ಅರ್ಜಿ ವಿಲೇವಾರಿ ಬಾಕಿ ಇದ್ದು, ಸರ್ಕಾರ ವಿಶೇಷ ಸಮಿತಿ ರಚನೆ ಮಾಡುವ ಮೂಲಕ ತ್ವರಿತವಾಗಿ ಹಕ್ಕುಪತ್ರ ನೀಡಲು ಕ್ರಮ ಕೈಗೊಳ್ಳಬೇಕೆಂದು ಕರ್ನಾಟಕ ಭೂ ಹಕ್ಕುದಾರರ ವೇದಿಕೆ ಮನವಿ ಮಾಡಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ವೇದಿಕೆ ರಾಜ್ಯ ಸಂಚಾಲಕಿ ಕೆ.ಚಿತ್ರಾವತಿ ಮಾತನಾಡಿ, ಈಗಾಗಲೇ ಜೀವನೋಪಾಯಕ್ಕಾಗಿ ಬೇಸಾಯ ಮಾಡುತ್ತಿರುವ ಅರ್ಹ ರೈತರಿಗೆ ಭೂಹಕ್ಕು ನೀಡುವ ನಿಟ್ಟಿನಲ್ಲಿ ವಿಲೇವಾರಿಗೆ ಕ್ರಮ ಕೈಗೊಳ್ಳಬೇಕಿದೆ ಎಂದರು. ತಮ್ಮ ವೇದಿಕೆ ಕಳೆದ 15 ವರ್ಷಗಳಿಂದ ರಾಜ್ಯಾದ್ಯಂತ ಬಗರ್‌ಹುಕುಂ ಸಾಗುವಳಿದಾರರ ಜೀವನ ಮಟ್ಟ ಸುಧಾರಣೆಯಲ್ಲಿ ತೊಡಗಿಸಿಕೊಂಡಿದೆ. ಇದೇ ರೀತಿ ಹಲವರಿಗೆ ನ್ಯಾಯ ದೊರಕಿಸಿಕೊಟ್ಟಿದೆ. ಇನ್ನೂ ಲಕ್ಷಾಂತರ ಅರ್ಜಿ ವಿಲೇವಾರಿ ಬಾಕಿ ಇದ್ದು, ಈಗಾಗಲೇ 54 ಸಾವಿರ ಹೆಕ್ಟೇರ್ ಭೂಮಿ ಲಭ್ಯವಿರುವ ಮಾಹಿತಿಯೂ ಇದೆ. ಆದರೂ ಸಕ್ರಮೀಕರಣಕ್ಕೆ ಕ್ರಮ ಕೈಗೊಂಡಿಲ್ಲ. ಆದ್ದರಿಂದ ಕೂಡಲೇ ಸಿಎಂ ಸಿದ್ದರಾಮಯ್ಯ ಹಾಗೂ ಸಂಬಂಧಿತ ಸಚಿವರು ಗಮನಹರಿಸಬೇಕು. ಕಂದಾಯ ಮತ್ತು ಅರಣ್ಯ ಇಲಾಖೆಗಳ ನಡುವಿನ ಗಡಿ ಗೊಂದಲ ಹೋಗಲಾಡಿಸಿ, ತ್ವರಿತವಾಗಿ ಹಕ್ಕುಪತ್ರ ನೀಡಲು ಕ್ರಮ ಕೈಗೊಳ್ಳಬೇಕೆಂದು ಕೋರಿದರು. ಸುದ್ದಿಗೋಷ್ಠಿಯಲ್ಲಿ ವೇದಿಕೆಯ ಮಹೇಶ್ಚಂದ್ರಗುರು, ಪ್ರಸನ್ನಮೂರ್ತಿ, ಬಾಲಗಂಗಾಧರ್ ಉಪಸ್ಥಿತರಿದ್ದರು.

ಹಿರಿಯ ಸಾಹಿತಿ ಡಾ.ಕಮಲಾ ಹಂಪನಾ ನಿಧನ



ಬೆಂಗಳೂರು: ಕನ್ನಡದ ಹಿರಿಯ ಸಾಹಿತಿ, ಲೇಖಕಿ ಡಾ.ಕಮಲಾ ಹಂಪನಾ (88) ಅವರು ಹೃದಯಾಘಾತದಿಂದ ಶನಿವಾರ ನಸುಕಿನ ವೇಳೆ ನಿಧನ ಹೊಂದಿದ್ದಾರೆ.

ಅವರು ಪತಿ ಹಿರಿಯ ಸಾಹಿತಿ ಡಾ. ಹಂ.ಪ.ನಾಗರಾಜಯ್ಯ, ಇಬ್ಬರು ಪುತ್ರಿಯರು ಮತ್ತು ಒಬ್ಬ ಪುತ್ರ ಹಾಗೂ ಅಪಾರ ಬಂಧುಮಿತ್ರರು, ಹಿತೈಷಿಗಳನ್ನು ಅಗಲಿದ್ದಾರೆ. ವಯೋಸಹಜ ಸಮಸ್ಯೆಯಿಂದ ಬಳಲುತ್ತಿದ್ದ ಅವರು, ಪುತ್ರಿ ಡಾ.ಆರತಿ ಮನೆಯಲ್ಲಿ ವಾಸವಿದ್ದರು. ನಿನ್ನೆ ರಾತ್ರಿ 10 ಗಂಟೆ ವೇಳೆಗೆ ಅವರಿಗೆ ಹೃದಯಾಘಾತ ಆಗಿತ್ತು. ಎಂ.ಎಸ್.ರಾಮಯ್ಯ ಆಸ್ಪತ್ರೆಗೆ ಕರೆದೊಯ್ಯಲಾಗಿತ್ತು. ಚಿಕಿತ್ಸೆ ಫಲಿಸದೆ ಇಂದು ಬೆಳಗ್ಗೆ ಅಸುನೀಗಿದ್ದಾರೆ.

ದೇಹದಾನ: ಸಂಜೆಯ ತನಕ ರಾಜಾಜಿನಗರದ ಅವರ ಮನೆಯಲ್ಲಿ ಅಂತಿಮ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿತ್ತು. ಬಳಿಕ ಅವರ ಇಚ್ಛೆಯಂತೆ ರಾಮಯ್ಯ ಮೆಡಿಕಲ್ ಕಾಲೇಜಿಗೆ ದೇಹದಾನ ಮಾಡಲಾಯಿತು ಎಂದು ಅವರ ಕುಟುಂಬ ತಿಳಿಸಿದೆ. ತಮ್ಮ ಅಧ್ಯಯನ, ಅಧ್ಯಾಪನ, ಲೇಖನ, ಭಾಷಣ ಮತ್ತು ಸಂಶೋಧನೆಗಳಿಂದ 60 ವರ್ಷಗಳ ಕಾಲ ಸಾಹಿತ್ಯ ಕ್ಷೇತ್ರದಲ್ಲಿ ಅವಿರತವಾಗಿ ಕೃಷಿ ಮಾಡುತ್ತಾ ಬಂದಿರುವ ಪ್ರೊ. ಕಮಲಾ ಹಂಪನಾ ಅವರು ಸಮಕಾಲೀನ ಕನ್ನಡ ಸಾಹಿತ್ಯದ ಹಿರಿಯ ಬರಹಗಾರ್ತಿ. ಮೂಡುಬಿದರೆಯಲ್ಲಿ ನಡೆದ ಅಖಿಲ ಭಾರತ 71ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದ ಅವರಿಗೆ ಕರ್ನಾಟಕ ಸರ್ಕಾರದ ದಾನಚಿಂತಾಮಣಿ ಅತ್ತಿಮಬ್ಬೆ ಪ್ರಶಸ್ತಿ ಹಾಗೂ ಹಂಪಿ ಕನ್ನಡ ವಿಶ್ವವಿದ್ಯಾಲಯವು ಕೊಡಮಾಡುವ ನಾಡೋಜ ಪ್ರಶಸ್ತಿ ಲಭಿಸಿದೆ

ಅಂತರರಾಷ್ಟ್ರೀಯ ಯೋಗ ದಿನಾಚರಣೆ



ಮೈಸೂರಿನ ಕುವೆಂಪುನಗರದ ಡಿಕೆಎಸ್ ಅಕಾಡೆಮಿ ಸಮೀಪವಿರುವ ಯೋಗ ಕೇಂದ್ರದಲ್ಲಿ ಏರ್ಪಡಿಸಿದ್ದ ಅಂತರರಾಷ್ಟ್ರೀಯ ಯೋಗ ದಿನಾಚರಣೆಯಲ್ಲಿ ಯೋಗ ಶಿಕ್ಷಕರಾದ ಡಾ.ಭಾಸ್ಕರನ್ ಮತ್ತು ಜಾನ್ ಲಿಯೋ ರೆಬೆಲ್ಲೋ ಅವರನ್ನು ಸನ್ಮಾನಿಸಲಾಯಿತು. ಈ ವೇಳೆ ಹಲವು ಯೋಗಪಟುಗಳು ಉಪಸ್ಥಿತರಿದ್ದರು.

ಅಂತರರಾಷ್ಟ್ರೀಯ ಯೋಗ ದಿನಾಚರಣೆ



ಮೈಸೂರಿನ ಗೋಕುಲಂನಲ್ಲಿ ಬಿಜೆಪಿ ಚಾಮರಾಜ ಕ್ಷೇತ್ರ ಘಟಕದಿಂದ ಯೋಗ ದಿನ ಆಚರಿಸಲಾಯಿತು. ಈ ವೇಳೆ ಯೋಗ ಶಿಕ್ಷಕ ವೆಂಕಟೇಶಯ್ಯ, ಬಿಜೆಪಿ ನಗರಾಧ್ಯಕ್ಷ ಎಲ್.ನಾಗೇಂದ್ರ, ಮುಖಂಡರಾದ ಜಯಪ್ರಕಾಶ್, ಪಾಲಿಕೆ ಮಾಜಿ ಸದಸ್ಯರಾದ ಎಸ್‌ಬಿಎಂ ಮಂಜು, ಪ್ರಮೀಳ ಇದ್ದರು.

ಗ್ರಂಥಾಲಯಗಳು, ಕೃತಕ ಬುದ್ಧಿಮತ್ತೆ ಕುರಿತ ಸಮ್ಮೇಳನ ಶೈಕ್ಷಣಿಕ ಪ್ರಕಟಣೆಯಲ್ಲಿ ಒತ್ತಡದ ಸಮಸ್ಯೆಗಳು, ಡಿಜಿಟಲ್ ಯುಗದಲ್ಲಿ ಗ್ರಂಥಾಲಯಗಳ ಪಾತ್ರ



ಮೈಸೂರು, ಜೂ.22– ಮೈಸೂರು ವಿಶ್ವವಿದ್ಯಾನಿಲಯದ ಮಾಹಿತಿ ಮತ್ತು ಗ್ರಂಥಾಲಯ ವಿಜ್ಞಾನ ಹಳೆಯ ವಿದ್ಯಾರ್ಥಿಗಳ ಜಾಲ (ಮಿಲನ್) ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಅಧ್ಯಯನ ವಿಭಾಗದ ಸಹಯೋಗದೊಂದಿಗೆ ಶೈಕ್ಷಣಿಕ ಪ್ರಕಟಣೆ, ಗ್ರಂಥಾಲಯಗಳು ಮತ್ತು ಕೃತಕ ಬುದ್ಧಿಮತ್ತೆ ಕುರಿತ ಸಮ್ಮೇಳನವನ್ನು ಮೈಸೂರು ವಿಶ್ವವಿದ್ಯಾನಿಲಯವು ಆಯೋಜಿಸಿತ್ತು. ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯ ಮಾಜಿ ನಿರ್ದೇಶಕರಾದ ಪದ್ಮಭೂಷಣ ಪ್ರೊ. ಪಿ.ಬಲರಾಮ್, ಶ್ರೀನಾಥ್ ಶ್ರೀನಿವಾಸ, ಡೀನ್ (ಆರ್&ಡಿ), ಐಐಐಟಿ, ಬೆಂಗಳೂರು; ಶಾಲಿನಿ ಆರ್. ಅರಸ್, ನಿವೃತ್ತ ಪ್ರಾಧ್ಯಾಪಕಿ, ಡಿಎಲ್ ಐಎಸ್; ಡಾ.ಮೀರಾ ಬಿ.ಎಂ., ಮಾಜಿ ಗ್ರಂಥಪಾಲಕಿ, ಆರ್‌ಆರ್‌ಐ, ಬೆಂಗಳೂರು; ಡಿಎಲ್ ಐಎಸ್ ಅಧ್ಯಕ್ಷ ಪ್ರೊ.ಚಂದ್ರಶೇಖರ ಎಂ. ಮಿಲನ್, ಸಮ್ಮೇಳನದ ಸಂಘಟನಾ ಕಾರ್ಯದರ್ಶಿ ಡಾ.ರಾಜೇಂದ್ರ ಬಾಬು ಎಚ್., ಪ್ರೊ.ಎನ್.ಎಸ್.ಹರಿನಾರಾಯಣ, ಪ್ರೊ.ಆದಿತ್ಯಕುಮಾರಿ ಎಚ್., ಡಿಎಲ್‌ಐಎಸ್ ಉಪಸ್ಥಿತರಿದ್ದರು.

ಒಂದನೇ ಪುಟದಿಂದ

ಯಾವುದೇ ಕ್ಷಣದಲ್ಲಿ ಸಿದ್ದರಾಮಯ್ಯ ಸರ್ಕಾರ ಪತನ

ತಿಳಿಸಬೇಕು. ಕಳೆದ ವಿಧಾನಸಭಾ ಚುನಾವಣೆಯಲ್ಲಿ 135 ಸ್ಥಾನಗಳಲ್ಲಿ ಜಯಭೇರಿ ಬಾರಿಸಿ ಅಧಿಕಾರಕ್ಕೆ ಬಂದ ಕಾಂಗ್ರೆಸ್ ಸರ್ಕಾರ ಒಂದೇ ವರ್ಷದಲ್ಲಿ ಜನರ ವಿಶ್ವಾಸವನ್ನು ಕಳೆದುಕೊಂಡಿದೆ.

ಗ್ಯಾರಂಟಿ ಹೆಸರಿನಲ್ಲಿ ಅಭಿವೃದ್ಧಿಯನ್ನು ಸಂಪೂರ್ಣವಾಗಿ ಮರೆತಿದ್ದಾರೆ. ಇದಕ್ಕೆ ಪ್ರತಿಫಲವಾಗಿ ಕಳೆದ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಮತ್ತು ಜೆಡಿಎಸ್ ಜಂಟಿಯಾಗಿ 145 ವಿಧಾನಸಭಾ ಕ್ಷೇತ್ರಗಳಲ್ಲಿ ಮುನ್ನಡೆ ಸಾಧಿಸಿದೆ ಈ ಫಲಿತಾಂಶವೇ ಸರ್ಕಾರಕ್ಕೆ ಮುನ್ನೆಚ್ಚರಿಕೆ, ಯಾವ ಕ್ಷಣದಲ್ಲಿ ಇದು ಅಧಿಕಾರ ಕಳೆದುಕೊಳ್ಳುತ್ತದೋ ತಿಳಿಯದು, ನಾವು ಲೋಕಸಭಾ ಚುನಾವಣೆಯಲ್ಲಿ ನಮ್ಮ ಕೆಲವು ತಪ್ಪುಗಳಿಂದ ದಾವಣಗೆರೆ, ಕೊಪ್ಪಳ, ಚಿಕ್ಕೋಡಿ ಕ್ಷೇತ್ರದಲ್ಲಿ ಸೋಲು ಅನುಭವಿಸಿದ್ದೇವೆ.

ಮುಂದೆ ನಮಗೆ ಜಿಲ್ಲಾ, ತಾಲೂಕು ಪಂಚಾಯತ್ ಚುನಾವಣೆಗಳು ಎದುರಾಗಲಿವೆ. ಅಲ್ಲಿ ಬಿಜೆಪಿ–ಜೆಡಿಎಸ್ ಒಂದಾಗಿ ಹೋರಾಟ ನಡೆಸಿ ಗೆಲುವು ಸಾಧಿಸುವ ಮೂಲಕ ರಾಜ್ಯದಿಂದಲೇ ಕಾಂಗ್ರೆಸ್ಸನ್ನು ತೊಲಗಿಸಬೇಕು. ಲೋಕಸಭಾ ಚುನಾವಣೆಯಲ್ಲಿ ಒಟ್ಟಾಗಿ ಹೋರಾಟ ನಡೆಸಿದಂತೆ ಮುಂದಿನ ಚುನಾವಣೆಯಲ್ಲೂ ಕಾರ್ಯ ನಿರ್ವಹಿಸಿದರೆ ನಾವು ಎಲ್ಲಾ ಕಡೆ ಅಧಿಕಾರ ಹಿಡಿಯಬಹುದು. ಭ್ರಷ್ಟಾಚಾರದಿಂದ ತುಂಬಿ ತುಳುಕುತ್ತಿರುವ ಸರ್ಕಾರವನ್ನು ಕಿತ್ತೊಗೆಯಲು ಜನರೇ ಸಿದ್ಧರಾಗಿದ್ದಾರೆ. ಮುಂದಿನ ವಿಧಾನಸಭಾ ಚುನಾವಣೆವರೆಗೂ ನಾವು ಕಾಯುವ ಅಗತ್ಯವಿಲ್ಲ, ಅದಕ್ಕೆ ಮುನ್ನವೇ ಈ ಸರ್ಕಾರ ಉರುಳುತ್ತದೆ ಎಂದರು. ಬಿಜೆಪಿ ಮತ್ತು ಜೆಡಿಎಸ್ ಒಂದಾಗಿ ಕಾಂಗ್ರೆಸ್ ವಿರುದ್ಧ ಹೋರಾಟ ಮಾಡಬೇಕೆಂಬ ಬಹುದಿನದ ಕಾರ್ಯಕರ್ತರ ಕನಸು ಈಡೇರಿದೆ. ಸಣ್ಣ ಪುಟ್ಟ ವೈಮನಸ್ಸು ಇದ್ದರೂ ಒಗ್ಗಟ್ಟಿನಿಂದ ಮುಂದಿನ ಚುನಾವಣೆಗಳನ್ನು ಎದುರಿಸಬೇಕು ಎಂದು ಕಾರ್ಯಕರ್ತರಿಗೆ ಕರೆ ನೀಡಿದರು.

ಜೈಲುವಾಸಿಯಾದ ದರ್ಶನ್

ಅಪಹರಿಸಿ ಬೆಂಗಳೂರಿಗೆ ಕರೆತಂದು ಪಟ್ಟಣಗೆರೆ ಶೆಡ್‌ನಲ್ಲಿ ಚಿತ್ರಹಿಂಸೆ ನೀಡಿ ಕೊಲೆ ಮಾಡಿದ ನಂತರ ಶವವನ್ನು ಸುಮ್ಮನಹಳ್ಳಿ ರಾಜಾಕಾಲುವೆ ಬಳಿ ಬಿಸಾಡಲಾಗಿತ್ತು. ಜೂ. 9ರಂದು ಶವ ಪತ್ತೆಯಾಗಿದ್ದು, ಕಾಮಾಕ್ಷಿಪಾಳ್ಯ ಠಾಣೆ ಪೊಲೀಸರು ಕೊಲೆ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿರುವಾಗಲೇ ಅಂದು ಸಂಜೆ ರೇಣುಕಾಸ್ವಾಮಿಯನ್ನು ತಾವೇ ಕೊಲೆ ಮಾಡಿದ್ದೇವೆ ಎಂದು ನಾಲ್ವರು ಪೊಲೀಸರಿಗೆ ಶರಣಾಗಿದ್ದರು. ಸಂಶಯದಿಂದ ಅವರನ್ನು ತೀವ್ರ ವಿಚಾರಣೆಗೊಳಪಡಿಸಿದ ವೇಳೆ ದರ್ಶನ್ ಮತ್ತು ಪವಿತ್ರಾಗೌಡ ಈ ಕೊಲೆ ಪ್ರಕರಣದಲ್ಲಿ ಭಾಗಿಯಾಗಿರುವುದು ಬೆಳಕಿಗೆ ಬಂತು. ಈ ಹಿನ್ನೆಲೆಯಲ್ಲಿ ಜೂನ್ 11ರಂದು ಮೈಸೂರಿನ ರ್‍ಯಾಡಿಸನ್ ಬ್ಲೂ ಪ್ಲಾಜಾ ಹೋಟೆಲ್‌ನ ಜಿಮ್‌ನಲ್ಲಿ ವರ್ಕ್‌ಔಟ್ ಮಾಡಿ ಹೊರ ಬಂದ ದರ್ಶನ್‌ನನ್ನು ಬಂಧಿಸಲಾಗಿತ್ತು. ದರ್ಶನ್‌ನನ್ನು ಮೂರು ಬಾರಿ ಒಟ್ಟು 12 ದಿನಗಳ ಕಾಲ ಹೆಚ್ಚಿನ ವಿಚಾರಣೆಗಾಗಿ ಪೊಲೀಸ್ ಕಸ್ಟಡಿಗೆ ವಹಿಸಲಾಗಿತ್ತು. 2011ರಲ್ಲಿ ಪತ್ನಿ ವಿಜಯಲಕ್ಷ್ಮಿ ಮೇಲೆ ಮಾರಣಾಂತಿಕ ಹಲ್ಲೆ ಮಾಡಿ ನಟ ದರ್ಶನ್ ಜೈಲು ಸೇರಿದ್ದರು, ಇದೀಗ ಕೊಲೆ ಪ್ರಕರಣದಲ್ಲಿ ನ್ಯಾಯಾಂಗ ಬಂಧನವಾಗಿದ್ದರಿಂದ ಎರಡನೇ ಬಾರಿಗೆ ಜೈಲು ಸೇರುವಂತಾಗಿದೆ. ಕೊಲೆ ಕೃತ್ಯಕ್ಕೆ ಸಂಬಂಧಿಸಿದಂತೆ ಪೊಲೀಸರು ಹಲವೆಡೆ ಮಹಜರು ನಡೆಸಿ, ಕೊಲೆಗೆ ಸಂಬಂಧಿಸಿದ ಹಲವು ಸಾಕ್ಷ್ಯಗಳನ್ನು ಸಂಗ್ರಹಿಸಿದ್ದಾರೆ. ಕೃತ್ಯ ನಡೆದ ದಿನ ಆರೋಪಿಗಳ ಸಂಪರ್ಕದಲ್ಲಿದ್ದ ನಟ ಚಿಕ್ಕಣ್ಣ, ದರ್ಶನ್ ಪತ್ನಿ ವಿಜಯಲಕ್ಷ್ಮಿ ಇನ್ನಿತರರ ಹೇಳಿಕೆಗಳನ್ನೂ ಪೊಲೀಸರು ದಾಖಲಿಸಿದ್ದಾರೆ.


ಸೂರಜ್ ರೇವಣ್ಣ ವಿರುದ್ಧ ಪ್ರಕರಣ ದಾಖಲು

ವಿಧಾನಪರಿಷತ್ ಸದಸ್ಯ ಸೂರಜ್ ರೇವಣ್ಣ ಅವರಿಗೆ ಬಂಧನದ ಭೀತಿ ಎದುರಾಗಿದೆ.

ಗರಂ ಆದ ಹೆಚ್‌ಡಿಕೆ: ಬೆಂಗಳೂರಿನ ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಮಾಧ್ಯಮ ಪ್ರತಿನಿಧಿಗಳು ಸೂರಜ್ ರೇವಣ್ಣ ಪ್ರಕರಣದ ಬಗ್ಗೆ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರನ್ನು ಪ್ರಶ್ನಿಸಿದಾಗ ಗರಂ ಆದ ಅವರು, 'ಇಂತಹ ವಿಷಯಗಳನ್ನು ನನ್ನ ಬಳಿ ಚರ್ಚೆ ಮಾಡಬೇಡಿ. ಅದರ ಅವಶ್ಯಕತೆ ಏನಿದೆ. ಕಾನೂನಿನಡಿ ಎಲ್ಲವೂ ನಡೆಯುತ್ತದೆ. ಯಾವ್ಯಾವ ಪ್ರಕರಣ ಬರುತ್ತದೆ ಎಂಬುದು ಮುಂದಿನ ದಿನಗಳಲ್ಲಿ ಗೊತ್ತಾಗುತ್ತೆ. ನನ್ನ ಬಳಿ ಇಂತಹ ಪ್ರಶ್ನೆ ಕೇಳಬೇಡಿ. ರಾಜ್ಯದ ಸಮಸ್ಯೆಗಳಿಗೆ ಸಂಬಂಧಪಟ್ಟ ವಿಚಾರಗಳನ್ನು ಮಾತ್ರ ಚರ್ಚೆ ಮಾಡಿ ಎಂದರು.

ಗೃಹ ಸಚಿವರ ಪ್ರತಿಕ್ರಿಯೆ: ಇಂದು ಬೆಳಗ್ಗೆ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಗೃಹ ಸಚಿವ ಡಾ.ಜಿ.ಪರಮೇಶ್ವರ್, ಸೂರಜ್ ರೇವಣ್ಣ ವಿರುದ್ಧ ಕೇಳಿಬಂದಿರುವ ಆರೋಪಕ್ಕೆ ಸಂಬಂಧಿಸಿದಂತೆ ಬೆಂಗಳೂರಿನಲ್ಲಾಗಲೀ, ಹಾಸನದಲ್ಲಾಗಲೀ ಯಾವುದೇ ದೂರು ದಾಖಲಾಗಿಲ್ಲ. ನಮಗೆ ಅಧಿಕೃತವಾಗಿ ದೂರು ಬಂದ ಮೇಲೆ ಕ್ರಮ ಕೈಗೊಳ್ಳುತ್ತೇವೆ ಎಂದಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

23.06.2024 ಭಾನುವಾರ, ಮಳೆ ನಕ್ಷತ್ರ: ಆರಿದ್ರಾ 22.06.2024 ರಿಂದ 05.07.2024
ಕ್ರೋಧಿನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಜ್ಯೇಷ್ಠ ಮಾಸ, ಕೃಷ್ಣ ಪಕ್ಷ,
ತಿಥಿ: ಬಿದಿಗೆ, ನಕ್ಷತ್ರ: ಪೂಷಾ, ರಾಹುಕಾಲ: ಸಂಜೆ 4.30 ರಿಂದ 6ರವರೆಗೆ

■ **ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು, ಸ್ನಾತಕೋತ್ತರ ಸಮಾಜ ಕಾರ್ಯ ವಿಭಾಗ ನಿಸರ್ಗ ಫೌಂಡೇಷನ್, ಹೆಚ್.ಡಿ. ಕೋಟೆ :** ಸಮಾಜ ಕಾರ್ಯ ಶಿಬಿರ, ಸ್ಥಳೀಯ ಪ್ರವಾಸಿ ತಾಣಗಳ ಭೇಟಿ, ಬೆಳಗ್ಗೆ 9 ರಿಂದ.

■ **ಮೈಸೂರು ಕರಾಟೆ ಅಸೋಸಿಯೇಷನ್ :** ವಿಶ್ವ ಕರಾಟೆ ದಿನ ಆಚರಣೆ, ಉದ್ಘಾಟನೆ : ಪೊಲೀಸ್ ಆಯುಕ್ತ ಬಿ. ರಮೇಶ್, ಅಧ್ಯಕ್ಷತೆ : ಮಾಜಿ ಎಂಎಲ್‌ಸಿ ಸಿ.ಎಸ್. ಅರುಣ್ ಮಾಚಯ್ಯ, ಮುಖ್ಯ ಅತಿಥಿಗಳು : ಎಂಎಲ್‌ಸಿ ಹೆಚ್. ವಿಶ್ವನಾಥ್, ಇಂಟರ್‌ನ್ಯಾಷನಲ್ ಅಥ್ಲೀಟ್ ಎಂ. ಯೋಗೇಂದ್ರ, ಮೈಸೂರು ವಿವಿ ದೈಹಿಕ ಶಿಕ್ಷಣ ನಿರ್ದೇಶಕ ಡಾ. ಸಿ. ವೆಂಕಟೇಶ್, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕ ಭಾಸ್ಕರ್ ನಾಯಕ್, ಸ್ಥಳ : ಮೈಸೂರು ವಿವಿ ಸ್ಪೋರ್ಟ್ಸ್ ಪೆವಿಲಿಯನ್ ಮೈದಾನ, ಬೆಳಗ್ಗೆ 7.30ಕ್ಕೆ

■ **ಕರ್ನಾಟಕ ಯೋಗ ಶಿಕ್ಷಕರ ಒಕ್ಕೂಟ :** ಬೆಳಗ್ಗೆ 10ಕ್ಕೆ ರಾಜ್ಯ ಮಟ್ಟದ ಪ್ರಥಮ ಯೋಗ ಸಮ್ಮೇಳನ–2024, ಬೆಳಗ್ಗೆ 10.05 ರಿಂದ 11.05ರವರೆಗೆ ವಿಚಾರಗೋಷ್ಠಿ–4, ವಿಷಯ : ಭಗವದ್ಗೀತೆಯಲ್ಲಿ ಯೋಗದ ಅನಾವರಣ, ಉಪಸ್ಥಿತರು : ಯೋಗ ತಜ್ಞ ಎಂ.ಪಿ. ವಿಜಯಕುಮಾರ್, ಹಿರಿಯ ಯೋಗ ಶಿಕ್ಷಕ ಎಸ್.ವಿ. ವೆಂಕಟೇಶಯ್ಯ, ಜಿಲ್ಲಾ ಕಸಾಪ ಮಾಜಿ ಅಧ್ಯಕ್ಷ ಎಂ. ಚಂದ್ರಶೇಖರ್, ಪ್ರಕೃತಿ ಚಿಕಿತ್ಸಾ ಮತ್ತು ಯೋಗ ತಜ್ಞ ಡಾ. ಎಸ್. ಸಂದೀಪ್, ಅಧ್ಯಕ್ಷತೆ : ಸಂಸ್ಕೃತಿ ಪ್ರತಿಷ್ಠಾನ ಮುಖ್ಯಸ್ಥ ಡಾ. ಎಂ.ಎ. ಆಳ್ವಾರ್; ಬೆಳಗ್ಗೆ 11.05 ರಿಂದ 11.30 ರವರೆಗೆ ಯೋಗ ಪ್ರಾತ್ಯಕ್ಷಿಕೆ : ಸರ್ಕಾರಿ ಪ್ರಕೃತಿ ಚಿಕಿತ್ಸಾ ಮತ್ತು ಯೋಗ ಮಹಾವಿದ್ಯಾಲಯದ ವಿದ್ಯಾರ್ಥಿಗಳಿಂದ; ಬೆಳಗ್ಗೆ 11.30 ರಿಂದ ವಿಚಾಗೋಷ್ಠಿ–5, ವಿಷಯ : ಆಧ್ಯಾತ್ಮಿಕ ಸಾಧನೆಗೆ ಯೋಗ, ಅಧ್ಯಕ್ಷತೆ : ಜಿಲ್ಲಾ ಕಸಾಪ ಮಾಜಿ ಅಧ್ಯಕ್ಷ ಡಾ. ವೈ.ಡಿ. ರಾಜಣ್ಣ, ಉಪಸ್ಥಿತರು : ಡಾ. ಬಿ. ಶ್ರೀನಾಥ್, ಜಯಕುಮಾರ್, ಡಾ. ಪಿ.ಆರ್. ವಿಶ್ವನಾಥ ಶೆಟ್ಟಿ; ಮಧ್ಯಾಹ್ನ 12 ರಿಂದ ಯೋಗದರ್ಶಿನಿ ಪ್ರಾತ್ಯಕ್ಷಿಕೆ– ಸುದೀಪ ಎಸ್. ಮತ್ತು ತಂಡದವರಿಂದ; ಮಧ್ಯಾಹ್ನ 2.30 ರಿಂದ ವಿಚಾರಗೋಷ್ಠಿ–6, ವಿಷಯ : ಪತಂಜಲಿ ಯೋಗಸೂತ್ರಗಳಲ್ಲಿ ವೈಜ್ಞಾನಿಕ ನೋಟ; ಅಧ್ಯಕ್ಷತೆ : ನಿವೃತ್ತ ಪ್ರಾಧ್ಯಾಪಕ ಡಾ. ಟಿ.ಆರ್. ದತ್ತಾತ್ರಿ, ಉಪಸ್ಥಿತರು : ಬಿ.ಜಿ. ಅನಂತ, ಎಸ್. ಶಶಿಕುಮಾರ್, ಜಿ. ವೆಂಕಟೇಶ್; ಮಧ್ಯಾಹ್ನ 3.30 ರಿಂದ ವಿಚಾರಗೋಷ್ಠಿ–7, ವಿಷಯ : ಚಿಕಿತ್ಸೆಯಾಗಿ ಯೋಗ, ಅಧ್ಯಕ್ಷತೆ : ವಿದ್ವಾನ್ ಡಾ. ನಾರಾಯಣ ಹೆಗಡೆ, ಉಪಸ್ಥಿತರು : ಮಾಲತೇಶ ಆಚಾರ್ಯ, ಬಿ. ರವಿ, ಅರವಿಂದ ಶರ್ಮ; ಸಂಜೆ 5ಕ್ಕೆ ಸಮಾರೋಪ ಸಮಾರಂಭ, ಸಾನ್ನಿಧ್ಯ : ಶ್ರೀ ಸೋಮೇಶ್ವರನಾಥ ಸ್ವಾಮೀಜಿ, ಅಧ್ಯಕ್ಷತೆ : ಡಾ. ಕೆ.ಎಲ್. ಶಂಕರನಾರಾಯಣ ಜೋಯಿಸ್, ಉದ್ಘಾಟನೆ : ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ, ಸಮಾರೋಪ ಭಾಷಣ : ಡಾ. ರಾಜಶೇಖರ ರೆಡ್ಡಿ, ಯೋಗ ಕೃತಿಗಳ ಬಿಡುಗಡೆ : ಡಾ. ಕೆ.ಎಸ್. ರಾಧಾಕೃಷ್ಣ ರಾಮರಾವ್, ಶಾಸಕ ದರ್ಶನ್ ಧ್ರುವನಾರಾಯಣ್, ಮುಖ್ಯ ಅತಿಥಿಗಳು : ಡಾ. ಎಂ.ಎ. ಆಳ್ವಾರ್, ಆರ್. ರಘು, ಡಾ. ಕೆ. ರಘುರಾಂ ವಾಜಪೇಯಿ, ನಾರಾಯಣಗೌಡ, ರವಿಶಾಸ್ತ್ರಿ, ಸ್ಥಳ: ಕರ್ನಾಟಕ ಕಲಾಮಂದಿರ, ವಿನೋಬಾ ರಸ್ತೆ

■ **ಸಿ. ಕೃಷ್ಣಯ್ಯ ಚೆಟ್ಟಿ ಗ್ರೂಪ್ ಆಫ್ ಜ್ಯುವಲ್ಲರ್ಸ್ :** ಜ್ಯುವೆಲ್ಲರಿ ಪ್ರದರ್ಶನ ಮತ್ತು ಮಾರಾಟ, ಸ್ಥಳ: ರೀಜೆಂಟ್ ಹಾಲ್, ಗ್ರ್ಯಾಂಡ್ ಮರ್ಕ್ಯೂರ್, ಬೆಳಗ್ಗೆ 10ರಿಂದ.

■ **ಪರಮಹಂಸ ಯೋಗ ಮಹಾವಿದ್ಯಾಲಯ, ಇಂಟರ್‌ನ್ಯಾಷನಲ್ ಯೋಗ ಸ್ಕೂಲ್ :** 10ನೇ ವಿಶ್ವ ಯೋಗ ದಿನಾಚರಣೆ ಪ್ರಯುಕ್ತ ಅಂತರ ಶಾಲಾ ಚಿತ್ರಕಲಾ ಸ್ಪರ್ಧೆ, ಸ್ಥಳ: ಪರಮಹಂಸ ಯೋಗ ಮಹಾವಿದ್ಯಾಲಯ, ರಾಮಕೃಷ್ಣನಗರ, ಬೆಳಗ್ಗೆ 10.30ಕ್ಕೆ.

■ **ಕರ್ನಾಟಕ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟ, ರಂಗವಲ್ಲಿ, ಸಮಾಜವಾದಿ ಅಧ್ಯಯನ ಕೇಂದ್ರ ಹಾಗೂ ರಂಗಾಂತರಂಗ, ಮೈಸೂರು :** ಸುಚೇತ ಕೆ.ಎಸ್. ಅವರ ಕೇಳದ ಕಿವಿಗಳು ಹೇಳಿದ ಕತೆ ಕೃತಿ ಬಿಡುಗಡೆ ಸಮಾರಂಭ, ಉದ್ಘಾಟನೆ : ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆ ನಿರ್ದೇಶಕಿ ಪ್ರೊ. ಎಂ. ಪುಷ್ಪಾವತಿ, ಕೃತಿ ಕುರಿತು : ಲೇಖಕ ಡಾ. ಪಿ.ವಿ. ನಾಗರಾಜ, ಮುಖ್ಯ ಅತಿಥಿಗಳು : ಹಿರಿಯ ವಿಮರ್ಶಕ ಪ್ರೊ. ಓ.ಎಲ್. ನಾಗಭೂಷಣಸ್ವಾಮಿ, ಅಧ್ಯಕ್ಷತೆ : ನಿವೃತ್ತ ವಿಜ್ಞಾನಿ ಡಾ. ಇ. ರತಿರಾವ್, ಉಪಸ್ಥಿತರು : ಬೆಂಗಳೂರು ಅನ್ನಪೂರ್ಣ ಪಬ್ಲಿಷಿಂಗ್ ಹೌಸ್ ಪ್ರಕಾಶನ ಬಿ.ಕೆ. ಸುರೇಶ, ಸ್ಥಳ: ರಂಗಾಂತರಂಗ, ಜೆಎಸ್‌ಎಸ್ ಕಾನೂನು ಕಾಲೇಜು ಹಿಂಭಾಗ, ಕುವೆಂಪುನಗರ, ಬೆಳಗ್ಗೆ 10.30ಕ್ಕೆ.

■ **ಶ್ರೀ ಕುದೇರು ಮಠ :** ಶ್ರೀ ಗುರುಮಲ್ಲೇಶ್ವರರ 125ನೇ ಗಣಾರಾಧನೆ, ಶ್ರೀ ಗುರುಲಿಂಗಸ್ವಾಮಿಗಳವರ 33ನೇ ವಾರ್ಷಿಕ ಗಣಾರಾಧನೆ, ಶ್ರೀ ತೋಂಟದಾರ್ಯ ಸ್ವಾಮಿಗಳ ಪ್ರಾರ್ಥನಾ ಮಂದಿರ ಉದ್ಘಾಟನೆ, ಶ್ರೀ ಗುರುಶಾಂತ ಸ್ವಾಮಿಗಳವರ ಗುರುವಂದನಾ ಸಮಾರಂಭ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಶ್ರೀ ಸಿದ್ಧಗಂಗಾ ಮಠದ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳು, ಶ್ರೀ ಮುಮ್ಮಡಿ ನಿರ್ವಾಣ ಸ್ವಾಮಿಗಳು, ಅಧ್ಯಕ್ಷತೆ : ಶ್ರೀ ಗುರುಮಲ್ಲೇಶ್ವರ ಮಹಾಸಂಸ್ಥಾನ ದಾಸೋಹ ಮಠದ ಶ್ರೀ ಮಹಾಂತ ಸ್ವಾಮಿಗಳು, ಉದ್ಘಾಟನೆ : ಶ್ರೀ ಗುರು ಕಂಬಳೀಶ್ವರ ಮಠದ ಶ್ರೀ ಚನ್ನಬಸವ ಸ್ವಾಮಿಗಳು, ಕೃತಿ ಬಿಡುಗಡೆ : ಶ್ರೀ ಕುಂದೂರು ಮಠದ ಶ್ರೀ ಶರತ್‌ಚಂದ್ರ ಸ್ವಾಮಿಗಳು, ಗುರುವಂದನೆ : ಶ್ರೀ ಕುದೇರು ಮಠದ ಶ್ರೀ ಗುರುಶಾಂತ ಸ್ವಾಮಿಗಳು, ಆಶೀರ್ವಚನ : ಶ್ರೀ ಶಾಂತಮಲ್ಲಿಕಾರ್ಜುನ ಸ್ವಾಮಿಗಳು, ಶ್ರೀ ವಿರಕ್ತ ಮಠದ ಶ್ರೀ ತೋಂಟದಾರ್ಯ ಸ್ವಾಮಿಗಳು, ಸ್ಥಳ:ಶ್ರೀ ತೋಂಟದಾರ್ಯ ಸ್ವಾಮಿಗಳ ಪ್ರಾರ್ಥನಾ ಮಂದಿರ, ಆಲನಹಳ್ಳಿ, ಬೆಳಗ್ಗೆ 10.30ಕ್ಕೆ.

■ **ನೊಳಂಬ ಲಿಂಗಾಯತ ಸಂಘ :** ಶ್ರೀ ಗುರುಸಿದ್ದರಾಮೇಶ್ವರ ಬಾಲಕರ ವಿದ್ಯಾರ್ಥಿ ನಿಲಯದಲ್ಲಿ ನೂತನವಾಗಿ ನಿರ್ಮಿಸಿರುವ 2ನೇ ಮಹಡಿ ಕಟ್ಟಡದ ಉದ್ಘಾಟನಾ ಸಮಾರಂಭ, ಅಧ್ಯಕ್ಷತೆ : ಸಂಘದ ಅಧ್ಯಕ್ಷ ಬಿ.ಕೆ. ಚಂದ್ರಶೇಖರ್, ಉದ್ಘಾಟನೆ : ಸಂಘದ ನಿಕಟಪೂರ್ವ ಅಧ್ಯಕ್ಷ ಎಸ್.ಆರ್. ಪಾಟೀಲ್, ಕೊಠಡಿಗಳ ಉದ್ಘಾಟನೆ : ಮಾಜಿ ಶಾಸಕ ಎಸ್.ಎಂ. ನಾಗರಾಜು, ದಾನಿಗಳಿಗೆ ಸನ್ಮಾನ : ಸಂಘದ ಕಾರ್ಯದರ್ಶಿ ಕೆ.ಬಿ. ಶಶಿಧರ್, ಸ್ಥಳ: ಶ್ರೀ ಗುರುಸಿದ್ದರಾಮೇಶ್ವರ ಲಿಂಗಾಯತ ಬಾಲಕರ ವಿದ್ಯಾರ್ಥಿ ನಿಲಯ, ಗಂಗೋತ್ರಿ ಬಡಾವಣೆ, ಸರಸ್ವತಿಪುರಂ, ಬೆಳಗ್ಗೆ 11ಕ್ಕೆ.

■ **ಪವಿತ್ರ ಹೃದಯದ ದೇವಾಲಯ ಧರ್ಮ ಕೇಂದ್ರ :** ಧರ್ಮ ಕೇಂದ್ರದ ವಾರ್ಷಿಕ ಮಹೋತ್ಸವ ಅಂಗವಾಗಿ ಸಂಜೆ 5ಕ್ಕೆ ದಿವ್ಯ ಬಲಿಅರ್ಪಣೆ, ನಂತರ ಅಲಂಕೃತ ತೇರಿನ ಮೆರವಣಿಗೆ, ಪರಮ ಪ್ರಸಾದ ಆಶೀರ್ವಾದ, ಸ್ಥಳ: ಪವಿತ್ರ ಹೃದಯದ ದೇವಾಲಯ, ಯಾದವಗಿರಿ.

■ **ಶ್ರೀ ನಾದಬ್ರಹ್ಮ ಸಂಗೀತ ಸಭಾ :** ವಿದ್ವಾನ್ ಎಂ.ಎಸ್. ದೀಪಕ್ ಅವರಿಂದ ಕರ್ನಾಟಕ ಶಾಸ್ತ್ರೀಯ ಗಾಯನ, ವಿದ್ವಾನ್ ಕೃತಿಕ್ ಕೌಶಿಕ್–ಪಿಟೀಲು, ವಿದ್ವಾನ್ ಪವನ್ ಮಸೂರ್–ಮೃದಂಗ, ವಿದ್ವಾನ್ ಕಾರ್ತಿಕ್ ಪ್ರಣವ್–ಮೋರ್ಚಿಂಗ್, ಸ್ಥಳ: ಶ್ರೀನಾದಬ್ರಹ್ಮ ಸಂಗೀತ ಸಭಾ, ಮೈಸೂರು ಕೆ. ವಾಸುದೇವಾಚಾರ್ಯ ಭವನ, ಜೆಎಲ್‌ಬಿ ರಸ್ತೆ, ಸಂಜೆ 6ಕ್ಕೆ.

■ **ಶ್ರೀ ರಾಮಕೃಷ್ಣ ಆಶ್ರಮ :** ಸ್ವಾಮಿ ಅಘಹರಾನಂದ ಅವರಿಂದ ಶ್ರೀರಾಮಕೃಷ್ಣರ ಧರ್ಮದಲ್ಲಿನ ಆಧುನಿಕತೆ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ನಟನ ರಂಗಶಾಲೆ :** ಬೆಂಗಳೂರಿನ ನಮ್ದೆ ನಟನೆ ತಂಡದಿಂದ ನಾಯಿ ಕಳೆದಿದೆ ನಾಟಕ ಪ್ರದರ್ಶನ, ನಿರ್ದೇಶನ : ರಂಗಕರ್ಮಿ ರಾಜೇಂದ್ರ ಕಾರಂತ್, ಸ್ಥಳ: ನಟನ ರಂಗಶಾಲೆ, ರಾಮಕೃಷ್ಣನಗರ, ಸಂಜೆ 6.30ಕ್ಕೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ–ಡಾ. ಗೂಳಪ್ಪ ವಕ್ಕುಂದ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಒಡಹುಟ್ಟಿನ ನುಡಿಗಳು–ಕನ್ನಡದ ಒಡನಾಡಿ ಭಾಷೆಗಳನ್ನು ಕುರಿತ ಬಾನುಲಿ ಸರಣಿ, ಲೇಖನ ಹಾಗೂ ಪ್ರಸ್ತುತಿ– ಡಾ. ತೀತೀರ ರೇಖಾ ವಸಂತ್, 6.40 ಪದ ಸಂಸ್ಕೃತಿ, ಪ್ರಸ್ತುತಿ– ಡಾ. ಕಬ್ಬಿನಾಲೆ ವಸಂತ ಭಾರದ್ವಾಜ್, 6.50 ರೈತರಿಗೆ ಸಲಹೆ, 7.15 'ಸಮಗ್ರ ವಿಕಾಸಕ್ಕಾಗಿ ದಿಟ್ಟ ಹಜ್ಜೆ' ಪ್ರಾಯೋಜಿತ ಕಾರ್ಯಕ್ರಮ. ಪ್ರಾಯೋಜಕರು : ವಿಕಾಸ ಅಕಾಡೆಮಿ, ಕಲಬುರ್ಗಿ, 8.30 ಕನ್ನಡ ಚಿತ್ರಗೀತೆಗಳು, 9.40 ನಮ್ಮ ಆರೋಗ್ಯ ಕಾರ್ಯಕ್ರಮ: 'ಅಗ್ನಿ ಕರ್ಮ' ಕುರಿತು ಮಂಡ್ಯದ ಹೊಸಹಳ್ಳಿಯಲ್ಲಿರುವ ಜಿಲ್ಲಾ ಆಯುರ್ವೇದ ಆಸ್ಪತ್ರೆಯ ಶಲ್ಯತಂತ್ರ ವಿಭಾಗದ ಆಯುರ್ವೇದ ತಜ್ಞರಾದ ಡಾ. ಮೋಹನ್ ಕುಮಾರ್. ವಿ.ಆರ್ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ: ಬೇದ್ರೆ ಮಂಜುನಾಥ್, 10.00 ಕೇಳಿ ಗಿಳಿಗಳೇ : ಅಮೃತ ವಿದ್ಯಾಲಯಂ ಶಾಲೆಯ ಮಕ್ಕಳಿಂದ ಕಾರ್ಯಕ್ರಮ ವೈವಿಧ್ಯ. 10.30 ಮಕ್ಕಳ ಮಂಟಪ : ನಂಜನಗೂಡು ತಾಲೂಕು ಸೂರಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಮಕ್ಕಳಿಂದ ಕಾರ್ಯಕ್ರಮ ವೈವಿಧ್ಯ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿಯಲ್ಲಿ ಮಿಶ್ರ ಮಾಧುರ್ಯ

ಮಧ್ಯಾಹ್ನ: 12.30 ದೇವರನಾಮ, 12.45 ಜನಪದ ಸಂಗೀತ: ಕೊಳ್ಳೇಗಾಲ ತಾಲೂಕು ಭೀಮ್ ನಗರದ ಕೆ. ಗೌರಮ್ಮ ಮತ್ತು ಸಂಗಡಿಗರಿಂದ ಸೋಬಾನೆ ಹಾಡು, 1.20 ಭಾವಗೀತೆಗಳು–ಎನ್. ಜ್ಯೋತಿ, 2.40 ಕನ್ನಡ ಚಲನಚಿತ್ರ ಧ್ವನಿ ವಾಹಿನಿ 'ನೆನಪಿನ ದೋಣಿ', 3.40 ಸಿರಿ ಗನ್ನಡಂ ಗೆಲ್ಗೆ, ಪ್ರಸ್ತುತಿ : ಜಿ.ಕೆ. ರವೀಂದ್ರಕುಮಾರ್, 3.45 ಯಕ್ಷಗಾನ : ತಾಳ ಮದ್ದಲೆ, ಪ್ರಸಂಗ–ರುಕ್ಮಿಣಿ ಕಲ್ಯಾಣ, ಪ್ರಸ್ತುತಿ– ಕಾಸರಗೋಡಿನ ಮಲ್ಲ ಶ್ರೀ ದುರ್ಗಾ ಪರಮೇಶ್ವರಿ ಯಕ್ಷಗಾನ ಮಂಡಳಿಯ ಕಲಾವಿದರು, 4.45 ಚಟ್ ಪಟ್ ಚುರುಮುರಿ, ಪ್ರಸ್ತುತಿ: ಪ್ರಭುಸ್ವಾಮಿ ಮಳೀಮಠ್ ಹಾಗೂ ಕೆ.ಬಿ. ಮೀನಾ, 5.30 Pashudhan Se Behthar Jeevan, ಪ್ರಾಯೋಜಕರು : ಪಶು ಸಂಗೋಪನೆ, ಹೈನುಗಾರಿಕೆ ಮತ್ತು ಮೀನುಗಾರಿಕೆ ಸಚಿವಾಲಯ, 6.50 ಕೃಷಿರಂಗ : ತೋರಣ ಹೂರಣ– ಸಾಪ್ತಾಹಿಕ ಸರಣಿ ಕಾರ್ಯಕ್ರಮ, ಪ್ರಸ್ತುತಿ– ಎನ್. ಕೇಶವಮೂರ್ತಿ, ಆರ್. ಲೋಕೇಶ್ವರಿ, ಡಾ. ಮೈಸೂರು ಉಮೇಶ್, ಕೃಷಿಲೋಕ, ಕೃಷಿ ದರ್ಪಣ–ವಾರದ ಕೃಷಿರಂಗ, ಕಿಸಾನ್‌ವಾಣಿ ಕಾರ್ಯಕ್ರಮಗಳ ಮುನ್ನೋಟ, ಪ್ರಸ್ತುತಿ– ಆರ್. ಲೋಕೇಶ್ವರಿ, 8.00 ಹಾದಿಯಲ್ಲಿ ಕಂಡ ಮುಖ– ಬಾನುಲಿ ಸರಣಿ. ಮೈಸೂರು ತಾಲೂಕು ರಮ್ಮನಹಳ್ಳಿಯ ನೀಲಗಾರ ಗಾಯಕ, ಮಲೈಮಹದೇಶ್ವರ ಗುಡ್ಡಪ್ಪ ಅಂಕಪ್ಪ ಅವರೊಂದಿಗೆ ಸಂವಾದ. ಪ್ರಸ್ತುತಿ: ಅಬ್ದುಲ್ ರಶೀದ್, 9.15 ರಂಗಗೀತೆಗಳು– ಎಂ. ಪಿ. ನಾಗಲಿಂಗಾಚಾರ್, 9.30 Issues Before Parliament, 10.00 ರವಿವಾಸರೀಯ ಅಖಿಲ ಭಾರತೀಯ ಸಂಗೀತ ಸಭಾ, ಪಂಡಿತ್. ಯೋಗೀಶ್ ಸಂಶಿ–ತಬಲ, ಪಂಡಿತ್ ದಾಲ್ ಚಂದ್ ಶರ್ಮ–ಪಖಾವಜ್

ಗುಣಮಟ್ಟದ ಶಿಕ್ಷಣದಲ್ಲಿ ಸರ್ಕಾರಿ ಶಾಲೆಗಳೇ ಮುಂದಿವೆ

ಹಿರಿಯ ಸಾಹಿತಿ ಬನ್ನೂರು ರಾಜು ಅಭಿಮತ

ಮೈಸೂರು, ಜೂ.22(ಎಸ್‌ಬಿಡಿ)– 'ವಿದ್ಯಾರ್ಥಿಗಳ ನಡೆ, ಸರ್ಕಾರಿ ಶಾಲೆಗಳ ಕಡೆ' ಘೋಷಣೆ ಪ್ರಾಯೋಗಿಕವಾಗಿ ಸಾಕಾರಗೊಳ್ಳಬೇಕು ಎಂದು ಹಿರಿಯ ಸಾಹಿತಿ ಬನ್ನೂರು ಕೆ.ರಾಜು ಆಶಿಸಿದರು.

ಮೈಸೂರಿನ ಒಂಟಿಕೊಪ್ಪಲಿನ ಸರ್ಕಾರಿ ಪ್ರೌಢಶಾಲೆಯಲ್ಲಿ ಹಿರಣ್ಮಯಿ ಪ್ರತಿಷ್ಠಾನ ಹಾಗೂ ಕಾವೇರಿ ಬಳಗದ ಸಹಯೋಗದೊಂದಿಗೆ ಆಯೋಜಿಸಿದ್ದ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಉನ್ನತ ಶ್ರೇಣಿ ಪಡೆದ ವಿವಿಧ ಸರ್ಕಾರಿ ಶಾಲೆ ವಿದ್ಯಾರ್ಥಿಗಳಿಗೆ ಅಭಿನಂದನಾ ಸಮಾರಂಭದಲ್ಲಿ ಮಾತನಾಡಿ, ಸರ್ಕಾರಿ ಶಾಲೆಗಳು ಖಾಸಗಿ ಶಾಲೆಗಳಿಗಿಂತ ಯಾವುದರಲ್ಲೂ ಕಡಿಮೆಯಿಲ್ಲ. ಗುಣಮಟ್ಟದ ಶಿಕ್ಷಣದಲ್ಲಿ ಸರ್ಕಾರಿ ಶಾಲೆಗಳೇ ಮುಂದಿವೆ ಎನ್ನುವುದಕ್ಕೆ ಈ ಬಾರಿಯ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿ ಫಲಿತಾಂಶವೇ ಸಾಕ್ಷಿ. ಸರ್ಕಾರಿ ಶಾಲೆಗಳು ಮತ್ತಷ್ಟು ಸದೃಢಗೊಂಡಲ್ಲಿ ಎಲ್ಲರಿಗೂ ಉತ್ತಮ ಶಿಕ್ಷಣ ಸುಲಭವಾಗಿ ಲಭ್ಯವಾಗುತ್ತದೆ. ವಿದ್ಯಾರ್ಥಿಗಳ ನಡೆ, ಸರ್ಕಾರಿ ಶಾಲೆಗಳ ಕಡೆ, ಸರ್ವರಿಗೂ ಶಿಕ್ಷಣ, ಕಡ್ಡಾಯ ಶಿಕ್ಷಣ ಘೋಷಣೆಗಳು ಸಾರ್ಥಕವಾಗುತ್ತವೆ ಎಂದರು.

ವಿದ್ಯೆ, ಕತ್ತಲಿನಿಂದ ಬೆಳಕಿನತ್ತ ಕರೆದೊಯ್ಯುವ ಜ್ಞಾನ ಜ್ಯೋತಿ. ಶಿಕ್ಷಣ ಇಲ್ಲದಿದ್ದರೆ ಬದುಕಿದ್ದೂ ಸತ್ತಂತಾಗುತ್ತೇವೆ. ಶಿಕ್ಷಣ ಮಾತ್ರ ಶಾಶ್ವತವಾದ ಅಮೂಲ್ಯ ಸಂಪತ್ತು. ಆಸಕ್ತಿ, ನಿಷ್ಠೆ, ಪ್ರೀತಿಯಿಂದ ಯಾರು ಬೇಕಾದರೂ ಈ ಸಂಪತ್ತು ಸಂಪಾದಿಸಬಹುದು. ಜೀವನದಲ್ಲಿ ಯಾವುದೇ ಕಷ್ಟ ಎದುರಾದರೂ ವಿದ್ಯೆ ಎಂಬ ಸಂಜೀವಿನಿ ನಮ್ಮನ್ನು ಪಾರು ಮಾಡುತ್ತದೆ. ಹಾಗಾಗಿ ಉತ್ತಮ ಭವಿಷ್ಯಕ್ಕಾಗಿ ಚಿಕ್ಕ ವಯಸ್ಸಿನಲ್ಲಿಯೇ ವಿದ್ಯೆಯ ಮಹತ್ವ ಅರಿತುಕೊಳ್ಳಬೇಕು. ಆ ಮೂಲಕ ಸುಶಿಕ್ಷಿತ ಸಮಾಜ ನಿರ್ಮಾಣ ಸಾಧ್ಯ ಎಂದು ಅಭಿಪ್ರಾಯಿಸಿದರು.

ಪ್ರತಿಯೊಬ್ಬರೂ ಪ್ರತಿಭಾನ್ವಿತರು: ಸಂಸ್ಕೃತಿ ಚಿಂತಕ ಕೆ.ರಘುರಾಮ್ ವಾಜಪೇಯಿ ಮಾತನಾಡಿ, ಪ್ರತಿಯೊಬ್ಬ ವಿದ್ಯಾರ್ಥಿಯೂ ಒಂದಲ್ಲಾ ಒಂದು ರೀತಿಯಲ್ಲಿ ಪ್ರತಿಭಾವಂತರೇ. ಕೆಲವರು ಪಠ್ಯದಲ್ಲಿ, ಮತ್ತಷ್ಟು ಮಂದಿ ಪಠ್ಯೇತರ ಚಟುವಟಿಕೆಗಳಲ್ಲಿ ತಮ್ಮದೇ ಆದ ವಿಶಿಷ್ಟ ಪ್ರತಿಭೆ ಹೊಂದಿರುತ್ತಾರೆ. ಹಾಗಾಗಿ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುವುದು ನಮ್ಮ ಸಮಾಜದ ಕರ್ತವ್ಯವಾಗಬೇಕು. ಇಪ್ಪತ್ತು ವರ್ಷ ಪರಿಶ್ರಮದಿಂದ ಓದಿ ಗುರಿ ಸಾಧಿಸಿದರೆ, ಜೀವನವಿಡೀ ಸುಖವಾಗಿರಬಹುದು. ಸಮಯ ಪಾಲನೆಯೊಂದಿಗೆ ಕಲಿಕೆಯಲ್ಲಿ ಸ್ಮರಣ, ಧಾರಣ, ಗ್ರಹಣ ಬಹಳ ಮುಖ್ಯ ಎಂದರು.

ಮಂಚೇಗೌಡನಕೊಪ್ಪಲು ಸರ್ಕಾರಿ ಪದವಿ ಪೂರ್ವ ಕಾಲೇಜಿನ ಉಪನ್ಯಾಸಕಿ ಕೆ.ಎನ್.ಕಲ್ಪನಾ ಪ್ರಾಯೋಜಿಸಿದ ಪ್ರತಿಭಾ ಪುರಸ್ಕಾರವನ್ನು ಪ್ರಸ್ತುತ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಅತೀ ಹೆಚ್ಚು ಅಂಕಗಳನ್ನು ಗಳಿಸಿದ ಒಂಟಿಕೊಪ್ಪಲು ಸರ್ಕಾರಿ ಪ್ರೌಢಶಾಲೆಯ ಮಹಾದೇವಿ ಮತ್ತು ಸೌಭಾಗ್ಯ, ವಿನಾಯಕನಗರದ ವಿವೇಕಾನಂದ ಪ್ರೌಢಶಾಲೆಯ ಚಂದನ್, ಮಂಚೇಗೌಡನಕೊಪ್ಪಲು ಪ್ರೌಢಶಾಲೆಯ ಹರ್ಷ, ಮೇದರ ಬ್ಲಾಕ್ ಸರ್ಕಾರಿ ಪ್ರೌಢಶಾಲೆಯ ಆರ್.ರಚನಾ, ಕೈಲಾಸಪುರಂ ಸರ್ಕಾರಿ ಪ್ರೌಢಶಾಲೆಯ ಜ್ಯೋತಿ ವಿಶ್ವಕರ್ಮ, ಎನ್.ಆರ್.ಮೊಹಲ್ಲಾ ಸರ್ಕಾರಿ ಪ್ರೌಢಶಾಲೆಯ ಚಿರಾಗ್, ಬನ್ನಿಮಂಟಪ ಸರ್ಕಾರಿ ಪ್ರೌಢಶಾಲೆಯ ನೇತ್ರಾವತಿ, ಕುಂಬಾರಕೊಪ್ಪಲು ಸರ್ಕಾರಿ ಪ್ರೌಢಶಾಲೆಯ ಅರ್ಜುನ್‌ಗೆ ಹಿರಣ್ಮಯಿ ಪ್ರತಿಷ್ಠಾನದ ಅಧ್ಯಕ್ಷ ಎ.ಸಂಗಪ್ಪ ಮತ್ತು ಕಾವೇರಿ ಬಳಗದ ಅಧ್ಯಕ್ಷೆ ಎನ್.ಕೆ. ಕಾವೇರಿಯಮ್ಮ ನೀಡಿ, ಅಭಿನಂದಿಸಿದರು.

ಕಾರ್ಯಕ್ರಮದಲ್ಲಿ ಒಂಟಿಕೊಪ್ಪಲು ಶಾಲೆ ಮುಖ್ಯ ಶಿಕ್ಷಕ ಕೆ.ಜಿ.ಮಹೇಶ್, ದೈಹಿಕ ಶಿಕ್ಷಣದ ವಿಶೇಷಾಧಿಕಾರಿ ವೆಂಕಟೇಶ್, ಯಾದವಗಿರಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಮುಖ್ಯ ಶಿಕ್ಷಕಿ ನಾಗವೇಣಿ, ಪ್ರೌಢಶಾಲಾ ಶಿಕ್ಷಕರಾದ ಬಸವರಾಜು, ಎಸ್. ನಂಜುಂಡನಾಯಕ, ಭಾರತಿ ಎಸ್.ಶಾಸ್ತ್ರಿ, ಎ.ತಾರಾ, ಲಕ್ಷ್ಮೀ ಜಿ.ಭಟ್, ವೈ.ಪದ್ಮಾ, ಡಾ.ಎಸ್.ವಿಜಿ ಮತ್ತಿತರರು ಉಪಸ್ಥಿತರಿದ್ದರು.



ಮೈಸೂರಿನ ಒಂಟಿಕೊಪ್ಪಲು ಸರ್ಕಾರಿ ಪ್ರೌಢಶಾಲೆಯಲ್ಲಿ ಹಿರಣ್ಮಯಿ ಪ್ರತಿಷ್ಠಾನ ಹಾಗೂ ಕಾವೇರಿ ಬಳಗದ ಸಹಯೋಗದೊಂದಿಗೆ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆದ ವಿವಿಧ ಸರ್ಕಾರಿ ಶಾಲೆ ವಿದ್ಯಾರ್ಥಿಗಳನ್ನು ಅಭಿನಂದಿಸಲಾಯಿತು.

> ಮುಂದಿನ ವಿದ್ಯಾಭ್ಯಾಸದ ದೃಷ್ಟಿಯಿಂದ ಅಂಕಗಳು ಮುಖ್ಯವಾಗುತ್ತವೆ. ಹೆಚ್ಚು ಅಂಕಗಳಿಸಿದವರನ್ನು ಅಭಿನಂದಿಸಿ, ಪ್ರೋತ್ಸಾಹಿಸುವುದು ಸಹಜ. ಇತರರಿಗೂ ಸ್ಫೂರ್ತಿಯಾಗಲಿ ಎಂಬುದಷ್ಟೇ ಇದರ ಉದ್ದೇಶ. ಹಾಗೆಂದ ಮಾತ್ರಕ್ಕೆ ಅಂಕಗಳೇ ಭವಿಷ್ಯದ ಮಾನದಂಡವಾಗುವುದಿಲ್ಲ. ವಿದ್ಯೆ ಜೊತೆ ಮಾನವೀಯ ಮೌಲ್ಯಗಳನ್ನು ರೂಢಿಸಿಕೊಳ್ಳುವುದು, ನಮ್ಮ ನೆಲದ ಮೌಲ್ಯಾಧಾರಿತ ಸಂಸ್ಕೃತಿಯನ್ನು ಉಳಿಸಿಕೊಳ್ಳುವುದು ಬಹಳ ಮುಖ್ಯ.
> -ಬನ್ನೂರು ಕೆ.ರಾಜು, ಸಾಹಿತಿ

ಗೋಕುಲಂನಲ್ಲಿ ಯೋಗ ಶಿಕ್ಷಕಿ ಆತ್ಮಹತ್ಯೆ

ಮೈಸೂರು, ಜೂ.22(ಎಸ್‌ಬಿಡಿ)– ಒಂಟಿಯಾಗಿದ್ದ ಯೋಗ ಶಿಕ್ಷಕಿಯೊಬ್ಬರು ಖಿನ್ನತೆಯಿಂದ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಮೈಸೂರಿನ ಗೋಕುಲಂನಲ್ಲಿ ಶನಿವಾರ ನಡೆದಿದೆ.

ಗೋಕುಲಂ ಮೂರನೇ ಹಂತದಲ್ಲಿ ಬಾಡಿಗೆ ಮನೆಯಲ್ಲಿದ್ದ ಯೋಗ ಶಿಕ್ಷಕಿ ಮಲ್ಲಿಕಾ(47) ಅವರು ಸೀರೆಯಿಂದ ಫ್ಯಾನ್‌ಗೆ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ದಕ್ಷಿಣ ಕನ್ನಡ ಜಿಲ್ಲೆ ಸುರತ್ಕಲ್‌ನವರಾದ ಮಲ್ಲಿಕಾ ಅವರಿಗೆ ಆರೇಳು ವರ್ಷಗಳ ಹಿಂದೆ ವಿಚ್ಛೇದನವಾಗಿದ್ದು, ಮೂರು ವರ್ಷಗಳಿಂದ ಮೈಸೂರಿನಲ್ಲಿ ನೆಲೆಸಿದ್ದರು. ಯೋಗ ಶಿಕ್ಷಕಿಯಾಗಿ ಜೀವನ ನಡೆಸುತ್ತಿದ್ದರಾದರೂ ಕುಟುಂಬ ಹಾಗೂ ಸಂಬಂಧಿಕರಿಂದ ದೂರವಿದ್ದ ಕಾರಣ ನೋವಿನಲ್ಲಿದ್ದರು.

ಶನಿವಾರ ಬೆಳಗ್ಗೆ 9.30ರ ಸಮಯದಲ್ಲಿ ಕಸದ ಡಬ್ಬಿಯನ್ನು ಮನೆಯ ಹೊರಗೆ ಇಟ್ಟಿದ್ದನ್ನು ನೆರೆ ಹೊರೆಯವರು ಗಮನಿಸಿದ್ದಾರೆ. ಆದರೆ ಮಧ್ಯಾಹ್ನ 12 ಗಂಟೆ ಸುಮಾರಿನಲ್ಲಿ ನಿತ್ಯ ಯೋಗಾಭ್ಯಾಸಕ್ಕೆ ಬರುತ್ತಿದ್ದ ವಿದ್ಯಾರ್ಥಿಗಳು ಬಂದು ಎಷ್ಟು ಬಾಗಿಲು ತಟ್ಟಿದರೂ ಬಾಗಿಲು ತೆರೆದಿಲ್ಲ. ಇದರಿಂದ ಅನುಮಾನಗೊಂಡು 112 ಗೆ ಕರೆ ಮಾಡಿ ವಿಷಯ ತಿಳಿಸಿದ್ದಾರೆ. ಕೂಡಲೇ ಸ್ಥಳಕ್ಕೆ ಬಂದ ಪೊಲೀಸರು, ಮನೆ ಹಿಂಭಾಗದಿಂದ ಹೋಗಿ ಕಿಟಕಿಯಲ್ಲಿ ನೋಡಿದಾಗ ಮಲ್ಲಿಕಾ ಅವರು ಬೆಡ್ ರೂಂನಲ್ಲಿ ನೇಣು ಹಾಕಿಕೊಂಡಿರುವುದು ಕಣ್ಣಿಗೆ ಬಿದ್ದಿದೆ.

ಪೊಲೀಸರ ಮಾಹಿತಿ ಮೇರೆಗೆ ಶನಿವಾರ ರಾತ್ರಿ ಮಲ್ಲಿಕಾ ಅವರ ಅಕ್ಕ ಮತ್ತು ಭಾವ ಮೈಸೂರಿಗೆ ಆಗಮಿಸಿದ್ದಾರೆ. ಮೈಸೂರು ವೈದ್ಯಕೀಯ ಮತ್ತು ಸಂಶೋಧನಾ ಸಂಸ್ಥೆ ಶವಾಗಾರದಲ್ಲಿರುವ ಮೃತದೇಹವನ್ನು ಭಾನುವಾರ ಬೆಳಗ್ಗೆ ವೈದ್ಯಕೀಯ ಪರೀಕ್ಷೆ ನಂತರ ವಾರಸುದಾರಿಗೆ ಒಪ್ಪಿಸಲಾಗುವುದು ಎಂದು ಪ್ರಕರಣ ದಾಖಲಿಸಿಕೊಂಡಿರುವ ವಿವಿ ಪುರಂ ಠಾಣೆ ಪೊಲೀಸರು ತಿಳಿಸಿದ್ದಾರೆ.

ಎಸ್‌ಬಿಎಂ ಮಂಜುಗೆ ಅಭಿನಂದನೆ



ಅಂತಾರಾಷ್ಟ್ರೀಯ ಯೋಗ ಕಾರ್ಯಕ್ರಮಕ್ಕೆ ಸಹಕಾರ ನೀಡಿದ ಮಾಜಿ ಕಾರ್ಪೋರೇಟರ್ ಎಸ್‌ಬಿಎಂ ಮಂಜು ಅವರನ್ನು ವಿಜಯ್ ರಮೇಶ್ ಹಾಗೂ ಯೋಗ ತಂಡದವರು ಅಭಿನಂದಿಸಿದರು.

ರಾಜ್ಯದ ಯುವಜನರಿಗೆ ಹೊರದೇಶದಲ್ಲಿ ಉದ್ಯೋಗ

● ಕರ್ನಾಟಕ ಕೌಶಲಾಭಿವೃದ್ಧಿ ನಿಗಮದ ಹೆಗ್ಗಳಿಕೆ ● ಸ್ಲೋವಾಕಿಯಾದಲ್ಲಿ 2,500, ಹಂಗೇರಿಗೆ 37 ಉದ್ಯೋಗಿಗಳ ಪೂರೈಕೆ ● ಮಾರಿಷಸ್‌ಗೆ ಹೋಟೆಲ್ ಉದ್ಯೋಗಿಗಳ; ಆಸ್ಟ್ರೇಲಿಯಾ, ಜಪಾನ್, ಫಿನ್‌ಲ್ಯಾಂಡ್, ಜರ್ಮನಿ, ನಾರ್ವೆಯಿಂದ ದಾದಿಯರ ಬೇಡಿಕೆ

ಬೆಂಗಳೂರು, ಜೂ.22(ಕೆಎಂಶಿ)– ಕರ್ನಾಟಕ ಕೌಶಲಾಭಿವೃದ್ಧಿ ನಿಗಮವು ರಾಜ್ಯದ ಯುವಜನರಿಗೆ ಹೊರದೇಶಗಳಲ್ಲಿ ಉದ್ಯೋಗ ಕಲ್ಪಿಸುವ ಮಹತ್ವದ ಯೋಜನೆಯನ್ನು ಅನುಷ್ಠಾನಗೊಳಿಸಿದೆ.

ಇದರ ಭಾಗವಾಗಿ ಬಿಇ, ಡಿಪ್ಲೊಮಾ, ಐಟಿಐ ಮತ್ತಿತರ ವೃತ್ತಿಪರ ಕೋರ್ಸ್‌ಗಳನ್ನು ಪೂರೈಸಿದ 94 ಯುವಜನರಿಗೆ ಸ್ಲೊವಾಕಿಯಾದಲ್ಲಿ ಉದ್ಯೋಗ ನೀಡುವಲ್ಲಿ ಕೌಶಲಾಭಿವೃದ್ಧಿ ನಿಗಮವು ಯಶಸ್ವಿಯಾಗಿದೆ.

ಕೌಶಲಾಭಿವೃದ್ಧಿ, ಜೀವನೋಪಾಯ ಹಾಗೂ ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣ ಪ್ರಕಾಶ್ ಪಾಟೀಲ್ ಅವರು, ತೆಗೆದುಕೊಂಡ ದಿಟ್ಟ ನಿರ್ಧಾರದಿಂದಾಗಿ ಉದ್ಯೋಗವಿಲ್ಲದೆ ಕೆಲಸ ಅರಸುತ್ತಿದ್ದ ಯುವಜನರು ಇದೀಗ ವಿದೇಶದಲ್ಲಿ ಕೈತುಂಬ ಸಂಬಳ ಪಡೆಯುತ್ತಿದ್ದು, ತಮ್ಮ ಭವಿಷ್ಯವನ್ನು ರೂಪಿಸಿಕೊಂಡಿದ್ದಾರೆ.

ಯುವಜನರ ಕೌಶಲಾರ್ಹತೆಗೆ ತಕ್ಕಂತೆ ಉದ್ಯೋಗಗಳನ್ನು ನೀಡಲಾಗುತ್ತಿದೆ, ಅವರಿಗೆ ಇಲ್ಲಿಯೇ ತರಬೇತಿ, ವೀಸಾ ವ್ಯವಸ್ಥೆ, ಗೃಹ ಇಲಾಖೆಯಲ್ಲಿ ದಾಖಲಾತಿಗಳ ಪ್ರಮಾಣಪತ್ರ ಪರಿಶೀಲನೆ ಮಾತ್ರವಲ್ಲದೆ ಹೊರ ರಾಷ್ಟ್ರಗಳಿಗೆ ತೆರಳುವವರಿಗೆ ಊಟ, ವಸತಿ ವ್ಯವಸ್ಥೆ, ಸಂಬಂಧಪಟ್ಟವರ ಭೇಟಿಗೆ ಬೇಕಾದ ಇನ್ನಿತರ ಸೌಲಭ್ಯಗಳ ಬಗ್ಗೆಯೂ ಇಲಾಖೆಯ ಅಧಿಕಾರಿಗಳೇ ನಿಗಾವಹಿಸುತ್ತಾರೆ.

ಐಟಿ, ಬಿಟಿ, ವಿಜ್ಞಾನ, ಕೈಗಾರಿಕೆ, ಆರೋಗ್ಯ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಇತರೆ ರಾಜ್ಯಗಳಿಗೆ ಹೋಲಿಸಿದರೆ ಕರ್ನಾಟಕ ಸಾಕಷ್ಟು ಮುಂದಿದೆ. ಇದನ್ನು ಮನಗಂಡ ಸ್ಲೊವಾಕಿಯಾ ರಾಷ್ಟ್ರ ಎರಡೂವರೆ ಸಾವಿರ ಅಸೆಂಬ್ಲಿ ಲೈನ್ ಆಪರೇಟರ್‌ಗಳನ್ನು ನೇಮಕ ಮಾಡಿಕೊಳ್ಳಲು ಮುಂದೆ ಬಂದಿತ್ತು. ತಕ್ಷಣವೇ ಕಾರ್ಯಪ್ರವೃತ್ತರಾದ ಡಾ.ಶರಣ ಪ್ರಕಾಶ್ ಪಾಟೀಲ್ ಅವರು, ತಮ್ಮ ಅಧಿಕಾರಿಗಳ ತಂಡವನ್ನು ಸಿದ್ಧಪಡಿಸಿ ವಿದೇಶಾಂಗ ವ್ಯವಹಾರಗಳ ಇಲಾಖೆ ಜೊತೆ ಒಡಂಬಡಿಕೆ ಮಾಡಿಕೊಂಡರು.

ಸ್ಲೊವಾಕಿಯಾ ರಾಷ್ಟ್ರ 2,500 ಹುದ್ದೆಗಳ ನೇಮಕಾತಿಗೆ ಪ್ರಕ್ರಿಯೆ ಆರಂಭಿಸುತ್ತಿದ್ದಂತೆ ಇಲಾಖೆ ವತಿಯಿಂದ ಅರ್ಹ ಅಭ್ಯರ್ಥಿಗಳನ್ನು ಆಹ್ವಾನಿಸಲಾಯಿತು. ಇದರ ಮೊದಲ ಭಾಗವಾಗಿ 54 ಮಂದಿ ಐಟಿಐ, 31 ಮಂದಿ ಡಿಪ್ಲೊಮಾ ಸೇರಿದಂತೆ 94 ಅಭ್ಯರ್ಥಿಗಳನ್ನು ಆ ದೇಶಕ್ಕೆ ಬೀಳ್ಕೊಡಲಾಗಿದೆ.

ಆಯ್ಕೆಯಾದ ಅಭ್ಯರ್ಥಿಗಳಿಗೆ ಬಿಡದಿ ಸಮೀಪದ ಟೊಯೋಟಾ ಕಿರ್ಲೋಸ್ಕರ್‌ನಲ್ಲಿ ತರಬೇತಿ ನೀಡಲಾಯಿತು. ಈ ಮೊದಲು ಇಲ್ಲಿ ತರಬೇತಿ ಪಡೆಯಲು 35,000 ರೂ. ವೆಚ್ಚವಾಗುತ್ತಿತ್ತು.

ಆರ್ಥಿಕವಾಗಿ ಹಿಂದುಳಿದ ಅಭ್ಯರ್ಥಿಗಳೇ ಇಲ್ಲಿ ತರಬೇತಿ ಪಡೆಯುತ್ತಾರೆ ಎಂಬುದನ್ನು ಮನಗಂಡ ಸಚಿವ ಪಾಟೀಲ್ ಅವರು, ಯಾವುದೇ ಒಬ್ಬ ಅಭ್ಯರ್ಥಿ ನಯಾಪೈಸೆ ಖರ್ಚಿಲ್ಲದೆ, ಎಲ್ಲ ಹಣವನ್ನು ಇಲಾಖೆ ವತಿಯಿಂದಲೇ ಭರಿಸಬೇಕೆಂದು ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿ, ಮಾನವೀಯತೆ ಮೆರೆದರು.

ತರಬೇತಿ ಪಡೆದ ನಂತರ ಸ್ಲೊವಾಕಿಯಾದಲ್ಲಿ ಇವರಿಗೆ ತಿಂಗಳಿಗೆ 970 ಯೂರೋ (86 ಸಾವಿರ ರೂ.) ವೇತನ ನೀಡಲಾಗುತ್ತಿದೆ. ಜೂನ್ 5ರಂದು ಮೊದಲ ತಂಡ ಹಾಗೂ ಜೂ.20ರಂದು 2ನೇ ತಂಡವನ್ನು ಬೀಳ್ಕೊಡಲಾಗಿದೆ. ಜೂ.24 ಮತ್ತು ಜು.1ರಂದು ಉಳಿದ ತಂಡಗಳು ಸ್ಲೊವಾಕಿಯಾಕ್ಕೆ ತೆರಳಲಿದೆ ಎಂದು ಶರಣ ಪ್ರಕಾಶ್ ಪಾಟೀಲ್ ತಿಳಿಸಿದ್ದಾರೆ.

ಕೆಎಸ್‌ಡಿಸಿ ಇದೀಗ 37 ಚಾಲಕರನ್ನು ಹಂಗೇರಿ ದೇಶಕ್ಕೆ ಕಳುಹಿಸಿಕೊಟ್ಟಿದೆ, ಅಲ್ಲದೆ ಮಾರಿಷಸ್‌ಗೆ ವೆಲ್ಡರ್‌ಗಳು, ಬಾಯ್ಲರ್ ತಯಾರಕರು ಮತ್ತು ಇತರ ಬ್ಲೂಕಾಲರ್ ಕೆಲಸಗಳ ಭರ್ತಿ ಪ್ರಕ್ರಿಯೆಗೆ ಚಾಲನೆ ನೀಡಿದ್ದಾರೆ.

ಆಸ್ಟ್ರೇಲಿಯಾ, ಜಪಾನ್, ಫಿನ್‌ಲ್ಯಾಂಡ್, ಜರ್ಮನಿ, ನಾರ್ವೆಯಿಂದ ದಾದಿಯರ ಬೇಡಿಕೆ ಪೂರೈಸಲು ಮುಂದಾಗಿದೆ. ಅಲ್ಲದೆ ಸ್ಲೊವಾಕಿಂಯಾ ಕೂಡ ಹೆಚ್ಚುವರಿಯಾಗಿ ದೊಡ್ಡ ಸಂಖ್ಯೆಯ ಆಪರೇಟರ್‌ಗಳನ್ನು ಕೇಳಿಕೊಂಡಿದೆ.

ಜೊತೆಗೆ ಗಲ್ಫ್ ಮತ್ತು ಯುರೋಪ್ ರಾಷ್ಟ್ರಗಳಿಂದಲೂ ಬೇಡಿಕೆಗಳು ಬಂದಿದ್ದು, ಇದನ್ನು ಈಡೇರಿಸುವಲ್ಲಿ ನಾವು ಕೆಲಸ ಮಾಡುತ್ತಿದ್ದೇವೆ ಎಂದು ಕರ್ನಾಟಕ ಕೌಶಲಾಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕಿ ಎಂ.ಕನಗವಲ್ಲಿ ತಿಳಿಸಿದ್ದಾರೆ.

ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಇಂಗ್ಲೀಷ್ ಭಾಷೆ ಕಲಿಕೆ ಅಗತ್ಯತೆ ಮನಗಂಡಿರುವ ಕೌಶಲಾಭಿವೃದ್ಧಿ ನಿಗಮ, ಆಂಸ್ಕೆಂಯಾಗುವ ಉದ್ಯೋಗಾಕಾಂಕ್ಷಿಗಳಿಗೆ ಉಚಿತವಾಗಿ ಇಂಗ್ಲೀಷ್ ಭಾಷೆ ಕಲಿಕೆ ತರಬೇತಿಗೆ ಮುಂದಾಗಿದೆ. ಇದಕ್ಕಾಗಿಯೇ ಇಂಗ್ಲೀಷ್ ಭಾಷೆಯಲ್ಲಿ ಪರಿಣತಿ ಹೊಂದಿರುವವರಿಂದ ತರಬೇತಿ ನೀಡುತ್ತಿದೆ ಎಂದರು.

ಅಂತಾರಾಷ್ಟ್ರೀಯ ಯೋಗ ದಿನಾಚರಣೆ



ಮೈಸೂರಿನ ಸೆಕ್ಯೂರ್ ಆಸ್ಪತ್ರೆ ಮತ್ತು ಗೋಪಾಲಸ್ವಾಮಿ ಶಾಲೆ ಜಂಟಿಯಾಗಿ ಅಂತಾರಾಷ್ಟ್ರೀಯ ಯೋಗ ದಿನವನ್ನು ಯೋಗ ಶಿಕ್ಷಕ ರಾಜಶೇಖರಮೂರ್ತಿ ಮಾರ್ಗದರ್ಶನದಲ್ಲಿ ಆಚರಿಸಿತು. ಈ ಕಾರ್ಯಕ್ರಮದಲ್ಲಿ 280 ವಿದ್ಯಾರ್ಥಿಗಳು ಭಾಗವಹಿಸಿದ್ದರು. ಡಾ.ವಿಶ್ವಾಸ್, ಡಾ.ಗುರುಪ್ರಸಾದ್, ಡಾ.ಫಣೀಶ್, ಕರೆಸ್ಪಾಂಡೆಂಟ್ ಮಂಜುನಾಥ್, ಮುಖ್ಯೋಪಾಧ್ಯಾಯರಾದ ಎಸ್.ರಾಮಪ್ರಸಾದ್, ಸೆಕ್ಯೂರ್ ಆಸ್ಪತ್ರೆಯ ಮುಖ್ಯ ಆಡಳಿತಾಧಿಕಾರಿ ತಪೋರಾಜ್ ಶ್ರೇಷ್ಠ ಉಪಸ್ಥಿತರಿದ್ದರು.

ಸಂಶೋಧನೆ, ತಂತ್ರಜ್ಞಾನ ಅಭಿವೃದ್ಧಿಗೆ ಕೃತಕ ಬುದ್ಧಿಮತ್ತೆ ಸಹಕಾರಿ



ಮೈಸೂರು ವಿವಿ ವಿಜ್ಞಾನ ಭವನದಲ್ಲಿ 'ಶೈಕ್ಷಣಿಕ ಪ್ರಕಾಶನ, ಗ್ರಂಥಾಲಯ ಮತ್ತು ಕೃತಕ ಬುದ್ಧಿಮತ್ತೆ' ಕುರಿತ ರಾಷ್ಟ್ರೀಯ ಸಮ್ಮೇಳನದ ಸಮಾರೋಪ ಸಮಾರಂಭ ನಡೆಯಿತು. ಭಾರತದ ರಾಷ್ಟ್ರೀಯ ಗ್ರಂಥಾಲಯದ ನಿವೃತ್ತ ಮಹಾನಿರ್ದೇಶಕ ಪಿ.ವೈ.ರಾಜೇಂದ್ರಕುಮಾರ್(ಎಡದಿಂದ ಮೂರನೇಯವರು) ಮಾತನಾಡಿದರು. ಮೈಸೂರು ವಿವಿ ಕಂಪ್ಯೂಟರ್ ಸೈನ್ಸ್ ಅಧ್ಯಯನ ವಿಭಾಗದ ಮುಖ್ಯಸ್ಥ ಪ್ರೊ.ಹೆಚ್.ಎಸ್.ನಾಗೇಂದ್ರಸ್ವಾಮಿ ಮತ್ತಿತರರಿದ್ದರು.

ಮೈಸೂರು, ಜೂ.22(ಎಂಕೆ)– ಡಿಜಿಟಲ್ ಯುಗದಲ್ಲಿ ಶೈಕ್ಷಣಿಕ ಪ್ರಕಾಶನ, ವಿದ್ವತ್ಪೂರ್ಣ ಸಂವಹನ, ಶೈಕ್ಷಣಿಕ ಸಮಗ್ರತೆ, ಸಂಶೋಧನೆ ಮತ್ತು ತಂತ್ರಜ್ಞಾನದ ಅಭಿವೃದ್ಧಿಗೂ ಕೃತಕ ಬುದ್ಧಿಮತ್ತೆ ಸಹಕಾರಿಯಾಗಿದೆ. ಆದರೆ ಅಳವಡಿಕೆ ಮತ್ತು ಬಳಕೆಯಲ್ಲಿ ಎಚ್ಚರಿಕೆ ಅನಿವಾರ್ಯ ಎಂದು ಭಾರತದ ರಾಷ್ಟ್ರೀಯ ಗ್ರಂಥಾಲಯದ ನಿವೃತ್ತ ಮಹಾನಿರ್ದೇಶಕ ಪಿ.ವೈ.ರಾಜೇಂದ್ರ ಕುಮಾರ್ ಹೇಳಿದರು.

ಮೈಸೂರು ವಿವಿ ಮಾನಸ ಗಂಗೋತ್ರಿ ವಿಜ್ಞಾನ ಭವನದಲ್ಲಿ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಅಧ್ಯಯನ ವಿಭಾಗದ ಮತ್ತು ಮಿಲನ್(ಮೈವಿವಿ ಮಾಹಿತಿ ಮತ್ತು ಗ್ರಂಥಾಲಯ ವಿಜ್ಞಾನ ವಿಭಾಗದ ಹಳೆ ವಿದ್ಯಾರ್ಥಿಗಳ ಸಂಘಟನೆ) ವತಿಯಿಂದ ಆಯೋಜಿಸಿದ್ದ 'ಶೈಕ್ಷಣಿಕ ಪ್ರಕಾಶನ, ಗ್ರಂಥಾಲಯ ಮತ್ತು ಕೃತಕ ಬುದ್ಧಿಮತ್ತೆ' ಕುರಿತ ರಾಷ್ಟ್ರೀಯ ಸಮ್ಮೇಳನದ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅವರು, ಸಮಾಜಕ್ಕೆ ಮಾಹಿತಿಯ ಅನಿವಾರ್ಯತೆ ಪೂರೈಸಲು ಕೃತಕ ಬುದ್ಧಿಮತ್ತೆ ತಂತ್ರಜ್ಞಾನದ ಅವಶ್ಯವಿದೆ ಎಂದು ತಿಳಿಸಿದರು.

ಶೈಕ್ಷಣಿಕ ಪ್ರಕಾಶನಕ್ಕೂ ಕೃತಕ ಬುದ್ಧಿಮತ್ತೆಯಿಂದ ಅನುಕೂಲಗಳಿವೆ. ಆದರೆ ಅದನ್ನು ಎಚ್ಚರಿಕೆಯಿಂದ ಬಳಸಬೇಕು. ಬಳಕೆ ಹೆಚ್ಚಿದಂತೆ ಹ್ಯಾಕರ್‌ಗಳ ಕೂಡ ಮಾಹಿತಿ ಕದಿಯಲು ಹೊಂಚು ಹಾಕುತ್ತಿರುತ್ತಾರೆ. ಆದ್ದರಿಂದ ಗೌಪ್ಯತೆ ಕಾಪಾಡಿಕೊಂಡು ನಿರ್ವಹಣೆ ಮಾಡುವುದು ಅನಿವಾರ್ಯ ಎಂದು ಎಚ್ಚರಿಸಿದರು.

ಮೈಸೂರು ವಿವಿ ಕಂಪ್ಯೂಟರ್ ಸೈನ್ಸ್ ಅಧ್ಯಯನ ವಿಭಾಗದ ಮುಖ್ಯಸ್ಥ ಪ್ರೊ. ಹೆಚ್.ಎಸ್. ನಾಗೇಂದ್ರಸ್ವಾಮಿ, ಇನ್ಫೋಫಾರ್ ಮ್ಯಾಟಿಕ್ಸ್ ಇಂಡಿಯಾ ಲಿಮಿಟೆಡ್‌ನ ಮುಖ್ಯಸ್ಥ ಎನ್.ವಿ.ಸತ್ಯನಾರಾಯಣ, ಭಾರತೀಯ ಸಂಖ್ಯಾಶಾಸ್ತ್ರೀಯ ಸಂಸ್ಥೆ ನಿವೃತ್ತ ಪ್ರಾಧ್ಯಾಪಕ ಡಾ.ಕೆಎಸ್.ರಾಘವನ್, ಮಾಜಿ ಗ್ರಂಥಪಾಲಕರಾದ ಡಾ.ಬಿ.ಎಂ. ಮೀರಾ, ಮಿಲನ್ ಉಪಾಧ್ಯಕ್ಷ ಪ್ರೊ.ಎಂ. ಚಂದ್ರಶೇಖರ, ಸಮ್ಮೇಳನ ನಿರ್ದೇಶಕಿ ಶಾಲಿನಿ ಆರ್.ಅರಸ್, ಎನ್.ಎಸ್. ಹರಿನಾರಾಯಣ ಉಪಸ್ಥಿತರಿದ್ದರು.

ಇಂದು ಯೂನಿಕ್ ಹೆಲ್ತ್ ಮ್ಯೂಸಿಯಂ

ಮೈಸೂರು, ಜೂ.22– ದಿ ಮೈಂಡ್‌ಫುಲ್ ವಾಕರ್ಸ್ ವತಿಯಿಂದ ಮೈಸೂರು ಶಿಕ್ಷಕರ ಬಡಾವಣೆ, ಮೊದಲನೇ ಹಂತ, ಸ್ವಾಮಿ ವಿವೇಕಾನಂದ ರಸ್ತೆಯಲ್ಲಿನ ಸ್ವಾಸ್ಥ್ಯ ಫಾರ್ಮಸಿ ಕಟ್ಟಡದಲ್ಲಿ ಭಾನುವಾರ(ಜೂ.23) ಬೆಳಗ್ಗೆ 10.30ರಿಂದ 11.30ರವರೆಗೆ 'ಮ್ಯೂಸಿಯಮ್ಸ್ ಸ್ಪೀಕ್ಸ್ ಅಟ್ ಯೂನಿಕ್ ಹೆಲ್ತ್ ಮ್ಯೂಸಿಯಮ್' ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಪ್ರವೇಶ ಉಚಿತವಾಗಿದ್ದು, ನೋಂದಣಿ ಕಡ್ಡಾಯವಾಗಿದೆ. ಮೊ.ಸಂ.9731195345ಕ್ಕೆ 'HI' ಎಂದು ವಾಟ್ಸಾಪ್ ಮೆಸೇಜ್ ಕಳುಹಿಸುವ ಮೂಲಕ ಹೆಚ್ಚಿನ ಮಾಹಿತಿ ಪಡೆಯಬಹುದು.

ಬಾಬು ಜಗಜೀವನರಾಂ ಬಾಲಕರ ವಿದ್ಯಾರ್ಥಿನಿಲಯಕ್ಕೆ ಅರ್ಜಿ ಆಹ್ವಾನ

ಮೈಸೂರು, ಜೂ.22(ಎಸ್‌ಪಿಎನ್)– 2024–25ನೇ ಸಾಲಿಗೆ ಐದರಿಂದ ಹತ್ತನೇ ತರಗತಿವರೆಗೆ ವ್ಯಾಸಂಗ ಮಾಡುತ್ತಿರುವ ಎಸ್ಸಿ, ಎಸ್ಟಿ ಹಾಗೂ ಒಬಿಸಿ ವರ್ಗದ ವಿದ್ಯಾರ್ಥಿಗಳಿಂದ ಬಾಬು ಜಗಜೀವನರಾಂ ಬಾಲಕರ ವಿದ್ಯಾರ್ಥಿ ನಿಲಯಕ್ಕೆ ಅರ್ಜಿ ಆಹ್ವಾನಿಸಲಾಗಿದೆ.

ಈ ವಸತಿ ನಿಲಯಕ್ಕೆ ಅರ್ಜಿ ಸಲ್ಲಿಸಲು ಜೂ.29 ರಂದು ಕೊನೆಯ ದಿನವಾಗಿದ್ದು, ಪ್ರವೇಶಾತಿ ಪಡೆಯುವ ವಿದ್ಯಾರ್ಥಿಗಳಿಗೆ ಉಚಿತ ಊಟ, ವಸತಿ ಹಾಗೂ ಇತರೆ ಸೌಕರ್ಯಗಳನ್ನು ಕಲ್ಪಿಸಲಾಗುವುದು ಎಂದು ನಿಲಯ ಪಾಲಕ ಎಸ್.ಸಿದ್ದಲಿಂಗೇಶ್ವರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಹೆಚ್ಚಿನ ವಿವರಗಳಿಗೆ 8105946168/8722691411/9739345985 ಅನ್ನು ಸಂಪರ್ಕಿಸಬಹುದು.

ಉದ್ಯಮಿ ಒಕ್ಕಲಿಗ ಘಟಕ ಸ್ಥಾಪನೆ

ಒಕ್ಕಲಿಗರು ಉದ್ಯಮ ಕ್ಷೇತ್ರ ಅವಲಂಬಿಸುವುದು ಅನಿವಾರ್ಯ

● ಶಾಸಕ ಕೆ.ಹರೀಶ್‌ಗೌಡ ಅಭಿಮತ ● ಉದ್ಯಮ ಕ್ಷೇತ್ರದಲ್ಲಿ ಗುಣಮಟ್ಟ ಅವಶ್ಯ; ಕವೀಶ್‌ಗೌಡ ● ದೇಶದ ಪ್ರಗತಿಗೆ ಇದು ಸಹಕಾರಿ; ಜಿ.ಡಿ.ಹರೀಶ್‌ಗೌಡ

ಮೈಸೂರು, ಜೂ.22(ಎಂಕೆ)– ಶಿಸ್ತು ಸಂಯಮ ಹಾಗೂ ಗುಣಮಟ್ಟದ ಸೇವೆ ನೀಡಿದರೆ ಒಕ್ಕಲುತನ ಮಾಡುವ ಒಕ್ಕಲಿಗರೂ ಸಹ ಉದ್ಯಮ ಕ್ಷೇತ್ರದಲ್ಲಿ ಯಶಸ್ಸು ಸಾಧಿಸಬಹುದು ಎಂದು ಶಾಸಕ ಕೆ.ಹರೀಶ್‌ಗೌಡ ಹೇಳಿದರು.

ಮೈಸೂರಿನ ಹುಣಸೂರು ಮುಖ್ಯರಸ್ತೆಯಲ್ಲಿರುವ ಲೀ ರುಚಿ ಹೋಟೆಲ್‌ನಲ್ಲಿ ಫಸ್ಟ್ ಸರ್ಕಲ್‌ನ 'ಉದ್ಯಮಿ ಒಕ್ಕಲಿಗ' ಮೈಸೂರು ಘಟಕದ ಉದ್ಘಾಟನೆ ಕಾರ್ಯ ಕ್ರಮದಲ್ಲಿ ಮಾತನಾಡಿದ ಅವರು, ಒಕ್ಕಲಿ ಗರಲ್ಲಿ ಉದ್ಯಮಿಗಳು ಕಡಿಮೆ. ಒಕ್ಕಲುತನ ಮಾಡಲು ಭೂಮಿ ಇಲ್ಲ. ಆದ್ದರಿಂದ ಪರಸ್ಪರ ಸಹಕಾರದಿಂದ ಒಕ್ಕಲಿಗರನ್ನು ಉದ್ಯಮಿಗಳನ್ನಾಗಿ ಮಾಡುವ ಕಾರ್ಯ ಯಶಸ್ವಿಯಾಗಲಿ ಎಂದು ಆಶಿಸಿದರು.

ಬೇರೆ ದೇಶಗಳಲ್ಲಿ ಹೈನುಗಾರಿಕೆಯೂ ಉದ್ಯಮವಾಗಿದೆ. ಆದರೆ ನಮ್ಮ ದೇಶದಲ್ಲಿ ಅದನ್ನು ಕೃಷಿಯೊಂದಿಗೆ ಸೇರಿಸಲಾಗಿದೆ. ಅಲ್ಲದೆ ಹೈನುಗಾರಿಕೆ ಮಾಡಲು ವಿಶಾಲ ಭೂಮಿಯೂ ಇಲ್ಲ. ಮುಂದಿನ 40 ವರ್ಷದಲ್ಲಿ ನೇಗಿಲು–ನೊಗವೆಂಬುದು ಬಹುತೇಕ ಕಾಣೆಯಾಗಲಿದೆ. ಹಾಗಾಗಿ ಉದ್ಯಮ ಕ್ಷೇತ್ರವನ್ನು ಅವಲಂಬಿಸುವುದು ಸೂಕ್ತವಾಗಿದೆ. ಈ ನಿಟ್ಟಿನಲ್ಲಿ ಒಕ್ಕಲಿಗರನ್ನು ಉದ್ಯಮಿಗಳನ್ನಾಗಿಸುವ ಕಾರ್ಯದಲ್ಲಿ ತೊಡಗಿರುವ ಉದ್ಯಮಿ ಒಕ್ಕಲಿಗ ವೇದಿಕೆಗೆ ಸಂಪೂರ್ಣ ಸಹಕಾರ ನೀಡಲಾಗುವುದು ಎಂದು ಭರವಸೆ ನೀಡಿದರು.

ವಿದ್ಯಾವಿಕಾಸ ಶಿಕ್ಷಣ ಸಂಸ್ಥೆ ಮುಖ್ಯಸ್ಥ ಕವೀಶ್‌ಗೌಡ ಮಾತನಾಡಿ, ಮೈಸೂರು ಎಲ್ಲಾ ಬಗೆಯ ಸಂಪನ್ಮೂಲಗಳನ್ನು ಹೊಂದಿರುವ ಜಿಲ್ಲೆಯಾದರೂ ಟ್ಯಾಲೆಂಟ್‌ಗಳನ್ನು ಗುರ್ತಿಸಿ, ಪ್ರೋತ್ಸಾಹ ನೀಡುವಲ್ಲಿ ಹಿಂದೆ ಬಿದ್ದಿದೆ. ಬುದ್ಧಿವಂತರನ್ನು ಗುರ್ತಿಸಿ, ಪ್ರೋತ್ಸಾಹಿಸುವವರೇ ಕಡಿಮೆ. ಆದ್ದರಿಂದ ಟ್ಯಾಲೆಂಟ್‌ಗಳಾಗಿದ್ದರೂ ಸೂಕ್ತ ಅವಕಾಶಗಳು ದೊರೆಯದೆ ಬೇರೆ ಬೇರೆ ನಗರ, ದೇಶಗಳತ್ತ ಮುಖ ಮಾಡುತ್ತಿದ್ದಾರೆ ಎಂದು ಬೇಸರ ವ್ಯಕ್ತಪಡಿಸಿದರು.

ಆರ್ಥಿಕವಾಗಿ ಸದೃಢ: ಉದ್ಯಮ ಕ್ಷೇತ್ರದಲ್ಲಿ ಸಾಧನೆಗೆ ಗುಣಮಟ್ಟದ ಸೇವೆ ಮುಖ್ಯವಾಗುತ್ತದೆ. ಅದರಲ್ಲೂ ಒಕ್ಕಲುತನವನ್ನೇ ನಂಬಿರುವ ಒಕ್ಕಲಿಗ ಸಮುದಾಯ ಆರ್ಥಿಕವಾಗಿ ಸದೃಢವಾಗಲು ಉದ್ಯಮ ಕ್ಷೇತ್ರದತ್ತ ಬರುವುದು ಅನಿವಾರ್ಯವಾಗಿದೆ. ಸಮುದಾಯದಲ್ಲಿರುವ ಪ್ರತಿಭೆಗಳನ್ನು ಚಿಕ್ಕ ವಯಸ್ಸಿನಲ್ಲೇ ಗುರ್ತಿಸಿ, ಪ್ರೋತ್ಸಾಹಿಸಿದರೆ ಮುಂದಿನ ದಿನಗಳಲ್ಲಿ ದೊಡ್ಡ ಶಕ್ತಿಯಾಗಿ ಬೆಳೆಯುತ್ತಾರೆ. ಆಧುನಿಕ ತಂತ್ರಜ್ಞಾನ ಮತ್ತು ಕೌಶಲತೆ ಅಳವಡಿಸಿಕೊಂಡು ಉದ್ಯಮ ಕ್ಷೇತ್ರದಲ್ಲಿ ಯಶಸ್ಸು ಕಾಣಬಹುದು ಎಂದು ತಿಳಿಸಿದರು.

ಉತ್ತಮ ಕೆಲಸ: ಶಾಸಕ ಜಿ.ಡಿ.ಹರೀಶ್‌ಗೌಡ ಮಾತನಾಡಿ, ಒಕ್ಕಲಿಗ ಸಮುದಾಯದ ಉದ್ಯಮಿಗಳನ್ನು ಬೆಳೆಸುವ ಹಾಗೂ ಹೊಸ ಉದ್ಯಮಿಗಳನ್ನು ಗುರ್ತಿಸುವ ನಿಟ್ಟಿನಲ್ಲಿ ಫಸ್ಟ್ ಸರ್ಕಲ್‌ನ 'ಉದ್ಯಮಿ ಒಕ್ಕಲಿಗ' ಮೈಸೂರು ಚಾಪ್ಟರ್‌ಗೆ ಚಾಲನೆ ನೀಡುತ್ತಿರುವುದು ಉತ್ತಮ ಕೆಲಸವಾಗಿದೆ. ವಿಶ್ವವೇ ಭಾರತದತ್ತ ನೋಡುತ್ತಿರುವ ಕಾಲಘಟ್ಟದಲ್ಲಿ ಒಕ್ಕಲಿಗ ಸಮುದಾಯವೂ ಉದ್ಯಮ ಕ್ಷೇತ್ರದಲ್ಲಿ ತಮ್ಮದೇ ಕೊಡುಗೆ ನೀಡುವಂತಾದರೆ ದೇಶದ ಪ್ರಗತಿ ಇನ್ನಷ್ಟು ವೇಗ ಪಡೆಯುತ್ತದೆ ಎಂದು ಹೇಳಿದರು.

ಮೈಸೂರು ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ, ಮೈಸೂರು ವಾಣಿಜ್ಯ ಮತ್ತು ಕೈಗಾರಿಕೆ ಸಂಸ್ಥೆ ಅಧ್ಯಕ್ಷ ಕೆ.ಬಿ.ಲಿಂಗರಾಜು, ಫಸ್ಟ್ ಸರ್ಕಲ್‌ನ ಚೀಫ್ ಮೆಂಟರ್ ಜಯರಾಮ್ ರಾಯಪುರ್, ಹೋಟೆಲ್ ಲೀ ರುಚಿ ಎಂಡಿ ಬಿ.ಮಂಜುನಾಥ್, ಎಸಿಪಿ ಗಜೇಂದ್ರ ಪ್ರಸಾದ್, ಉದ್ಯಮಿ ಎಂ.ಎ.ಮದನ್‌ಕುಮಾರ್, ದುಬೈ ಒಕ್ಕಲಿಗ ಸಂಘದ ಗೋಕುಲ್ ಗೌಡ, ಫಸ್ಟ್ ಸರ್ಕಲ್ ರಾಜ್ಯಾಧ್ಯಕ್ಷ ನಂದೀಶ್, ಜಿಲ್ಲಾಧ್ಯಕ್ಷ ಎಂ.ಕೆ.ಯಶ್ವಂತ್‌ಕುಮಾರ್, ಕಾರ್ಯದರ್ಶಿ ತ್ಯಾಗರಾಜು ಸಿದ್ದೇಗೌಡ ಮತ್ತಿತರರಿದ್ದರು.



ಫಸ್ಟ್ ಸರ್ಕಲ್‌ನ 'ಉದ್ಯಮಿ ಒಕ್ಕಲಿಗ' ಮೈಸೂರು ಘಟಕವನ್ನು ಉದ್ಘಾಟಿಸಲಾಯಿತು. ಶಾಸಕರಾದ ಕೆ.ಹರೀಶ್‌ಗೌಡ, ಜಿ.ಡಿ.ಹರೀಶ್‌ಗೌಡ, ಫಸ್ಟ್ ಸರ್ಕಲ್‌ನ ಜಯರಾಮ್ ರಾಯಪುರ್, ಬಿಜೆಪಿ ಮುಖಂಡ ಕವೀಶ್‌ಗೌಡ ಮತ್ತಿತರರಿದ್ದರು.

> ಹಳೇ ಮೈಸೂರು ಭಾಗದಲ್ಲಿ ಅತೀ ಹೆಚ್ಚಿನ ಸಂಖ್ಯೆಯಲ್ಲಿರುವ ಒಕ್ಕಲಿಗರು ಉದ್ಯಮಿಗಳಾಗುವ ಮುನ್ನ ಒಕ್ಕಲಿಗ ಮನಸ್ಥಿತಿಯನ್ನು ತಮ್ಮಲ್ಲಿ ಅಳವಡಿಸಿಕೊಳ್ಳಬೇಕು. ಒಕ್ಕಲಿಗ ಸಮುದಾಯ ಇತರೆ ಸಮುದಾಯದ ಜಾತಿ–ಜನಾಂಗದೊಂದಿಗೆ ಸೇರಿ ಯುವ ಸಮೂಹವನ್ನು ಮೇಲೆತ್ತುವ ಕೆಲಸ ಮಾಡಬೇಕು.
> - ಜಿ.ಡಿ.ಹರೀಶ್‌ಗೌಡ, ಶಾಸಕ

ನಕ್ಕರೆ ಅದೇ ಸ್ವರ್ಗ

ರಾಮು : ಇವತ್ತು ನನ್ನ ಗರ್ಲ್ ಫ್ರೆಂಡ್ ಬರ್ತ್‌ಡೇ, ಅವಳಿಗೆ ಏನು ಕೊಡ್ಲಿ?

ಶಾಮು : ನೋಡೋಕೆ ಹೇಗಿದ್ದಾಳೆ?

ರಾಮು : ತುಂಬಾ ಚೆನ್ನಾಗಿದ್ದಾಳೆ!!

ಶಾಮು : ಹಾಗಿದ್ರೆ ನನ್ ನಂಬರ್ ಕೊಡು!!

ಮೈಸೂರು ಮಿತ್ರ

ಭಾನುವಾರ, 23 ಜೂನ್ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ..........

ಯಾರನ್ನು ಅತಿಯಾಗಿ ಹಚ್ಚಿಕೊಳ್ಳಬೇಡಿ. ಅತಿಯಾದರೆ ಅಮೃತವೂ ವಿಷವಾಗುತ್ತದೆ. ಹಾಗೆ ಅತಿಯಾದ ನಂಬಿಕೆ ನಿಮ್ಮ ಬ್ಲಾಕ್‌ಲಿಸ್ಟ್‌ಗೆ ಸೇರಿಸುತ್ತೆ –ನುಡಿಮುತ್ತು

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಅಡಿಕೆಾಯಿಯನ್ನು ಚೀಲದೊಳಗೆ ಹಾಕಬಹುದು, ಮರ ಆದ ನಂತರ ಹಾಕಬಹುದೇ?

ನಿಮ್ಮ ಪತ್ರಗಳು

ಮರು ಚುನಾವಣೆಯ ವೆಚ್ಚ ಭರಿಸುವವರು ಯಾರು?

ಮಾನ್ಯರೆ,

ಕಾಂಗ್ರೆಸ್‌ನ ಮಾಜಿ ಅಧ್ಯಕ್ಷ ರಾಹುಲ್ ಗಾಂಧಿ ತಾವು ಸ್ಪರ್ಧಿಸಿದ್ದ ಎರಡೂ ಕ್ಷೇತ್ರದಲ್ಲಿ ಜಯಭೇರಿ ಬಾರಿಸಿ ಈಗ ತನಗೆ ರಾಜಕೀಯ ಪುನರ್ಜನ್ಮ ನೀಡಿದ ವೈನಾಡ್ ಕ್ಷೇತ್ರವನ್ನು ತ್ಯಜಿಸಲು ನಿರ್ಧರಿಸಿದ್ದಾರೆ. ಇದೊಂದು ಅನಿವಾರ್ಯ ಕ್ರಮ ಹೌದಾದರೂ ಈಗ ಮತ್ತೊಮ್ಮೆ ನಡೆಯುವ ಚುನಾವಣೆಯ ವೆಚ್ಚ ಭರಿಸುವವರು ಯಾರು? ಅದು ಜನಸಾಮಾನ್ಯರ ತೆರಿಗೆ ಹಣದ ಪೋಲಲ್ಲವೇ ಎನ್ನುವುದು ಈಗ ಎಲ್ಲರನ್ನೂ ಕಾಡುತ್ತಿರುವ ಪ್ರಶ್ನೆ.

ಈ ಮೇಲಿನ ಸಂದರ್ಭಗಳೂ ಪಕ್ಷಾತೀತವಾಗಿ ಎಲ್ಲಾ ರಾಜಕೀಯ ಪಕ್ಷಗಳ ಅನುಕೂಲಕ್ಕಾಗಿ ಮಾಡಲಾಗಿರುವ ವ್ಯವಸ್ಥೆ ಎಂಬುದು ದುರದೃಷ್ಟಕರ.

ಈ ಕೆಟ್ಟ ವ್ಯವಸ್ಥೆಯನ್ನು ತೆಗೆದು ಹಾಕುವತ್ತ ಎಲ್ಲಾ ಪಕ್ಷಗಳೂ ಒಂದಾಗಿ ಕಾನೂನು ರೂಪಿಸಬೇಕಾಗಿದೆ. ಇಲ್ಲವಾದಲ್ಲಿ ಹೀಗೂ ಮಾಡಬಹುದು.

ಎರಡೂ ಕಡೆಯಿಂದ ಸ್ಪರ್ಧಿಸಿದ ವ್ಯಕ್ತಿ ಒಂದೊಮ್ಮೆ ಎರಡೂ ಕಡೆ ಗೆದ್ದು ಒಂದಕ್ಕೆ ರಾಜೀನಾಮೆ ನೀಡಿದರೆ ಅವರ ವಿರುದ್ಧ ಸ್ಪರ್ಧಿಸಿ ಸೋತು ಎರಡನೇ ಸ್ಥಾನ ಪಡೆದ ಪಕ್ಷದ ಅಭ್ಯರ್ಥಿಯನ್ನು ವಿಜಯಿಯೆಂದು ಘೋಷಿಸಿದರೆ ಅಲ್ಲಿ ಚುನಾವಣೆ ನಡೆಯುವ ಸ್ಥಿತಿ ನಿರ್ಮಾಣವಾಗಲಾರದು ಅಥವಾ ಗೆದ್ದ ಅಭ್ಯರ್ಥಿ ಅಥವಾ ಅವನು ಪ್ರತಿನಿಧಿಸುವ ಪಕ್ಷ ತಾನು ರಾಜೀನಾಮೆ ನೀಡಿದ ಕ್ಷೇತ್ರದ ಮರು ಚುನಾವಣಾ ವೆಚ್ಚವನ್ನು ಭರಿಸಬೇಕು ಎಂಬ ಕಾನೂನು ಜಾರಿಯಾಗುವಂತೆ ಎಲ್ಲಾ ಪಕ್ಷಗಳ ನಾಯಕರು ಒಮ್ಮತಕ್ಕೆ ಬಂದು ಸಂಸತ್‌ನಲ್ಲಿ ಪ್ರಜಾಪ್ರತಿನಿಧಿ ಕಾಯ್ದೆಗೆ ತಿದ್ದುಪಡಿ ತರುವ ಇಚ್ಛಾಶಕ್ತಿ ಪ್ರದರ್ಶಿಸಿಯಾವೆ?

ನಮ್ಮನ್ನಾಳುವ ಪ್ರತಿನಿಧಿಗಳಿಗೆ ಅದರಲ್ಲೂ ಸಂಸತ್ತಿನಂಥ ದೇಶದ ಕಾನೂನನ್ನು ರೂಪಿಸುವ ಹೊಣೆ ಇರುವ ಸಂಸ್ಥೆಗಳಿಗೆ ಆಯ್ಕೆಯಾಗುವವರಿಗೆ ಕನಿಷ್ಠ ವಿದ್ಯಾರ್ಹತೆಯನ್ನೂ ನಿಗದಿಪಡಿಸುವ ಅವಶ್ಯಕತೆ ಇದೆ. ಒಂದು ವೇಳೆ ಆಯ್ಕೆಯಾದ ಸದಸ್ಯ ಆ ಅವಧಿಯಲ್ಲಿ ಯಾವುದೇ ಕಾರಣಕ್ಕೆ ಸದಸ್ಯತ್ವ ತೊರೆಯಬೇಕಾಗಿ ಬಂದರೆ ಅಥವಾ ನಿಧನರಾದರೆ ಆ ಸ್ಥಾನ ಖಾಲಿ ಉಳಿಯುವಂತಾದರೆ ಎರಡನೇ ಸ್ಥಾನ ಪಡೆದಿದ್ದ ವ್ಯಕ್ತಿಯನ್ನು ಉಳಿದ ಅವಧಿಗೆ ನೇಮಕ ಮಾಡುವ ಅವಕಾಶವಿರಬೇಕು.

ಹಾಗೆಯೇ NOTA ಮತಗಳು ಗೆಲುವಿನ ಮತಗಳ ಅಂತರಕ್ಕಿಂತ ಜಾಸ್ತಿ ಇದ್ದಲ್ಲಿ ಅಲ್ಲಿ ಮರು ಚುನಾವಣೆ ನಡೆಸುವಂತಿರಬೇಕು. ಇದೆಲ್ಲವನ್ನೂ ನಮ್ಮನ್ನಾಳುವ ಪ್ರತಿನಿಧಿಗಳು ಗಂಭೀರವಾಗಿ ಚಿಂತಿಸಿ ಸೂಕ್ತ ಕಾನೂನು ತಿದ್ದಪಡಿ ತರುತ್ತಾರೆಂದು ಆಶಿಸುವುದು ತಿರುಕನ ಕನಸಾದೀತು! ಚಾರ್ ಸೌ ಪಾರ್ ಆಗಿದ್ದರೆ ಸ್ವಲ್ಪವಾದರೂ ಭರವಸೆ ಇಡಬಹುದಿತ್ತೇನೋ? ಇದು ಪ್ರಾಮಾಣಿಕವಾಗಿ ದುಡಿದು ತೆರಿಗೆ ನೀಡಿ ಅದು ವ್ಯಥಾ ಪೋಲಾಗುತ್ತಿರುವುದನ್ನು ನೋಡಲಾಗದ ನನ್ನಂತಹ ಕೋಟ್ಯಂತರ ನಾಗರಿಕರ ಮನವಿ. ಈ ಬಗ್ಗೆ ಸರ್ಕಾರ –ವಿಪಕ್ಷಗಳು ಯೋಚಿಸಿಯಾವೇ?

–ಶಿವಮೊಗ್ಗ ನಾ. ದಿನೇಶ್ ಅಡಿಗ, ಮೈಸೂರು

ಕಲಬೆರಕೆ ಶಿಕ್ಷಣಕ್ಕೆ ಕೊನೆ ಎಂದು?

ಮಾನ್ಯರೆ,

ಪರೀಕ್ಷೆ ಅಕ್ರಮದ ಪೆಡಂಭೂತ ದೇಶಾದ್ಯಂತ ಲಕ್ಷಾಂತರ ಮಂದಿ ಪ್ರಾಮಾಣಿಕ ವಿದ್ಯಾರ್ಥಿಗಳು ಮತ್ತು ಅವರ ಪೋಷಕರನ್ನು ಕಂಗೆಡಿಸಿದೆ. ಕೆಲವು ಕೋಚಿಂಗ್ ಸೆಂಟರ್‌ಗಳು ದೋಚುವ ಸೆಂಟರ್‌ಗಳಾಗಿ ಪರಿವರ್ತನೆಯಾಗುತ್ತಿವೆ. ಹಣದ ಆಸೆಗಾಗಿ ಶಿಕ್ಷಣ ವ್ಯವಸ್ಥೆಯನ್ನೆ ಬುಡಮೇಲು ಮಾಡುತ್ತಿವೆ. ಇದು ಸಮಾಜಕ್ಕೆ ಮಾರಕ ಮತ್ತು ಅಪಾಯಕಾರಿ ಬೆಳವಣಿಗೆ. ಸಿಇಟಿ, ನೀಟ್ ಸೇರಿದಂತೆ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಹಣಕ್ಕಾಗಿ ಮತ್ತು ಅಧಿಕಾರಿಗಳ ಒತ್ತಡಕ್ಕೆ ಒಳಗಾಗಿ ಶಿಕ್ಷಣ ವ್ಯವಸ್ಥೆಯನ್ನೇ ಹಾಳುಮಾಡುವ ಮೂಲಕ ಕಲಬೆರಕೆ ಶಿಕ್ಷಣಕ್ಕೆ ನಾಂದಿ ಹಾಡಿದ್ದಾರೆ.

ಎಸ್‌ಎಸ್‌ಎಲ್‌ಸಿ ಹಂತದಲ್ಲೇ ಕೆಲ ಶಿಕ್ಷಕರು ಹೆಚ್ಚಿನ ಫಲಿತಾಂಶಕ್ಕಾಗಿ ಪರೀಕ್ಷಾ ಅಕ್ರಮಕ್ಕೆ ತಾವೇ ಮುಂದಾಗುತ್ತಾರೆ. ಇಂತಹ ಶಿಕ್ಷಣ ವ್ಯವಸ್ಥೆ ದೇಶಕ್ಕೆ ಮಾರಕ. ಇಂತಹ ಪ್ರಕರಣದಲ್ಲಿ ಅಪರಾಧಿಗೆ ಉಗ್ರ ಶಿಕ್ಷೆ ನೀಡಬೇಕು. ಅಕ್ರಮ ನಡೆಸುವ ಕೋಚಿಂಗ್ ಸೆಂಟರ್‌ಗಳನ್ನು ಮುಚ್ಚಿಸಬೇಕು. ಇವರಿಗೆ ಸೇರಿದ ಶಿಕ್ಷಣ ಸಂಸ್ಥೆಗಳಿದ್ದರೆ ಅವುಗಳ ಪರವಾನಗಿ ರದ್ದುಪಡಿಸಬೇಕು. ಇದರಿಂದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ನ್ಯಾಯ ಸಿಗುತ್ತದೆ ಮತ್ತು ಕಲುಷಿತ ಶಿಕ್ಷಣವನ್ನು ತಡೆಗಟ್ಟಲು ಸಾಧ್ಯ. ಹಿಂದಿನ ಶಿಕ್ಷಣ ವ್ಯವಸ್ಥೆ ನೋಡಿದರೆ ಪ್ರಾಥಮಿಕ ಹಂತದಲ್ಲಿ ಮಗು ಓದು–ಬರಹ ಕಲಿಯದಿದ್ದರೆ ಅನುತ್ತೀರ್ಣಗೊಳಿಸಿ ಅದೇ ತರಗತಿಯಲ್ಲಿ ಮತ್ತೊಂದು ವರ್ಷ ಓದಲು ಬಿಡುತ್ತಿದ್ದರು. ಒಟ್ಟಾರೆ ಗುಣಮಟ್ಟದ ಶಿಕ್ಷಣ ದೊರೆಯುವ ವ್ಯವಸ್ಥೆಯನ್ನು ಶಿಕ್ಷಣ ತಜ್ಞರ ಜೊತೆಗೂಡಿ ಸರ್ಕಾರ ನಿರ್ಧರಿಸಲಿ ಮತ್ತು ದಿಟ್ಟತನ ಪ್ರದರ್ಶಿಸಲಿ.

–ದಡದಹಳ್ಳಿ ರಮೇಶ್, ಚಂದಕವಾಡಿ ಹೋಬಳಿ, ಚಾಮರಾಜನಗರ ಜಿಲ್ಲೆ.

ಒಳಚರಂಡಿ ದುರಸ್ತಿಗೊಳಿಸಿ

ಮಾನ್ಯರೆ,

ಮೈಸೂರಿನ ರಾಜರಾಜೇಶ್ವರಿನಗರ, ಬಿಇಎಂಎಲ್ 2ನೇ ಹಂತದಲ್ಲಿ ಒಳಚರಂಡಿ ಮುಚ್ಚಿಹೋಗಿದ್ದು, ಕಲುಷಿತ ನೀರು ರಸ್ತೆಗೆ ಹರಿಯುತ್ತಿದೆ. ಇದರಿಂದ ಇಲ್ಲಿನ ನಿವಾಸಿಗಳು ಮೂಗು ಮುಚ್ಚಿಕೊಂಡು ಓಡಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಅಲ್ಲದೆ ಅನಾರೋಗ್ಯದ ಸಮಸ್ಯೆ ಕಾಡುವ ಭೀತಿ ಎದುರಾಗಿದೆ. ಈ ಸಂಬಂಧ ಹಲವಾರು ಬಾರಿ ಮನವಿ ಸಲ್ಲಿಸಿದ್ದರೂ ಯಾವುದೇ ಪ್ರಯೋಜನವಾಗಿಲ್ಲ. ಕೂಡಲೆ ಈ ಸಮಸ್ಯೆಯನ್ನು ಬಗೆಹರಿಸಬೇಕೆಂದು ಮನವಿ. – **ವಾಣಿಶ್ರೀ, ರಾಜರಾಜೇಶ್ವರಿನಗರ, ಮೈಸೂರು.**

ಸರ್ಕಾರಿ ಶಾಲೆಯಲ್ಲಿ ಓದುವ ಹಾಗೆ ಕಾಯ್ದೆ ಜಾರಿ ಮಾಡಲಿ

ಮಾನ್ಯರೇ

ಇತ್ತೀಚಿನ ದಿನಗಳಲ್ಲಿ ಖಾಸಗಿ ಶಾಲೆಗಳಿಗೆ ಹೆಚ್ಚಿನ ಮಕ್ಕಳು ಸೇರ್ಪಡೆಗೊಳ್ಳುತ್ತಿರುವುದು ಗಮನಾರ್ಹ ಸಂಗತಿ. ಖಾಸಗಿ ಶಾಲೆಯಲ್ಲಿ ದುಬಾರಿ ಶುಲ್ಕವನ್ನು ಕೊಟ್ಟು ಸೇರಿಸುವ ಪೋಷಕರು ತಮ್ಮ ಮಕ್ಕಳನ್ನು ಸರ್ಕಾರಿ ಶಾಲೆಗಳಿಗೆ ಸೇರಿಸಲು ಆಸಕ್ತಿ ವಹಿಸುವುದಿಲ್ಲ. ಹಾಗಾದರೆ ಸರ್ಕಾರಿ ಶಾಲೆ ಗುಣಮಟ್ಟ ಕುಸಿದಿದೆಯೇ? ಇದರ ಬಗ್ಗೆ ಸರ್ಕಾರ ಎಚ್ಚೆತ್ತುಕೊಳ್ಳಬೇಕಾಗಿದೆ. ಬಡವರಾದರೂ ಕೂಡ ಸಾಲವನ್ನಾದರೂ ಮಾಡಿ ಖಾಸಗಿ ಶಾಲೆಗಳಿಗೆ ಸೇರಿಸುತ್ತಾರೆ. ಸರ್ಕಾರದ ಪ್ರತಿಯೊಂದು ಸವಲತ್ತುಗಳನ್ನು ಬಯಸುವ ಪೋಷಕರು ಹಾಗೂ ವಿಶೇಷವಾಗಿ ಸರಕಾರಿ ಕೆಲಸನೇ ಬೇಕು ಎನ್ನುವ ಮನದಾಸೆ, ಹೀಗೆ ಸರ್ಕಾರಿ ಸೌಲಭ್ಯಗಳನ್ನು ಪಡೆದು ಸರ್ಕಾರಿ ಶಾಲೆಗಳ ಕಡೆ ಮುಖ ಮಾಡಲು ಹಿಂಜರಿಯುತ್ತಾರೆ. ವಿಶೇಷವಾಗಿ ಸರ್ಕಾರಿ ನೌಕರಿ ಮಾಡುವ ಕೆಲಸಗಾರರು ಪ್ರತಿಯೊಂದು ಸರ್ಕಾರದ ಸೌಲಭ್ಯವನ್ನು ಪಡೆದು ತಮ್ಮ ಮಕ್ಕಳನ್ನು ಖಾಸಗಿ ಶಾಲೆಗಳಿಗೆ ದುಬಾರಿ ಶುಲ್ಕವನ್ನು ಕೊಟ್ಟು ಸೇರಿಸುವ ಪರಿ ನಡೆಯುತ್ತಲೇ ಇದೆ! ಸರ್ಕಾರಿ ನೌಕರರ ಮಕ್ಕಳು ಸರ್ಕಾರಿ ಶಾಲೆಗಳಲ್ಲಿ ಓದಿದರೆ ಸರ್ಕಾರಿ ಶಾಲೆಗಳು ಇನ್ನು ಅಭಿವೃದ್ಧಿ ಹೊಂದುತ್ತವೆ. ಆಗುಹೋಗುಗಳ ವಿಷಯಗಳಿಗೆ ಅವರು ಕೂಡ ಸ್ಪಂದಿಸುತ್ತಾರೆ. ಸರ್ಕಾರಿ ನೌಕರ ಮಕ್ಕಳು ಸರ್ಕಾರಿ ಶಾಲೆಯಲ್ಲಿ ಓದುವ ಕಾನೂನನ್ನು ಜಾರಿ ಮಾಡಲಿ.

–ಪಿ.ಸಿ. ಕಂಗಾಣಿಸೋಮು, ಕ್ಯಾತಮಾರನಹಳ್ಳಿ ಮೈಸೂರು



ಡಾ.ರಮಾ ವಿ. ಬೆಣ್ಣೂರ್
ಸಂಗೀತ ವಿಮರ್ಶಕರು
ಮೊ: 99452 82346

ನಾದಲಹರಿ

‘ಡಿವಿಜಿ’ ಪ್ರಾತಃಸ್ಮರಣೀಯರು

ಯಾವುದೋ ಪುಸ್ತಕವನ್ನು ಹುಡುಕುತ್ತಿದ್ದಾಗ, ಶ್ರೀ ಡಿ.ವಿ.ಗುಂಡಪ್ಪನವರು ತಾವೇ ಸಹಿ ಮಾಡಿ ನಮ್ಮ ತಂದೆಯವರಿಗೆ ನೀಡಿದ್ದ ಅವರ ಗೀತ ಶಾಕುಂತಲವು ಕಣ್ಣಿಗೆ ಬಿತ್ತು. ನನಗೇ ಅರಿವಾಗದಂತೆ ಅದರ ಮುನ್ನುಡಿಯನ್ನು ಓದಲು ತೊಡಗಿದೆ.

ಗುಂಡಪ್ಪನವರನ್ನು ಅರಿಯದ ಕನ್ನಡಿಗರು ಇದ್ದಾರೆಂದು ನನಗೆ ಅನ್ನಿಸುವುದಿಲ್ಲ. ದೇವನಹಳ್ಳಿ ವೆಂಕಟರಮಣಯ್ಯ ಗುಂಡಪ್ಪನವರು ಕನ್ನಡ ನಾಡಿನಲ್ಲಿ ಹುಟ್ಟಿದುದು ನಮ್ಮ ಸೌಭಾಗ್ಯ. ಅವರಂತಹ ಚಿಂತಕರು, ಆದರ್ಶ ವ್ಯಕ್ತಿಗಳು, ಬದುಕನ್ನು ಅರ್ಥ ಮಾಡಿಕೊಂಡವರು ವಿರಳ. ಅವರ ಬದುಕು, ಆಲೋಚನೆ, ಕ್ರಿಯೆ ಎಲ್ಲವೂ ಸ್ವಚ್ಛ ಸ್ವಚ್ಛ. ಗೋಪಾಲಕೃಷ್ಣ ಗೋಖಲೆಯವರ ಆದರ್ಶಗಳನ್ನು ತಮ್ಮದಾಗಿಸಿಕೊಂಡು, ಸಮಾಜಕ್ಕೆ ಸದಾ ಒಳಿತನ್ನು ಬಯಸುವ, ಪ್ರಜಾಪ್ರಭುತ್ವದಲ್ಲಿ ಸಂಪೂರ್ಣ ನಂಬಿಕೆ ಇದ್ದ ಜೀವನದ ಕಷ್ಟ ಕಾರ್ಪಣ್ಯಗಳನ್ನು ಧೈರ್ಯದಿಂದ ಎದುರಿಸುತ್ತಿದ್ದ ಸಾಹಿತಿ, ಪತ್ರಕರ್ತ, ಕವಿ, ಸಂಗೀತ ಪ್ರೇಮಿ, ಕಲಾರಾಧಕ ನಮಗೆ ಮತ್ತೆ ದೊರಕಲು ಸಾಧ್ಯವೇ? ಅವರು ನಂಬಿದ ಆದರ್ಶಗಳ ಕುರುಹಾಗಿ ಬೆಂಗಳೂರಿನಲ್ಲಿ ಅವರೇ ಸ್ಥಾಪಿಸಿದ ಗೋಖಲೆ ಇನ್ಸ್‌ಟಿಟ್ಯೂಟ್ ಆಫ್ ಪಬ್ಲಿಕ್ ಅಫೇರ್ಸ್, ಅವರು ಹಾಕಿಕೊಟ್ಟ ಮಾರ್ಗದಲ್ಲಿ ಇಂದು ನಡೆಯುತ್ತಿದೆ.


ಅಂದಿನ ಮೈಸೂರಿನ ದಿವಾನರುಗಳು ಅದರಲ್ಲೂ ಸರ್.ಎಂ.ವಿಶ್ವೇಶ್ವರಯ್ಯ ಅವರು ಸಮಾಜಮುಖಿ ಕೆಲಸಗಳನ್ನು ಆರಂಭಿಸುವ ಮುನ್ನ, ಅದರ ಸಾಧಕ ಬಾಧಕಗಳನ್ನು ಕುರಿತು ಅನೇಕ ಬಾರಿ ಗುಂಡಪ್ಪನವರೊಡನೆ ಚರ್ಚಿಸುತ್ತಿದ್ದರಂತೆ. ಅದೆಂತಹ ಪಾರದರ್ಶಕ ವಿಚಾರ ವಿನಿಮಯ, ಕಾರ್ಯವೈಖರಿ! ಡಿವಿಜಿಯವರ ಮಂಕುತಿಮ್ಮನ ಕಗ್ಗ ಮತ್ತು ಮರುಳ ಮುನಿಯನ ಕಗ್ಗದ ಪರಿಚಯ ಇಲ್ಲದವರ್ಯಾರು. ಬದುಕನ್ನು ಅಷ್ಟು ಸರಳವಾಗಿ, ತಿದ್ದಿ, ನಡೆಯಬೇಕಾದ ಸರಿ ಮಾರ್ಗವನ್ನು ಸ್ಪಷ್ಟವಾಗಿ ತೋರಿ, ಪ್ರಬುದ್ಧ ಚಿಂತನೆಯಲ್ಲಿ ನಮ್ಮ ಅಹಂಕಾರವನ್ನು ಲಯವಾಗಿಸುವ, ಇವೆಲ್ಲವೂ ಅವನ ಆಟ ಎಂಬುದನ್ನು ತಿಳಿಸುವ ಮತ್ತೊಂದು ಕೃತಿ ಎಲ್ಲಿದೆ? ಅವರ ಅಂತಃಪುರ ಗೀತೆಗಳಲ್ಲಿ ಮದನಿಕೆಯರು ತಮ್ಮ ಅಂತರಂಗವನ್ನು ನಮ್ಮೆದುರು ಬಿಚ್ಚಿಡುತ್ತಾರೆ.



ವಿಶ್ವ ಸಂಗೀತ ದಿನದ ಸಂದರ್ಭದಲ್ಲಿ ಗೀತ ಶಾಕುಂತಲದ ಮುನ್ನುಡಿಯ ಕೆಲ ಭಾಗಗಳನ್ನು ನಿಮ್ಮೊಡನೆ ಹಂಚಿ ಕೊಳ್ಳುವ ಬಯಕೆ.

ಗೋವಿನ ಕಥೆಯಲ್ಲಿ ಗೊಲ್ಲಗೌಡನು ಕೊಳಲನೂದಿದನಂತೆ. ಅವನಂತೆ ಈಗಲೂ ಹಳ್ಳಿಗಾಡುಗಳಲ್ಲಿ ದನ ಮೇಯಿಸುವವರು ತಾವು ತಾವೇ ಹಾಡಿಕೊಳ್ಳುತ್ತಾರೆ; ಕೊಳಲು ಊದುತ್ತಾರೆ. ಬೆಳಗಿನ ಜಾವದಲ್ಲಿ ಹೊಲ ಗದ್ದೆಗಳಿಗೆ ದನಕರು ನಡೆಸಿಕೊಂಡು ಹೋಗುವವರೂ ಬಂಡಿ ಹೊಡೆದುಕೊಂಡು ಹೋಗುವವರೂ ಕೊರಲ ದನಿಯಿಂದಲೋ ತುಟಿಯ ಸಿಳ್ಳಿನಿಂದಲೋ ಪಾಡಿಕೊಳ್ಳುತ್ತಾರೆ. ಇವರೇನೂ ಸ್ವರಸಾಧನೆ ಮಾಡಿದವರಲ್ಲ, ಶ್ರುತಿ ತಾಳ ತಿಳಿದವರಲ್ಲ, ರಾಗಶುದ್ಧಿ ಬಲ್ಲವರಲ್ಲ. ಅವರ ಮನಸ್ಸಿನ ಉಲ್ಲಾಸ ಅವರ ಸಂಗೀತ.

ನಗರವಾಸಿಗಳಲ್ಲೂ ಅಂಥವರುಂಟು. ಮನಸ್ಸು ಹಗುರವಾದಾಗ ಅಥವಾ ಆಲೋಚನೆಗೆ ಸಿಕ್ಕಿದಾಗ, ಸ್ನಾನದ ಮನೆಯಲ್ಲಿಯೋ ವಿಶ್ರಾಂತಿಯ ಕೋಣೆಯಲ್ಲಿಯೋ ಸಣ್ಣ ಸಂಗೀತ ಅವರ ಕಂಠದಿಂದ ಉಕ್ಕಿ ಹರಿಯುತ್ತದೆ. ಅದು ಇತರರ ಕಿವಿಗೆ ಸಂಗೀತವೆನ್ನಿಸದಿರಬಹುದು. ಈ ಇತರರ ಇರುವಿಕೆಯೇ ಆ ಹಾಡುಗನ ಲಕ್ಷ್ಯದಲ್ಲಿರದು.



ಡಿವಿಜಿಯವರು ಅಪರೂಪದ ಹಸ್ತಾಕ್ಷರ.

ಅಷ್ಟು ಹೆಚ್ಚಿನದು ಅವನ ಆತ್ಮೋಲ್ಲಾಸ.

ಸಾಮಾನ್ಯವಾಗಿ ಎಲ್ಲ ಎಳೆಯ ಮಕ್ಕಳೂ ತಮ್ಮಷ್ಟಕ್ಕೆ ತಾವು ಹಾಡು ಹಾಡಿಕೊಂಡು ಸುಖಿಸುತ್ತಾರೆ. ಅವರ ಸುಖವು ಶಾಸ್ತ್ರಜ್ಞಾನದಿಂದ ಬಂದದ್ದಲ್ಲ ಅದು ಅವರ ನೈಜ ವಿಕಾಸ

ಪೂಜಾಕಾಲದಲ್ಲಿಯೂ ಉತ್ಸವ ಕಾಲದಲ್ಲಿಯೂ ಮುತ್ತೈದೆಯರು ಹೇಳುವ ಹಾಡು ವಿದ್ವತ್ತಿನ ಗಂಧವಿಲ್ಲದ್ದು. ಅದೂ ಜೀವದ ನೈಜ ಗಾನ. ಅದರಿಂದ ಸುಖ.

ಹೀಗೆ ಮನುಷ್ಯಸಹಜವಾದ ಹೃದಯ ವಿಕಾಸವೇ ಸಂಗೀತದ ಮೂಲ, ಹಾಡಿನ ಮೂಲ, ಪದ್ಯದ ಮೂಲ, ಶಿಲ್ಪ ಚಿತ್ರಗಳ ಮೂಲ, ಎಲ್ಲ ಕಲಾವ್ಯಾಪಾರಕ್ಕೂ ಮೂಲ.

ಹೃದಯ ಭಾವವು ತುಟಿಯ ಮೂಲಕವೋ ಕಣ್ಣು ಕೈಗಳ ಮೂಲಕವೋ ಹೊರಕ್ಕೆ ಹರಿದುಬಾರದೆ, ಒಳಗಡೆಯೇ ನಿಂತರೆ, ಗಡ್ಡೆ ಕಟ್ಟಿ ಭಾರವಾಗುತ್ತದೆ. ಅದು ಹರಿದು ಹೊರಕ್ಕೆ ಬಂದಾಗ ಎದೆ ಕೊಂಚ ಹಗುರವಾಗುತ್ತದೆ. ಈ ಕಾರಣದಿಂದ ಭಾವಾಭಿವ್ಯಕ್ತಿಯು ಹೃದಯಜೀವನದ ಒಂದು ಅನಿವಾರ್ಯವಾದ ಅವಶ್ಯಕತೆ. ಇದು ಎಲ್ಲ ನೈಜವಾದ ಕಲಾಕೃತಿಗೂ ಅನ್ವಯಿಸುವ ಮಾತು.

ಅಂತರಂಗದಲ್ಲಾಗುವ ಅನುಭವಗಳನ್ನು ಲಕ್ಷಿಸದಾತನು ಯೋಗಿ, ಹೇಳಿಕೊಳ್ಳದಾತನು ಮೂಗ. ಮಿಕ್ಕೆಲ್ಲ ಮನುಷ್ಯರೂ ಬಾಯಿಬಿಟ್ಟು ವಿವರಿಸಿ ಹೇಳಿಕೊಂಡ ಹೊರತು ಅವರ ಎದೆಯೊತ್ತಡ ಇಳಿಯದು. ಅರಳಿದ ಹೊರತು ಹೃದಯ ಜೀವನ ಸಾಂಗವಾಗದು.

ಹಾಗಂದ ಮೇಲೆ, ‘ಕಲಾಕೃತಿಯ ಮೊದಲನೆಯ ಪ್ರಯೋಜನ ಅದರ ಕರ್ತನಿಗೆ’ ಎಂದಾಯಿತು. ಅದು ಅವನ ಅಂತರಂಗದ ಭಾರವನ್ನಿಳಿಸುತ್ತದೆ.

ಅದರ ಎರಡನೆಯ ಪ್ರಯೋಜನ ಅವನ ಸಧರ್ಮಿಗಳಿಗೆ. ಅವರ ಅಂತರಂಗಗಳು ಎಷ್ಟೆಷ್ಟು ಮಟ್ಟಿಗೆ ಅವನ ಅಂತರಂಗಕ್ಕೆ ಸಮಾನವಾಗಿರುತ್ತವೆಯೋ ಅಷ್ಟಷ್ಟು ಮಟ್ಟಿಗೆ ಅವನ ಅನುಭವದ ರುಚಿಗಳು ಅವರ ಅನುಭವಕ್ಕೂ ದೊರಕುತ್ತವೆ. ಹಾಗೆ ಅವರ ಎದೆಹೊರೆಗಳೂ ಹಗುರವಾಗುತ್ತವೆ.

> “ಮನುಷ್ಯನು ತನ್ನ ಕಲಾನುಭವಗಳನ್ನು ಆಗಾಗ ಪರೀಕ್ಷೆ ಮಾಡಿಕೊಳ್ಳುತ್ತ, ಸುಖಕರ ಪ್ರಯೋಗಗಳನ್ನು ಕಂಡುಕೊಳ್ಳುತ್ತ, ಮನಸ್ಸೊಪ್ಪಿದ ಲಕ್ಷಣಗಳನ್ನು ಪರೀಕ್ಷಿಸಿ ಗುರುತು ಮಾಡಿಕೊಳ್ಳುತ್ತ ಹೋಗುತ್ತಾನೆ. ಹೀಗೆ ಪ್ರಕೃತಿಸಿದ್ಧವಾದ ನಾದಸಾಮಗ್ರಿಯು ಬುದ್ಧಿಕ್ರಿಯೆಯಿಂದ ಸಂಸ್ಕೃತಿಪಡೆದು ಸಂಗೀತವಾಗುತ್ತದೆ. ಆ ಸಂಸ್ಕಾರ ವಿಧಾನವೇ ಶಾಸ್ತ್ರ. ಶಾಸ್ತ್ರ ಕ್ರಿಯೆಯಿಂದ ಕಲೆಯು ಉತ್ಕೃಷ್ಟತೆ.

ಅದರ ಮೂರನೆಯ ಪ್ರಯೋಜನ ಶಾಸ್ತ್ರ ಪಂಡಿತನಿಗೆ. ಶಾಸ್ತ್ರಜ್ಞಾನವೂ ಕಲಾನುಭವವೂ ಒಂದೇ ಪದಾರ್ಥವಲ್ಲ. ಅವುಗಳೆರಡರಲ್ಲಿ ಒಂದಿದ್ದ ಕಡೆ ಇನ್ನೊಂದು ಇರಲೇ ಇರುತ್ತದೆಂಬ ನಿಶ್ಚಯವೂ ಇಲ್ಲ. ಶಾಸ್ತ್ರಕ್ಕೆ ಬೇಕಾದದ್ದು ಸ್ವಪ್ರಯೋಗಾವಕಾಶ. ಮರದ ತುಂಡಿಲ್ಲದ ಕಡೆ ಬಡಗಿಗೆ ಕೆಲಸವಿಲ್ಲ. ವಜ್ರಮಾಣಿಕ್ಯಗಳಿಲ್ಲದ ಕಡೆ ರತ್ನ ಪರೀಕ್ಷಕನಿಗೆ ಕೆಲಸವಿಲ್ಲ. ಗ್ರಂಥವಿಲ್ಲದ ಕಡೆ ವೈಯಾಕರಣಿಗೆ ಕೆಲಸವಿಲ್ಲ. ಹಾಗೆಯೇ ಗೀತವಿಲ್ಲದ ಕಡೆ ಸಂಗೀತಶಾಸ್ತ್ರಿಗೆ ಕೆಲಸವಿಲ್ಲ. ಕಾವ್ಯವೋ ಗೀತೆಯೋ ಶಿಲ್ಪವೋ ಸಿದ್ಧವಾದಾಗ ಆ ಕಲೆಗೆ ಸಂಬಂಧಪಟ್ಟ ಶಾಸ್ತ್ರಪಂಡಿತನು ಅಲ್ಲಿ ಕೆಲಸ ಕಾಣುತ್ತಾನೆ. ಗುಣದೋಷ ಪರೀಕ್ಷೆ ಆ ಕೆಲಸ. ಕಲಾಕೃತಿ ಈ ವಿಮರ್ಶಕನ ಬಾಯಿಗೆ ತುತ್ತು.

ಮನುಷ್ಯಸ್ವಭಾವದ ಉಲ್ಲಾಸವು ಕಲೆಗೆ ಮೂಲದ್ರವ್ಯವಾದರೆ, ಕಲೆಯನ್ನು ಪರಿಷ್ಕಾರಪಡಿಸಿ ಮತ್ತಷ್ಟು ಸೊಗಸುಗೊಳಿಸುವ ಶಾಸ್ತ್ರವು ಮನುಷ್ಯಸ್ವಭಾವದ ಅಂತರಂಶವಾದ ಬುದ್ಧಿಯ ಪ್ರಭಾವ. ಮನುಷ್ಯನು ತನ್ನ ಕಲಾನುಭವಗಳನ್ನು ಆಗಾಗ ಪರೀಕ್ಷೆ ಮಾಡಿಕೊಳ್ಳುತ್ತ, ಸುಖಕರ ಪ್ರಯೋಗಗಳನ್ನು ಕಂಡುಕೊಳ್ಳುತ್ತ, ಮನಸ್ಸೊಪ್ಪಿದ ಲಕ್ಷಣಗಳನ್ನು ಪರೀಕ್ಷಿಸಿ ಗುರುತು ಮಾಡಿಕೊಳ್ಳುತ್ತ ಹೋಗುತ್ತಾನೆ. ಹೀಗೆ ಪ್ರಕೃತಿಸಿದ್ಧವಾದ ನಾದಸಾಮಗ್ರಿಯು ಬುದ್ಧಿಕ್ರಿಯೆಯಿಂದ ಸಂಸ್ಕೃತಿಪಡೆದು ಸಂಗೀತವಾಗುತ್ತದೆ. ಆ ಸಂಸ್ಕಾರವಿಧಾನವೇ ಶಾಸ್ತ್ರ. ಶಾಸ್ತ್ರ ಕ್ರಿಯೆಯಿಂದ ಕಲೆಯ ಉತ್ಕೃಷ್ಟತೆ.



ಡಿ.ವಿ.ಗುಂಡಪ್ಪ

ಶಾಸ್ತ್ರಪಾಂಡಿತ್ಯವೂ ಅನುಭವರಸಿಕತೆಯೂ ಒಂದೇ ಪದಾರ್ಥವಲ್ಲ, ಬೇರೆ ಬೇರೆ ಎಂದು ಹೇಳಿದೆಯಷ್ಟೆ ಆ ಎರಡು ಸಂಪತ್ತುಗಳೂ ಒಬ್ಬಾತನಲ್ಲಿಯೇ ಸೇರಿದ್ದಲ್ಲಿ ಅದು ಬಹುದೊಡ್ಡ ಸೊಗಸು; ಆತನೇ ಆದರ್ಶ ವಿಮರ್ಶಕ ಎಂದು ನಮ್ಮ ಮನಸ್ಸಿಗೆ ಅನ್ನಿಸುತ್ತದೆ. ಆದರೆ ಹಾಗೆ ಆ ಎರಡು ಬಗೆಯ ಸಂಸ್ಕಾರಗಳನ್ನೂ ತನ್ನಲ್ಲಿ ಸಮ್ಮಿಳನ ಮಾಡಿಕೊಂಡಿರುವ ಪುಣ್ಯಶಾಲಿ ತೀರ ಅಪರೂಪ. ಶಾಸ್ತ್ರದ ಪ್ರವೃತ್ತಿ ಅಧಿಕಾರಮಾರ್ಗದ್ದು. ಅದು ಲೆಕ್ಕಾಚಾರವುಳ್ಳದ್ದು, ಮತ್ತು ತಪ್ಪನ್ನು ಸಹಿಸಲಾರದ್ದು. ಅನುಭವರಸಿಕತೆಯಾದರೋ, ನಾಲ್ಕಾರು ಅಂತಸ್ತುಗಳುಳ್ಳದ್ದು, ನಾಲ್ಕಾರು ದಾರಿ ಹಿಡಿಯಬಲ್ಲದ್ದು. ಅದಕ್ಕೆ ಸಹನೆ ಹೆಚ್ಚು. ಶಾಸ್ತ್ರಜ್ಞತೆ ಮತ್ತು ರಸಿಕತೆ ಇವೆರಡನ್ನೂ ಕಲೆಹಾಕಬೇಕೆಂದು ಹೊರಟಾಗ, ಶಾಸ್ತ್ರ ಆರ್ಭಟವೆತ್ತಿ, ಅನುಭವ ಉಸಿರೆತ್ತದಂತೆ ಮಾಡುವುದುಂಟು. ರಸಿಕನು ಇದಕ್ಕೆ ಅವಕಾಶ ಕೊಡದೆ ಜಾಗರೂಕನಾಗಿದ್ದಲ್ಲಿ ಅವನು ಮಾಡುವ ಕಲಾವಿಮರ್ಶನೆ ಚೆನ್ನಾಗುತ್ತದೆ. ತಾನು ಕಲಿತ ಶಾಸ್ತ್ರವನ್ನು ಈತ ಮರೆತುಕೊಂಡಿದಾನೋ ಎನ್ನಿಸುವಷ್ಟರ ಮಟ್ಟಿಗೆ ಇರಬೇಕು ಅವನ ಮನಸ್ಸಿನ ಸರಳತೆ ಮತ್ತು ಉದಾರತೆ. ಆಗ ಅವನು ಕಲಾಕೃತಿಯ ಅಂತರ್ಭಾವದಲ್ಲಿ ತಲ್ಲೀನನಾಗುವುದು ಸಾಧ್ಯವಾಗುತ್ತದೆ. ತಲ್ಲೀನತೆಯಿಂದಲೇ ರಸದ ಪೂರ್ಣಾನುಭವ. ಕಲೆ ಯಾವುದೇ ಆಗಲಿ, ಕಲೋಪಾಸಕನು ತನ್ನ ವಿದ್ವತ್ಪತಿಷ್ಠೆ, ತನ್ನ ವಾದ ಚಮತ್ಕಾರ, ತನ್ನ ಪಂಥದ ಜಯ–ಇವುಗಳನ್ನು ಬದಿಗಿರಿಸಿ, ತನ್ನ ಆತ್ಮ ಸರ್ವಸ್ವವನ್ನೂ ಕಲಾಕೃತಿಗೆ ಸಮರ್ಪಿಸಿಬಿಡಬೇಕು. ಆಗಲೇ ಆತನಿಗೆ ಕಲಾಪ್ರಸಾದ ಕೈವಶವಾಗತಕ್ಕದ್ದು.

ನಮ್ಮ ಮೈಸೂರಿನ ಅಸಾಮಾನ್ಯರು



ಮಹಾರಾಜ ಮುಮ್ಮಡಿ ಕೃಷ್ಣರಾಜ ಒಡೆಯರಿಂದ ಹಿಡಿದು ಯದುವಂಶದ ಕೊನೆಯ ಮಹಾರಾಜರಾದ ಜಯಚಾಮರಾಜ ಒಡೆಯರ್ ಆಡಳಿತದ ಅವಧಿಯವರೆಗೆ ಅನೇಕ ಶ್ರೇಷ್ಠ ಮಹನೀಯರು ಮೈಸೂರು ರಾಜ್ಯದಲ್ಲಿ ಗಣನೀಯ ಸೇವೆ ಸಲ್ಲಿಸಿದ್ದಾರೆ. ಅಂತಹ ಕೆಲವರ ಹೆಸರುಗಳನ್ನು ಮೈಸೂರು ಚರಿತ್ರೆಗೆ ಸಂಬಂಧಪಟ್ಟ ಇತಿಹಾಸದ ಪುಸ್ತಕಗಳಲ್ಲಿ ಪ್ರಸ್ತಾಪಿಸಿರುವುದನ್ನು ನಾವು ಕಾಣುತ್ತೇವೆ. ಆಡಳಿತದ ಪ್ರಮುಖ ಹುದ್ದೆಯಲ್ಲಿದ್ದು, ಗಣನೀಯ ಸೇವೆ ಸಲ್ಲಿಸಿದ್ದ ಕೆಲವರ ಹೆಸರುಗಳು ಅವುಗಳಲ್ಲಿ ಕಂಡು ಬಂದರೂ, ಅವರಂತೆಯೇ ಸೇವೆ ಸಲ್ಲಿಸಿರುವ ಇತರ ನೂರಾರು ಮಂದಿ ಎಲ್ಲಿಯೂ ಪ್ರಸ್ತಾಪಗೊಳ್ಳದೆ ಎಲೆಮರೆಕಾಯಿಯಾಗಿ ಉಳಿದು ಹೋಗಿದ್ದಾರೆ. ನೆನಪಿನ ಅಂಗಳದಿಂದ ಜಾರಿ ಹೋಗಿದ್ದಾರೆ. ಹಾಗೆ ಸೇವೆ ಸಲ್ಲಿಸಿದರಲ್ಲಿ ಹಲವಾರು ಮಂದಿ ಅಂದಿಗೆ ಖ್ಯಾತನಾಮರಾಗಿದ್ದರೂ ಇಂದು ಅವರ ಬಗ್ಗೆ ನಮಗೆ ಹೆಚ್ಚು ತಿಳಿಯದೆ ಹೋಗಿದೆ. ನೆನಪಿನಿಂದ ಅಳಿಸಿಹೋಗಿದ್ದಾರೆ. ಕೆಲವರ ಸೇವೆಯನ್ನಾದರೂ ಇಲ್ಲಿ ಗುರುತಿಸುವ ಪ್ರಯತ್ನ ನನ್ನದು. ಇಂತಹ ಪ್ರಯತ್ನ ಬಹಳ ಹಿಂದೆಯೇ ಪ್ರಾರಂಭಿಸುವ ಉದ್ದೇಶ ಹೊಂದಿದ್ದರೂ, ಅದು ಈಗ ಸಾಧ್ಯವಾಗುತ್ತಿದೆ. ನೆನಪಿನಂಗಳದಿಂದ ಮರೆಯಾದ ಮಹನೀಯರ ಪರಿಚಯ ಒಂದು ಮಾಲಿಕೆಯಾಗಿ ಪ್ರಕಟಗೊಳ್ಳಲಿದೆ. ಅವು ‘ಮೈಸೂರು ಮಿತ್ರ’ ಓದುಗರಿಗೆ ಮೆಚ್ಚುಗೆಯಾದರೆ, ಅದೇ ನನಗೆ ಬರೆದ ತೃಪ್ತಿ.



24.ಎಂ.ಎ.ನಾರಾಯಣ ಐಯ್ಯಂಗಾರ್



ಗೌರಿ ಸತ್ಯ
ಹಿರಿಯ ಪತ್ರಕರ್ತರು
ಮೊ. 87627 88685

ಗೃಹಸ್ಥರಾದರೂ ಸಾಂಸಾರಿಕ ಸಮಸ್ಯೆಗಳ ನಡುವೆ ವಿಶಿಷ್ಟಾದ್ವೈತದ ಮೌಲ್ಯಗಳನ್ನು ಅಳವಡಿಸಿಕೊಂಡು ಬದುಕಿದವರಲ್ಲಿ ಒಬ್ಬರು ಮೈಸೂರಿನ ಎಂ.ಎ.ನಾರಾಯಣ ಐಯ್ಯಂಗಾರ್. ಅಧ್ಯಾಪಕ ವೃತ್ತಿಯನ್ನೇ ಬಯಸಿ ಜೀವನದುದ್ದಕ್ಕೂ ಅದರಲ್ಲಿಯೇ ನಿರತರಾಗಿ ಶಿಕ್ಷಣ ಕ್ಷೇತ್ರದ ಉನ್ನತಿಗೆ ಶ್ರಮಿಸಿ, ಸ್ವಾಮಿ ವಿವೇಕಾನಂದ, ಮಹರ್ಷಿ ಅರಬಿಂದೋ ಮತ್ತಿತರ ಸಂತರಿಂದ ಪ್ರಭಾವಿತರಾಗಿ ಬದುಕನ್ನು ಆಧ್ಯಾತ್ಮಿಕ ಹಾದಿಯಲ್ಲಿ ನಡೆಸಿದ ವ್ಯಕ್ತಿ ಇವರು.

ಮೈಸೂರಿನ ಮಂಡ್ಯಂ ಅಯ್ಯಂಗಾರ್ ಕುಟುಂಬದಲ್ಲಿ ಇವರು 1887ರಲ್ಲಿ ಜನಿಸಿದರು. ಇವರ ತಂದೆ ವಕೀಲರು ಮತ್ತು ಹೈಸ್ಕೂಲಿನ ಮುಖ್ಯೋಪಾಧ್ಯಾಯರಾಗಿದ್ದರು. ತಾಯಿಯಾದರೋ ಪುರಾಣ, ಶ್ಲೋಕಗಳನ್ನು ಮನನ ಮಾಡಿಕೊಂಡು ಸಾಂಸಾರಿಕ ಜೀವನ ನಡೆಸಿದವರು. ಪುತ್ರ ನಾರಾಯಣ ಅಯ್ಯಂಗಾರ್ ತಮ್ಮ ಪ್ರಾರಂಭಿಕ ವಿದ್ಯಾಭ್ಯಾಸವನ್ನು ಮುಗಿಸಿ ತಂದೆಯ ಸಾವಿನ ನಂತರ ಕಾಲೇಜು ಶಿಕ್ಷಣಕ್ಕಾಗಿ ಮದ್ರಾಸಿಗೆ ತೆರಳಿದರು. ಮದ್ರಾಸಿನಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾಗ ಗಾಂಧಿ ಚಿಂತನೆಯ ನೇತಾರರು ಮತ್ತು ಹಲವಾರು ಪ್ರಮುಖ ಸ್ವಾತಂತ್ರ್ಯ ಹೋರಾಟಗಾರರ ಸಂಪರ್ಕಕ್ಕೆ ಬಂದು ಪ್ರಭಾವಿತರಾದರು. ಅವರುಗಳು ಸೇರುತ್ತಿದ್ದು ದುಟ್ರಿಪ್ಲಿಕೇನಿನ ಗೌತಮಾಶ್ರಮದಲ್ಲಿ. ಅಲ್ಲಿಯೇ ಅವರುಗಳು ಕ್ರಾಂತಿಕಾರಿಕ ಸಭೆಗಳು, ಚಳವಳಿಗಳು ಮತ್ತಿತರ ಚಟುವಟಿಕೆಗಳನ್ನು ರೂಪಿಸುತ್ತಿದ್ದ ಮಹತ್ವದ ಜಾಗವಾಗಿತ್ತು.

ಮದ್ರಾಸಿನಲ್ಲಿದ್ದಾಗ ಪ್ರಸಿದ್ಧ ಕವಿ ಸುಬ್ರಹ್ಮಣ್ಯ ಭಾರತಿ, ಸ್ವಾಮಿ ವಿವೇಕಾನಂದ ಅಂತಹವರ ಸಂಪರ್ಕಕ್ಕೆ ಬಂದು ಅವರಿಂದ ಇನ್ನಷ್ಟು ಪ್ರಭಾವಿತರಾದರು. ಸ್ವಲ್ಪ ಕಾಲ ಪುದುಚೇರಿಯಲ್ಲಿ ತಮ್ಮ ಬಂಧುಗಳ ಮನೆಯಲ್ಲಿದ್ದಾಗ ಅರಬಿಂದೋ ಮಹರ್ಷಿಗಳಿಂದಲೇ ನೇರವಾಗಿ ಸಾಧನಾ ಮಾರ್ಗದ ಕೆಲವು ತಂತ್ರಗಳನ್ನು ಕಂಡುಕೊಂಡರು. ಇವುಗಳು ಅವರ ಆಧ್ಯಾತ್ಮಿಕ ಚಿಂತನೆಗಳ ಮೇಲೆ ಇನ್ನಷ್ಟು ಪರಿಣಾಮ ಬೀರಿದವು. ಸ್ವಾಮಿ ವಿವೇಕಾನಂದರ ಗ್ರಂಥಗಳು ಈ ದಿಕ್ಕಿನಲ್ಲಿ ಅವರಿಗೆ ನೆರವಾದರೆ, ಅವರ ಪ್ರಮುಖ ಶಿಷ್ಯ ಅಳಸಿಂಗ ಪೆರುಮಾಳ್ ಅವರ ಮುಖಾಂತರ ಸ್ವಾಮಿ ವಿವೇಕಾನಂದರು ಇನ್ನಷ್ಟು ಪ್ರಭಾವ ಬೀರಿದರು. ವಿದ್ಯಾರ್ಥಿದೆಸೆಯಲ್ಲಿಯೇ ಅವರಿಗೆ ಈ ಸಂಪರ್ಕಗಳು ದೊರೆತು ಅವರ ಚಿಂತನೆ ಹೊಸ ದಿಕ್ಕಿನಲ್ಲಿ ರೂಪುಗೊಂಡವು.

ಮದ್ರಾಸಿನಲ್ಲಿ ಕಾನೂನು ಶಾಸ್ತ್ರ ಪದವಿಯನ್ನು ಗಳಿಸಿ ಇತಿಹಾಸದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದ ಮೇಲೆ ನಾರಾಯಣ ಅಯ್ಯಂಗಾರ್ ಅವರು 1914ರಲ್ಲಿ ಮೈಸೂರಿಗೆ ಹಿಂತಿರುಗಿ ಬಂದು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಉಪನ್ಯಾಸಕರಾದರು. ಇಲ್ಲಿ ಇವರಿಗೆ ಪ್ರತಿಭಾವಂತರಾದ ಉಪಕುಲಪತಿ ಸಿ.ಆರ್. ರೆಡ್ಡಿ, ಮುಂದೆ ರಾಷ್ಟ್ರಪತಿಗಳಾದ ಡಾ.ಎಸ್.ರಾಧಾಕೃಷ್ಣನ್ ಮತ್ತು ಶಿಕ್ಷಣವೇತ್ತ ಪ್ರೊ.ಎನ್.ಎಸ್.ಸುಬ್ಬರಾವ್ ಇಂತಹವರ ಸಂಪರ್ಕ ಲಭಿಸಿತು. ವಿಶ್ವವಿದ್ಯಾನಿಲಯದಲ್ಲಿ ಮತ್ತು ಹೊರಗಡೆ ಅವರೊಂದಿಗೆ ಪ್ರಮುಖ ತಾತ್ವಿಕ ವಿಷಯಗಳ ಬಗ್ಗೆ ಆಗಾಗ್ಗೆ ಚರ್ಚೆ ಮಾಡುತ್ತಾ ತಮ್ಮ ಸಂದೇಹಗಳಿಗೆ ಪರಿಹಾರ ಕಂಡುಕೊಂಡರು. ನಂತರ ಶಾಲಾ ಉಪಾಧ್ಯಾಯರಾಗಿ ಚಿಕ್ಕ ಮಕ್ಕಳ ಸಂಸ್ಕಾರವನ್ನು ಉತ್ತಮ ಮಟ್ಟದಲ್ಲಿ ರೂಪಿಸಲು ಬಯಸಿ ತಾವಾಗಿ ಶಿಕ್ಷಣ ಇಲಾಖೆಗೆ ಸೇರಿದರು. ಅಲ್ಲಿ ಅಸಿಸ್ಟೆಂಟ್ ಮಾಸ್ಟರ್ ಆಗಿ ಸೇವೆ ಸಲ್ಲಿಸಿದ ನಂತರ ಕೆಲವು ಹೈಸ್ಕೂಲುಗಳ ಮುಖ್ಯೋಪಾಧ್ಯಾಯರಾದರು. ಕೆಲವು ಜಿಲ್ಲೆಗಳಲ್ಲಿ ಜಿಲ್ಲಾ ಶಿಕ್ಷಣ ಅಧಿಕಾರಿಯಾಗಿದ್ದು ಕೊನೆಗೆ ಶಿಕ್ಷಣ ಇಲಾಖೆ ಡೆಪ್ಯುಟಿ ಡೈರೆಕ್ಟರ್ ಆಗಿ ನಿವೃತ್ತರಾದರು.

1922ರಿಂದ 1946ರದವರೆಗೆ ಶಿಕ್ಷಣ ಇಲಾಖೆಯಲ್ಲಿ ಸೇವೆ ಮಾಡುವಾಗ ಶಿಕ್ಷಣದ ಬಗ್ಗೆ ಇವರು ತೋರಿದ್ದ ಪ್ರೀತಿ ಮತ್ತು ನಿಷ್ಠೆ ಎಲ್ಲರ ಮೆಚ್ಚುಗೆಗೆ ಪಾತ್ರವಾಯಿತು. ಅಂದಿನ ಶಿಕ್ಷಣ ತಜ್ಞರಾಗಿದ್ದ ಎ.ಸಿ. ದೇವೇಗೌಡರು ನಾರಾಯಣ ಅಯ್ಯಂಗಾರ್ ಅವರ ಶ್ರದ್ಧೆ, ನಿಷ್ಠೆ ಮತ್ತು ಕರ್ತವ್ಯಶೀಲತೆಯ ಬಗ್ಗೆ ತಮಗೆ ಅಪಾರ ಗೌರವವಿರುವುದಾಗಿ ಅವರ ಕಾರ್ಯವನ್ನು ಪ್ರಶಂಸಿಸಿದ್ದರಲ್ಲದೆ ಅವರಂತಹವರು ಮೈಸೂರಿನ ಶಿಕ್ಷಣ ವ್ಯವಸ್ಥೆಯಲ್ಲಿ ಬೇರೊಬ್ಬರಿರಲಿಲ್ಲ ಎಂದಿದ್ದರು. ಹಿರಿಯ ಸಾಹಿತಿ ಡಿ.ವಿ.ಗುಂಡಪ್ಪನವರೂ ಕೂಡ ನಾರಾಯಣ ಅಯ್ಯಂಗಾರ್ ಅವರ ಬದುಕಿನ ರೀತಿಯನ್ನು ಪ್ರಶಂಸಿಸಿದ್ದರು.

ನಿವೃತ್ತಿಯ ನಂತರದ ದಿನಗಳನ್ನು ನಾರಾಯಣ ಅಯ್ಯಂಗಾರ್ ಪೌರಾತ್ಯ ಮತ್ತು ಪಾಶ್ಚಿಮಾತ್ಯ ತತ್ವಶಾಸ್ತ್ರ ಅಧ್ಯಯನ, ಮನನ ಇತ್ಯಾದಿಗಳಲ್ಲಿ ತೊಡಗಿದರು. ಗೌರಿಬಿದನೂರಿನಲ್ಲಿದ್ದಾಗ ಇವರು ಶ್ರೀನವಭಾರತ್ ಆಶ್ರಮದ ಟ್ರಸ್ಟ್ ಪ್ರಾರಂಭಿಸಿ ವಿದ್ಯಾಭ್ಯಾಸದಲ್ಲಿ ನೈತಿಕ ಮತ್ತು ಅಧ್ಯಾತ್ಮಿಕ ಮೌಲ್ಯಗಳು ವಿದ್ಯಾರ್ಥಿಗಳಲ್ಲಿ ಬೇರೂರಲು ಶ್ರಮಿಸಿದರು.

1951 ಮತ್ತು 1963ರ ನಡುವಿನ ಅವರ ಈ ಪ್ರಯತ್ನ ಮುಂದೆ ಶಿಕ್ಷಣ ಸಚಿವಾಲಯದ ಗಮನಕ್ಕೆ ಬಂದು ಸೆಕೆಂಡರಿ ಶಾಲೆಗಳಲ್ಲಿ ಅದನ್ನು ಪ್ರಾಯೋಗಿಕ ರೂಪಕ್ಕೆ ತಂದಿತು. ಪ್ರತಿಯೊಂದು ಶಾಲೆಯೂ ಆಶ್ರಮದ ಮಾದರಿಯಲ್ಲಿ ಬೆಳೆದು ವಿದ್ಯಾರ್ಥಿಗಳಿಗೆ ಗುರುಕುಲವನ್ನು ನೆನೆಪಿಸುವಂತಿರಬೇಕೆಂಬುದು ಅವರ ಅಭಿಲಾಷೆ.

ಈ ದೃಷ್ಟಿ ಇಟ್ಟುಕೊಂಡು ನಾರಾಯಣ ಅಯ್ಯಂಗಾರ್ ಶ್ರಮಿಸಿದರು. ಶಿಕ್ಷಣದ ಬಗ್ಗೆ ತಮ್ಮ ಮೌಲ್ಯಗಳನ್ನು ಹೆಚ್ಚು ಪ್ರಚಾರ ಮಾಡಲು ಪತ್ರಿಕೆಗಳಲ್ಲಿ ಮತ್ತು ನಿಯತಕಾಲಿಕೆಗಳಲ್ಲಿ ಲೇಖನಗಳನ್ನು ಬರೆದರು. ಸ್ವಾಮಿ ವಿವೇಕಾನಂದರು ಪ್ರಾರಂಭಿಸಿದ್ದ ‘ಬ್ರಹ್ಮ ವಿದ್ಯಾ’ ಪುರವಣಿ ನಿಂತು ಹೋಗಿದ್ದು ಅದು ಮತ್ತೆ ಪ್ರಕಟಣೆಯನ್ನು ಪ್ರಾರಂಭಿಸಲು ಆಸಕ್ತಿ ವಹಿಸಿದರು. ಯತಿರಾಜ ಮಠ ಮತ್ತು ಮಂಡ್ಯಂ ಶ್ರೀವೈಷ್ಣವ ಸಭಾಗಳಲ್ಲಿ ಕ್ರಿಯಾತ್ಮಕವಾಗಿ ಪಾಲ್ಗೊಂಡರು. 1969ರ ಫೆಬ್ರವರಿ 12ರಂದು ಕೊನೆಯುಸಿರೆಳೆದರು.

ಸಂಸ್ಕೃತ ಮತ್ತು ತಮಿಳು ಸಾಹಿತ್ಯದಲ್ಲಿ ಆಸಕ್ತಿ ಹೊಂದಿದ್ದ ಅವರ ಪತ್ನಿ ಸಿಂಗಮ್ಮಾಳ್ ಕೆಲವೇ ತಿಂಗಳಲ್ಲಿ ಜುಲೈ 23ರಂದು ಪತಿಯ ಹಾದಿ ಹಿಡಿದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಮೈಸೂರು ಮಿತ್ರ

ಒಂದನೇ ಪುಟದಿಂದ

ಉದ್ಯಮಿಗೆ 2.96 ಕೋಟಿ ರೂ. ಪಂಗನಾಮ

ಅಮಾಯಕರು ಮಾತ್ರ ವಂಚನೆ, ಮೋಸಕ್ಕೊಳಗಾಗುತ್ತಿದ್ದರು. ಆದರೆ ಆಧುನಿಕ ತಂತ್ರಜ್ಞಾನ ಬೆಳೆದಂತೆ, ವಿದ್ಯಾವಂತರು, ವೈದ್ಯರು, ಇಂಜಿನಿಯರ್‌ಗಳು, ವಕೀಲರು, ಐಟಿ–ಬಿಟಿ ಕಂಪನಿಗಳಲ್ಲಿ ಕೆಲಸ ಮಾಡುವ ಟೆಕ್ಕಿಗಳೂ ಸಹ ಹೆಚ್ಚಿನ ಸಂಖ್ಯೆಯಲ್ಲಿ ಸೈಬರ್ ವಂಚನೆಗೊಳಗಾಗುತ್ತಿದ್ದಾರೆ.

ಬೆಳಗಾಗುವಷ್ಟರಲ್ಲಿ ಶ್ರಮವಿಲ್ಲದೇ ಲಕ್ಷಾಂತರ, ಕೋಟ್ಯಾಂತರ ರೂ. ಹಣ ಸಂಪಾದಿಸಬೇಕೆಂಬ ದುರಾಸೆಯಿಂದ ವಿದ್ಯಾವಂತರೇ ಇತ್ತೀಚಿನ ದಿನಗಳಲ್ಲಿ ಆನ್‌ಲೈನ್ ಟ್ರೇಡಿಂಗ್, ಷೇರ್ ಮಾರ್ಕೆಟಿಂಗ್, ಮ್ಯಾಟ್ರಿಮೋನಿಯಲ್, ಜಾಬ್ ಆಪರ್ಚುನಿಟಿ, ಮನಿ ಡಬ್ಲಿಂಗ್‌ನಂತಹ ನಕಲಿ ವ್ಯವಹಾರಗಳಿಗೆ ಹಣ ತೊಡಗಿಸಿ ಮೋಸ ಹೋಗುತ್ತಿರುವ ಪ್ರಕರಣಗಳು ಹೆಚ್ಚಾಗುತ್ತಿವೆ. ಫೇಸ್‌ಬುಕ್, ಇನ್‌ಸ್ಟಾಗ್ರಾಂ, ವಾಟ್ಸಾಪ್, ಟೆಲಿಗ್ರಾಂನಂತಹ ಸಾಮಾಜಿಕ ಜಾಲತಾಣಗಳಲ್ಲಿ ಬರುವ ಆನ್‌ಲೈನ್ ಟ್ರೇಡಿಂಗ್ ಕುರಿತಾದ ಜಾಹೀರಾತುಗಳಿಂದ ಪ್ರೇರೇಪಣೆಗೊಂಡು ಅತಿಯಾದ ಹಣ ಗಳಿಸಬಹುದೆಂದು ಹಣ ಹಾಕಿ ವಂಚನೆಗೊಳಗಾಗುತ್ತಿದ್ದಾರೆ.

ಒಂದೇ ದಿನ ನಾಲ್ಕು ವಂಚನೆ: ನಿನ್ನೆ (ಜೂ. 21) ಒಂದೇ ದಿನ ಸೆನ್ ಪೊಲೀಸ್ ಠಾಣೆಯಲ್ಲಿ 4 ಆನ್‌ಲೈನ್ ವಂಚನೆ ಪ್ರಕರಣಗಳು ದಾಖಲಾಗಿದ್ದು ಒಟ್ಟು 20 ಲಕ್ಷ ರೂ. ಪಂಗನಾಮವಾಗಿದೆ. ಪ್ರತೀ ತಿಂಗಳು ಮೈಸೂರು ನಗರದಲ್ಲಿ ಆನ್‌ಲೈನ್ ಟ್ರೇಡಿಂಗ್ ವ್ಯವಹಾರದಲ್ಲಿ ತೊಡಗುವವರ ಸಂಖ್ಯೆ ಹೆಚ್ಚಾಗುತ್ತಿದೆ ಎಂದು ಸೆನ್ ಠಾಣೆ ಪೊಲೀಸರು ತಿಳಿಸಿದ್ದಾರೆ. ಇಂತಹ ಸೈಬರ್ ವಂಚಕರು ಎಷ್ಟೇ ಮನವೊಲಿಸಿದರೂ, ಆನ್‌ಲೈನ್‌ನಲ್ಲಿ ಯಾವುದೇ ವಹಿವಾಟಿಗೆ ಕೈ ಹಾಕಿ ಹಣ ಕಳೆದುಕೊಳ್ಳಬೇಡಿ. ಒಂದು ವೇಳೆ ನಿಮ್ಮ ಬ್ಯಾಂಕ್ ಖಾತೆಯಿಂದ ಹಣ ನಿಮಗೆ ತಿಳಿಯದೇ ಡೆಬಿಟ್ ಆದ ತಕ್ಷಣವೇ ತಡಮಾಡದೇ ಪೊಲೀಸ್ ಠಾಣೆಗೆ ಮಾಹಿತಿ ನೀಡಿ ಎಂದು ಸೆನ್ ಠಾಣೆ ಪೊಲೀಸರು ಸಲಹೆ ನೀಡಿದ್ದಾರೆ.

10 ವರ್ಷ ಜೈಲು; ಕೋಟಿ ರೂ. ದಂಡ

ದಂಡ ವಿಧಿಸುವ ಅವಕಾಶವಿದೆ. ಈ ಕಾನೂನಿನ ನಿಬಂಧನೆಗಳ ಪ್ರಕಾರ, ಪತ್ರಿಕೆ ಸೋರಿಕೆಗೆ ಸಂಬಂಧಿಸಿದಂತೆ ನಡೆಯುತ್ತಿರುವ ತನಿಖೆಯ ಸಮಯದಲ್ಲಿ ಪರೀಕ್ಷಾ ಸೇವಾ ಪೂರೈಕೆದಾರರು ಪರೀಕ್ಷೆಯ ಸಮಯದಲ್ಲಿ ಅಕ್ರಮಗಳ ಬಗ್ಗೆ ಈಗಾಗಲೇ ತಿಳಿದು, ಯಾವುದೇ ಕ್ರಮ ಕೈಗೊಳ್ಳದಿದ್ದರೆ ಅಂತಹ ಪರಿಸ್ಥಿತಿಯಲ್ಲಿ ಪರೀಕ್ಷಾ ಸೇವಾದಾರರು ಮೇಲೆ 1 ಕೋಟಿ ರೂ.ವರೆಗೆ ದಂಡ ವಿಧಿಸಬಹುದು. ಅಲ್ಲದೇ, ಘಟನೆಯಲ್ಲಿ ಹಿರಿಯ ಅಧಿಕಾರಿಯೂ ಭಾಗಿಯಾಗಿದ್ದಾರೆ ಎಂದು ತನಿಖೆ ವೇಳೆ ಯಾವುದೇ ಪುರಾವೆಗಳು ಕಂಡುಬಂದರೆ, ಅವರಿಗೆ 10 ವರ್ಷಗಳವರೆಗೆ ಜೈಲು ಶಿಕ್ಷೆ ಮತ್ತು 1 ಕೋಟಿ ರೂ.ವರೆಗೆ ದಂಡವನ್ನು ಸಹ ವಿಧಿಸಬಹುದು.

ಅಷ್ಟೇ ಅಲ್ಲ, ಪರೀಕ್ಷಾ ಪ್ರಾಧಿಕಾರ ಅಥವಾ ಸೇವಾದಾರರು ಯಾವುದೇ ಸಂಘಟಿತ ಅಪರಾಧ ಎಸಗಿದರೆ ಕನಿಷ್ಠ ಐದು ವರ್ಷ ಮತ್ತು ಗರಿಷ್ಠ 10 ವರ್ಷ ಜೈಲು ಶಿಕ್ಷೆ ಹಾಗೂ 1 ಕೋಟಿ ದಂಡ ವಿಧಿಸಲಾಗುತ್ತದೆ. ಸರ್ಕಾರ ಹೊರಡಿಸಿದ ಅಧಿಸೂಚನೆಯಲ್ಲಿ ಭಾರತೀಯ ನ್ಯಾಯಾಂಗ ಸಂಹಿತೆಯನ್ನು ಉಲ್ಲೇಖಿಸಲಾಗಿದೆ. ಆದರೆ ಭಾರತೀಯ ದಂಡ ಸಂಹಿತೆಯ ನಿಬಂಧನೆಗಳು ಅದರ ಅನುಷ್ಠಾನದವರೆಗೆ ಪರಿಣಾಮಕಾರಿಯಾಗಿರುತ್ತವೆ ಎಂದು ಹೇಳಲಾಗಿದೆ. ಕೋಡ್ ಮತ್ತು ಇತರ ಕ್ರಿಮಿನಲ್ ಕಾನೂನುಗಳನ್ನು ಜುಲೈ 1 ರಿಂದ ಜಾರಿಗೆ ತರಲು ನಿರ್ಧರಿಸಲಾಗಿದೆ.

'ಸಾರ್ವಜನಿಕ ಪರೀಕ್ಷೆಗಳ ಕಾಯಿದೆ 2024' ಅಂದರೆ ಸಾರ್ವಜನಿಕ ಪರೀಕ್ಷೆಗಳ (ಅನ್ಯಾಯ ವಿಧಾನಗಳ ತಡೆಗಟ್ಟುವಿಕೆ) ಹಲವು ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಅಕ್ರಮಗಳು ನಡೆದ ಮತ್ತು ಅನೇಕ ಪರೀಕ್ಷೆಗಳನ್ನು ರದ್ದುಗೊಳಿಸಿದ ಬೆನ್ನಲ್ಲೇ ಫೆಬ್ರವರಿ 2024 ರಲ್ಲಿ ಅಂಗೀಕರಿಸಲಾಯಿತು. ಈ ಕಾನೂನನ್ನು ಸಂಸತ್ತಿನಲ್ಲಿ ಅಂಗೀಕರಿಸಿದ ನಂತರ, ರಾಷ್ಟ್ರಪತಿ ದ್ರೌಪದಿ ಮುರ್ಮು ಅನುಮೋದಿಸಿದರು. ಈ ಕಾನೂನಿನ ಉದ್ದೇಶವು ಎಲ್ಲಾ ಸಾರ್ವಜನಿಕ ಪರೀಕ್ಷೆಗಳಲ್ಲಿ ಹೆಚ್ಚು ಪಾರದರ್ಶಕತೆಯನ್ನು ತರುವುದು ಮತ್ತು ಯಾವುದೇ ಅಕ್ರಮಗಳಿಲ್ಲದೇ ಪರೀಕ್ಷೆ ನಡೆಯುತ್ತಿದೆ ಎಂದು ಸ್ಪರ್ಧಾತ್ಮಕ ಪರೀಕ್ಷೆ ಬರೆಯುವ ಯುವಕರಿಗೆ ಭರವಸೆ ನೀಡುವುದಾಗಿದೆ.

ರಾಜಸ್ಥಾನದಲ್ಲಿ ಶಿಕ್ಷಕರ ನೇಮಕಾತಿ ಪರೀಕ್ಷೆ, ಹರಿಯಾಣದಲ್ಲಿ ಗ್ರೂಪ್–ಡಿ ಹುದ್ದೆಗಳಿಗೆ ಸಾಮಾನ್ಯ ಅರ್ಹತಾ ಪರೀಕ್ಷೆ (ಸಿಇಟಿ), ಗುಜರಾತ್‌ನಲ್ಲಿ ಜೂನಿಯರ್ ಕ್ಲರ್ಕ್ ನೇಮಕಾತಿ ಪರೀಕ್ಷೆ ಮತ್ತು ಬಿಹಾರದಲ್ಲಿ ಪೊಲೀಸ್ ಕಾನ್‌ಸ್ಟೇಬಲ್ ನೇಮಕಾತಿ ಪರೀಕ್ಷೆಯಲ್ಲಿ ಅಕ್ರಮಗಳ ಪ್ರಕರಣಗಳು ವರದಿಯಾಗಿರುವುದು ಗಮನಾರ್ಹ. ನೀಟ್ ಪರೀಕ್ಷೆಯಲ್ಲಿ ಅಕ್ರಮ ಇತ್ತೀಚಿನ ಪ್ರಕರಣ ಎಂಬುದು ಉಲ್ಲೇಖನೀಯ. ಪತ್ರಿಕೆ ಸೋರಿಕೆ ಕಾನೂನಿನ ವ್ಯಾಪ್ತಿಯಲ್ಲಿ ಸಾರ್ವಜನಿಕ ಪರೀಕ್ಷಾ ಸಂಸ್ಥೆಗಳು ಅಥವಾ ಕೇಂದ್ರ ಸರ್ಕಾರದಿಂದ ಮಾನ್ಯತೆ ಪಡೆದ ಸಂಸ್ಥೆಗಳು ನಡೆಸುವ ಎಲ್ಲಾ ಪರೀಕ್ಷೆಗಳು ಬರುತ್ತಿವೆ. ಅನೇಕ ದೊಡ್ಡ ಪರೀಕ್ಷೆಗಳು ಇದರಲ್ಲಿ ಸೇರಿವೆ. UPSC, SSC, ರೈಲ್ವೇಸ್ ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಗಳು, ಬ್ಯಾಂಕಿಂಗ್ ನೇಮಕಾತಿ ಪರೀಕ್ಷೆಗಳು ಮತ್ತು ನ್ಯಾಷನಲ್ ಟೆಸ್ಟಿಂಗ್ ಏಜೆನ್ಸಿ (NTA) ನಡೆಸುವ ಎಲ್ಲಾ ಕಂಪ್ಯೂಟರ್ ಆಧಾರಿತ ಪರೀಕ್ಷೆಗಳೂ ಈ ಕಾನೂನಿನ ವ್ಯಾಪ್ತಿಯಲ್ಲಿ ಬರುತ್ತವೆ.

ಪ್ರಶ್ನೆ ಪತ್ರಿಕೆಗಳು ಅಥವಾ ಅವರ ಉತ್ತರಗಳನ್ನು ಸೋರಿಕೆ ಮಾಡುವುದರಿಂದ ಅಭ್ಯರ್ಥಿಯು ಯಾವುದೇ ರೀತಿಯ ಸಹಾಯವನ್ನು ಪಡೆಯಬಹುದು. ಕಾಗದದ ಮಾಹಿತಿಯು ಮುಂಚಿತವಾಗಿ ಲಭ್ಯವಾಗುವಂತೆ ಕಂಪ್ಯೂಟರ್ ನೆಟ್‌ವರ್ಕ್ ಅನ್ನು ಟ್ಯಾಂಪರಿಂಗ್ ಮಾಡುವುದು. ನೇರವಾಗಿ ಪೇಪರ್ ಸೋರಿಕೆ ಮಾಡುವ ಬದಲು ಬೇರೆ ರೀತಿಯಲ್ಲಿ ಲಾಭ ಮಾಡಿಕೊಳ್ಳುತ್ತಿದ್ದಾರೆ. ಹೀಗಾಗಿ ಪರೀಕ್ಷೆಯಲ್ಲಿ ಕರ್ತವ್ಯ ನಿರ್ವಹಿಸದ ಅಥವಾ ಅಭ್ಯರ್ಥಿಯಲ್ಲದ ಯಾವುದೇ ವ್ಯಕ್ತಿಯನ್ನು ಪರೀಕ್ಷಾ ಕೇಂದ್ರಕ್ಕೆ ಪ್ರವೇಶಿಸುವುದನ್ನು ನಿಷೇಧಿಸಲಾಗಿದೆ.

ತಪ್ಪು ಮಾಡಿರುವುದು ಒಬ್ಬ ವ್ಯಕ್ತಿಯಾಗಿರಲಿ, ಗುಂಪು ಸಂಘಟಿತವಾಗಲಿ ಅಥವಾ ಯಾವುದೇ ಸಂಸ್ಥೆಯಾಗಿರಲಿ ಈ ಕಾನೂನಿನ ಪ್ರಕಾರ ಎಲ್ಲವೂ ಅಪರಾಧವೇ. ಲಾಭಕ್ಕಾಗಿ ನಕಲಿ ವೆಬ್‌ಸೈಟ್ ಸೃಷ್ಟಿಸುವುದು ಅಥವಾ ನಕಲಿ ಪರೀಕ್ಷೆ ನಡೆಸುವುದು ಕೂಡ ಇದರಲ್ಲಿ ಸೇರಿದೆ.

ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಹಾಜರಾಗುವ ವಿದ್ಯಾರ್ಥಿಗಳು ಈ ಕಾನೂನಿನ ವ್ಯಾಪ್ತಿಗೆ ಒಳಪಡುವುದಿಲ್ಲ. ಸಂಸತ್ತಿನಲ್ಲಿ ಮಸೂದೆ ಮಂಡಿಸುವ ವೇಳೆ ಕೇಂದ್ರ ಸಚಿವ ಜಿತೇಂದ್ರ ಸಿಂಗ್, ರಿಗ್ಗಿಂಗ್ ಮೂಲಕ ಯುವಕರ ಭವಿಷ್ಯದ ಜೊತೆ ಚೆಲ್ಲಾಟವಾಡುತ್ತಿರುವವರನ್ನು ಹತ್ತಿಕ್ಕುವುದು ಮಾತ್ರ ಈ ಕಾನೂನಿನ ಉದ್ದೇಶ ಎಂದು ಹೇಳಿದ್ದರು. ಈ ಕಾನೂನಿನ ವ್ಯಾಪ್ತಿಯಿಂದ ಅಭ್ಯರ್ಥಿಗಳನ್ನು ಹೊರಗಿಡಲಾಗಿದೆ.

ಕಾನೂನನ್ನು ಹೆಚ್ಚು ಪರಿಣಾಮಕಾರಿಯಾಗಿಸಲು, ಉನ್ನತ ಮಟ್ಟದ ರಾಷ್ಟ್ರೀಯ ತಾಂತ್ರಿಕ ಸಮಿತಿಯನ್ನು ರಚಿಸಲು ಶಿಫಾರಸು ಮಾಡಲಾಗಿದೆ. ಇದರಿಂದ ಕಂಪ್ಯೂಟರ್‌ಗಳ ಮೂಲಕ ನಡೆಯುವ ಪರೀಕ್ಷೆಗಳನ್ನು ಹೆಚ್ಚು ಸುರಕ್ಷಿತಗೊಳಿಸಬಹುದು. ಪರೀಕ್ಷೆಯ ಸಮಯದಲ್ಲಿ ಎಲೆಕ್ಟ್ರಾನಿಕ್ ಕಣ್ಗಾವಲು ಮತ್ತು ಫುಲ್‌ಪ್ರೂಫ್ ಐಟಿ ಭದ್ರತಾ ವ್ಯವಸ್ಥೆಗಳನ್ನು ಬಳಸಲು ಸಹ ಅವಕಾಶ ಕಲ್ಪಿಸಬಹುದು.

ಪರೀಕ್ಷೆಯಲ್ಲಿನ ಅಕ್ರಮಗಳನ್ನು ತನಿಖೆ ಮಾಡುವ ಏಜೆನ್ಸಿಯು ಅಪರಾಧಿಗಳ ಆಸ್ತಿಯನ್ನು ವಶಪಡಿಸಿಕೊಳ್ಳುವ ಮತ್ತು ಮುಟ್ಟುಗೋಲು ಹಾಕುವ ಹಕ್ಕನ್ನು ಹೊಂದಿರುತ್ತದೆ. ಇದರಿಂದ ಪರೀಕ್ಷೆಯಲ್ಲಿ ಉಂಟಾದ ಆರ್ಥಿಕ ನಷ್ಟವನ್ನು ಸರಿದೂಗಿಸಬಹುದು. ಅನುಮಾನಾಸ್ಪದ ಪ್ರಕರಣಗಳಲ್ಲಿ ಹಿರಿಯ ಪೊಲೀಸ್ ಅಧಿಕಾರಿಗಳು ಪ್ರಾಥಮಿಕ ತನಿಖೆ ನಡೆಸಲಿದ್ದಾರೆ.

ಲಕ್ಷಾಂತರ ವಿದ್ಯಾರ್ಥಿಗಳ ಮೇಲೆ ಪರಿಣಾಮ

ಪತ್ರಿಕೆಗಳ ಸೋರಿಕೆಗಳು ಪರೀಕ್ಷೆಯ ರದ್ದತಿಗೆ ಕಾರಣವಾಯಿತು ಎಂದು ವಿವರಿಸಿದ್ದಾರೆ. ಪರೀಕ್ಷೆಗಳನ್ನು ರದ್ದು ಮಾಡಿದರೆ, ಲಕ್ಷಾಂತರ ವಿದ್ಯಾರ್ಥಿಗಳ ಮೇಲೆ ಪರಿಣಾಮ ಉಂಟಾಗುತ್ತದೆ ಆದ್ದರಿಂದ ಪರೀಕ್ಷೆಗಳನ್ನು ರದ್ದುಗೊಳಿಸುವುದಕ್ಕೆ ಸಾಧ್ಯವಿಲ್ಲ ಎಂದು ಪ್ರಧಾನ್ ಹೇಳಿದ್ದಾರೆ.

ಸುಪ್ರೀಂಕೋರ್ಟ್‌ನಲ್ಲಿ ನೀಟ್ ವಿಷಯವಾಗಿ ವಿಚಾರಣೆ ನಡೆಯುತ್ತಿದೆ. ಕೋರ್ಟ್ ತೀರ್ಪು ಅಂತಿಮವಾಗಿರಲಿದೆ ಎಂದು ಸಚಿವರು ಹೇಳಿದ್ದಾರೆ. ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಅವ್ಯವಹಾರಗಳು ಮತ್ತು ಅಕ್ರಮಗಳನ್ನು ತಡೆಯುವ ಗುರಿಯನ್ನು ಹೊಂದಿರುವ ಕಠಿಣ ಕಾನೂನನ್ನು ಕೇಂದ್ರ ಸರ್ಕಾರ ಜಾರಿಗೊಳಿಸಿದೆ. ಹೊಸ ಕಾನೂನು ಜೂ.21 ರಿಂದಲೇ ಜಾರಿಗೆ ಬಂದಿದೆ.

ರಾಜ್ಯಕ್ಕೆ ಹೊಸ ಯೋಜನೆ ತರುತ್ತೇವೆ...

ಅಭಿವೃದ್ಧಿಗೆ ದುಡಿಯುತ್ತೇವೆ. ಲೋಕಸಭಾ ಚುನಾವಣೆಯಲ್ಲಿ ಆಯ್ಕೆಗೊಂಡ ಎನ್‌ಡಿಎ ಕೂಟದ ನೂತನ ಸಂಸದರಿಗೆ ರಾಜ್ಯ ಬಿಜೆಪಿ ಹಮ್ಮಿಕೊಂಡಿದ್ದ ಸನ್ಮಾನ ಕಾರ್ಯಕ್ರಮದಲ್ಲಿ ಅಭಿನಂದನೆ ಸ್ವೀಕರಿಸಿ ಮಾತನಾಡಿದ ಅವರು, ನಾಲ್ವರು ಸಚಿವರೂ ಸೇರಿ 19 ಸದಸ್ಯರು ರಾಜ್ಯದ ಧ್ವನಿಯಾಗಿ ಕಾರ್ಯಕ್ರಮಗಳನ್ನು ಜಾರಿಗೆ ತರುವುದಾಗಿ ತಿಳಿಸಿದರು. ಅದರಲ್ಲೂ ಮುಖ್ಯವಾಗಿ ಜಲಶಕ್ತಿ ಮತ್ತು ರೈಲ್ವೆ ಇಲಾಖೆ, ನಮ್ಮ ಸೋಮಣ್ಣ ಅವರ ಬಳಿಯೇ ಇದೆ. ಅವರ ಸಹಕಾರದಿಂದ ಕಾರ್ಯಕ್ರಮಗಳನ್ನು ಸುಲಭವಾಗಿ ಅನುಷ್ಠಾನಗೊಳಿಸಲು ಮುಂದಾಗುತ್ತೇವೆ.

ಲೋಕಸಭಾ ಚುನಾವಣೆಯಲ್ಲಿ ಎರಡೂ ಪಕ್ಷದ ಕಾರ್ಯಕರ್ತರು ಒಗ್ಗಟ್ಟಿನಿಂದ ದುಡಿದ ಫಲವಾಗಿ ನಮಗೆ 19 ಸ್ಥಾನಗಳು ದೊರೆತಿವೆ. ನಮ್ಮ ನಿರೀಕ್ಷೆ 27 ಇತ್ತು. ಕಾಂಗ್ರೆಸ್‌ನ ಗ್ಯಾರಂಟಿ ಹಾಗೂ ಅಪಪ್ರಚಾರದಿಂದ ನಮ್ಮ ಗುರಿಯನ್ನು ಮುಟ್ಟಲಾಗಲಿಲ್ಲ. ನಾಲ್ಕೈದು ಕ್ಷೇತ್ರಗಳಲ್ಲಿ ಅಲ್ಪಮತಗಳಿಂದ ಸೋಲನುಭವಿಸಿದ್ದೇವೆ. ಆಸೆಯೇ ದುಃಖಕ್ಕೆ ಮೂಲ ಎಂದು ಗೌತಮ ಬುದ್ಧ ಹೇಳಿದ್ದರು, ಸಿದ್ದರಾಮಯ್ಯ ಅವರು ಗ್ಯಾರಂಟಿಯೇ ಬೆಲೆ ಏರಿಕೆಗೆ ಮೂಲ ಎಂದು ಹೇಳುತ್ತಿದ್ದಾರೆ ಎಂದು ಟೀಕಾ ಪ್ರಹಾರ ನಡೆಸಿದರು.

ರಾಜ್ಯ ಕಾಂಗ್ರೆಸ್ ಸರಕಾರ ಗ್ಯಾರಂಟಿಗಳಿಗೆ ಹಣ ಹೊಂದಿಸಲು ಹೆಣಗಾಡುತ್ತಿದೆ, ಅದಕ್ಕಾಗಿ ಜನರನ್ನು ದೋಚುತ್ತಿದೆ. ಪೆಟ್ರೋಲ್, ಡೀಸೆಲ್ ಸೇರಿದಂತೆ ಎಲ್ಲಾ ಸಾಮಗ್ರಿಗಳ ಬೆಲೆ ಏರಿಕೆಗೆ ಗ್ಯಾರಂಟಿಗಳೇ ಕಾರಣ ಎಂದು ದೂರಿದರು.

ಭ್ರಷ್ಟಾಚಾರದಲ್ಲಿ ಮುಳುಗಿರುವ ಸಿದ್ದರಾಮಯ್ಯ ಸರ್ಕಾರಕ್ಕೆ, ಗ್ಯಾರಂಟಿಗಳಿಂದಲೇ ಗೆಲ್ಲಬಹುದೆಂಬ ಭ್ರಮೆ ಹುಸಿಯಾಗಿದೆ. ಬಿಜೆಪಿ ಮತ್ತು ಜೆಡಿಎಸ್ ಒಂದಾಗಿ ಹೋರಾಟ ಮಾಡಿದರೆ ಮುಂಬರುವ ಬೆಂಗಳೂರು, ಮೈಸೂರು ನಗರಪಾಲಿಕೆ, ಜಿಲ್ಲಾ ಹಾಗೂ ತಾಲೂಕು ಪಂಚಾಯತ್ ಚುನಾವಣೆಯಲ್ಲಿ ಪ್ರಚಂಡ ಗೆಲುವು ಸಾಧಿಸಬಹುದು ಎಂದರು.

ಸ್ಥಳೀಯವಾಗಿ ಉಭಯ ಪಕ್ಷದ ಕಾರ್ಯಕರ್ತರಲ್ಲಿ ಸಣ್ಣಪುಟ್ಟ ಸಮಸ್ಯೆಗಳಿದ್ದರೆ ಅದನ್ನು ಬಗೆಹರಿಸಿಕೊಂಡು ಮುಂಬರುವ ಚುನಾವಣೆಗಳನ್ನು ಎದುರಿಸಲು ಸಿದ್ಧರಾಗಿ.

ಹಣಕಾಸು ಆಯೋಗ ಶಿಫಾರಸ್ಸಿನಂತೆ 11,495 ಕೋಟಿ ಅನುದಾನ ಬಿಡುಗಡೆಗೆ ಕೇಂದ್ರಕ್ಕೆ ಒತ್ತಾಯ

ಬೆಂಗಳೂರು, ಜೂ.22– ಹಣಕಾಸು ಆಯೋಗ ಶಿಫಾರಸು ಮಾಡಿರುವ ರೂ. 11,495 ಕೋಟಿ ಅನುದಾನ ಬಿಡುಗಡೆ ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಕೇಂದ್ರ ಸರ್ಕಾರಕ್ಕೆ ಮನವಿ ಮಾಡಲಾಗಿದೆ ಎಂದು ಕಂದಾಯ ಸಚಿವ ಕೃಷ್ಣಬೈರೇಗೌಡ ತಿಳಿಸಿದ್ದಾರೆ.

ಕೇಂದ್ರ ಬಜೆಟ್ ಪೂರ್ವಭಾವಿ ಸಮಾಲೋಚನಾ ಸಭೆಗೆ ರಾಜ್ಯದ ಪ್ರತಿನಿಧಿಯಾಗಿರುವ ಕೃಷ್ಣಬೈರೇಗೌಡ, ಭದ್ರಾ ಮೇಲ್ದಂಡೆ ನೀರಾವರಿ ಯೋಜನೆಗೆ ಈಗಾಗಲೇ ಘೋಷಿಸಲಾಗಿರುವ ರೂ. 5,300 ಕೋಟಿ ನೆರವನ್ನು ಬಿಡುಗಡೆ ಮಾಡಿ ಅದನ್ನು ರಾಷ್ಟ್ರೀಯ ಯೋಜನೆ ಎಂದು



ಕಂದಾಯ ಸಚಿವ ಕೃಷ್ಣಬೈರೇಗೌಡ

ಘೋಷಿಸಬೇಕು ಎಂದು ಒತ್ತಾಯಿಸಿರುವುದಾಗಿ ಕೃಷ್ಣಬೈರೇಗೌಡ ಮಾಹಿತಿ ನೀಡಿದ್ದಾರೆ. ಸೆಸ್ ಮತ್ತು ಸರ್‌ಚಾರ್ಜ್‌ಗಳನ್ನು ಪೂಲ್‌ಗೆ ಸೇರಿಸಬೇಕು. ಇದರಿಂದ ರಾಜ್ಯಗಳು ಕೇಂದ್ರ ತೆರಿಗೆಗಳಲ್ಲಿ ತಮ್ಮ ಸರಿಯಾದ ಪಾಲನ್ನು ಪಡೆಯಬಹುದು ಎಂದು ತಿಳಿಸಲಾಗಿದೆ. ಅಲ್ಲದೇ ಬೆಂಗಳೂರು ಅಭಿವೃದ್ಧಿ ಮತ್ತು ಕಲ್ಯಾಣ ಕರ್ನಾಟಕ ಅಭಿವೃದ್ಧಿಗಾಗಿ ವಿಶೇಷ ಪ್ಯಾಕೇಜ್ ಘೋಷಿಸುವಂತೆ ಒತ್ತಾಯಿಸಿರುವುದಾಗಿ ತಿಳಿಸಿದ್ದಾರೆ. ಅಂಗನವಾಡಿ, ಆಶಾ ಮತ್ತು ಮಧ್ಯಾಹ್ನದ ಊಟದ ಕಾರ್ಯಕರ್ತೆಯರಿಗೆ ಗೌರವಧನವನ್ನು ಹೆಚ್ಚಿಸಬೇಕು, ವಸತಿ ಯೋಜನೆಗಳಲ್ಲಿ ಫಲಾನುಭವಿಗಳಿಗೆ ನೀಡಲಾಗುವ ಕೇಂದ್ರ ಸರ್ಕಾರದ ಪಾಲನ್ನು ನಗರ ಪ್ರದೇಶದಲ್ಲಿ 1.5ರಿಂದ 5 ಲಕ್ಷಕ್ಕೆ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ 1.2ರಿಂದ 3 ಲಕ್ಷಕ್ಕೆ ಹೆಚ್ಚಿಸಬೇಕು, ರಾಯಚೂರಿಗೆ AIIMS ಘೋಷಿಸುವುದು ಸೇರಿದಂತೆ ಮುಖ್ಯಮಂತ್ರಿಯವರ ವಿವರವಾದ ಟಿಪ್ಪಣಿಯನ್ನು ಸಹ ದಾಖಲೆಯಲ್ಲಿ ಇರಿಸಲಾಗಿದೆ ಎಂದು ಮಾಹಿತಿ ನೀಡಿದ್ದಾರೆ.

ಕೋಲಾರ: ಆನಂದ ಮಾರ್ಗ ಆಶ್ರಮದಲ್ಲಿ ಸ್ವಾಮೀಜಿ ಬರ್ಬರ ಹತ್ಯೆ

ಕೋಲಾರ, ಜೂ.22– ಜಿಲ್ಲೆಯ ಮಾಲೂರು ತಾಲೂಕಿನ ಸಂತಹಳ್ಳಿಯಲ್ಲಿರುವ ಆನಂದ ಮಾರ್ಗ ಆಶ್ರಮದಲ್ಲಿ ಎರಡು ಗುಂಪುಗಳ ನಡುವಿನ ಗಲಾಟೆ ವೇಳೆ ಹಿರಿಯ ಸ್ವಾಮೀಜಿ ಒಬ್ಬರ ಬರ್ಬರ ಹತ್ಯೆಯಾಗಿದೆ.



ಆಚಾರ್ಯ ಚಿನ್ಮಯಾನಂದ

ಕೊಲೆಯಾದ ಸ್ವಾಮೀಜಿಯನ್ನು ಆಚಾರ್ಯ ಚಿನ್ಮಯಾನಂದ ಎಂದು ಗುರುತಿಸಲಾಗಿದ್ದು, ಆಚಾರ್ಯ ಧರ್ಮ ಪ್ರಾಣಾನಂದ ಅವರ ಗುಂಪಿನಿಂದ ಈ ಹತ್ಯೆ ನಡೆದಿದೆ. ಈ ಕುರಿತು ಮಾಲೂರು ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಪ್ರಕರಣ ದಾಖಲಿಸಲಾಗಿದೆ.

ಸಂತಹಳ್ಳಿ ಗ್ರಾಮದ ನಾಲ್ಕು ಎಕರೆ ಜಾಗದಲ್ಲಿ ಆಶ್ರಮವಿದ್ದು ಹಲವು ವರ್ಷಗಳಿಂದ ಜಾಗದ ಕುರಿತಂತೆ ವಿವಾದ ನಡೆಯುತ್ತಿದೆ. ಇಂದು ಬೆಳಿಗ್ಗೆ ಕೋರ್ಟ್‌ಗೆ ದಾಖಲೆ ಸಹಿತ ಹೋಗುವ ವೇಳೆ ಮಾರಣಾಂತಿಕ ಹಲ್ಲೆ ಸ್ವಾಮೀಜಿ ಮೇಲೆ ನಡೆದಿದೆ ಎನ್ನಲಾಗಿದೆ. ಇದರಿಂದ ತೀವ್ರವಾಗಿ ಗಾಯಗೊಂಡಿದ್ದ ಚಿನ್ಮಯಾನಂದ ಅವರನ್ನು ಆರ್.ಎಲ್ ಜಾಲಪ್ಪ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿತ್ತು. ಆದರೆ ಚಿಕಿತ್ಸೆ ಫಲಕಾರಿಯಾಗದೆ ಸ್ವಾಮೀಜಿ ಮೃತಪಟ್ಟಿದ್ದಾರೆ. ಈ ಕೊಲೆ ಸಂಬಂಧ ಆಚಾರ್ಯ ಧರ್ಮ ಪ್ರಾಣಾನಂದ ಹಾಗೂ ಅರುಣ್ ಎಂಬುವವರನ್ನು ಮಾಲೂರು ಪೊಲೀಸ್ ಅಧಿಕಾರಿಗಳು ಬಂಧಿಸಿ, ವಿಚಾರಣೆ ನಡೆಸುತ್ತಿದ್ದಾರೆ.

ಮೂಗೂರು ಕರ್ನಾಟಕ ಬ್ರಾಹ್ಮಣ ಸಂಘದ ವತಿಯಿಂದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ



ಮೂಗೂರು ಕರ್ನಾಟಕ ಬ್ರಾಹ್ಮಣರ ಸಂಘದ ವತಿಯಿಂದ ಮೈಸೂರಿನ ಚಾಮುಂಡಿಪುರಂನಲ್ಲಿರುವ ಸಂಘದ ಶಾರದಾನಿಕೇತನ ಸಭಾಂಗಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಶೇ.90ಕ್ಕೂ ಹೆಚ್ಚು ಅಂಕ ಪಡೆದ 46 ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ, ಗೌರವಿಸಲಾಯಿತು. ಚಿತ್ರದಲ್ಲಿ ಪ್ರತಿಭಾನ್ವಿತ ವಿದ್ಯಾರ್ಥಿಗಳೊಂದಿಗೆ ಸಂಘದ ಅಧ್ಯಕ್ಷ ವಿಶ್ವನಾಥಯ್ಯ, ಕಾರ್ಯದರ್ಶಿ ಕೆ.ಆರ್.ಮಂಜುನಾಥ್, ಉಪಾಧ್ಯಕ್ಷ ಶ್ರೀಧರಮೂರ್ತಿ, ನಂದಕುಮಾರ್, ಜಂಟಿ ಕಾರ್ಯದರ್ಶಿ ರಾವ್ ಸೋಮಶೇಖರ್, ಖಜಾಂಚಿ ಶ್ರೀಕಂಠಶರ್ಮಾ, ಎಲ್ಲಾ ನಿರ್ದೇಶಕರನ್ನು ಕಾಣಬಹುದು.

ಕೆ.ಆರ್.ಆಸ್ಪತ್ರೆ ಕಾರ್ಮಿಕರಿಗೆ ಸೂಕ್ತ ಪರಿಹಾರ; ಕಾರ್ಮಿಕ ಇಲಾಖೆಯ ಆದೇಶ ಪಾಲಿಸದ ಏಜೆನ್ಸಿ

ತನಿಖೆಗೆ ದಸಂಸ ಆಗ್ರಹ

ಮೈಸೂರು, ಜೂ.22(ಜಿಎ)–ಮೈಸೂರಿನ ಕೆ.ಆರ್.ಆಸ್ಪತ್ರೆ ಮತ್ತು ವೈದ್ಯಕೀಯ ಕಾಲೇಜುಗಳಲ್ಲಿ ಖಾಸಗಿ ಏಜೆನ್ಸಿ ಮೂಲಕ ಹೌಸ್‌ಕೀಪರ್ ಮತ್ತು ಭದ್ರತಾ ಸಿಬ್ಬಂದಿಯಾಗಿ ಕಾರ್ಯನಿರ್ವಹಿಸುತ್ತಿರುವವರಿಗೆ ಸೂಕ್ತ ಪರಿಹಾರ ನೀಡುವಂತೆ ಕಾರ್ಮಿಕ ಇಲಾಖೆ ಆದೇಶಿಸಿದ್ದು, ಈ ಆದೇಶವನ್ನು ಸಂಬಂಧಪಟ್ಟವರು ಪಾಲಿಸುತ್ತಿಲ್ಲ ಎಂದು ದಸಂಸ (ಬಣರಹಿತ)ದ ಜಿಲ್ಲಾ ಸಂಚಾಲಕ ಉಮಾ ಮಹದೇವ್ ಆರೋಪಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೆ.ಆರ್.ಆಸ್ಪತ್ರೆ ಮತ್ತು ವೈದ್ಯಕೀಯ ಕಾಲೇಜುಗಳಲ್ಲಿ 55 ಮಂದಿ ಹೌಸ್‌ಕೀಪರ್ ಹಾಗೂ 38 ಮಂದಿ ಭದ್ರತಾ ಸಿಬ್ಬಂದಿಯಾಗಿ ಖಾಸಗಿ ಏಜೆನ್ಸಿಯೊಂದರ ಮೂಲಕ ನೇಮಕಗೊಂಡು ಹಲವಾರು ವರ್ಷಗಳಿಂದ ಸೇವೆ ಸಲ್ಲಿಸುತ್ತಿದ್ದಾರೆ. ಆದರೆ ಇವರಿಗೆ ಕನಿಷ್ಠ ವೇತನ ನೀಡದೇ ವಂಚಿಸಲಾಗುತ್ತಿದೆ ಎಂದರು.

ಖಾಸಗಿ ಏಜೆನ್ಸಿ ಮೂಲಕ ಇವರನ್ನು ನೇಮಕ ಮಾಡಿಕೊಂಡಿದ್ದು, ಇವರಿಗೆ ಕನಿಷ್ಠ ವೇತನ ನೀಡುತ್ತಿಲ್ಲ ಎಂಬುದನ್ನು ಕಾರ್ಮಿಕ ಇಲಾಖೆ ಅಧಿಕಾರಿಗಳೇ ಪತ್ತೆಹಚ್ಚಿ ಕ್ರಮ ಕೈಗೊಂಡರು. ಬಳಿಕ ಬಾಕಿ ಹಣ ಪಾವತಿಸಲು ಆದೇಶವೂ ಹೊರಬಿದ್ದಿತ್ತು. ಈ ವೇಳೆ ತಪ್ಪಿತಸ್ಥ ಏಜೆನ್ಸಿಗಳಿಗೆ ಹತ್ತು ಪಟ್ಟು ದಂಡ ವಿಧಿಸಿ ಅದನ್ನು ಸಂತ್ರಸ್ತ ಕಾರ್ಮಿಕರಿಗೆ ನೀಡುವ ಅವಕಾಶವಿದ್ದರೂ, ಕೇವಲ 1 ಸಾವಿರ ದಂಡ ವಿಧಿಸಲಾಗಿದೆ. ಜೊತೆಗೆ ಕಾರ್ಮಿಕ ಆಯುಕ್ತರ ಹೆಸರಿಗೆ ಬಾಕಿ ಹಣದ ಚೆಕ್ ನೀಡುವಂತೆ ಏಜೆನ್ಸಿಗಳಿಗೆ ಆದೇಶಿಸಿದ್ದರೂ ಕೇವಲ ಐವರಿಗೆ ಮಾತ್ರ ನೀಡಲಾಗಿದೆ. ನಂತರ, ಆ ಚೆಕ್ ಸ್ವೀಕರಿಸಿದವರನ್ನು ಕೆಲಸದಿಂದ ತೆಗೆದು ಹಾಕಲಾಗಿದೆ. ಹೀಗಾಗಿ ಕಾರ್ಮಿಕ ಆಯುಕ್ತರು, ಏಜೆನ್ಸಿ ಬಗ್ಗೆ ತಮಗೆ ಶಂಕೆಯಿದ್ದು, ಈ ಬಗ್ಗೆ ತನಿಖೆ ನಡೆಸಿ, ಸೂಕ್ತ ಕ್ರಮ ಕೈಗೊಂಡು ಸಂತ್ರಸ್ತರಿಗೆ ನ್ಯಾಯ ಒದಗಿಸಬೇಕು. ಇಲ್ಲದಿದ್ದರೆ ಹೋರಾಟ ನಡೆಸಲಾಗುವುದೆಂದು ಎಚ್ಚರಿಸಿದರು. ಗೋಷ್ಠಿಯಲ್ಲಿ ಮೂಡಳ್ಳಿ ಮಹದೇವ್, ಸಿದ್ದರಾಮಯ್ಯ ಯಡತೊರೆ, ಜಯಪ್ರಕಾಶ್ ಇದ್ದರು.

ಪೆಟ್ರೋಲ್, ಡೀಸೆಲ್ ದರ ಏರಿಕೆ ಕೈಬಿಡಲು ಟ್ರಕ್ಕರ್ಸ್ ಅಸೋಸಿಯೇಷನ್ ಮನವಿ

ಮೈಸೂರು, ಜೂ.22(ಜಿಎ)–ರಾಜ್ಯ ಸರ್ಕಾರ ಪೆಟ್ರೋಲ್, ಡೀಸೆಲ್ ದರ ಏರಿಕೆ ಮಾಡಿರುವುದರಿಂದ ಟ್ರಕ್ ನಿರ್ವಹಣೆ ಮಾಡುವವರಿಗೆ ಭಾರಿ ಹೊಡೆತ ಬಿದ್ದಿದ್ದು ಇದರೊಟ್ಟಿಗೆ ಟೋಲ್ ದರ, ಟೈರ್, ವಿಮೆ, ಬಿಡಿಭಾಗಗಳ ದರ ಏರಿಕೆಯಾಗಿರುವುದು ಸಹ ಸಂಕಷ್ಟಕ್ಕೆ ದೂಡಿದೆ. ಸರ್ಕಾರ ಕೂಡಲೇ ತೈಲ ದರ ಏರಿಕೆ ವಾಪಸು ಪಡೆಯಬೇಕೆಂದು ಮೈಸೂರು ಜಿಲ್ಲಾ ಟ್ರಕ್ಕರ್ಸ್ ಅಸೋಸಿಯೇಷನ್ ಮನವಿ ಮಾಡಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಅಸೋಸಿಯೇಷನ್‌ನ ಅಧ್ಯಕ್ಷ ಶ್ರೀನಿವಾಸರಾವ್ ಮಾತನಾಡಿ, ಕಳೆದ ವರ್ಷದ ಬರಗಾಲದಿಂದಲೇ ಲಾರಿ ಉದ್ಯಮ ತತ್ತರಿಸಿದೆ. ಈಗ ತೈಲ ದರ ಏರಿಕೆ ಮಾಡಿರುವುದರಿಂದಾಗಿ ಸಾಗಾಣಿಕೆ ವೆಚ್ಚ ಹೆಚ್ಚಲಿದೆ. ಇದರ ಹೊರೆ ಸಾಮಗ್ರಿ ಸಾಗಣೆಗೆ ನೀಡುವವರಿಂದ ಪಡೆಯಲು ಈಗ ಸಾಧ್ಯವಾಗುತ್ತಿಲ್ಲ. ಜೊತೆಗೆ ಸಾಗಾಣಿಕೆ ದರ ಏರಿಸಿದಲ್ಲಿ ಪೈಪೋಟಿ ಮೇಲೆ ಕಡಿಮೆ ದರಕ್ಕೆ ಸಾಗಣೆ ಮಾಡಲು ಮುಂದೆ ಬರುವವರೂ ಇರುವುದರಿಂದಾಗಿ ಸ್ಪರ್ಧೆ ಹೆಚ್ಚಿ ಅನೇಕರಿಗೆ ಹೊಡೆತ ಬೀಳಲಿದೆ. ಅಂತಿಮವಾಗಿ ಇದರ ಹೊರೆ ಸಾರ್ವಜನಿಕರ ಮೇಲೆಯೇ ಬೀಳಲಿದ್ದು, ಹಣದುಬ್ಬರವೂ ಏರಲಿದೆ. ಆದ್ದರಿಂದಾಗಿ ಸರ್ಕಾರ ಕೂಡಲೇ ದರ ಏರಿಕೆ ವಾಪಸು ಪಡೆಯಬೇಕು. ಇಲ್ಲದಿದ್ದಲ್ಲಿ ರಾಜ್ಯ ಸಂಘದ ನಿರ್ಧಾರದಂತೆ ಹೋರಾಟ ನಡೆಸಲಾಗುತ್ತದೆ ಎಂದರು. ಸುದ್ದಿಗೋಷ್ಠಿಯಲ್ಲಿ ಎಂ.ಪಿ.ನಾಗರಾಜ್, ಅಸ್ಗರ್ ಅಲಿಖಾನ್, ಲಿಂಗರಾಜು, ಪ್ರಕಾಶ್ ಉಪಸ್ಥಿತರಿದ್ದರು.

ಸಿದ್ಧಾರ್ಥ ಸ್ಪೋರ್ಟ್ಸ್ ಕ್ಲಬ್‌ನ ಹಿಂದಿನ ಅಧ್ಯಕ್ಷರು, ಕಾರ್ಯದರ್ಶಿ, ಖಜಾಂಚಿ ಸೇರಿ ನಾಲ್ವರ ವಿರುದ್ಧ ವಂಚನೆ ಪ್ರಕರಣ ದಾಖಲು

ಮೈಸೂರು, ಜೂ.22(ಎಸ್‌ಪಿಎನ್)–ಲಕ್ಷಾಂತರ ರೂ. ಹಣ ದುರುಪಯೋಗದಡಿ ಮೈಸೂರು ಸಿದ್ಧಾರ್ಥ ಸ್ಪೋರ್ಟ್ಸ್ ಕ್ಲಬ್‌ನ ಮಾಜಿ ಅಧ್ಯಕ್ಷ, ಕಾರ್ಯದರ್ಶಿ ಸೇರಿದಂತೆ ಒಟ್ಟು 4 ಮಂದಿ ವಿರುದ್ಧ ನಜರ್‌ಬಾದ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೈಸೂರು ಸಿದ್ಧಾರ್ಥ ಸ್ಪೋರ್ಟ್ಸ್ ಕ್ಲಬ್ ಮಾಜಿ ಅಧ್ಯಕ್ಷ ಎಂ.ಸುರೇಶ್‌ಗೌಡ, ಮಾಜಿ ಕಾರ್ಯದರ್ಶಿ ಎಸ್.ನಾಗರಾಜು, ಮಾಜಿ ಖಜಾಂಚಿ ಪುಟ್ಟಸ್ವಾಮಿ, ಮಾಜಿ ಮ್ಯಾನೇಜರ್ ವಿನಯ್‌ಕುಮಾರ್ ಅಧಿಕಾರ ಅವಧಿ ವಿರುದ್ಧ 2019ರಿಂದ 2023ರವರೆಗೆ 99,33,371 ರೂ. ಹಣ ದುರುಪಯೋಗವಾಗಿದೆ ಎಂದು ಹಾಲಿ ಅಧ್ಯಕ್ಷ ಸಿ.ವೆಂಕಟಪ್ಪ, ಕಾರ್ಯದರ್ಶಿ ಬಿ.ಎಸ್. ಅಶೋಕ್ ಅವರು ನಜರ್‌ಬಾದ್ ಪೊಲೀಸರಿಗೆ ನೀಡಿರುವ ದೂರಿನಲ್ಲಿ ಉಲ್ಲೇಖಿಸಿದ್ದಾರೆ. 2019–23ನೇ ಸಾಲಿನಲ್ಲಿ ಸುಮಾರು 1,49,83,371 ರೂ.ಗಳನ್ನು ದುರುಪಯೋಗಪಡಿಸಿಕೊಂಡಿದ್ದು, ಈ ಪೈಕಿ 15,50,000 ರೂ.ಹಣವನ್ನು ಸದಸ್ಯರಿಂದ ವಸೂಲಾಗಿದೆ ಎಂದು ಆಡಿಟ್ ವರದಿಯಲ್ಲಿ ಉಲ್ಲೇಖಿಸಲಾಗಿದೆ. ಆದರೆ, ಮರು ಆಡಿಟ್ ಮಾಡಿಸಿದಾಗ ಹಣ ದುರುಪಯೋಗ ಕುರಿತು ಬೆಳಕಿಗೆ ಬಂದಿದೆ. ಈಗಾಗಲೇ ಇದರಲ್ಲಿ 35,00,000 ರೂ. ಹಣವನ್ನು ಮಾಜಿ ಮ್ಯಾನೇಜರ್ ವಿನಯ್‌ಕುಮಾರ್ ಕ್ಲಬ್ ಖಾತೆಗೆ ಪಾವತಿ ಮಾಡಿದ್ದಾರೆ. ಉಳಿಕೆ ರೂ.99,33,371 ಹಣವನ್ನು ಕ್ಲಬ್ ಖಾತೆಗೆ ಜಮೆ ಮಾಡದೇ ಹಣ ದುರುಪಯೋಗ ಮಾಡಿರುವ ಹಾಗೂ ಸದಸ್ಯರಿಗೆ ವಂಚನೆ ಮಾಡಿರುವ ಈ ನಾಲ್ವರ ವಿರುದ್ಧ ಕಾನೂನು ರಿತ್ಯಾ ಕ್ರಮ ಜರುಗಿಸಬೇಕೆಂದು ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ಮಳೆಗಾಲ ಶುರುವಾಗುತ್ತಿದ್ದಂತೆ ರಾಜ್ಯದಲ್ಲಿ ಡೆಂಗ್ಯೂ ಹಾವಳಿ: 5 ಸಾವಿರ ಗಡಿ ದಾಟಿದ ಕೇಸ್

ಬೆಂಗಳೂರು, ಜೂ.22– ಕ್ಷಣ ಕ್ಷಣಕ್ಕೂ ರಾಜ್ಯದ



ಹವಮಾನ ಬದಲಾವಣೆ ಆಗುತ್ತಿದೆ. ಇನ್ನು ಮಳೆಗಾಲ ಶುರುವಾಗುತ್ತಿದ್ದಂತೆ ಡೆಂಗ್ಯೂ ಹಾವಳಿ ಶುರುವಾಗಿದ್ದು, ರಾಜ್ಯದಲ್ಲಿ ಡೆಂಗ್ಯೂ ಕೇಸ್ 5 ಸಾವಿರ ಗಡಿ ದಾಟಿದೆ. ಈ ಕುರಿತಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮಾಹಿತಿ ನೀಡಿದೆ. ರಾಜ್ಯದಲ್ಲಿ ಈ ವರ್ಷ ಜನವರಿಯಿಂದ ಇಲ್ಲಿಯವರೆಗೆ ಒಟ್ಟು 5187 ಡೆಂಗ್ಯೂ ಕೇಸ್ ಪತ್ತೆ ಆಗಿವೆ.

ಬೆಂಗಳೂರಿನ ಬಿಬಿಎಂಪಿ ವ್ಯಾಪ್ತಿಯಲ್ಲಿ 6 ತಿಂಗಳಲ್ಲಿ 1,230 ಡೆಂಗ್ಯೂ ಪ್ರಕರಣಗಳು ದಾಖಲಾಗಿವೆ. ರಾಜ್ಯದಲ್ಲಿ ಜನವರಿಯಿಂದ 3975 ಕೇಸ್ ಪತ್ತೆ ಆಗಿದ್ದು, ಜೂನ್ ತಿಂಗಳಿನಿಂದ ಕೇಸ್‌ಗಳ ಸಂಖ್ಯೆ ಏರಿಕೆ ಕಂಡಿದೆ. ರಾಜ್ಯದಲ್ಲಿ 37144 ಜನರ ರಕ್ತ ಮಾದರಿ ಪಡೆಯಲಾಗಿದ್ದು, ಇದರಲ್ಲಿ 3957 ಜನರಿಗೆ ಪಾಸಿಟಿವ್ ಪತ್ತೆ ಆಗಿದೆ. ಬಿಬಿಎಂಪಿ ವ್ಯಾಪ್ತಿಯಲ್ಲಿ 4063 ಜನರ ಸ್ಯಾಂಪಲ್ಸ್ ಸಂಗ್ರಹ ಮಾಡಲಾಗಿದ್ದು, ಈ ಪೈಕಿ 1230 ಜನರಲ್ಲಿ ಡೆಂಗ್ಯೂ ಪಾಸಿಟಿವ್ ಕಾಣಿಸಿಕೊಂಡಿವೆ. ಇಲ್ಲಿಯವರೆಗೆ ಒಟ್ಟು 5187 ಡೆಂಗ್ಯೂ ಕೇಸ್ ಪತ್ತೆ ಆಗಿವೆ.

ಡೆಂಗ್ಯೂ ಕೇಸ್‌ಗಳಲ್ಲಿ ಬೆಂಗಳೂರು ಮೊದಲ ಸ್ಥಾನದಲ್ಲಿದೆ. 2ನೇ ಸ್ಥಾನದಲ್ಲಿ ಹಾವೇರಿ ಇದ್ದು, 389 ಪ್ರಕರಣ ಪತ್ತೆಯಾಗಿದೆ. 12 ಜನರಿಗೆ ಚಿಕಿತ್ಸೆ ಮುಂದುವರೆದಿದೆ. ಮೈಸೂರಿನಲ್ಲಿ 358, ಚಿಕ್ಕಮಗಳೂರಲ್ಲಿ 346, ಕಲಬುರಗಿಯಲ್ಲಿ 153 ಡೆಂಗ್ಯೂ ಪ್ರಕರಣಗಳು ದೃಢಪಟ್ಟಿವೆ. ರಾಜ್ಯದಲ್ಲಿ ಅತೀ ಕಡಿಮೆ ಅಂದ್ರೆ, ಯಾದಗಿರಿಯಲ್ಲಿ ಕೇವಲ 4 ಪ್ರಕರಣಗಳು ಮಾತ್ರ ಕಂಡು ಬಂದಿವೆ.

ಡೆಂಗ್ಯೂ ಕಂಟ್ರೋಲ್‌ಗೆ ಆರೋಗ್ಯ ಇಲಾಖೆ ಕ್ರಮ: ಇನ್ನು, ಡೆಂಗ್ಯೂ ಕಂಟ್ರೋಲ್‌ಗೆ ಆರೋಗ್ಯ ಇಲಾಖೆ ಹಲವು ಕ್ರಮ ಕೈಗೊಂಡಿದೆ. ಮನೆಗಳ ಸುತ್ತಮುತ್ತ ನೀರು ನಿಲ್ಲದಂತೆ ನೋಡಿಕೊಳ್ಳಬೇಕು. ಸೊಳ್ಳೆಗಳ ಸಂತಾನೋತ್ಪತ್ತಿಗೆ ಅವಕಾಶ ನೀಡದಂತೆ ಸ್ವಚ್ಛತೆ ಕಾಪಾಡಿಕೊಳ್ಳಿ. ಸಂಜೆ, ರಾತ್ರಿ ವೇಳೆ ಸೊಳ್ಳೆ ಕಚ್ಚದಂತೆ ನೋಡಿಕೊಳ್ಳಬೇಕು ಅಂತ ಜನರಲ್ಲಿ ಮನವಿ ಮಾಡಿದೆ.

ಹಾಗೆ ಇಲಾಖೆಯಿಂದ ಸೊಳ್ಳೆಗಳ ಕಂಟ್ರೋಲ್‌ಗೆ ಫಾಗಿಂಗ್, ಆಶಾ ಕಾರ್ಯಕರ್ತೆಯರಿಂದ ಜಾಗೃತಿ ಮೂಡಿಸೋ ಕೆಲಸ ನಡೀತಿದೆ. ಜೊತೆಗೆ ನೀರು ಸಂಗ್ರಹಣ ತೊಟ್ಟಿಗಳಲ್ಲಿ ಗಪ್ಪಿ ಅಥವಾ ಲಾರ್ವಾಹಾರಿ ಮೀನುಗಳನ್ನ ಬಿಟ್ಟು ಸೊಳ್ಳೆಗಳ ಉತ್ಪತ್ತಿ ತಡೆಗೆ ಮುಂದಾಗಿದೆ. ಆರೋಗ್ಯ ಕೇಂದ್ರಗಳಲ್ಲಿ ಡೆಂಗ್ಯೂ ಪರೀಕ್ಷೆಗೆ ವ್ಯವಸ್ಥೆ ಮಾಡಲಾಗಿದೆ.

ವಿದ್ಯಾರ್ಥಿವೇತನಕ್ಕೆ ಅರ್ಜಿ ಆಹ್ವಾನ

ಮೈಸೂರು.ಜೂ.22– 2023–24ನೇ ಸಾಲಿಗೆ ಮೈಸೂರು ತಾಲೂಕಿನ ಕೌನ್ಸೆಲಿಂಗ್ ಮೂಲಕ ಆಯ್ಕೆಯಾದ ಮೆಟ್ರಿಕ್ ನಂತರದ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳ ವಿದ್ಯಾರ್ಥಿ ವೇತನಕ್ಕೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಪೋಷಕರ ವಾರ್ಷಿಕ ವರಮಾನ 2.5 ಲಕ್ಷದೊಳಗಿರುವ ಅರ್ಹ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳು www.ssp.postmatric.karnataka.gov.in ನಲ್ಲಿ ಅರ್ಜಿಗಳನ್ನು ಜೂನ್ 30ರೊಳಗೆ ಸಲ್ಲಿಸಬೇಕು. ವಿದ್ಯಾರ್ಥಿಗಳು ಬ್ಯಾಂಕಿಗೆ ಭೇಟಿ ನೀಡಿ, ಅವರ ಆಧಾರ್ ಸಂಖ್ಯೆಯನ್ನು NPCI (National Payment Corporation of India)ರಲ್ಲಿ ಬ್ಯಾಂಕ್ ಖಾತೆಗೆ ಆಧಾರ್ ಸೀಡಿಂಗ್ ಮಾಡಿಸುವುದು ಕಡ್ಡಾಯವಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಪಡುವಾರಹಳ್ಳಿಯಲ್ಲಿರುವ ಆದಿಪಂಪ ರಸ್ತೆಯ ಡಾ. ಬಾಬು ಜಗಜೀವನರಾಂ ಭವನ ಕಟ್ಟಡದಲ್ಲಿರುವ ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರು ಗ್ರೇಡ್–1 ಅವರ ದೂ.ಸಂ:0821–2520910 ಅವರನ್ನು ಸಂಪರ್ಕಿಸಬಹುದು.

'ಯೋಗ ಸಂಗೀತ, ಮೈಸೂರು ಪರಂಪರೆ' ಕೃತಿ ಬಿಡುಗಡೆ

ಮೈಸೂರು, ಜೂ.22(ಎಸ್‌ಪಿಎನ್)– ಮುಮ್ಮಡಿ ಕೃಷ್ಣರಾಜ ಒಡೆಯರ್ ಯೋಗ ಕಲಿತು 108 ಯೋಗಾಸನಗಳನ್ನು ಪ್ರದರ್ಶಿಸಿದರೆ, ಮೈಸೂರಿನ ಯೋಗಗುರು ತಿರುಮಲಾ ಕೃಷ್ಣಮಾಚಾರ್ ಅವರು ದೇಶದಾದ್ಯಂತ ಯೋಗ ಪ್ರಚುರಪಡಿಸಿದ ಮಹನೀಯರು ಎಂದು ಮೈಸೂರು ರಾಜವಂಶಸ್ಥ, ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅಭಿಪ್ರಾಯಪಟ್ಟರು.

ಮೈಸೂರು ಉತ್ತನಹಳ್ಳಿಯ ವಿಜಯಗಿರಿಯಲ್ಲಿ ಓದುಗ ಪ್ರಕಾಶನ, ಮೈಸೂರು ಕಲ್ಚರಲ್ ಅಸೋಸಿಯೇಷನ್, ಭಾರತೀ ಯೋಗಧಾಮ ಸಹಯೋಗದಲ್ಲಿ ವಿಶ್ವ ಯೋಗ ದಿನಾಚರಣೆ ಅಂಗವಾಗಿ ನಡೆದ ಹಿರಿಯ ಪತ್ರಕರ್ತ ಐತಿಚಂಡ ರಮೇಶ್ ಉತ್ತಪ್ಪ ರಚಿತ 'ಯೋಗ ಸಂಗೀತ, ಮೈಸೂರು ಪರಂಪರೆ' ಪುಸ್ತಕ ಬಿಡುಗಡೆಗೊಳಿಸಿ ಮಾತನಾಡಿದರು.



ಹಿರಿಯ ಪತ್ರಕರ್ತ ಐತಿಚಂಡ ರಮೇಶ್ ಉತ್ತಪ್ಪ ರಚಿತ 'ಯೋಗ ಸಂಗೀತ, ಮೈಸೂರು ಪರಂಪರೆ' ಪುಸ್ತಕವನ್ನು ರಾಜವಂಶಸ್ಥ, ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಬಿಡುಗಡೆ ಮಾಡಿದರು.

ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ಸಂಗೀತ ಮತ್ತು ಯೋಗಕ್ಕೆ ತನ್ನದೇ ಆದ ಪರಂಪರೆ ಇದೆ. ಮುಮ್ಮಡಿ ಕೃಷ್ಣರಾಜ ಒಡೆಯರ್ 108 ಯೋಗಾಸನಗಳನ್ನು ಪ್ರದರ್ಶಿಸುತ್ತಿದ್ದರು. ಅದೇ ರೀತಿ ಮೈಸೂರಿನ ಯೋಗಗುರು ತಿರುಮಲಾ ಕೃಷ್ಣಮಾಚಾರ್ ದೇಶದಾದ್ಯಂತ ಯೋಗ ಪ್ರಚುರಪಡಿಸುತ್ತ, ಮೂರು ಸಾವಿರಕ್ಕೂ ಹೆಚ್ಚು ಆಸನಗಳನ್ನು ಪರಿಚಯಿಸಿದ್ದರು ಎಂದರು.

ಯೋಗದಲ್ಲಿ ದೇಹವನ್ನು ಸಹಜ ಸ್ಥಿತಿಯಿಂದ ಕ್ರಿಯಾಶೀಲತೆಗೆ ಹೇಗೆ ತೆಗೆದುಕೊಂಡು ಹೋಗಬೇಕೆಂಬುದನ್ನು ಕೃಷ್ಣಮಾಚಾರ್ ಹೇಳಿಕೊಟ್ಟಿದ್ದು ಮಾತ್ರವಲ್ಲದೇ ನಾವೆಲ್ಲರೂ ಭಾರತೀಯರಾಗಿ ಗುರು ಪರಂಪರೆ ನೀಡಿರುವ ರೀತಿಯಲ್ಲಿಯೇ ಯೋಗವನ್ನು ಉಳಿಸಿ, ಬೆಳೆಸಿಕೊಂಡು ಹೋಗಬೇಕಿದೆ ಎಂದರು. ಹಿರಿಯ ಪತ್ರಕರ್ತ ಐತಿಚಂಡ ರಮೇಶ್ ಉತ್ತಪ್ಪ ರಚಿತ 'ಯೋಗ ಸಂಗೀತದಲ್ಲಿ ಕುರಿತು ಅಮೂಲ್ಯ ಮಾಹಿತಿ ಇದ್ದು, ಈ ಪುಸ್ತಕವನ್ನು ಪ್ರತಿಯೊಬ್ಬರು ಅಧ್ಯಯನ ಮಾಡುವಂತೆ ಮನವಿ ಮಾಡಿದರು.

ಭಾರತೀಯ ಯೋಗಧಾಮ ಸಂಸ್ಥಾಪಕ ಡಾ.ಕೆ.ಎಲ್.ಶಂಕರನಾರಾಯಣ ಜೋಯ್ಸ್ ಮಾತನಾಡಿ, ವಿದೇಶದಲ್ಲಿ ಬಳಕೆಯಲ್ಲಿರುವ ಯೋಗಾಸನವನ್ನು ಗಮನಿಸಿದರೆ ಇದು ನಮ್ಮ ಕೊಡುಗೆಯೇ ಎಂಬ ಅನುಮಾನ ಬರುತ್ತದೆ. ಹಾಗಾಗಿ ಯೋಗವನ್ನು ರೂಪಾಂತರಗೊಳಿಸದೆ ಹಿರಿಯರಿಂದ ಬಳುವಳಿಯಾಗಿ ಬಂದಿರುವ ರೀತಿಯಲ್ಲಿಯೇ ಯೋಗ ಪರಂಪರೆಯನ್ನು ಮುಂದುವರಿಸುವುದು ಇಂದಿನ ಯುವ ಪೀಳಿಗೆಯ ಜವಾಬ್ದಾರಿ ಎಂದರು.

ಪ್ರಶಸ್ತಿ ಪ್ರದಾನ: ಯೋಗಗುರು ಪಿ.ಎನ್.ಗಣೇಶ್‌ಕುಮಾರ್, ಯೋಗ ತಜ್ಞ ಹಾಗೂ ಆಯುರ್ವೇದ ವೈದ್ಯ ಡಾ.ಎ.ಎಸ್.ಚಂದ್ರಶೇಖರ್ ಅವರಿಗೆ 'ದಿ ಸ್ಟಾರ್ ಆಫ್ ಯೋಗ ಪ್ರಶಸ್ತಿ', ಅಂತಾರಾಷ್ಟ್ರೀಯ ಯೋಗಪಟು ಅಮೂಲ್ಯ, ಅಂಕಿತಾ ಅವರಿಗೆ 'ದಿ ರೈಸಿಂಗ್ ಸ್ಟಾರ್ ಆಫ್ ಯೋಗ ಪ್ರಶಸ್ತಿ' ನೀಡಿ ಗೌರವಿಸಲಾಯಿತು. ವೇದಿಕೆಯಲ್ಲಿ ಕಾಂಗ್ರೆಸ್ ಮುಖಂಡ ಹಾಗೂ ಮುಡಾ ಮಾಜಿ ಅಧ್ಯಕ್ಷ ಎಚ್.ವಿ.ರಾಜೀವ್, ಪತ್ರಕರ್ತ ಐತಿಚಂಡ ರಮೇಶ್ ಉತ್ತಪ್ಪ, ಕಲಾವಿದ ರವೀಂದ್ರ ಹೆಗ್ಡೆ, ಮೈಸೂರು ಕಲ್ಚರಲ್ ಅಸೋಸಿಯೇಷನ್ ಅಧ್ಯಕ್ಷ ಎ.ಪಿ.ನಾಗೇಶ್, ಓದುಗ ಪ್ರಕಾಶನ ಸಂಸ್ಥೆಯ ಚಿಕ್ಕಪಾಳ್ಯ ಹಾಗೂ ಇತರರು ಇದ್ದರು. ಎಂ.ವಿ.ಯೋಗಾಸ್‌ನ ಯೋಗಪಟುಗಳು ಕಲಾತ್ಮಕ ಯೋಗವನ್ನು ಮೂರು ವಿಭಾಗಗಳಲ್ಲಿ ಪ್ರದರ್ಶಿಸಿ ಎಲ್ಲರ ಗಮನ ಸೆಳೆದರು. ಭಾರತೀ ಯೋಗಧಾಮದ ವಿದ್ಯಾರ್ಥಿಗಳು ಯೋಗ ಪ್ರದರ್ಶಿಸಿದರು.

ಮೈಸೂರು ಮಿತ್ರ ಭಾನುವಾರ 23 ಜೂನ್ 2024

ಕುಡುಕ ಯುವಕನಿಂದ ವೃದ್ಧೆ ಕೊಲೆ

ಮಂಡ್ಯ,ಜೂ.22– ಕುಡುಕ ಯುವಕನೊಬ್ಬ ಸಂಬಂಧಿ ವೃದ್ಧೆಯನ್ನು ಕ್ಷುಲ್ಲಕ ಕಾರಣಕ್ಕೆ ಕುಡಿದ ಮತ್ತಿನಲ್ಲಿ ಕತ್ತು ಕೊಯ್ದು ಹತ್ಯೆ ಮಾಡಿರುವ ಘಟನೆ ನಗರದ ಆನೆಕೆರೆ ಬೀದಿಯಲ್ಲಿ ಶನಿವಾರ ನಡೆದಿದೆ.

ಬಡಾವಣೆಯ ಕೆಂಪಮ್ಮ(80) ಹತ್ಯೆಯಾದ ವೃದ್ಧೆಯಾಗಿದ್ದು, ವೃದ್ಧೆಯ ಮೈದುನನ ಮಗ ಹರೀಶ್ ಎಂಬಾತನಿಂದ ಕೊಲೆ ನಡೆದಿದೆ. ಕುಡಿದ ಮತ್ತಿನಲ್ಲಿ ನಿತ್ಯವೂ ಗಲಾಟೆ ಮಾಡುತ್ತಿದ್ದ ಆರೋಪಿ ಹರೀಶನು ಮನೆಯೊಳಗೆ ಕತ್ತು ಕೊಯ್ದು ಕೊಲೆ ಮಾಡಿ ಪರಾರಿಯಾಗಿದ್ದಾನೆ. ಮೃದ ರಾಮಕೃಷ್ಣ ಜೊತೆ ವಾಸವಿದ್ದ ಕೆಂಪಮ್ಮನ ಜೊತೆ ಇಂದು ಕುಡಿದು ಬಂದು ವಾಗ್ವಾದಕ್ಕಿಳಿದಿದ್ದ ಹರೀಶ, ಬಳಿಕ ಮಾತಿಗೆ ಮಾತು ಬೆಳೆದು ಹತ್ಯೆ ಮಾಡಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ.

ಸ್ಥಳಕ್ಕೆ ಪೊಲೀಸರು ಭೇಟಿ ನೀಡಿ, ಪರಿಶೀಲನೆ ನಡೆಸಿದ್ದು, ಮಂಡ್ಯ ಸೆಂಟ್ರಲ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಆರೋಪಿಯ ಪತ್ತೆಗೆ ಪೊಲೀಸರು ಬಲೆ ಬೀಸಿದ್ದಾರೆ.

ಹಣ ಬಿಡುಗಡೆಯಾಗಿ ವರ್ಷಗಳೇ ಕಳೆದರೂ ನಡೆಯದ ಕಾಮಗಾರಿ

ಗುಂಡಿಬಿದ್ದ ರಸ್ತೆ ಸ್ಥಿತಿಯನ್ನು ಕಂಡು ತಕ್ಷಣ ಕಾಮಗಾರಿಗೆ ಸೂಚಿಸಿದ ಶಾಸಕ ಹೆಚ್.ಟಿ.ಮಂಜು



ಅಧಿಕಾರಿಗಳೊಂದಿಗೆ ಸ್ಥಳ ಪರಿಶೀಲನೆ ನಡೆಸುತ್ತಿರುವ ಶಾಸಕ ಹೆಚ್.ಟಿ.ಮಂಜು.

ಕೆ.ಆರ್.ಪೇಟೆ,ಜೂ.22– ಹಣ ಬಿಡುಗಡೆಯಾಗಿ ವರ್ಷಗಳೇ ಕಳೆದಿದ್ದರೂ ಕಾಮಗಾರಿ ನಡೆಯದೆ ನನೆಗುದಿಗೆ ಬಿದ್ದಿರುವ ಚಿಕ್ಕೋಸಹಳ್ಳಿ ಗ್ರಾಮದಿಂದ ಶ್ರವಣಬೆಳಗೊಳಕ್ಕೆ ಹೋಗುವ 60ಅಡಿ ಅಗಲದ ಒಂದೂಕಾಲು ಕಿ.ಮೀ ಉದ್ದದ ಮುಖ್ಯ ರಸ್ತೆಯ ಅಭಿವೃದ್ಧಿ ಕಾಮಗಾರಿಯನ್ನು ತಕ್ಷಣ ಆರಂಭಿಸುವಂತೆ ಶಾಸಕ ಹೆಚ್.ಟಿ. ಮಂಜು ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಎರಡೂವರೆ ವರ್ಷಗಳ ಹಿಂದೆ ಈ ರಸ್ತೆ ಅಭಿವೃದ್ಧಿ ಕಾಮಗಾರಿಗೆ 6ಕೋಟಿ ರೂಪಾಯಿ ಹಾಗೂ ರಸ್ತೆ ಅಗಲೀಕರಣದಿಂದ ಭೂಮಿ ಕಳೆದುಕೊಳ್ಳುವ ರೈತರಿಗೆ 3ಕೋಟಿ 79ಲಕ್ಷ ರೂ ಪರಿಹಾರ ಹಣ ಬಿಡುಗಡೆಯಾಗಿದ್ದರೂ ಇದೂವರೆಗೂ ಕಾಮಗಾರಿ ಆರಂಭಿಸದ ಕಾರಣ ಈ ಮಾರ್ಗದಲ್ಲಿ ಗುಂಡಿ–ಕೊರಕಲು ಉಂಟಾಗಿ ವಾಹನ ಮತ್ತು ಸಾರ್ವಜನಿಕರು ಸಂಚಾರಕ್ಕೆ ತೊಂದರೆಯಾಗುತ್ತಿದೆ ಎಂದು ಗ್ರಾಮಸ್ಥರಿಂದ ದೂರುಗಳು ಕೇಳಿ ಬಂದ ಹಿನ್ನೆಲೆಯಲ್ಲಿ ಶಾಸಕರು ಸ್ಥಳ ಪರಿಶೀಲನೆ ನಡೆಸಿ ಈ ಸೂಚನೆ ನೀಡಿದರು.

ಗ್ರಾಮದ ಮುಖಂಡರು ಹಾಗೂ ಲೋಕೋಪಯೋಗಿ ಇಲಾಖೆ, ಕಂದಾಯ ಇಲಾಖೆ, ಸರ್ವೆ ಇಲಾಖೆ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳ ತಂಡದೊಂದಿಗೆ ಚಿಕ್ಕೋಸಹಳ್ಳಿ ಗ್ರಾಮದಲ್ಲಿ ಗುಂಡಿ ಬಿದ್ದು ಮಳೆ ನೀರು ನಿಂತು ಕೆರೆಯಂತಾಗಿರುವ ರಸ್ತೆಯನ್ನು ವೀಕ್ಷಣೆ ಮಾಡಿದ ಶಾಸಕರು ಕೂಡಲೇ ಕಾಮಗಾರಿಯನ್ನು ಆರಂಭಿಸಬೇಕು ಎಂದರು.

ಇದೇ ರೀತಿ ಗುಂಡಿ ಕೊರಕಲು ಇದ್ದ ಕಾರಣ 2009ರ ಫೆಬ್ರವರಿ 24ರಂದು ಕೆಎಸ್‌ಆರ್‌ಟಿಸಿ ಬಸ್ ಮಗುಚಿ 6ಮಂದಿ ಪ್ರಯಾಣಿಕರು ಪ್ರಾಣ ಕಳೆದುಕೊಂಡಿದ್ದರು. ಆಗ ಸಿಎಂ ಆಗಿದ್ದ ಬಿ.ಎಸ್.ಯಡಿಯೂರಪ್ಪ ಅವರು ರಸ್ತೆ ಅಗಲೀಕರಣದೊಂದಿಗೆ ರಸ್ತೆಯ ಅಭಿವೃದ್ಧಿ ಕಾಮಗಾರಿಗೆ ಸೂಚನೆ ನೀಡಿದ್ದರು. ಈ ಹಿನ್ನೆಲೆಯಲ್ಲಿ ಸದರಿ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಅನುದಾನ ಬಿಡುಗಡೆಯಾಗಿ ಸುಮಾರು ಎರಡೂವರೆ ವರ್ಷ ಕಳೆದರೂ ಕಾಮಗಾರಿ ಆರಂಭಿಸದೇ ಇರುವ ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳ ವಿರುದ್ಧ ಶಾಸಕರು ಅಸಮಾಧಾನ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ತಹಸೀಲ್ದಾರ್ ನಿಸರ್ಗ ಪ್ರಿಯ, ಲೋಕೋಪಯೋಗಿ ಇಲಾಖೆಯ ಕಾರ್ಯಪಾಲಕ ಅಭಿಯಂತರ ರಾಜು, ಸಹಾಯಕ ಕಾರ್ಯಪಾಲಕ ಮಂಜುನಾಥ್, ಕಿರಿಯ ಇಂಜಿನಿಯರ್ ಶಿವಕುಮಾರ್, ತಾಲೂಕು ಸರ್ವೆ ಇಲಾಖೆ ಎಡಿಎಲ್‌ಆರ್ ಸಿದ್ದಯ್ಯ, ಕಸಬಾ ಹೋಬಳಿ ರಾಜಸ್ವ ನಿರೀಕ್ಷಕ ಜ್ಞಾನೇಶ್, ಅಗ್ರಹಾರ ಬಾಚಹಳ್ಳಿ ವೃತ್ತದ ಗ್ರಾಮ ಲೆಕ್ಕಾಧಿಕಾರಿ ಸುನಿಲ್, ಶಾಸಕರ ಆಪ್ತ ಸಹಾಯಕ ಅರಳಕುಪ್ಪೆ ಪ್ರತಾಪ್, ಸೇರಿದಂತೆ ಉಪಸ್ಥಿತರಿದ್ದರು.

ಅರ್ಜಿ ಸಲ್ಲಿಸಲು ಅವಧಿ ವಿಸ್ತರಣೆ

ಮಂಡ್ಯ,ಜೂ.22– ನಾಗಮಂಗಲ ಪಾಲಿಟೆಕ್ನಿಕ್ ಸಂಸ್ಥೆಯಲ್ಲಿ 2024–25ನೇ ಸಾಲಿನಲ್ಲಿ ಲ್ಯಾಟರಲ್ ಎಂಟ್ರಿ ಸ್ಕೀಂನಡಿ ನೇರವಾಗಿ 2ನೇ ವರ್ಷ/3ನೇ ಸೆಮಿಸ್ಟರ್‌ಗೆ ಡಿಪ್ಲೊಮಾ ಕೋರ್ಸ್‌ಗಳಾದ ಸಿವಿಲ್ ಇಂಜಿನಿಯರಿಂಗ್, ಮೆಕ್ಯಾನಿಕಲ್ ಇಂಜಿನಿಯರಿಂಗ್, ಎಲೆಕ್ಟ್ರಾನಿಕ್ ಅಂಡ್ ಕಮ್ಯೂನಿಕೇಷನ್, ಕಂಪ್ಯೂಟರ್ ಇಂಜಿನಿಯರಿಂಗ್, ಎಲೆಕ್ಟ್ರಿಕಲ್ ಇಂಜಿನಿಯರಿಂಗ್ ಅಂಡ್ ಎಲೆಕ್ಟ್ರಿಕ್ ವೆಹಿಕಲ್ ಟೆಕ್ನಾಲಜಿ, ಆಲ್ಟರ್ನೇಟ್ ಎನರ್ಜಿ ಟೆಕ್ನಾಲಜಿ ಕೋರ್ಸ್‌ಗಳ ಪ್ರವೇಶಾತಿಗಾಗಿ 2ವರ್ಷಗಳ ಐಟಿಐ/ದ್ವಿತೀಯ ಪಿಯುಸಿ (ವಿಜ್ಞಾನ ತಾಂತ್ರಿಕ ವಿಷಯಗಳಲ್ಲಿ ಉತ್ತೀರ್ಣರಾದವರಿಗೆ ಆಫ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಅರ್ಜಿ ಸಲ್ಲಿಸಲು ಜೂನ್ 25 ಕೊನೆಯ ದಿನಾಂಕವಾಗಿದ್ದು ಆದರೆ ಅರ್ಜಿಯನ್ನು ಜೂ.29 ರವರೆಗೆ ವಿಸ್ತರಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ DTE.karnataka.gov.in ವೆಬ್‌ಸೈಟ್‌ನ್ನು ಸಂಪರ್ಕಿಸಬಹುದು ಎಂದು ನಾಗಮಂಗಲ ಸರ್ಕಾರಿ ಪಾಲಿಟೆಕ್ನಿಕ್ ಪ್ರಾಂಶುಪಾಲರು ಪ್ರಕಟಣೆಯಲ್ಲಿ ತಿಳಿಸಿರುತ್ತಾರೆ.

ಮನ್‌ಮುಲ್ ವತಿಯಿಂದ ಗುಂಪು ವಿಮೆ ಜಾರಿಗೆ



ಪಾಂಡವಪುರ ತಾಲೂಕಿನ ಮೇಲುಕೋಟೆ ಡೇರಿ ಹಾಲು ಉತ್ಪಾದಕರಿಗೆ ಮನ್‌ಮುಲ್ ನಿರ್ದೇಶಕ ಕಾಡೇನಹಳ್ಳಿ ರಾಮಚಂದ್ರು ಅವರು ಸಬ್ಸಿಡಿ ದರದಲ್ಲಿ ರಬ್ಬರ್ ಮ್ಯಾಟ್ ವಿತರಿಸಿದರು.

ಪಾಂಡವಪುರ: ಮನ್‌ಮುಲ್ ವತಿಯಿಂದ ಗುಂಪು ವಿಮೆ ಯೋಜನೆಯನ್ನು ಜಾರಿಗೆ ತಂದಿದ್ದು ಹಾಲು ಉತ್ಪಾದಕರು ಹಾಗೂ ಷೇರುದಾರು ಕಡ್ಡಾಯವಾಗಿ ವಿಮೆ ಮಾಡಿಸಬೇಕೆಂದು ಮನ್‌ಮುಲ್ ನಿರ್ದೇಶಕ ಕಾಡೇನಹಳ್ಳಿ ರಾಮಚಂದ್ರು ಮನವಿ ಮಾಡಿದರು.

ತಾಲೂಕಿನ ಮೇಲುಕೋಟೆ ಹಾಲು ಉತ್ಪಾದಕರ ಸಹಕಾರ ಸಂಘದ ಹಾಲು ಉತ್ಪಾದಕರಿಗೆ ಮನ್‌ಮುಲ್ ಒಕ್ಕೂಟದಿಂದ ಸಬ್ಸಿಡಿ ದರದಲ್ಲಿ ನೀಡಲಾಗುವ ರಬ್ಬರ್ ಮ್ಯಾಟ್‌ಗಳನ್ನು ಶನಿವಾರ ವಿತರಿಸಿ ಬಳಿಕ ಮಾತನಾಡಿದರು.

ಗುಂಪು ವಿಮೆಗೆ ಒಳಪಡಲು ಹಾಲು ಉತ್ಪಾದಕರು 200 ರೂ, ಹಾಗೂ ಷೇರುದಾರರು 400 ರೂ, ಪಾವತಿಸಬೇಕು. ವಿಮೆ ಪಡೆದ ಕುಟುಂಬದ ಸದಸ್ಯರು ಆಕಸ್ಮಿಕ ಮರಣ ಹೊಂದಿದ್ದಲ್ಲಿ 50 ಸಾವಿರ ವಿಮೆ ಹಣ ಪಡೆಯಬಹುದು. ಈ ಹಣ ಕಷ್ಟ ಕಾಲದಲ್ಲಿ ನೆರವಿಗೆ ಬರುತ್ತದೆ. ಆದರೆ ಉತ್ಪಾದಕರು ವಿಮೆ ಮಾಡಿಸಲು ನಿರ್ಲಕ್ಷ್ಯ ತೋರುತ್ತಿರುವುದು ಸರಿಯಲ್ಲ. ಜೂ.21 ರಿಂದ ಜು.20 ರವರೆಗೆ ಒಕ್ಕೂಟದಿಂದ ವಿಮೆ ಮಾಡಿಸಲಾಗುತ್ತಿದ್ದು, ಡೇರಿ ಕಾರ್ಯದರ್ಶಿಗಳು ಉತ್ಪಾದಕರಿಗೆ ವಿಮೆ ಬಗ್ಗೆ ಅರಿವು ಮೂಡಿಸಿ ಪ್ರತಿಯೊಬ್ಬರನ್ನು ವಿಮೆ ವ್ಯಾಪ್ತಿಗೆ ತರಬೇಕು. ಅದೇ ರೀತಿ ರಾಸುಗಳಿಗೂ ಕೂಡ ವಿಮೆ ಮಾಡಿಸಬೇಕು ಎಂದು ಸಲಹೆ ನೀಡಿದರು.

ಸಂದರ್ಭದಲ್ಲಿ ಮನ್‌ಮುಲ್ ಉಪವ್ಯವಸ್ಥಾಪಕ ಆರ್.ಪ್ರಸಾದ್, ಮಾರ್ಗವಿಸ್ತರಣಾಧಿಕಾರಿ ಪ್ರಜ್ವಲ್, ನಿರ್ದೇಶಕರಾದ ವೀರಪ್ಪ, ಬಲರಾಮು, ನಂದಕುಮಾರ್, ಮಂಜುಳಾ, ಗೀತಾ ಯೋಗನರಸಿಂಹೇಗೌಡ ಇತರರು ಇದ್ದರು.

ಸೆಪ್ಟೆಂಬರ್‌ನಲ್ಲಿ ಜಿಲ್ಲಾ ಬುದ್ಧಿಸ್ಟ್ ಸಮಾವೇಶ



ಮಂಡ್ಯ,ಜೂ.22– ಮುಂಬರುವ ಸೆಪ್ಟೆಂಬರ್ ತಿಂಗಳ ಮಧ್ಯಭಾಗದಲ್ಲಿ ಮಂಡ್ಯ ಜಿಲ್ಲಾ ಬುದ್ಧಿಸ್ಟ್ ಸಮಾವೇಶವನ್ನು ಆಯೋಜಿಸಲು ನಿರ್ಣಯಿಸಲಾಗಿದೆ ಎಂದು ಜಿಲ್ಲಾ ಬುದ್ಧ ಒಕ್ಕೂಟದ ಗೌರವಾಧ್ಯಕ್ಷ ವಿಧಾನಪರಿಷತ್ ಮಾಜಿ ಸದಸ್ಯ ಡಿ.ಎಸ್.ವೀರಯ್ಯ ತಿಳಿಸಿದರು.

ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬೌದ್ಧ ಧರ್ಮ ಜನರು ನಂಬುವ ಮಾನವ ಧರ್ಮವಾಗಿದೆ. ಯುವ ಜನಾಂಗ ಈ ಧರ್ಮದತ್ತ ಆಕರ್ಷಿತವಾಗುತ್ತಿದ್ದಾರೆ. ತತ್ವ ಸಿದ್ಧಾಂತದ ಮೇಲೆ ಈ ಧರ್ಮ ಸ್ಥಾಪಿತವಾಗಿದೆ. ಈ ಧರ್ಮದ ಹೆಸರಿನಲ್ಲಿ ಕೆಲವು ಸಂಘಟನೆಗಳು ಸ್ಥಾಪಿತಗೊಂಡಿದ್ದು ಆದರೆ ಬಲಿಷ್ಠವಾಗಿಲ್ಲ ಹಾಗಾಗಿ ಮಂಡ್ಯ ಜಿಲ್ಲಾ ಬುದ್ಧ ಒಕ್ಕೂಟವನ್ನು ಸ್ಥಾಪಿಸಲಾಗಿದೆ ಎಂದರು.

ಈ ಸಂಘಟನೆ ಜಾತ್ಯಾತೀತ ಸಂಘಟನೆಯಾಗಿದ್ದು ಈ ಬಗ್ಗೆ ಸಭೆಯಲ್ಲಿ ಹಲವು ನಿರ್ಣಯಗಳನ್ನು ತೆಗೆದುಕೊಳ್ಳಲಾಗಿದೆ. ಬುದ್ಧ ಒಕ್ಕೂಟದ ಗೌರವಾಧ್ಯಕ್ಷರಾಗಿ ಡಿ.ಎಸ್. ವೀರಯ್ಯ, ಸಾಹಿತಿ ಮಾಯಿಗೌಡ, ದಲಿತ ಸಂಘರ್ಷ ಸಮಿತಿ ಮುಖಂಡ ಗುರುಪ್ರಸಾದ್ ಕೆರಗೋಡು, ರೈತ ಸಂಘದ ಸುನಂದ ಜೈರಾಮ್, ಅಧ್ಯಕ್ಷರಾಗಿ ಡಾ.ಸೋಮಶೇಖರ್, ಕಾರ್ಯಾಧ್ಯಕ್ಷರಾಗಿ ಚಿಕ್ಕರಸಿನಕೆರೆ ಶಿವಲಿಂಗಯ್ಯ, ಉಪಾಧ್ಯಕ್ಷರಾಗಿ ಬಸವರಾಜು, ನಾಗರಾಜ್ ಅಂಬೇಡ್ಕರ್, ಆಳಯ್ಯ, ಪ್ರಧಾನ ಕಾರ್ಯದರ್ಶಿಗಳಾಗಿ ಗುರುಮೂರ್ತಿ, ಪಾಪಣ್ಣ, ಅಭಿಗೌಡ, ಸಹ ಕಾರ್ಯದರ್ಶಿಯಾಗಿ ವಸಂತಮ್ಮ, ಖಜಾಂಚಿಯಾಗಿ ಅನ್ನದಾನಿ, ಕಾನೂನು ಸಲಹೆಗಾರರಾಗಿ ಬಿ.ಟಿ.ವಿಶ್ವನಾಥ್ ಅವರನ್ನು ಆಯ್ಕೆ ಮಾಡಲಾಗಿದೆ ಎಂದರು.

ಸೆಪ್ಟೆಂಬರ್ ತಿಂಗಳ ಮಧ್ಯಭಾಗ ಅಥವಾ ಅಕ್ಟೋಬರ್ ತಿಂಗಳಿನಲ್ಲಿ ಮಂಡ್ಯ ಜಿಲ್ಲಾಮಟ್ಟದ ಬೃಹತ್ ಸಮಾವೇಶವನ್ನು ನಡೆಸಲಾಗುವುದು. ಇದಕ್ಕೆ ಪೂರ್ವಭಾವಿಯಾಗಿ ಜಿಲ್ಲೆಯ ಎಲ್ಲಾ ತಾಲೂಕುಗಳು, ಹೋಬಳಿ ಕೇಂದ್ರಗಳು ಮತ್ತು ಪಂಚಾಯಿತಿ ಕೇಂದ್ರಗಳಲ್ಲಿ ಸಮಿತಿಯನ್ನು ರಚಿಸಿ ಸಭೆ ನಡೆಸಲಾಗುವುದು. ಸಾಹಿತ್ಯ, ಕಾನೂನು ಸೇರಿದಂತೆ ಇನ್ನಿತರ ಸಮಿತಿಗಳನ್ನು ರಚಿಸಲಾಗಿದ್ದು ಸಮಾವೇಶ ಯಶಸ್ಸಿಗೆ ಕಾರ್ಯಕರ್ತರು ಶ್ರಮಿಸುವಂತೆ ಮನವಿ ಮಾಡಿದರು.

ಸಾಹಿತಿ ಮಾಯಿಗೌಡ ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಬೌದ್ಧ ಧರ್ಮ ಅಳಿಸಿ ಹೋಗುತ್ತಿದ್ದರೂ, ಮತ್ತೆ ಪುನಶ್ಚೇತನಗೊಳ್ಳುತ್ತಿದೆ. ಮನುಷ್ಯನಲ್ಲಿ ಶಾಂತಿ, ಸೌಹಾರ್ದತೆ, ಸಹೋದರತೆ, ಸಮಾನತೆ ಇರಬೇಕು. ಅಂತಹ ತತ್ವಗಳಿರುವ ಧರ್ಮ ಬೌದ್ಧ ಧರ್ಮವಾಗಿದೆ. ಬೌದ್ಧ ಧರ್ಮ ಬಂದೂಕಿನಿಂದ ಹೆದರಿಸಿ ಮತಾಂತರ ಮಾಡುವ ಧರ್ಮವಲ್ಲ. ಆದರೆ ಈ ಧರ್ಮದತ್ತ ಕೆಲವರು ಆಸಕ್ತಿ ಹೊಂದಿದ್ದಾರೆ. ಬೌದ್ಧ ಧರ್ಮ ಕೋಮು ಸೀಮಿತ ಧರ್ಮವಲ್ಲ. ಶ್ರೇಣೀಕೃತ, ಮೇಲು, ಕೀಳು ಎನ್ನುವ ಧರ್ಮವಲ್ಲ. ಎಲ್ಲರೂ ಬದುಕುವ ಧರ್ಮವಾಗಿದೆ ಎಂದು ತಿಳಿಸಿದರು.

ಒಕ್ಕೂಟದ ಕಾರ್ಯಾಧ್ಯಕ್ಷ ಚಿಕ್ಕರಸಿನಕೆರೆ ಶಿವಲಿಂಗಯ್ಯ ಮಾತನಾಡಿ, ಸಮಾನತೆಗೆ ಸಹಬಾಳ್ವೆಗೆ ಬುದ್ಧನ ಸಂದೇಶ ಅವಶ್ಯಕವಾಗಿದೆ. ಈ ನಿಟ್ಟಿನಲ್ಲಿ ಪ್ರಗತಿಪರ ಚಿಂತಕರು, ಬುದ್ಧನ ಅನುಯಾಯಿಗಳು ಬುದ್ಧನ ಸಂದೇಶವನ್ನು ಸಾರುವ ನಿಟ್ಟಿನಲ್ಲಿ ಮಂಡ್ಯ ಜಿಲ್ಲೆ ಯಲ್ಲಿ ಜಿಲ್ಲಾಮಟ್ಟದ ಬೌದ್ಧ ಸಮ್ಮೇಳನವನ್ನು ಆಚರಿಸಲಾಗುತ್ತಿದ್ದು ಕಾರ್ಯಕರ್ತರು ಈ ಕಾರ್ಯಕ್ರಮವನ್ನು ಯಶಸ್ವಿಗೊಳಿಸುವಂತೆ ಮನವಿ ಮಾಡಿದರು.

ಪತ್ರಿಕಾಗೋಷ್ಠಿಯಲ್ಲಿ ಒಕ್ಕೂಟದ ದೇವರಾಜ ಕೊಪ್ಪ, ಅಭಿಗೌಡ, ಪ್ರಕಾಶ್ ಬ್ಯಾಡರಹಳ್ಳಿ, ಟಿ.ಎಸ್.ಹಾಳಯ್ಯ ಸೇರಿದಂತೆ ಇತರರಿದ್ದರು.

ರೈಲು ಡಿಕ್ಕಿ ಹೊಡೆದು ಹಳಿ ದಾಟಲೆತ್ನಿಸಿದ ಮಹಿಳೆ ಸಾವು

ಮಂಡ್ಯ,ಜೂ.22– ಹನಕೆರೆ ಬಳಿ ಹಳಿ ದಾಟುವಾಗ ರೈಲಿಗೆ ಸಿಲುಕಿ ಮಹಿಳೆಯೊಬ್ಬರು ದಾರುಣ ಸಾವನ್ನಪ್ಪಿರುವ ಘಟನೆ ಶನಿವಾರ ಬೆಳಿಗ್ಗೆ ಸಂಭವಿಸಿದೆ.

ಹೊನ್ನಗಳ್ಳಿ ಮಠದ ನಿಂಗಮ್ಮ (70) ಮೃತ ದುರ್ದೈವಿ. ಮಂಡ್ಯಕ್ಕೆ ತೆರಳಲು ಹನಕೆರೆ ಗೇಟ್‌ಗೆ ತೆರಳುವಾಗ ತಿರುಪತಿ ಎಕ್ಸ್‌ಪ್ರೆಸ್ ರೈಲು ಬರುತ್ತಿದ್ದ ಹಿನ್ನೆಲೆಯಲ್ಲಿ ರೈಲ್ವೆ ಗೇಟ್ ಬಂದ್ ಮಾಡಲಾಗಿತ್ತು. ಆದರೂ ನುಸುಳಿ ಹಳಿ ದಾಟಲು ಮುಂದಾದಾದ ಮಹಿಳೆಗೆ ರೈಲು ವೇಗವಾಗಿ ಬಂದು ಡಿಕ್ಕಿ ಹೊಡೆದಿದೆ. ಡಿಕ್ಕಿ ರಭಸಕ್ಕೆ 100 ಮೀಟರ್ ದೂರ ಮಹಿಳೆ ದೇಹ ಎಸೆಯಲ್ಪಟ್ಟು ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಸ್ಥಳಕ್ಕೆ ಮಂಡ್ಯ ರೈಲ್ವೆ ಹೊರಠಾಣೆ ಪೊಲೀಸರು ಭೇಟಿ ನೀಡಿ ತನಿಖೆ ಆರಂಭಿಸಿದ್ದಾರೆ. ಹನಕೆರೆ ಬಳಿ 20ಕ್ಕೂ ಹೆಚ್ಚು ಗ್ರಾಮಗಳಿಗೆ ಸಂಪರ್ಕ ಕಲ್ಪಿಸುವ ದಾರಿಗೆ ಮೇಲ್ಸೇತುವೆ ನಿರ್ಮಿಸುವ ಬಗ್ಗೆ ಹಲವು ವರ್ಷಗಳ ಬೇಡಿಕೆ ಇದ್ದರೂ ಹಲವು ಕಾರಣಗಳಿಂದ ನೆರವೇರದೆ ಸಾರ್ವಜನಿಕರಿಗೆ ತೀವ್ರ ಅನಾನುಕೂಲವಾಗಿದೆ. ಇದರಿಂದಾಗಿ ಅಪಘಾತಗಳಿಗೆ ಆಹ್ವಾನ ನೀಡಿದಂತಾಗಿದೆ

ದ್ವಿತೀಯ ಪಿಯುಸಿ ಪರೀಕ್ಷೆ– 03ಕ್ಕೆ ಮಂಡ್ಯ ಜಿಲ್ಲೆಯಲ್ಲಿ 1717 ವಿದ್ಯಾರ್ಥಿಗಳು ನೋಂದಣಿ

ಮಂಡ್ಯ, ಜೂ.22–ಜಿಲ್ಲೆಯಲ್ಲಿ ಜೂನ್ 24 ರಿಂದ ಜುಲೈ 5 ರವರೆಗೆ ದ್ವಿತೀಯ ಪಿಯುಸಿ ಪರೀಕ್ಷೆ–3 ನಡೆಯಲಿದ್ದು ಒಟ್ಟು 1717 ವಿದ್ಯಾರ್ಥಿಗಳು ಪರೀಕ್ಷೆ ಬರೆಯಲು ಹೆಸರು ನೋಂದಾಯಿಸಿಕೊಂಡಿದ್ದಾರೆ ಎಂದು ಜಿಲ್ಲಾಧಿಕಾರಿ ಕಚೇರಿ ಸಹಾಯಕರಾದ ಡಾ.ರೋಹಿಣಿ ಅವರು ಹೇಳಿದರು.

ಇಂದು ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ನಡೆದ 3ನೇ ಹಂತದ ದ್ವಿತೀಯ ಪಿಯುಸಿ ಪರೀಕ್ಷೆ ನಡೆಸುವುದರ ಸಂಬಂಧ ಸಭೆ ನಡೆಸಿ ಮಾತನಾಡಿದರು. ಜಿಲ್ಲೆಯ 07 ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷೆ ನಡೆಯುತ್ತಿದ್ದು ಒಟ್ಟು 1717 ವಿದ್ಯಾರ್ಥಿಗಳು ಪರೀಕ್ಷೆಗೆ ನೋಂದಣಿಯಾಗಿದ್ದಾರೆ. ಪರೀಕ್ಷಾ ಸಮಯವು ಬೆಳಿಗ್ಗೆ 10.15 ರಿಂದ 1.30 ರವರೆಗೆ ನಡೆಯಲಿದೆ ಮತ್ತು ಎನ್‌ಎಸ್‌ಕ್ಯೂಎಫ್ ವಿಷಯಾಧಾರಿತ ಪರೀಕ್ಷೆಗಳು 2.15 ರಿಂದ 4.30 ರವರೆಗೆ ನಡೆಯುತ್ತವೆ ಎಂದು ಹೇಳಿದರು.

ಪರೀಕ್ಷೆಯು ನಡೆಯುವ ದಿನಗಳಂದು ಪರೀಕ್ಷಾ ಕೇಂದ್ರಗಳ ಸುತ್ತಲೂ 200ಮೀ ಸುತ್ತಳತೆಯಲ್ಲಿ 144ನೇ ಕಲಂ ಜಾರಿಗೊಳಿಸಬೇಕು ಮತ್ತು ಪರೀಕ್ಷಾ ಕೇಂದ್ರಗಳ ಸುತ್ತಮುತ್ತಲಿನ ಜೆರಾಕ್ಸ್ ಅಂಗಡಿಗಳನ್ನು ಮುಚ್ಚಿಸಬೇಕು ಎಂದರು. ಜಿಲ್ಲಾ ಖಜಾನೆಯಿಂದ ಸಂಬಂಧಿಸಿದ ಪರೀಕ್ಷಾ ಕೇಂದ್ರಗಳಿಗೆ ಪ್ರಶ್ನೆ ಪತ್ರಿಕೆ ವಿತರಿಸಲು ಪ್ರಶ್ನೆಪತ್ರಿಕೆ ಮಾರ್ಗಾಧಿಕಾರಿ ತಂಡಗಳಿಗೆ ಅಗತ್ಯವಿರುವ ವಾಹನಗಳ ಸೌಕರ್ಯವನ್ನು ಒದಗಿಸುವುದು ಎಂದರು.

ವಾರಾಂತ್ಯದಲ್ಲಿ ಡ್ರಂಕ್ ಅಂಡ್ ಡ್ರೈವ್ ತಪಾಸಣೆ; ಪ್ರವಾಸಿಗರಿಗೆ ಕಿರಿಕಿರಿ

ಮೈಸೂರು ಪ್ರವಾಸೋದ್ಯಮ ದೃಷ್ಟಿಯಿಂದ ಕೈಬಿಡಲು ಹೋಟೆಲ್‌ಗಳ ಸಂಘದ ಅಧ್ಯಕ್ಷ ನಾರಾಯಣಗೌಡರ ಮನವಿ



ಸಾಂದರ್ಭಿಕ ಚಿತ್ರ

ಮೈಸೂರು, ಜೂ.22– ಪ್ರವಾಸಿಗರ ಹಿತದೃಷ್ಟಿಯಿಂದ ವಾರಾಂತ್ಯ ದಿನಗಳಲ್ಲಿ ಹೆದ್ದಾರಿ ಹಾಗೂ ಮುಖ್ಯ ರಸ್ತೆಗಳಲ್ಲಿ ಡ್ರಂಕ್ ಅಂಡ್ ಡ್ರೈವ್ ತಪಾಸಣೆ ನಡೆಸದಂತೆ ಮೈಸೂರು ಜಿಲ್ಲಾ ಹೋಟೆಲುಗಳ ಸಂಘ ಮನವಿ ಮಾಡಿದೆ.

ಮೈಸೂರು ನಗರ ಸಂಚಾರ ಪೋಲೀಸರು ಶನಿವಾರ, ಬಾನುವಾರ ಹಾಗೂ ಸರ್ಕಾರಿ ರಜಾ ದಿನಗಳಲ್ಲಿ ಹೆದ್ದಾರಿ ಹಾಗೂ ಮುಖ್ಯ ರಸ್ತೆಗಳಲ್ಲಿ ಡ್ರಂಕ್ ಅಂಡ್ ಡ್ರೈವ್ ತಪಾಸಣೆ ನಡೆಸುವುದರಿಂದ ಸಂಚಾರಕ್ಕೆ ಅಡ್ಡಿಯಾಗುತ್ತದೆ. ವಾಹನಗಳು ಸಾಲುಗಟ್ಟಿ ನಿಲ್ಲುವುದರಿಂದ ಪ್ರವಾಸಿಗರು ಹೈರಾಣಾಗುತ್ತಾರೆ. ಪ್ರವಾಸಿಗರಿಗೆ ತೊಂದರೆಯಾದರೆ ನಗರದ ಪ್ರವಾಸೋದ್ಯಮದ ಮೇಲೆ ತೀವ್ರ ಪರಿಣಾಮ ಉಂಟಾಗುತ್ತದೆ ಎಂದು ಸಂಘದ ಅಧ್ಯಕ್ಷ ಸಿ.ನಾರಾಯಣ ಗೌಡ ಅಭಿಪ್ರಾಯಿಸಿದ್ದಾರೆ.

ಶನಿವಾರ ರಾತ್ರಿ 9.30ರ ಸಮಯದಲ್ಲಿ ಹಿನಕಲ್‌ನಿಂದ ಮೈಸೂರು ಕಡೆಗೆ ಬರುವಾಗ ಬಿ.ಎಂ. ಆಸ್ಪತ್ರೆ ಬಳಿ ಡ್ರಂಕ್ ಅಂಡ್ ಡ್ರೈವ್ ತಪಾಸಣೆ ನಡೆಸುತ್ತಿದ್ದ ಕಾರಣ ನೂರಾರು ವಾಹನಗಳು ಸಾಲುಗಟ್ಟಿದ್ದವು. ಪೆಟ್ರೋಲ್, ಡೀಸೆಲ್ ಬೆಲೆ ದುಬಾರಿ ಆಗಿರುವ ಸಂದರ್ಭದಲ್ಲಿ ಸುಮಾರು ಅರ್ಧ ಗಂಟೆ ಕಾಲ ಕಾದು ನಿಂತರೆ ಸಾರ್ವಜನಿಕರಿಗೆ ನಷ್ಟವಲ್ಲವೇ?. ಈ ಬಗ್ಗೆ ಪ್ರವಾಸಿಗರು ಯೋಚಿಸುವುದು ಸಹಜ ಅಲ್ಲವೇ?. ಹಾಗಾಗಿ ವಾರಾಂತ್ಯ ಹಾಗೂ ಇತರೆ ರಜಾ ದಿನಗಳಲ್ಲಿ ಹೆದ್ದಾರಿ, ಮುಖ್ಯ ರಸ್ತೆಗಳ ಹೊರತುಪಡಿಸಿ, ಬೇರೆ ಕಡೆ ತಪಾಸಣೆ ನಡೆಸಿದರೆ ಸಾರ್ವಜನಿಕರಿಗೆ ಕಿರಿಕಿರಿ ಹಾಗೂ ನಷ್ಟವಾಗುವುದು ತಪ್ಪುತ್ತದೆ. ಈ ನಿಟ್ಟಿನಲ್ಲಿ ಜಿಲ್ಲಾ ಉಸ್ತುವಾರಿ ಸಚಿವರು, ನಗರ ಪೊಲೀಸ್ ಆಯುಕ್ತರು ಸೂಕ್ತ ಕ್ರಮ ವಹಿಸಬೇಕೆಂದು ಸಂಘದ ಪರವಾಗಿ ಅವರು ಮನವಿ ಮಾಡಿದ್ದಾರೆ.

ನೀಟ್ ಮರು ಪರೀಕ್ಷೆಗೆ ಆಗ್ರಹಿಸಿ ವಿದ್ಯಾರ್ಥಿಗಳ ಪ್ರತಿಭಟನೆ



ನೀಟ್ ಮರುಪರೀಕ್ಷೆಗೆ ಆಗ್ರಹಿಸಿ ವಿದ್ಯಾರ್ಥಿಗಳು ಮಂಡ್ಯದಲ್ಲಿ ಪ್ರತಿಭಟನೆ ನಡೆಸಿದರು.

ಮಂಡ್ಯ,ಜೂ.22– ವೈದ್ಯಕೀಯ ಪ್ರವೇಶಾತಿ ನೀಟ್ ಪರೀಕ್ಷೆಯಲ್ಲಿ ನಡೆದಿರುವ ಅಕ್ರಮದ ಬಗ್ಗೆ ಉನ್ನತ ಮಟ್ಟದ ತನಿಖೆ ನಡೆಸಿ ಈಗಾಗಲೇ ನಡೆದಿರುವ ಪರೀಕ್ಷೆ ರದ್ದುಪಡಿಸಿ ಮರು ಪರೀಕ್ಷೆ ನಡೆಸಬೇಕು ಎಂದು ಆಗ್ರಹಿಸಿ ಭಾರತೀಯ ರಾಷ್ಟ್ರೀಯ ವಿದ್ಯಾರ್ಥಿ ಒಕ್ಕೂಟದ ನೇತೃತ್ವದಲ್ಲಿ ವಿದ್ಯಾರ್ಥಿಗಳು ಶನಿವಾರ ಪ್ರತಿಭಟನೆ ನಡೆಸಿದರು.

ನಗರದ ಜಯಚಾಮರಾಜೇಂದ್ರ ಒಡೆಯರ್ ವೃತ್ತದಿಂದ ಮೆರವಣಿಗೆ ಹೊರಟು ಜಿಲ್ಲಾಧಿಕಾರಿ ಕಚೇರಿಗೆ ತೆರಳಿ ಮನವಿ ಪತ್ರ ಸಲ್ಲಿಸಿದರು. ಬಳಿಕ ಮಾತನಾಡಿದ ಪ್ರತಿಭಟನಾಕಾರರು, ವೈದ್ಯಕೀಯ ಪ್ರವೇಶಾತಿಗೆ ದೇಶದಲ್ಲಿ ನಡೆದ ನೀಟ್ ಪರೀಕ್ಷೆಯಲ್ಲಿ ಭಾರಿ ಅಕ್ರಮ ನಡೆದಿರುವುದು ವೈದ್ಯಕೀಯ ಅಧ್ಯಯನ ಮಾಡಲು ಮುಂದಾಗಿದ್ದ ಲಕ್ಷಾಂತರ ವಿದ್ಯಾರ್ಥಿಗಳಿಗೆ ಅನ್ಯಾಯ ಮಾಡಿದಂತಾಗಿದೆ. ಪರೀಕ್ಷೆಯ ಪ್ರಶ್ನೆ ಪತ್ರಿಕೆ ಸೋರಿಕೆ ಜೊತೆಗೆ ಫಲಿತಾಂಶದಲ್ಲಿ 67 ವಿದ್ಯಾರ್ಥಿಗಳು ಪ್ರಥಮ ರ್‍ಯಾಂಕ್ ಬಂದಿರುವುದು ಅಷ್ಟೇ ಅಲ್ಲದೆ ಒಂದೇ ಪರೀಕ್ಷಾ ಕೇಂದ್ರದ ಎಂಟು ವಿದ್ಯಾರ್ಥಿಗಳು ಪ್ರಥಮ ರ್‍ಯಾಂಕ್ ಪಡೆದಿರುವುದು ಅಕ್ರಮ ನಡೆದಿರುವುದಕ್ಕೆ ಸಾಕ್ಷಿಯಾಗಿದೆ. ಪರೀಕ್ಷೆ ಬರೆದ ವಿದ್ಯಾರ್ಥಿಗಳಿಗೆ ತರಾತುರಿಯಲ್ಲಿ ಕೃಪಾಂಕ ನೀಡಿರುವುದು. ಲೋಕಸಭೆ ಚುನಾವಣಾ ಫಲಿತಾಂಶ ದಿನ ನೀಟ್ ಫಲಿತಾಂಶ ಪ್ರಕಟಿಸಿರುವುದು ಮತ್ತಷ್ಟು ಅನುಮಾನ ಹೆಚ್ಚಿಸಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ನೀಟ್ ಪರೀಕ್ಷೆ ಫಲಿತಾಂಶ ನಂತರ ದೇಶದಲ್ಲಿ ಕೆಲವು ವಿದ್ಯಾರ್ಥಿಗಳು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಹಾಡುವ ಸರ್ಕಾರ ವಿದ್ಯಾರ್ಥಿಗಳು ಪ್ರಾಣ ಕಳೆದುಕೊಳ್ಳದಂತೆ ಸೂಕ್ತ ನಿರ್ಧಾರ ತೆಗೆದುಕೊಳ್ಳಬೇಕಿದೆ. ಆ ನಿಟ್ಟಿನಲ್ಲಿ ನೀಟ್ ಪರೀಕ್ಷೆ ಅಕ್ರಮದ ಬಗ್ಗೆ ಉನ್ನತ ಮಟ್ಟದ ತನಿಖೆ ನಡೆಸಬೇಕು ಈಗಾಗಲೇ ಪರೀಕ್ಷೆ ರದ್ದುಪಡಿಸಿ ಕೂಡಲೇ ಮರು ಪರೀಕ್ಷೆ ನಡೆಬೇಕು ಎಂದು ಪ್ರತಿಭಟನಾನಿರತ ವಿದ್ಯಾರ್ಥಿಗಳು ಒತ್ತಾಯಿಸಿದರು.

ಒಕ್ಕೂಟದ ಮುಖಂಡರಾದ ಮಂಜು ಬಂಡೂರು, ದೀಲಿಪ್, ಉಲ್ಲಾಸ್, ಅನಿಲ್, ರಾಕೇಶ್, ನವ್ಯಶ್ರೀ, ಗೌತಮಿ, ತನುಶ್ರೀ, ಅಮೃತ, ಭಾನುಪ್ರಿಯ, ಸುಚಿತ್ರ ಭಾಗವಹಿಸಿದ್ದರು.

ಬಾಂಗ್ಲಾ ವಿರುದ್ಧ ಗೆದ್ದ ಭಾರತದ ಸೆಮಿಸ್ ಹಾದಿ ಸುಗಮ



ಆ್ಯಂಟಿಗಾ, ಜೂ.22– ಹಾರ್ದಿಕ್ ಪಾಂಡ್ಯ ಅವರ ಆಲ್‌ರೌಂಡ್ ಆಟ ಹಾಗೂ ಬೌಲರ್‌ಗಳ ಕರಾರುವಾಕ್ ಬೌಲಿಂಗ್ ದಾಳಿ ನೆರವಿನಿಂದ ಭಾರತ, ಬಾಂಗ್ಲಾದೇಶ ವಿರುದ್ಧ 50 ರನ್‌ಗಳ ಭರ್ಜರಿ ಜಯ ಸಾಧಿಸಿದೆ. ಆ ಮೂಲಕ ಟಿ20 ವಿಶ್ವಕಪ್ ಸೆಮಿ ಫೈನಲ್ ಹಾದಿ ಸುಗಮವಾಗಿದೆ.

ಇಲ್ಲಿನ ಸರ್ ವಿವಿಯನ್ ರಿಚರ್ಡ್ಸ್ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಸೂಪರ್ 8 ಹಂತದ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಭಾರತ ನಿಗದಿತ 20 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 196 ರನ್‌ಗಳ ಬೃಹತ್ ಮೊತ್ತ ಗಳಿಸಿತು. 197 ರನ್‌ಗಳ ಗೆಲುವಿನ ಗುರಿ ಬೆನ್ನಟ್ಟಿದ ಬಾಂಗ್ಲಾದೇಶ 20 ಓವರ್‌ಗಳಲ್ಲಿ 8 ವಿಕೆಟ್ ನಷ್ಟಕ್ಕೆ 146 ರನ್‌ಗಳಿಸಿ ಸೋಲನ್ನು ಅನುಭವಿಸಿತು.

ಬಾಂಗ್ಲಾ ಪರ ಇನ್ನಿಂಗ್ಸ್ ಆರಂಭಿಸಿದ ಲಿಟನ್ ದಾಸ್ 10 ಎಸೆತಗಳಲ್ಲಿ 13 ರನ್ ಗಳಿಸಿ ಔಟಾದರೆ ಹಾಗೂ ತಂಜೀದ್ ಹಸನ್ 31 ಎಸೆತಗಳಿಗೆ 29 ರನ್ ಗಳಿಸಿ ಪೆವಿಲಿಯನ್‌ಗೆ ಮರಳಿದರು. ತೌಹಿದ್ ಹೃದೋಯ್ 6 ಬಾಲ್‌ಗಳಿಗೆ 4 ರನ್ ಸಿಡಿಸಿ ವಿಕೆಟ್ ಒಪ್ಪಿಸಿದರು. ಬಳಿಕ ಬಂದ ಶಕೀಬ್ ಅಲ್ ಹಸನ್ 7 ಎಸೆತಗಳಿಗೆ 11 ರನ್ ಗಳಿಸಿ ಔಟಾದರು. ಬೂಮ್ರಾ ಮಾರಕ ಬೌಲಿಂಗ್ ದಾಳಿಗೆ ಬಾಂಗ್ಲಾ ತಂಡದ ನಾಯಕ ನಜ್ಮುಲ್ ಹೊಸೈನ್ ಶಾಂಟೋ 32 ಎಸೆತಗಳಲ್ಲಿ 40 ರನ್‌ಗಳಿಸಿ ವಿಕೆಟ್ ಒಪ್ಪಿಸಿದರು. ಜಾಕಿರ್ ಅಲಿ 1, ರಶೀದ್ ಹೊಸೈನ್ 24, ರನ್, ಮಹಮ್ಮದುಲ್ಲಾ 13, ಮೆಹದಿ ಹಸನ್ 5 ಹಾಗೂ ತಂಜೀಮ್ ಹಸನ್ ಶಕೀಬ್ 1 ರನ್ ಗಳಿಸಿದರು. ಭಾರತದ ಪರ ಕುಲದೀಪ್ ಯಾದವ್ 3, ಬೂಮ್ರಾ, ಅರ್ಶದೀಪ್ ಸಿಂಗ್ ತಲಾ 2, ಹಾರ್ದಿಕ್ ಪಾಂಡ್ಯ ಒಂದು ವಿಕೆಟ್ ಕಬಳಿಸಿದರು.

ಇದಕ್ಕೂ ಮುನ್ನಾ ಮೊದಲು ಬ್ಯಾಟಿಂಗ್ ಮಾಡಿದ ಭಾರತ ಸ್ಫೋಟಕ ಆರಂಭ ಪಡೆಯಿತು. ಮೊದಲ ವಿಕೆಟ್‌ಗೆ ರೋಹಿತ್ ಶರ್ಮಾ ಹಾಗೂ ವಿರಾಟ್ ಕೊಹ್ಲಿ 39 ರನ್ ಜೊತೆಯಾಟವಾಡಿದರು. ನಾಯಕ ರೋಹಿತ್ ಶರ್ಮಾ 11 ಎಸೆತಗಳಲ್ಲಿ 23 ರನ್ ಸಿಡಿಸಿ ಶಕೀಬ್ ಅಲ್ ಹಸನ್‌ಗೆ ವಿಕೆಟ್ ಒಪ್ಪಿಸಿದರು. ಸತತ ವೈಫಲ್ಯದಿಂದ ಹೊರಬಂದು ಮೈಚಳಿ ಬಿಟ್ಟು ಬ್ಯಾಟ್ ಬೀಸಿದ ವಿರಾಟ್ ಕೊಹ್ಲಿ 28 ಎಸೆತಗಳಲ್ಲಿ 1 ಬೌಂಡರಿ ಹಾಗೂ 3 ಸಿಕ್ಸರ್ ಒಳಗೊಂಡ 37 ರನ್ ಗಳಿಸಿ ತಂಜಿಮ್ ಹಸನ್ ಶಕೀಬ್‌ಗೆ ವಿಕೆಟ್ ಒಪ್ಪಿಸಿದರು. ಇದರ ಬೆನ್ನಲ್ಲೇ ಅದೇ ಓವರ್‌ನಲ್ಲಿ ತಾವೆದುರಿಸಿದ ಮೊದಲ ಎಸೆತದಲ್ಲೇ ಸಿಕ್ಸರ್ ಚಚ್ಚಿದ ಸೂರ್ಯಕುಮಾರ್ ಯಾದವ್ ಮರು ಎಸೆತದಲ್ಲಿ ವಿಕೆಟ್ ಕೀಪರ್ ಲಿಟನ್ ದಾಸ್‌ಗೆ ಕ್ಯಾಚಿತ್ತು ಪೆವಿಲಿಯನ್ ಸೇರಿದರು.

ಮಧ್ಯಮ ಕ್ರಮಾಂಕದಲ್ಲಿ ಸ್ಫೋಟಕ ಬ್ಯಾಟಿಂಗ್ ನಡೆಸಿದ ರಿಷಬ್ ಪಂತ್ 24 ಎಸೆತಗಳಲ್ಲಿ 36 ರನ್ ಸಿಡಿಸಿದರೆ, ಶಿವಂ ದುಬೆ 3 ಸಿಕ್ಸರ್ ಸಹಿತ 34 ರನ್ ಬಾರಿಸಿ ವಿಕೆಟ್ ಒಪ್ಪಿಸಿದರು. ಇನ್ನು ಕೊನೆಯಲ್ಲಿ ಮಿಂಚಿನ ಬ್ಯಾಟಿಂಗ್ ನಡೆಸಿದ ಹಾರ್ದಿಕ್ ಪಾಂಡ್ಯ 27 ಎಸೆತಗಳಲ್ಲಿ 4 ಬೌಂಡರಿ ಹಾಗೂ 3 ಸಿಕ್ಸರ್ ಒಳಗೊಂಡ ಅಜೇಯ 50 ರನ್ ಸಿಡಿಸಿ ತಂಡಕ್ಕೆ ಆಸರೆಯಾದರು. ಬಾಂಗ್ಲಾ ಪರ ತಂಜಿಮ್ ಹಸನ್ ಶಕೀಬ್ ರಶಿದ್ ಹುಸೇನ್ ತಲಾ 2, ಶಕೀಬ್ ಅಲ್ ಹಸನ್ ಒಂದು ವಿಕೆಟ್ ಪಡೆದರು. ಹಾರ್ದಿಕ್ ಪಾಂಡ್ಯ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ಶಕ್ತಿಮಾನ್ ಭತ್ತದ ಕಟಾವು ಯಂತ್ರ ವಿತರಣೆ



ಮಂಡ್ಯ, ಜೂ.22–ಕೃಷಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎನ್ ಚಲುವರಾಯಸ್ವಾಮಿ ಅವರು ಜಿಲ್ಲಾ ಪಂಚಾಯತ್ ಆವರಣದಲ್ಲಿ ಶ್ರೀರಂಗಪಟ್ಟಣ ತಾಲೂಕಿನ ಫಲಾನುಭವಿ ಗಿರೀಶ್ ಅವರಿಗೆ ಶಕ್ತಿಮಾನ್ (ಪ್ಯಾಡಿ ಮಾಸ್ಟರ್ 3776) ಭತ್ತದ ಕಟಾವು ವಿತರಿಸಿದರು.

ಈ ಯಂತ್ರದ ಒಟ್ಟು ಮೊತ್ತ 31,50,000/–ರೂಗಳಾಗಿದ್ದು, ಸರ್ಕಾರದ ಸಹಾಯಧನ ರೂ 12,12,500/–ಹಾಗೂ ರೈತನ ವಂತಿಗೆ ರೂ 19,37,500/–ಗಳಾಗಿರುತ್ತದೆ.

ಈ ಯಂತ್ರದಲ್ಲಿ ಪ್ರತಿ ಗಂಟೆಗೆ ಒಂದು ಎಕರೆ ಭತ್ತದ ಗದ್ದೆಯನ್ನು ಕಟಾವು ಮಾಡಬಹುದು. ಪ್ರತಿ ಗಂಟೆಗೆ 8 ರಿಂದ 9 ಲೀಟರ್ ಡೀಸೆಲ್ ಬಳಕೆಯಾಗುತ್ತದೆ. 7 ಕ್ವಿಂಟಲ್ ಭತ್ತದ ಶೇಖರಣಾ ಸಾಮರ್ಥ್ಯ ಹೊಂದಿರುತ್ತದೆ.

ಇದೇ ಸಂದರ್ಭದಲ್ಲಿ ಶಾಸಕರಾದ ರಮೇಶ್ ಬಾಬು ಬಂಡಿಸಿದ್ದೇಗೌಡ, ಉದಯ್, ಜಿಲ್ಲಾಧಿಕಾರಿ ಡಾ.ಕುಮಾರ, ಕೃಷಿ ಇಲಾಖೆ ಪಾಂಡವಪುರ ಉಪವಿಭಾಗದ ಉಪನಿರ್ದೇಶಕಿ ಮಮತಾ ಸೇರಿದಂತೆ ಇನ್ನಿತರೆ ಗಣ್ಯರು ಉಪಸ್ಥಿತರಿದ್ದರು.

ಕುಮಾರಸ್ವಾಮಿ ವಿರುದ್ಧ ಅವಹೇಳನಕಾರಿ ಹೇಳಿಕೆ

ಮಹಿಳೆ ವಿರುದ್ಧ ಜೆಡಿಎಸ್ ದೂರು



ಕೆ.ಆರ್.ಪೇಟೆ,ಜೂ.22– ಕೇಂದ್ರ ಸಚಿವರಾದ ಎಚ್.ಡಿ.ಕುಮಾರಸ್ವಾಮಿ ಅವರ ಬಗ್ಗೆ ಸಾಮಾಜಿಕ ಜಾಲತಾಣದಲ್ಲಿ ಅತ್ಯಂತ ಹಗುರವಾಗಿ ಮಾತಾಡಿದ ಮಂಡ್ಯ ಮೂಲದ ಮಂಗಳ ಎಂಬ ಮಹಿಳೆಯ ವಿರುದ್ಧ ಪೊಲೀಸ್ ಠಾಣೆಗೆ ಜಿಲ್ಲಾ ಜೆಡಿಎಸ್ ಪ್ರಧಾನ ಕಾರ್ಯದರ್ಶಿ ಬಿ.ಎಂ.ಕಿರಣ್ ನೇತೃತ್ವದಲ್ಲಿ ದೂರು ನೀಡಿ ಮಹಿಳೆಯ ವಿರುದ್ಧ ಸೂಕ್ತ ಕಾನೂನು ಕ್ರಮ ಜರುಗಿಸಬೇಕು ಎಂದು ಮನವಿ ಮಾಡಲಾಯಿತು.

ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರಾದ ಹೆಚ್.ಡಿ.ಕುಮಾರಣ್ಣ ಅವರ ಬಗ್ಗೆ ಅತ್ಯಂತ ಕೀಳು ಭಾಷೆಯಲ್ಲಿ ಅವಾಚ್ಯವಾಗಿ ನಿಂದಿಸಿ ಸಾಮಾಜಿಕ ಜಾಲತಾಣಗಳಲ್ಲಿ ಹರಿಯಬಿಟ್ಟಿದ್ದು ಇದರಿಂದಾಗಿ ಈ ಮಣ್ಣಿನ ಮಗ ಬಡವರ ಬಂಧು ಎಂದೆ ಇಡೀ ರಾಜ್ಯದಲ್ಲಿ ಶ್ಲಾಘನೀಯಕ್ಕೆ ಕಾರಣರಾದ ಎಚ್.ಡಿ.ಕುಮಾರಣ್ಣನವರ ಬಗ್ಗೆ ಅವಮಾನಿಸಿರೋದು ನಿಜಕ್ಕೂ ಖಂಡನೀಯವಾದ ಸಂಗತಿಯಾಗಿದೆ, ಆದ್ದರಿಂದ ಮಂಡ್ಯ ಮೂಲದ ಈ ಮಂಗಳ ಎಂಬ ಮಹಿಳೆಯ ವಿರುದ್ಧ ಕೂಡಲೇ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕು ಜೆಡಿಎಸ್ ಕಾರ್ಯಕರ್ತರಿಗೆ ಹಾಗೂ ಅಭಿಮಾನಿಗಳಿಗೆ ನ್ಯಾಯ ಕೊಡಿಸಬೇಕೆಂದು ಒತ್ತಾಯಿಸಿ ಕಿಕ್ಕೇರಿ ಪೊಲೀಸ್ ಠಾಣೆಗೆ ಜಿಲ್ಲಾ ಜೆಡಿಎಸ್ ಪ್ರಧಾನ ಕಾರ್ಯದರ್ಶಿ ಹಾಗೂ ಸುಬ್ರಮಣ್ಯ ಸೇವಾ ಟ್ರಸ್ಟ್ ಅಧ್ಯಕ್ಷರಾದ ಬಿ.ಎಂ.ಕಿರಣ್ ನೇತೃತ್ವದಲ್ಲಿ ಅವರ ಅಭಿಮಾನಿಗಳು ದೂರು ನೀಡಿ ಮಂಗಳ ಎಂಬ ಮಹಿಳೆಯ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯ ಮಾಡಿದರು.

ಈ ಸಂದರ್ಭದಲ್ಲಿ ಆನೆಗೊಳ ಗ್ರಾಮ ಪಂಚಾಯಿತಿ ಮಾಜಿ ಉಪಾಧ್ಯಕ್ಷರಾದ ಕಡಹೆಮ್ಮಿಗೆ ರಮೇಶ್, ಬಾರೆ ಮಂಜು, ವಡಕಹಳ್ಳಿ ರಾಜೇಶ್, ಪೃಥ್ವಿರಾಜ್ ಮತ್ತಿತರರು ಉಪಸ್ಥಿತರಿದ್ದರು.

ಮಂಡ್ಯ ನಗರದ ಕೆಂಪೇಗೌಡ ಪಾರ್ಕ್ ಅಭಿವೃದ್ಧಿಗೆ ಕ್ರಮ

ಮಂಡ್ಯ,ಜೂ.22– ಮಂಡ್ಯ ನಗರದಲ್ಲಿರುವ ಪಾರ್ಕ್‌ಗಳ ಅಭಿವೃದ್ಧಿಗೆ 10 ಕೋಟಿ ರೂ ಸರ್ಕಾರದಿಂದ ಮಂಜೂರಾಗಿದ್ದು, ಕೆಂಪೇಗೌಡ ಪಾರ್ಕ್‌ನ್ನು ಅಭಿವೃದ್ಧಿಪಡಿಸಲಾಗುವುದು ಎಂದು ಮಂಡ್ಯ ಶಾಸಕ ಪಿ.ರವಿಕುಮಾರ್ ತಿಳಿಸಿದರು. ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ನಾಡಪ್ರಭು ಕೆಂಪೇಗೌಡ ಜಯಂತಿಯ ಪೂರ್ವಭಾವಿ ಸಿದ್ಧತಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಈ ಬಾರಿ ಬಿಡುಗಡೆಯಾಗಿರುವ ಅನುದಾನದಲ್ಲಿ ಪಾರ್ಕ್ ಅಭಿವೃದ್ಧಿಪಡಿಸಲಾಗುವುದು. ಮುಂದಿನ ದಿನಗಳಲ್ಲಿ ಸಂಘ ಸಂಸ್ಥೆಗಳು ಒಟ್ಟಿಗೆ ಸೇರಿ ಚರ್ಚಿಸಿ ಕೆಂಪೇಗೌಡ ಪ್ರತಿಮೆ ನಿರ್ಮಾಣ ಕುರಿತು ತೀರ್ಮಾನಿಸೋಣ ಎಂದು ಇದೇ ವೇಳೆ ತಿಳಿಸಿದರು.

ದೇಶ - ವಿದೇಶ

ವೈಎಸ್‌ಆರ್‌ಸಿ ಪಕ್ಷದ ಕಚೇರಿ ನೆಲಸಮಗೊಳಿಸಿದ ನೂತನ ಮುಖ್ಯಮಂತ್ರಿ ನಾಯ್ಡು ಸರ್ಕಾರ

ವಿಜಯವಾಡ: ಈ ಹಿಂದೆ ಆಡಳಿತದಲ್ಲಿದ್ದ ಆಂಧ್ರಪ್ರದೇಶದ ಮಾಜಿ ಮುಖ್ಯಮಂತ್ರಿ ವೈಎಸ್ ಜಗನ್ ಮೋಹನ್ ರೆಡ್ಡಿ ಅವರ ವೈಎಸ್‌ಆರ್‌ಸಿ ಪಕ್ಷದ ಕಚೇರಿಯನ್ನು ಶನಿವಾರ (ಜೂನ್ 22) ಧ್ವಂಸಗೊಳಿಸಲಾಗಿದೆ. ನೂತನ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಅಧಿಕಾರಕ್ಕೆ ಬರುತ್ತಿದ್ದಂತೆ ಆಂಧ್ರದಲ್ಲಿ ರಾಜಕೀಯ ಸಮರ ತೀವ್ರಗೊಂಡಿದ್ದು, ದ್ವೇಷದ ರಾಜಕಾರಣ ನಡೆಯುತ್ತಿದೆ ಎಂದು ಹೇಳಲಾಗುತ್ತಿದೆ. ಆಂಧ್ರಪ್ರದೇಶದ ರಾಜಧಾನಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಪ್ರಾಥಮಿಕ ಕ್ರಮವನ್ನು ಪ್ರಶ್ನಿಸಿ ಪಕ್ಷವು ಹೈಕೋರ್ಟ್ ಮೊರೆ ಹೋಗಿತ್ತು. ಎಲ್ಲಾ ರೀತಿಯ ನೆಲಸಮ ಚಟುವಟಿಕೆಗಳನ್ನು ನಿಷೇಧಿಸಿ ಹೈಕೋರ್ಟ್ ಆದೇಶ ನೀಡಿದ ನಂತರವೂ ಪಕ್ಷದ ಕಚೇರಿಯನ್ನು ನೆಲಸಮಗೊಳಿಸಲಾಗಿದೆ ಎಂದು ವೈಎಸ್‌ಆರ್‌ಸಿ ಪಕ್ಷ ಆರೋಪಿಸಿದ್ದು, ಸಿಎಂ ಚಂದ್ರಬಾಬು ನಾಯ್ಡು ಸರ್ವಾಧಿಕಾರಿ ಧೋರಣೆ ಅನುಸರಿಸುತ್ತಿದ್ದಾರೆ ಎಂದು ಆರೋಪಿಸಿದೆ.



ಅಯನ ಸಂಕ್ರಾಂತಿಗೆ ನಡೆಯಿತು ಬೆತ್ತಲೆ ಈಜಾಟ; ಈ ಬಾರಿ 3,000 ಮಂದಿ ಭಾಗಿ!

ಹೋಬಾರ್ಟ್: ಸಂಪೂರ್ಣ ಬೆತ್ತಲು. ಪುರುಷ–ಮಹಿಳೆ ಎಂಬ ಭೇದವಿಲ್ಲ. ಎಲ್ಲರೂ ಜೊತೆಯಾಗಿ ಈಜಾಟ. ಪ್ರತಿ ವರ್ಷ ಇಲ್ಲಿಗೆ ಆಗಮಿಸಿ ಬೆತ್ತಲಾಗಿ ಈಜುವವರ ಸಂಖ್ಯೆ ಹೆಚ್ಚಾಗಿದೆ. ಈ ಬಾರಿ 3,000ಕ್ಕೂ ಹೆಚ್ಚು ಪುರುಷರು–ಮಹಿಳೆಯರು ಈ ಬೆತ್ತಲೆ ಈಜಿನಲ್ಲಿ ಪಾಲ್ಗೊಂಡಿದ್ದಾರೆ. ಈ ವಿಡಿಯೋಗಳು, ಫೋಟೋ ಎಲ್ಲೆಡೆ ವೈರಲ್ ಆಗಿದೆ. ಅಷ್ಟಕ್ಕೂ ಬೆತ್ತಲೆ ಈಜು ಸಂಪ್ರದಾಯ ನಡೆಯುತ್ತಿರುವುದು ಆಸ್ಟ್ರೇಲಿಯಾದ ಹೊಬಾರ್ಟ್‌ನಲ್ಲಿ. ಇಲ್ಲಿನ ಡರ್ವೆಂಟ್ ನದಿಯಲ್ಲಿ ಈ ಬೆತ್ತಲೆ ಈಜು ಆಯೋಜನೆಗೊಳ್ಳುತ್ತದೆ. ಚಳಿಗಾಲದ ಸೊಲ್ಸ್‌ಟೈಸ್(ಅಯನ ಸಂಕ್ರಾಂತಿ)ನಲ್ಲಿ ಈ ಬೆತ್ತಲೆ ಈಜು ನಡೆಯುತ್ತಿದೆ. ಅಂದರೆ ಈ ಬಾರಿ ಜೂನ್ 21ರಂದು 3,000ಕ್ಕೂ ಹೆಚ್ಚು ಮಂದಿ ಬೆತ್ತಲಾಗಿ ಈಜಿ ಸಂಭ್ರಮಿಸಿದ್ದಾರೆ. ಈ ದಿನ ಪಾಶ್ಚಿಮಾತ್ಯ ದೇಶಗಳಲ್ಲಿ ಜನರು ಸಮುದ್ರದ ಕಿನಾರೆಯಲ್ಲಿ, ಸಮುದ್ರದಲ್ಲಿ ಈಜಾಡುತ್ತ ದಿನ ಕಳೆಯುತ್ತಾರೆ. ಚಳಿಗಾಲದ ಅಯನ ಸಂಕ್ರಾಂತಿ ದಿನ ಹಗಲು ಕಡಿಮೆ. ರಾತ್ರಿ ಹೆಚ್ಚು. ಇನ್ನು ರಾತ್ರಿ ವೇಳೆ ಕ್ಯಾಂಪ್ ಫೈರ್, ಪಾರ್ಟಿ ಹೀಗೆ ಹೊರಗಡೆ ಇರುತ್ತಾರೆ.



ಬೆತ್ತಲೆ ಈಜಿನಲ್ಲಿ ಪಾಲ್ಗೊಳ್ಳಲು ಏನೂ ಬೇಕಿಲ್ಲ. ಆದರೆ ಬಿಸಿ ನೀರು ಬೇಕೆ ಬೇಕು ಎಂದು ಬೆಕ್ ವೇಡ್ ಹೇಳಿದ್ದಾರೆ. ಕಾರಣ ಡರ್ವೆಂಟ್ ನದಿ ಸುತ್ತಮುತ್ತ, ನದಿಯ ತಡ ಎಲ್ಲವೂ ಮಂಜುಗಡ್ಡೆಯಾಗಿರುತ್ತದೆ. ಕೊರೆವ ಚಳಿಯಲ್ಲಿ ಈಜುವುದು ಸಾಹಸ. ಆದರೆ ಈಜಿ ದಡ ಸೇರಿದರೆ ಚಳಿಯಲ್ಲಿ ನಿಲ್ಲಲು ಸಾಧ್ಯವಿಲ್ಲ. ಈ ವೇಳೆ ಬೆಚ್ಚಗಿನ ನೀರು ಬೇಕೆ ಬೇಕು ಎಂದಿದ್ದಾರೆ.

ವಿದೇಶಿ ವಿದ್ಯಾರ್ಥಿಗಳಿಗೆ ಪದವಿ ಜೊತೆಗೆ ಗ್ರೀನ್ ಕಾರ್ಡ್: ಟ್ರಂಪ್ ಒಲವು

ವಾಷಿಂಗ್ಟನ್: ವಲಸಿಗರ ವಿಷಯದಲ್ಲಿ ತಮ್ಮ ನಿಲುವು ಸಡಿಲಿಸಿರುವ ಅಮೆರಿಕದ ಮಾಜಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಅಮೆರಿಕದ ಕಾಲೇಜುಗಳಲ್ಲಿ ಪದವಿ ಶಿಕ್ಷಣ ಪೂರೈಸುವ ವಿದೇಶಿ ವಿದ್ಯಾರ್ಥಿಗಳಿಗೆ ಪದವಿ ಜೊತೆಗೆ ಸ್ವಾಭಾವಿಕವಾಗಿ ಗ್ರೀನ್ ಕಾರ್ಡ್ ಸಿಗಬೇಕು ಎಂದು ಪ್ರತಿಪಾದಿಸಿದ್ದಾರೆ. ಪದವಿ ಶಿಕ್ಷಣ ಪೂರೈಸಿದ ಪ್ರತಿಭಾನ್ವಿತ ವಿದ್ಯಾರ್ಥಿಗಳು ಭಾರತ ಅಥವಾ ಚೀನಾದಂತಹ ತಾಯ್ನಾಡಿಗೆ ಮರಳುವುದನ್ನು ತಡೆಯುವುದು ಇದರ ಉದ್ದೇಶ ಎಂದೂ ಹೇಳಿದ್ದಾರೆ. ನವೆಂಬರ್‌ನಲ್ಲಿ ನಡೆಯಲಿರುವ ಅಧ್ಯಕ್ಷೀಯ ಚುನಾವಣೆಯಲ್ಲಿ ವಲಸಿಗರನ್ನು ಕುರಿತ ವಿಷಯಗಳು ಪ್ರಮುಖ ಚರ್ಚಾ ವಸ್ತುವಾಗಿರುವ ಸಂದರ್ಭದಲ್ಲಿಯೇ ಟ್ರಂಪ್, ವಲಸಿಗರನ್ನು ಕುರಿತ ತಮ್ಮ ಈ ನಿಲುವು ಪ್ರಕಟಿಸಿದ್ದಾರೆ. ಶಿಕ್ಷಣದಲ್ಲಿನ ಸಾಧನೆ ಆಧರಿಸಿ ವಲಸಿಗರಿಗೆ ಕಾನೂನುಬದ್ಧ ವ್ಯವಸ್ಥೆ ಮಾಡಿಕೊಡಬೇಕೆನ್ನುವುದನ್ನು ಎಂದಿಗೂ ನಾನು ಬೆಂಬಲಿಸುತ್ತೇನೆ ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.



ಹಿಂದೂಜಾ ಕುಟುಂಬದ ನಾಲ್ವರಿಗೆ ನಾಲ್ಕೂವರೆ ವರ್ಷ ಜೈಲು ಶಿಕ್ಷೆ


ಜಿನೀವಾ: ಭಾರತದಿಂದ ಕರೆತಂದ ಮನೆ ಕೆಲಸದವರನ್ನು ಶೋಷಣೆಗೆ ಒಳಪಡಿಸಿದ ಆರೋಪದ ಮೇಲೆ ಬ್ರಿಟನ್‌ನ ಶ್ರೀಮಂತ ಕುಟುಂಬಗಳಲ್ಲೊಂದಾದ ಹಿಂದೂಜಾ ಕುಟುಂಬದ ನಾಲ್ವರಿಗೆ ಸ್ವಿಸ್ ನ್ಯಾಯಾಲಯ ನಾಲ್ಕೂವರೆ ವರ್ಷ ಜೈಲು ಶಿಕ್ಷೆ ವಿಧಿಸಿದೆ. ಆದರೆ, ಮಾನವ ಕಳ್ಳಸಾಗಣೆ ಆರೋಪವನ್ನು ನ್ಯಾಯಾಲಯ ತಿರಸ್ಕರಿಸಿದೆ. ಜಿನೀವಾ ಸರೋವರದಲ್ಲಿರುವ ಹಿಂದೂಜಾ ಕುಟುಂಬದ ಬಂಗಲೆಯಲ್ಲಿ ಈ ಘಟನೆ ನಡೆದಿದೆ. ಸ್ವಿಸ್ ಕೋರ್ಟ್ ಪ್ರಕಾಶ್ ಹಿಂದೂಜಾ ಮತ್ತು ಅವರ ಪತ್ನಿ ಕಮಲ್ ಹಿಂದುಜಾಗೆ 4.5 ವರ್ಷಗಳ ಜೈಲು ಶಿಕ್ಷೆ ವಿಧಿಸಿದೆ. ಅವರ ಪುತ್ರ ಅಜಯ್ ಹಿಂದುಜಾ ಮತ್ತು ಅವರ ಪತ್ನಿ ನಮ್ರತಾ ಹಿಂದುಜಾ ಅವರಿಗೆ ತಲಾ ನಾಲ್ಕು ವರ್ಷಗಳ ಶಿಕ್ಷೆ ವಿಧಿಸಿದೆ.

ಹಿಂದೂಜಾ ಕುಟುಂಬದ ಸದಸ್ಯರು ತಮ್ಮ ಮನೆ ಕೆಲಸದವರನ್ನು ಶೋಷಣೆಗೆ ಒಳಪಡಿಸಿದ, ಅವರಿಗೆ ಕನಿಷ್ಠ ಆರೋಗ್ಯ ಪ್ರಯೋಜನಗಳ ಒದಗಿಸುವಲ್ಲಿ ವಿಫಲರಾಗಿದ್ದಾರೆ ಎಂದು ನ್ಯಾಯಾಲಯವು ತನ್ನ ಆದೇಶದಲ್ಲಿ ಹೇಳಿದೆ. ಕುಟುಂಬವು ತನ್ನ ಉದ್ಯೋಗಿಗಳಿಗೆ ನೀಡುತ್ತಿರುವ ಸಂಬಳವು ಸ್ವಿಟ್ಜರ್ಲೆಂಡ್‌ನಲ್ಲಿ ಅಂತಹ ಉದ್ಯೋಗಗಳಿಗೆ ನೀಡುವ ಸಂಬಳದ ಹತ್ತನೇ ಒಂದು ಭಾಗಕ್ಕಿಂತ ಕಡಿಮೆ ಎಂದು ನ್ಯಾಯಾಲಯ ಹೇಳಿದೆ.

ಡ್ರೈವಿಂಗ್ ಸೀಟ್‌ನಿಂದ ಟ್ರಾಫಿಕ್ ಪೊಲೀಸ್‌ನ ಹಿಡಿದು ಎಳೆದೊಯ್ದ ಕಾರು ಚಾಲಕ!

ಫರಿದಾಬಾದ್: ಹರಿಯಾಣದ ಫರಿದಾಬಾದ್‌ನಲ್ಲಿ ದಾಖಲೆಗಳನ್ನು ಕೇಳಿದಾಗ ಕಾರು ಚಾಲಕ ಟ್ರಾಫಿಕ್ ಪೊಲೀಸ್ ಸಮೇತ ವಾಹನ ಚಲಾಯಿಸಿದ್ದಾನೆ. ಕಾರಿನ ಚಾಲಕನ ಸೀಟಿನ ಬಳಿ ಬಾಗಿದ್ದ ಟ್ರಾಫಿಕ್ ಪೊಲೀಸರನ್ನು ಎಳೆದೊಯ್ದ ಘಟನೆ ಕ್ಯಾಮರಾದಲ್ಲಿ ಸೆರೆಯಾಗಿದೆ. ಬಲ್ಲಭಗಢ ಬಸ್ ನಿಲ್ದಾಣ ಪ್ರದೇಶದಲ್ಲಿ ಈ ಘಟನೆ ನಡೆದಿದೆ. ಪೊಲೀಸರ ಪ್ರಕಾರ, ಚಾಲಕನೊಬ್ಬ ಕುಡಿದ ಅಮಲಿನಲ್ಲಿ ತನ್ನ ಕಾರನ್ನು ರಸ್ತೆಯ ಮಧ್ಯದಲ್ಲಿ ನಿಲ್ಲಿಸಿ ಸಂಚಾರಕ್ಕೆ ಅಡ್ಡಿಪಡಿಸುತ್ತಿದ್ದ. ಟ್ರಾಫಿಕ್ ಸಬ್ ಇನ್ಸ್‌ಪೆಕ್ಟರ್ ಚಾಲಕನ ಬಳಿಗೆ ಬಂದು ವಾಹನದ ದಾಖಲೆಗಳನ್ನು ಕೇಳಿದರು. ಚಲನ್ ನೀಡಲು ತಯಾರಿ ನಡೆಸಿದರು. ಆಗ ಪಾನಮತ್ತ ಚಾಲಕನು ಪೊಲೀಸ್ ಬಳಿ ಏರುಧ್ವನಿಯಲ್ಲಿ ವಾಗ್ವಾದ ನಡೆಸಿದ್ದಾನೆ. ನಂತರ ಟ್ರಾಫಿಕ್ ಪೊಲೀಸ್ ಸಮೇತನಾಗಿ ಕಾರನ್ನು ಚಲಾಯಿಸಿದ್ದಾನೆ. ಹಿಂಬದಿಯಲ್ಲಿದ್ದವರು ಭಯದಿಂದ ಚಲಿಸುವ ಕಾರಿನಿಂದಲೇ ಕೆಳಗಿಳಿದಿದ್ದಾರೆ. ಕೊಂಚ ದೂರ ಕಾರು ಚಲಿಸಿ, ನಿಂತಿದೆ. ಪಟ್ಟು ಬಿಡದ ಟ್ರಾಫಿಕ್ ಪೊಲೀಸ್, ಚಾಲಕನನ್ನು ಹಿಡಿದುಕೊಂಡು ಠಾಣೆಗೆ ಎಳೆದೊಯ್ದಿದ್ದಾರೆ.

ಇಟಲಿಯಲ್ಲಿ ಭಾರತದ ಕೃಷಿ ಕಾರ್ಮಿಕ ಸಾವು



ರೋಮ್: ಇಟಲಿಯಲ್ಲಿ ಭಾರತ ಮೂಲದ ಕೃಷಿ ಕಾರ್ಮಿಕನೊಬ್ಬ ದುರಂತ ಸಾವು ಕಂಡಿದ್ದಾನೆ. ಕೃಷಿ ಯಂತ್ರದೊಳಗೆ ಸಿಲುಕಿ ತೋಳು ತುಂಡಾಗಿದ್ದ ಆತನಿಗೆ ಹೊಲದ ಮಾಲೀಕ ವೈದ್ಯಕೀಯ ನೆರವು ಕೊಡಿಸದೆ ರಸ್ತೆಯ ಮೇಲೆ ಎಸೆದು ಹೋಗಿದ್ದಾನೆ. ಇದರಿಂದಾಗಿ ಕಾರ್ಮಿಕ ಪ್ರಾಣ ಕಳೆದುಕೊಂಡಿದ್ದಾನೆ ಎಂದು ವರದಿಯಾಗಿದೆ.

ಪಂಜಾಬ್ ಮೂಲದ ಸತ್ನಾಮ್ ಸಿಂಗ್ (31) ಮೃತರೆಂದು ಗುರುತಿಸಲಾಗಿದೆ. ರೋಮ್‌ನ ಲಾಜಿಯೊದಲ್ಲಿ ತರಕಾರಿ ಹೊಲದಲ್ಲಿ ಕೆಲಸ ಮಾಡುತ್ತಿದ್ದಾಗ ದೊಡ್ಡ ಯಂತ್ರದೊಳಗೆ ಅವರ ಕೈ ಸಿಲುಕಿ ತೋಳು ತುಂಡಾಗಿತ್ತು. ಸಿಂಗ್ ಸಾವಿನ ಬಗ್ಗೆ ರೋಮ್‌ನಲ್ಲಿರುವ ಭಾರತದ ರಾಯಭಾರ ಕಚೇರಿ ಖಚಿತಪಡಿಸಿದೆ. ಲ್ಯಾಟಿನಾದಲ್ಲಿ ಭಾರತೀಯ ಪ್ರಜೆಯೊಬ್ಬನ ದುರದೃಷ್ಟಕರ ಸಾವಿನ ಬಗ್ಗೆ ಮಾಹಿತಿ ಲಭ್ಯವಾಗಿದೆ. ನಾವು ಸ್ಥಳೀಯ ಅಧಿಕಾರಿಗಳೊಂದಿಗೆ ಸಂಪರ್ಕದಲ್ಲಿದ್ದೇವೆ. ಕುಟುಂಬವನ್ನು ಸಂಪರ್ಕಿಸಲು ಮತ್ತು ಕಾನ್ಸುಲರ್ ನೆರವು ನೀಡಲು ಪ್ರಯತ್ನಗಳು ನಡೆಯುತ್ತಿವೆ ಎಂದು ಸಾಮಾಜಿಕ ಜಾಲತಾಣ 'ಎಕ್ಸ್'ನಲ್ಲಿ ಭಾರತೀಯ ರಾಯಭಾರಿ ಪೋಸ್ಟ್ ಮಾಡಿದ್ದಾರೆ.

ಮೈಸೂರಿನ ಕುಕ್ಕರಹಳ್ಳಿ ಕೆರೆ ಸಂರಕ್ಷಣೆ, ಪುನಶ್ಚೇತನ ಕಳಕಳಿ


● ಇಂಟೆಕ್‌ಗೆ ಕೆರೆ ಸಂರಕ್ಷಣೆ, ಪುನಶ್ಚೇತನದ ಹೊಣೆ; 63.80 ಲಕ್ಷದಲ್ಲಿ ಸಂರಕ್ಷಣಾ ಕಾರ್ಯ; ಕೆರೆಯ ಕುಡಿಯುವ ನೀರು ಈಗ ಮಲಿನ; ಐತಿಹಾಸಿಕ ಕೆರೆ ಸಂರಕ್ಷಣೆ ಮೈಸೂರಿಗರ ಜವಾಬ್ದಾರಿ ● ಇಂಟೆಕ್ ಆಯೋಜಿಸಿದ್ದ ಕಾರ್ಯಾಗಾರದಲ್ಲಿ ಭಾಗಿದಾರರ ಚರ್ಚೆ

ಮೈಸೂರು, ಜೂ.22(ಬಿಎಲ್‌ಯು)– ಮೈಸೂರಿನ ಕುಕ್ಕರಹಳ್ಳಿ ಕೆರೆ ಸಂರಕ್ಷಣೆ ಕುರಿತು ದೆಹಲಿ ಮೂಲದ ಇಂಟೆಕ್ (ಇಂಡಿಯನ್ ನ್ಯಾಷನಲ್ ಟ್ರಸ್ಟ್ ಫಾರ್ ಆರ್ಟ್ ಅಂಡ್ ಕಲ್ಚರಲ್ ಹೆರಿಟೇಜ್) ನಗರದಲ್ಲಿ ಶನಿವಾರ ಭಾಗಿದಾರರ ಕಾರ್ಯಾಗಾರ ಆಯೋಜಿಸಿತ್ತು.

ಮೈಸೂರು ವಿಶ್ವವಿದ್ಯಾನಿಲಯ ಬಡಾವಣೆಯ ಮೈಸೂರು ಸ್ಕೂಲ್ ಆಫ್ ಆರ್ಕಿಟೆಕ್ಚರ್ ಸಭಾಂಗಣದಲ್ಲಿ ಆಯೋಜಿಸಿದ್ದ ಕಾರ್ಯಾಗಾರದಲ್ಲಿ ಕುಕ್ಕರಹಳ್ಳಿ ಕೆರೆ ಸಂರಕ್ಷಣೆ ಬಗ್ಗೆ ಕಾಳಜಿವುಳ್ಳ ನಾಗರಿಕರು ಭಾಗವಹಿಸಿದ್ದರು. ಕುಕ್ಕರಹಳ್ಳಿ ಕೆರೆಯ ಐತಿಹಾಸಿಕ ಮಹತ್ವ ಹಾಗೂ ಸಂರಕ್ಷಣೆ ಕುರಿತ ಗಂಭೀರ ವಿಚಾರಗಳ ಬಗ್ಗೆ ನಡೆದ ಕಾರ್ಯಾಗಾರದಲ್ಲಿ ಅಪ್ಪಟ ಮೈಸೂರಿಗರು ಭಾಗಿಯಾಗಿ ಕೆರೆ ಸಂರಕ್ಷಣೆ ಬಗ್ಗೆ ತಮಗಿರುವ ಕಾಳಜಿ ಹಾಗೂ ಆಸಕ್ತಿಯನ್ನು ಪ್ರಚುರಪಡಿಸಿದರು.

ಕುಕ್ಕರಹಳ್ಳಿ ಕೆರೆಯ ಐತಿಹಾಸಿಕ ಹಿನ್ನೆಲೆ, ನೀರಿನ ಮೂಲ, ಕೆರೆ ಕಲುಷಿತಗೊಂಡಿರುವ ಪ್ರಸ್ತುತ ಸ್ಥಿತಿ–ಗತಿ, ಭವಿಷ್ಯತ್ತಿನ ದುಷ್ಪರಿಣಾಮ ಸೇರಿದಂತೆ ಹಲವು ವಿಚಾರಗಳ ಬಗ್ಗೆ ನಡೆದ ಚರ್ಚೆಯಲ್ಲಿ ಮೈಸೂರಿನ ಪರಿಸರ ಸಂಘಟನೆಗಳು, ಸ್ವಯಂ ಸೇವಾ ಸಂಸ್ಥೆಗಳು, ಪರಿಸರದ ಬಗ್ಗೆ ಕಾಳಜಿವುಳ್ಳ ವ್ಯಕ್ತಿಗಳು, ಹೋರಾಟಗಾರರು ಭಾಗವಹಿಸಿದ್ದರು.

ಕುಕ್ಕರಹಳ್ಳಿ ಕೆರೆ ಸಂರಕ್ಷಣೆ, ಪುನಶ್ಚೇತನ ಮಾತ್ರವಲ್ಲದೆ, ಚಾಮುಂಡಿಬೆಟ್ಟ ಪರಿಸರ ರಕ್ಷಣೆಗಾಗಿ ಹೋರಾಟ ಮಾಡುತ್ತಿರುವ ಬಹಳಷ್ಟು ಮಂದಿ ಕಾರ್ಯಾಗಾರದಲ್ಲಿ ಭಾಗವಹಿಸಿದ್ದರು. ಕುಕ್ಕರಹಳ್ಳಿ ಕೆರೆ ಸಂರಕ್ಷಣೆ ಮಾಡಿ, ಪುನಶ್ಚೇತನಗೊಳಿಸಲು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ ಇಂಟೆಕ್ ಸಂಸ್ಥೆಗೆ 63.80 ಲಕ್ಷ ರೂಪಾಯಿಗಳ ಟೆಂಡರ್ ನೀಡಿದೆ. ಕುಕ್ಕರಹಳ್ಳಿ ಕೆರೆಯ ಸಂರಕ್ಷಣೆ ಹಾಗೂ ಪುನಶ್ಚೇತನಗೊಳಿಸುವ ಕಾಮಗಾರಿ ಕೈಗೊಳ್ಳುವ ಇಂಟೆಕ್ ಸಂಸ್ಥೆ ಇಂದು ಪರಿಸರ ಪ್ರೇಮಿಗಳ ಅಭಿಪ್ರಾಯ, ಸಲಹೆಗಳನ್ನು ಆಲಿಸಿತು.



ಮೈಸೂರಿನ ಕುಕ್ಕರಹಳ್ಳಿ ಕೆರೆ ಸಂರಕ್ಷಣೆ ಕುರಿತು ದೆಹಲಿ ಮೂಲದ ಇಂಟೆಕ್ (ಇಂಡಿಯನ್ ನ್ಯಾಷನಲ್ ಟ್ರಸ್ಟ್ ಫಾರ್ ಆರ್ಟ್ ಅಂಡ್ ಕಲ್ಚರಲ್ ಹೆರಿಟೇಜ್) ಆಯೋಜಿ ಸಿದ್ದ ಭಾಗಿದಾರರ ಕಾರ್ಯಾಗಾರದಲ್ಲಿ ನಿವೃತ್ತ ಪ್ರಾಧ್ಯಾಪಕ ಪ್ರೊ.ಎನ್.ಎಸ್.ರಂಗರಾಜು ಮಾತ ನಾಡಿದರು.

ಈ ವೇಳೆ ಮಾತನಾಡಿದ ಇಂಟೆಕ್ ಪ್ರಿನ್ಸಿಪಲ್ ಡೈರೆಕ್ಟರ್ ಮನು ಭಟ್ನಾಗರ್, ಕುಕ್ಕರಹಳ್ಳಿ ಕೆರೆ ಸಂರಕ್ಷಣೆ ಹಾಗೂ ಪುನಶ್ಚೇತನ ಮಾಡುವ ಬಗ್ಗೆ ಇಂಟೆಕ್ ಕೈಗೊಂಡಿರುವ ಯೋಜನೆಗಳ ಬಗ್ಗೆ ಸವಿಸ್ತಾರವಾಗಿ ವಿವರಿಸಿದರು.

ತರುವಾಯ ಕುಕ್ಕರಹಳ್ಳಿ ಕೆರೆಯ ಐತಿಹಾಸಿಕ ಅಂಶ ಮತ್ತು ಪ್ರಸ್ತುತ ಸನ್ನಿವೇಶದ ಬಗ್ಗೆ ಮಾತನಾಡಿದ ನಿವೃತ್ತ ಪ್ರಾಧ್ಯಾಪಕ ಪ್ರೊ.ಎನ್.ಎಸ್.ರಂಗರಾಜು, ಕುಕ್ಕರಹಳ್ಳಿ ಕೆರೆಯ ನೀರಿನ ಮೂಲ ಸಂರಕ್ಷಣೆ ಮಾಡಲು ಹಾಗೂ ಕಲುಷಿತವಾಗುವುದನ್ನು ತಡೆಯಲು ದಶಕಗಳಿಂದ ಹೋರಾಟ ನಡೆಯುತ್ತಿದೆ. ಕೆರೆ ರಾಮಯ್ಯ ಎಂದೇ ಪ್ರಖ್ಯಾತರಾದ ಪ್ರೊ.ಜಯರಾಮಯ್ಯ, ಮೈಸೂರು ಗ್ರಾಹಕ ಪರಿಷತ್‌ನ ಡಾ.ಭಾಮಿ ಶೆಣೈ, ಡಾ.ಯು.ಎನ್.ರವಿಕುಮಾರ್ ಹೋರಾಟವನ್ನು ಈ ಸಮಯದಲ್ಲಿ ನೆನೆಯುವುದು ಅತ್ಯವಶ್ಯ ಎಂದರು.

ಕುಕ್ಕರಹಳ್ಳಿ ಕೆರೆಗೆ ಪ್ರಮುಖವಾದ ನೀರಿನ ಮೂಲವೆಂದರೆ ಅದು ಪೂರ್ಣಯ್ಯ ನಾಲೆ. ಆದರೆ ಈ ನಾಲೆಯನ್ನು ಹಲವೆಡೆ ಕಬಳಿಸಲಾಗಿದೆ, ಒತ್ತುವರಿ ಮಾಡಿಕೊಳ್ಳಲಾಗಿದೆ. ಇದರ ವಿರುದ್ಧ ಹೋರಾಟ ಮಾಡಿದ ಸಂದರ್ಭದಲ್ಲಿ ಹೋರಾಟಗಾರರ ಮೇಲೆಯೇ ಕೆಲವರು ದಾಳಿ ಮಾಡಿದರು ಎಂದು ಪ್ರೊ.ರಂಗರಾಜ್ ಕುಕ್ಕರಹಳ್ಳಿ ಕೆರೆ ಸಂರಕ್ಷಣೆಗಾಗಿ ನಡೆದ ಹೋರಾಟವನ್ನು ಸೂಚ್ಯವಾಗಿ ವಿವರಿಸಿದರು.

ಕುಕ್ಕರಹಳ್ಳಿ ಕೆರೆ ಹಾಗೂ ಮೈಸೂರು ಅರಮನೆ ಮುಂಭಾಗದ ದೊಡ್ಡಕೆರೆ ಮೈದಾನದ ಐತಿಹಾಸಿಕ ಹಿನ್ನೆಲೆ ಬಗ್ಗೆ ಬೆಳಕು ಚೆಲ್ಲಿದ ಪ್ರೊ.ರಂಗರಾಜು, ಕುಕ್ಕರಹಳ್ಳಿ ಕೆರೆ ಹಾಗೂ ದೊಡ್ಡ ಕೆರೆ ಚೋಳರ ಕಾಲದಲ್ಲಿ ನಿರ್ಮಾಣವಾಗಿದೆ. ದೊಡ್ಡ ಕೆರೆಯನ್ನು ಚೋಳರ ಕೆರೆ ಎಂಬ ಹೆಸರಿನಿಂದಲೂ ಕರೆಯಲಾಗುತ್ತಿತ್ತು ಎಂದರು.

ಶುದ್ಧವಾಗಿದ್ದ ಕಾರಣ ಕುಕ್ಕರಹಳ್ಳಿ ಕೆರೆ ನೀರು ಕುಡಿಯಲು ಬಳಕೆ ಆಗುತ್ತಿತ್ತು. ಕೆರೆಯಲ್ಲಿ ಮೊಸಳೆ ಇರಲಿಲ್ಲ, ಬಹಳಷ್ಟು ಜನರು ಮೀನು ಹಿಡಿಯುತ್ತಿದ್ದರು. ವಿಶೇಷವಾದ ಹಲವು ಜಲಚರಗಳು ಅಲ್ಲಿದ್ದವು. ಆದರೆ ಇತ್ತೀಚಿಗೆ ಕುಕ್ಕರಹಳ್ಳಿ ಕೆರೆ ಮಲಿನವಾಗಿದೆ. ಪಡುವಾರಹಳ್ಳಿ, ಜಯಲಕ್ಷ್ಮಿಪುರಂ ಸೇರಿದಂತೆ ಇತರೆ ಬಡಾವಣೆಯ ಒಳಚರಂಡಿ ನೀರು ನೇರವಾಗಿ ಕುಕ್ಕರಹಳ್ಳಿ ಕೆರೆ ಸೇರುತ್ತಿದೆ. ಜೊತೆಗೆ ವಿಶ್ವವಿದ್ಯಾನಿಲಯದ ಹಾಸ್ಟೆಲ್‌ಗಳ ಒಳಚರಂಡಿ ನೀರು ಕೂಡ ಕುಕ್ಕರಹಳ್ಳಿ ಕೆರೆ ಸೇರುತ್ತಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಕುಕ್ಕರಹಳ್ಳಿ ಕೆರೆಯ ವಾಚ್ ಟವರ್ ಮೈಸೂರು ಒಡೆಯರ್ ಕಾಲದ ವಾಸ್ತುಶಿಲ್ಪಕ್ಕೆ ಹೆಸರಾಗಿದೆ. ಕಬ್ಬಿಣದಿಂದ ಮಾಡಿರುವ ಸೇತುವೆ, ವಾಚ್ ಟವರ್ ಕೆಳಗೆ ಮೆಟ್ಟಿಲು ನಿರ್ಮಾಣ, ಕೆರೆಯ ನೀರಿನ ಪ್ರಮಾಣ ಅಳತೆ ಮಾಡಲು ಇರುವ ವ್ಯವಸ್ಥೆ ಬಹಳ ವಿಶೇಷವಾಗಿದೆ. ಆದರೆ ವಾಚ್ ಟವರ್ ಆಗಲಿ, ಸೇತುವೆಯಾಗಲಿ ನಿರ್ವಹಣೆ ಆಗಲಿಲ್ಲ ಎಂದು ತಿಳಿಸಿದರು.

ಪ್ರತಿದಿನ ಸಾವಿರಾರು ಜನರು ಇಲ್ಲಿ ವಾಯುವಿಹಾರಕ್ಕೆ ಹೋಗುತ್ತಾರೆ. ಇಂತಹ ಹಲವು ರೀತಿಯ ವಿಶಿಷ್ಟತೆಗೆ ಹೆಸರಾಗಿರುವ ಕುಕ್ಕರಹಳ್ಳಿ ಕೆರೆಯನ್ನು ಸಂರಕ್ಷಣೆ ಹಾಗೂ ಪುನಶ್ಚೇತನ ಮಾಡುವ ಜವಾಬ್ದಾರಿ ಮೈಸೂರು ಜನರಿಗೆ ಸೇರಿದೆ ಎಂದು ಪ್ರೊ.ರಂಗರಾಜು ಅಭಿಪ್ರಾಯಪಟ್ಟರು.

22 ಕಿಲೋಮೀಟರ್ ಉದ್ದದ ಪೂರ್ಣಯ್ಯ ನಾಲೆ ಅತಿಕ್ರಮಣ

ಕುಕ್ಕರಹಳ್ಳಿ ಕೆರೆಗೆ ಪ್ರಮುಖ ನೀರಿನ ಮೂಲವಾದ ಪೂರ್ಣಯ್ಯ ನಾಲೆ 22 ಕಿಲೋ ಮೀಟರ್ ಉದ್ದವಿದೆ. ಬೋಗಾದಿ, ಬಸವನಹಳ್ಳಿ, ದಾಸನಕೊಪ್ಪಲು, ಮರಟಿಕ್ಯಾತನಹಳ್ಳಿ, ಹಿನಕಲ್, ಮಾದಹಳ್ಳಿ, ಹುಯಿಲಾಳು ಸೇರಿದಂತೆ ಇತರೆಡೆಯಿಂದ ಮಳೆ ನೀರು ದಿವಾನ್ ಪೂರ್ಣಯ್ಯ ನಾಲೆ ಮೂಲಕ ಕುಕ್ಕರಹಳ್ಳಿ ಕೆರೆ ಸೇರುತ್ತಿತ್ತು.

ಬೇಸಿಗೆ ಕಾಲದಲ್ಲಿ ಸ್ವಲ್ಪ ಬತ್ತಿದರೂ ಮಳೆಗಾಲದಲ್ಲಿ ತುಂಬಿರುತ್ತಿತ್ತು. ಆದರೆ ಕುಕ್ಕರಹಳ್ಳಿ ಕೆರೆಗೆ ಪ್ರಮುಖ ನೀರಿನ ಮೂಲವಾದ ಪೂರ್ಣಯ್ಯ ನಾಲೆ ಜಾಗವನ್ನು ಕಬಳಿಸಲಾಗಿದೆ. ಇದರಿಂದ ಮಳೆ ನೀರು ಕೆರೆಗೆ ಬರುವುದಕ್ಕೆ ತಡೆಯಾಗಿದೆ. ಈಗ ಮಳೆ ನೀರು ಬದಲು ಒಳಚರಂಡಿ ನೀರು ಕುಕ್ಕರಹಳ್ಳಿ ಕೆರೆ ಸೇರುತ್ತಿದೆ.

ಪೂರ್ಣಯ್ಯ ನಾಲೆ ಜಾಗದಲ್ಲಿ ಈಗ ಅಕ್ರಮ ಕಟ್ಟಡಗಳು ತಲೆ ಎತ್ತಿವೆ. ನಾಲೆ ಅತಿಕ್ರಮಣ, ಒತ್ತುವರಿಯನ್ನು ಗುರುತಿಸಲಾಗಿದೆ. ಹರ್ಷಗುಪ್ತ ಜಿಲ್ಲಾಧಿಕಾರಿಯಾಗಿದ್ದಾಗ ನಾಲೆ ಮೇಲೆ ನಿರ್ಮಾಣ ಮಾಡಿದ್ದ ಕಟ್ಟಡಗಳ ತೆರವು ಕಾರ್ಯಾಚರಣೆ ಕೈಗೊಳ್ಳಲಾಯಿತು. ಕೆಲವು ಕಟ್ಟಡ ನೆಲಸಮ ಕೂಡ ಮಾಡಲಾಯಿತು. ಉದ್ದಕ್ಕೂ ಇದೇ ರೀತಿಯ ಕಾರ್ಯಾಚರಣೆ ನಡೆದಿದ್ದರೆ ಪ್ರಾಯಶಃ ಇವತ್ತು ನಾಲೆ ಹೆಸರಿಗೆ ತಕ್ಕಂತೆ ತನ್ನ ಜೀವಂತಿಕೆ ಪಡೆಯುತ್ತಿತ್ತು. ಆದರೆ ರಾಜಕೀಯ ಒತ್ತಡ, ಅಧಿಕಾರಿಗಳ ಭ್ರಷ್ಟಾಚಾರದಿಂದ ನಾಲೆ ಅತಿಕ್ರಮಣ ತೆರವು ಕಾರ್ಯಾಚರಣೆ ಅಲ್ಲಿಗೆ ಸ್ಥಗಿತವಾಯಿತು. ಸರ್ಕಾರ ಹಾಗೂ ಜನಪ್ರತಿನಿಧಿಗಳಿಗೆ ಇಚ್ಛಾಸಕ್ತಿ ಇದ್ದರೆ, ಕೆರೆ ಉಳಿಸುವ ಕಾಳಜಿ ಇದ್ದರೆ ಈಗಲೂ ಕೆರೆ ಅತಿಕ್ರಮಣ ತೆರವು ಕಾರ್ಯಾಚರಣೆ ನಡೆಸಬಹುದು. ಆದರೆ ಇದು ಸಾಧ್ಯವಾಗುವ ಮಾತೆ ಎಂಬ ಪ್ರಶ್ನೆ ಎದುರಾಗಿದೆ.

ಮಾಜಿ ಪ್ರಧಾನಿ, ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ ಅಭಿನಂದಿಸಿದ ಯದುವೀರ್...







ಮೈಸೂರು–ಕೊಡಗು ನೂತನ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಶನಿವಾರ ಬೆಂಗಳೂರಿನಲ್ಲಿ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು, ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರನ್ನು ಆತ್ಮೀಯವಾಗಿ ಅಭಿನಂದಿಸಿದರು. ಈ ಮಧ್ಯೆ ಮುಖ್ಯಮಂತ್ರಿಗಳು ಶನಿವಾರ ರಾತ್ರಿ ರಾಜ್ಯದ 28 ಸಂಸದರಿಗೂ ಔತಣಕೂಟವನ್ನು ಏರ್ಪಡಿಸಿದ್ದರು.

ಬೆಂಗಳೂರು ಟರ್ಫ್ ಕ್ಲಬ್ ಪ್ರಕರಣ: ಕುದುರೆ ರೇಸ್‌ಗೆ ಹೈಕೋರ್ಟ್ ತಡೆ


ಬೆಂಗಳೂರು: ಬೆಂಗಳೂರು ಟರ್ಫ್ ಕ್ಲಬ್‌ನಲ್ಲಿ ಕುದುರೆ ಪಂದ್ಯಾವಳಿ ಆಯೋಜಿಸಲು ಅನುಮತಿ ನೀಡಿದ್ದ ಏಕಸದಸ್ಯ ನ್ಯಾಯಪೀಠದ ಮಧ್ಯಂತರ ಆದೇಶಕ್ಕೆ ವಿಭಾಗೀಯ ನ್ಯಾಯಪೀಠ ತಡೆ ವಿಧಿಸಿದೆ.

ಏಕಸದಸ್ಯ ಪೀಠದ ಆದೇಶ ಪ್ರಶ್ನಿಸಿ ರಾಜ್ಯ ಸರ್ಕಾರ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿ ಕಾಯ್ದಿರಿಸಿದ್ದ ಆದೇಶವನ್ನು ಮುಖ್ಯ ನ್ಯಾಯಮೂರ್ತಿ ಎನ್.ವಿ.ಅಂಜಾರಿಯಾ ಮತ್ತು ನ್ಯಾಯಮೂರ್ತಿ ಕೆ.ವಿ.ಅರವಿಂದ್ ಅವರ ವಿಭಾಗೀಯ ಪೀಠವು ಪ್ರಕಟಿಸಿತು. ಕುದುರೆ ರೇಸ್ ಆಯೋಜನೆ ಮಾಡಲು ಬೆಂಗಳೂರು ಟರ್ಫ್ ಕ್ಲಬ್‌ಗೆ ಪರವಾನಗಿ ನೀಡಲು ರಾಜ್ಯ ಸರ್ಕಾರ ನಿರಾಕರಿಸಿರುವ ಆದೇಶ ಸಕಾರಣದಿಂದ ಕೂಡಿದೆ. ಬೆಂಗಳೂರು ಟರ್ಫ್ ಕ್ಲಬ್‌ಗೆ ರೇಸ್ ಆಯೋಜಿಸಲು ಪರವಾನಗಿ ನೀಡಲು ನಿರಾಕರಿಸಿರುವ ರಾಜ್ಯ ಸರ್ಕಾರದ ಆದೇಶಕ್ಕೆ ತಡೆ ನೀಡುವ ಮೂಲಕ ಏಕಸದಸ್ಯ ಪೀಠವು ತಪ್ಪಾಗಿ ತೀರ್ಮಾನಿಸಿದೆ. ಮೇಲ್ನೋಟಕ್ಕೆ ತಮ್ಮ ಪರ ಪ್ರಕರಣವಿದೆ ಎಂದು ತೋರಿಸಲು ರಾಜ್ಯ ಸರ್ಕಾರ ಸಫಲವಾಗಿದೆ. ಈ ಕಾರಣಕ್ಕಾಗಿ ಏಕಸದಸ್ಯ ಪೀಠದ ಆದೇಶವನ್ನು ಅಮಾನತು ಮಾಡಿದ್ದು, ಅದಕ್ಕೆ ತಡೆ ನೀಡಲಾಗಿದೆ ಎಂದು ಆದೇಶಿಸಿದೆ.



ಅರ್ಜಿ ವಿಚಾರಣೆ ಬಾಕಿ ಇರುವಾಗ ಬೆಂಗಳೂರು ಟರ್ಫ್ ಕ್ಲಬ್ ಆಫ್–ಕೋರ್ಸ್, ಆನ್ ಕೋರ್ಸ್ ರೇಸ್ ಪಂದ್ಯಾವಳಿ ಮತ್ತು ಬೆಟ್ಟಿಂಗ್ ನಡೆಸುವುದನ್ನು ನಿಷೇಧಿಸಲಾಗಿದ್ದು, ಇದು ಅರ್ಜಿ ಅಂತಿಮ ಆದೇಶಕ್ಕೆ ಒಳಪಟ್ಟಿರುತ್ತದೆ. ಉಳಿದ ಅರ್ಜಿದಾರರ ಹಕ್ಕಿನ ವ್ಯಾಪ್ತಿ ವಿಚಾರವನ್ನು ಅಂತಿಮ ವಿಚಾರಣೆ ಸಂದರ್ಭದಲ್ಲಿ ನಿರ್ಧರಿಸಲು ಮುಕ್ತವಾಗಿರಿಸಲಾಗಿದೆ. ಅಂತಿಮ ವಿಚಾರಣೆಯ ಆ.13ಕ್ಕೆ ನಿಗದಿಗೊಳಿಸಲಾಗಿದೆ ಎಂದು ವಿಭಾಗೀಯ ಪೀಠ ಆದೇಶಿಸಿದೆ ಹೀಗಾಗಿ, ಇಂದು ಮಧ್ಯಾಹ್ನ 1.30ರಿಂದ ಆರಂಭವಾಗಬೇಕಿದ್ದ ರೇಸ್ ಪಂದ್ಯಾವಳಿಗಳು ಅಮಾನತುಗೊಂಡಂತಾಗಿದೆ

ಸೂರಜ್ ರೇವಣ್ಣ ವಿಚಾರದಲ್ಲೂ ನ್ಯಾಯಯುತ ತನಿಖೆ ಆಗಲಿ



ಬೆಂಗಳೂರು, ಜೂ.22– ಸೂರಜ್ ರೇವಣ್ಣ ವಿರುದ್ಧ ಲೈಂಗಿಕ ದೌರ್ಜನ್ಯ ಆರೋಪ ಕೇಸ್ ವಿಚಾರವಾಗಿ ವಿಪಕ್ಷ ನಾಯಕ ಆರ್ ಅಶೋಕ್ ಪ್ರತಿಕ್ರಿಯಿಸಿದ್ದು, ಈಗಾಗಲೇ ಪ್ರಜ್ವಲ್ ರೇವಣ್ಣನ ವಿಚಾರದಲ್ಲಿ ತನಿಖೆ ನಡೆಯುತ್ತಿದೆ. ಸೂರಜ್ ರೇವಣ್ಣರ ವಿಚಾರದಲ್ಲೂ ನ್ಯಾಯಯುತ ತನಿಖೆ ಆಗಲಿ ಎಂದು ಹೇಳಿದ್ದಾರೆ. ಈ ಕುರಿತು ಮಾತನಾಡಿದ ಅವರು, ನಾನು ಸಹ ಮಾಧ್ಯಮದಲ್ಲಿ ಸೂರಜ್ ರೇವಣ್ಣ ಬಗ್ಗೆ ನೋಡಿದ್ದೇನೆ. ಸೂರಜ್ ರೇವಣ್ಣ ಸಹ ನನ್ನನ್ನು ಬ್ಲ್ಯಾಕ್‌ಮೇಲ್ ಮಾಡುತ್ತಿದ್ದಾರೆ ಎಂದು ಆರೋಪ ಮಾಡಿದ್ದಾರೆ. ಈ ಕೇಸ್‌ನಲ್ಲಿ ಮೇಲ್ನೋಟಕ್ಕೆ ಗೊಂದಲ ಕಾಣಿಸುತ್ತಿದೆ. ಕಾನೂನಿಗಿಂತ ಯಾರೂ ದೊಡ್ಡವರಲ್ಲ ಎಂದರು. ನಿಷ್ಪಕ್ಷಪಾತವಾದ ತನಿಖೆ ಆಗಲಿ. ತಪ್ಪಿತಸ್ಥರು ಯಾರೇ ಇದ್ದರೂ ಕಾನೂನು ಕ್ರಮ ಆಗೇ ಆಗುತ್ತೆ. ಇದನ್ನು ರಾಜಕೀಯಕ್ಕೆ ಬಳಸಿಕೊಳ್ಳುವುದು ಒಳ್ಳೆಯದಲ್ಲ. ಎರಡೂ ಕಡೆ ದೂರು ದಾಖಲು ಆದ ಹಿನ್ನೆಲೆಯಲ್ಲಿ ಇದು ಜಟಿಲ ಕೇಸ್ ರೀತಿಯಲ್ಲಿ ಕಾಣಿಸುತ್ತಿದೆ. ಮೊದಲೇ ದೂರು ಕೊಟ್ಟಿದ್ದು ಸೂರಜ್ ರೇವಣ್ಣ. ಸೂಕ್ತ ತನಿಖೆ ಆಗಲಿ, ಸತ್ಯಾಸತ್ಯತೆ ಹೊರ ಬರಲಿ. ಇದು ಜೆಡಿಎಸ್ ಆಂತರಿಕ ವಿಚಾರ. ಇದರ ಬಗ್ಗೆ ಅವರ ನಾಯಕರು ಮಾತನಾಡುತ್ತಾರೆ ಎಂದು ಹೇಳಿದರು.

ಗ್ಯಾರಂಟಿ ಹೆಸರಲ್ಲಿ ಜನರಿಗೆ ದ್ರೋಹ

ಬೆಂಗಳೂರು, ಜೂ.22(ಕೆಎಂಶಿ)– ದುರಾಡಳಿತ ಮತ್ತು ಭ್ರಷ್ಟಾಚಾರದಿಂದ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ರಾಜ್ಯದ ಜನತೆಗೆ ವಂಚನೆ ಮಾಡುತ್ತಿದೆ ಎಂದು ಮಾಜಿ ಮುಖ್ಯಮಂತ್ರಿ ಹಾಗೂ ಬಿಜೆಪಿ ಹಿರಿಯ ನಾಯಕ ಬಿ.ಎಸ್.ಯಡಿಯೂರಪ್ಪ ಟೀಕಿಸಿದ್ದಾರೆ.

ಗ್ಯಾರಂಟಿ ಹೆಸರಿನಲ್ಲಿ ಅಭಿವೃದ್ಧಿ ಸ್ಥಗಿತಗೊಳಿಸಿ ಜನರಿಗೆ ದ್ರೋಹ ಬಗೆಯುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದ ಅವರು, ಇಂತಹ ಸರ್ಕಾರವನ್ನು ಕಿತ್ತೊಗೆಯುವವರೆಗೂ ವಿಶ್ರಮಿಸಬಾರದು ಎಂದರು.

ಕಳೆದ ವಿಧಾನಸಭಾ ಚುನಾವಣೆಯಲ್ಲಿ ಸುಳ್ಳು ಭರವಸೆಗಳನ್ನು ನೀಡಿ ಅಧಿಕಾರಕ್ಕೆ ಬಂದವರಿಗೆ ಲೋಕಸಭಾ ಚುನಾವಣೆಯಲ್ಲಿ ಮತದಾರರು ಪಾಠ ಕಲಿಸಿದ್ದಾರೆ.

ಮುಂದೆ ಎದುರಾಗುವ ಜಿಲ್ಲಾ ಮತ್ತು ತಾಲೂಕು ಪಂಚಾಯತ್ ಸೇರಿದಂತೆ ಎಲ್ಲಾ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಎನ್‌ಡಿಎ ಮೈತ್ರಿಕೂಟ ಒಗ್ಗಟ್ಟಿನಿಂದ ಕೆಲಸ ಮಾಡಿ ಕಾಂಗ್ರೆಸ್ಸನ್ನು ಧೂಳೀಪಟ ಮಾಡಬೇಕು. ಲೋಕಸಭಾ ಚುನಾವಣೆಯಲ್ಲಿ ಆಯ್ಕೆಗೊಂಡ ಎನ್‌ಡಿಎ ಕೂಟದ ನೂತನ ಸಂಸದರಿಗೆ ರಾಜ್ಯ ಬಿಜೆಪಿ ಹಮ್ಮಿಕೊಂಡಿದ್ದ ಸನ್ಮಾನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಮುಂದಿನ ವಿಧಾನಸಭಾ ಚುನಾವಣೆಯಲ್ಲಿ 135 ರಿಂದ 140 ಸ್ಥಾನಗಳನ್ನು ಗಳಿಸುವ ಮೂಲಕ ಸ್ಪಷ್ಟ ಬಹುಮತದಿಂದ ಅಧಿಕಾರ ಹಿಡಿಯುವ ಸೂಚನೆಯನ್ನು ಮತದಾರರು ಈಗಲೇ ನೀಡಿದ್ದಾರೆ ಎಂದರು.

ನೂತನ ಸಂಸದರಿಗೆ ಸನ್ಮಾನ ಕಾರ್ಯಕ್ರಮದಲ್ಲಿ ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ ವಾಗ್ದಾಳಿ



ನೂತನ ಸಂಸದರಿಗೆ ರಾಜ್ಯ ಬಿಜೆಪಿ ಹಮ್ಮಿಕೊಂಡಿದ್ದ ಸನ್ಮಾನ ಕಾರ್ಯಕ್ರಮವನ್ನು ಬಿ.ಎಸ್.ಯಡಿಯೂರಪ್ಪ ಉದ್ಘಾಟಿಸಿದರು.

ಆಡಳಿತಾರೂಢ ಕಾಂಗ್ರೆಸ್‌ನ ಅಪಪ್ರಚಾರದ ನಡುವೆಯೂ ಲೋಕಸಭಾ ಚುನಾವಣೆಯಲ್ಲಿ ಎನ್‌ಡಿಎ ಮೈತ್ರಿಕೂಟ 19 ಸ್ಥಾನ ಗಳಿಸಿದೆ, ನಾಲ್ಕು ಸ್ಥಾನಗಳಲ್ಲಿ ಅಲ್ಪ ಮತದಿಂದ ಸೋತಿದ್ದೇವೆ, ಈ ಫಲಿತಾಂಶವೇ ಮುಂದಿನ ಚುನಾವಣೆಯಲ್ಲೂ ಬರಲಿದೆ. ಭ್ರಷ್ಟಾಚಾರದಲ್ಲಿ ಮುಳುಗಿ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳದ ಕಾಂಗ್ರೆಸ್‌ನವರು ಬರೀ ಗ್ಯಾರಂಟಿಯಿಂದಲೇ ಲೋಕಸಭಾ ಚುನಾವಣೆಯಲ್ಲಿ 20 ಸ್ಥಾನ ಗೆಲ್ಲುತ್ತೇವೆಂಬ ಅತ್ಯುತ್ಸಾಹದಿಂದ ಇದ್ದರು. ಅಭಿವೃದ್ಧಿ ಕೈಗೊಳ್ಳದ ಕಾಂಗ್ರೆಸ್ಸನ್ನು ಜನತೆ ಮೂಲೆಗುಂಪು ಮಾಡಿದ್ದಾರೆ, ಮುಂಬರುವ ಚುನಾವಣೆಗಳಲ್ಲೂ ಅವರಿಗೆ ಇದೇ ಪರಿಸ್ಥಿತಿ ಬರಲಿದೆ. ಎನ್‌ಡಿಎ ಕೂಟದಿಂದ ಆಯ್ಕೆಗೊಂಡಿರುವ ಸದಸ್ಯರು ಮತ್ತು ಪ್ರಧಾನಿ ಮೋದಿ ಸಂಪುಟ ಸೇರಿರುವ ಸಚಿವರು, ನಿಮಗೆ ನೀಡಿರುವ ಜನಾದೇಶಕ್ಕೆ ಪ್ರತಿಯಾಗಿ ರಾಜ್ಯದ ಧ್ವನಿಯಾಗಿ ಕೆಲಸ ಮಾಡಿ. ನನೆಗುದಿಗೆ ಬಿದ್ದಿರುವ ಕಾರ್ಯ ಕ್ರಮಗಳ ಅನುಷ್ಠಾನಕ್ಕೆ ಚಾಲನೆ ನೀಡಿ, ಹೊಸ ಯೋಜನೆಗಳನ್ನು ತರುವ ಮೂಲಕ ರಾಜ್ಯ ಮತ್ತು ರಾಷ್ಟ್ರದ ಅಭಿವೃದ್ಧಿಗೆ ಶ್ರಮಿಸಿ, ಸಾಧನೆ ಮಾತಾಗಬೇಕು, ಮಾತು ಸಾಧನೆ ಆಗಬಾರದು. ಆ ರೀತಿ ಕೆಲಸ ನಿರ್ವಹಿಸಿ ಎಂದು ಹೇಳಿದರು.

ಕ್ಷುಲ್ಲಕ ಕಾರಣಕ್ಕೆ ಅರಣ್ಯಾಧಿಕಾರಿ ಬರ್ಬರ ಹತ್ಯೆ, ಐವರ ಬಂಧನ

ಯಾದಗಿರಿ: ಕುಡಿದ ಅಮಲಿನಲ್ಲಿ ಕ್ಷುಲ್ಲಕ ಕಾರಣಕ್ಕೆ ಅರಣ್ಯಾಧಿಕಾರಿಯೊಬ್ಬರನ್ನು ಬರ್ಬರವಾಗಿ ಕೊಲೆ ಮಾಡಿರುವ ಘಟನೆ ಯಾದಗಿರಿ ಜಿಲ್ಲೆಯ ಶಹಾಪುರದಲ್ಲಿ ನಡೆದಿದ್ದು, ತಡವಾಗಿ ಬೆಳಕಿಗೆ ಬಂದಿದೆ

ಜೂ.5ರಂದು ಶಹಾಪುರ ಪಟ್ಟಣದ ಮೋಟಗಿ ಬಾರ್ ಅಂಡ್ ರೆಸ್ಟೋರೆಂಟ್‌ನಲ್ಲಿ ಅರಣ್ಯ ಅಧಿಕಾರಿ ಮಹೇಶ್ ಕನಕಟ್ಟಿ ಅವರನ್ನು ಕೊಲೆ ಮಾಡಲಾಗಿದ್ದು, ಈ ಸಂಬಂಧ ಐವರನ್ನು ಬಂಧಿಸಲಾಗಿದೆ. ರಾಜು, ರೇಖು ನಾಯಕ್, ತಾರಾ ಸಿಂಗ್, ನರಸಿಂಗ್ ಮತ್ತು ಪ್ರಕಾಶ್ ಎಂದು ಗುರುತಿಸಲಾಗಿದೆ. ಈ ಐವರ ಗ್ಯಾಂಗ್ ಬಾರ್ ಅಂಡ್ ರೆಸ್ಟೋರೆಂಟ್‌ನಲ್ಲಿ ಕುಡಿದು ಕೂಗಾಡಿದ್ದಾರೆ. ಇದನ್ನು ಪ್ರಶ್ನಿಸಿದಕ್ಕೆ ಮಹೇಶ್ ಮೇಲೆ ಏಕಾಏಕಿ ಕಟ್ಟಿಗೆಯಿಂದ ದಾಳಿ ಮಾಡಿದ್ದಾರೆ. ಬಡಿಗೆಯಿಂದ ಬಡಿದು, ಕಾಲಿನಿಂದ ಒದ್ದು ಕೊಲೆ ಮಾಡಿ ಪರಾರಿಯಾಗಿದ್ದಾರೆ. ಮರುದಿನ ರೆಸ್ಟೋರೆಂಟ್ ಬಳಿ ಬಿಸಾಡಿದ್ದ ಮಹೇಶ್ ಮೃತದೇಹವನ್ನು ಪೊಲೀಸರು ಮರಣೋತ್ತರ ಪರೀಕ್ಷೆಗೆ ಕಳುಹಿಸಿದ್ದರು. ಪೊಲೀಸರು ರೆಸ್ಟೋರೆಂಟ್‌ನ ಸಿಸಿಟಿವಿ ಫುಟೇಜ್ ಪರಿಶೀಲನೆ ನಡೆಸಿದಾಗ ಕೊಲೆ ಮಾಡಿರುವುದು ಗೊತ್ತಾಗಿದೆ.

ಸಿದ್ದಾಪುರದ ಬಳಿ ಕೆರೆಗೆ ಬಿದ್ದು ಕಾಡಾನೆ ಸಾವು

ತೆರೆದ ಬಾವಿಗೆ ಬಿದ್ದು ಆನೆ ಸಾವನ್ನಪ್ಪಿದ ಘಟನೆ ಮಾಸುವ ಮುನ್ನವೇ ಮತ್ತೊಂದು ದುರಂತ



ನೀರು ಕುಡಿಯಲು ಕೆರೆಗೆ ಬಂದು ಮೇಲೇಳದೆ ಸಾವನ್ನಪ್ಪಿರುವ ಆನೆ.

ಸಿದ್ದಾಪುರ, ಜೂ.22– ಆಹಾರ ಅರಸಿ ಕಾಡಿನಿಂದ ಬಂದಿದ್ದ ಕಾಡಾನೆಯೊಂದು ನಾಯಿ ಬೊಗಳಿಸಿದ್ದರಿಂದ ತೆರೆದ ಬಾವಿಗೆ ಬಿದ್ದು, ಸಾವನ್ನಪ್ಪಿದ ಘಟನೆ ಮಾಸುವ ಮುನ್ನವೇ ಮತ್ತೊಂದು ಕಾಡಾನೆ ಕೆರೆಯಲ್ಲಿ ಮುಳುಗಿ ಮೃತಪಟ್ಟಿದೆ. ಈ ಘಟನೆ ಅಮ್ಮತ್ತಿ ಬಳಿಯ ಒಂಟಿ ಅಂಗಡಿ ಪಚ್ಚಾಟ್ ಎಂಬಲ್ಲಿ ಸಂಭವಿಸಿದೆ. ಶುಕ್ರವಾರ ರಾತ್ರಿ ಕಾಡಾನೆಗಳ ಹಿಂಡು ಪಚ್ಚಾಟ್ ನಿವಾಸಿ ನಂದ ಎಂಬುವರ ತೋಟಕ್ಕೆ ಬಂದಿದ್ದು, ಈ ಪೈಕಿ ಸುಮಾರು 13 ವರ್ಷ ಪ್ರಾಯದ ಕಾಡಾನೆ ನೀರು ಕುಡಿಯಲು ಕೆರೆಗೆ ಇಳಿದಿದೆ. ಬಳಿಕ ಕೆರೆಯಿಂದ ಮೇಲೆ ಬರಲು ಸಾಧ್ಯವಾಗದೆ ನೀರಿನಲ್ಲಿ ಮುಳುಗಿ ಸಾವನ್ನಪ್ಪಿದೆ.

ವಿಷಯ ತಿಳಿದ ತೋಟದ ಮಾಲೀಕರು ತಕ್ಷಣ ಅರಣ್ಯ ಇಲಾಖೆಗೆ ಮಾಹಿತಿ ನೀಡಿದ ಮೇರೆಗೆ ಡಿಎಫ್‌ಓ ಜಗನ್ನಾಥ್, ಎಸಿಎಫ್ ನೆಹರು, ಆರ್‌ಎಫ್‌ಓ ಕಳ್ಳಿರ ಎಂ.ದೇವಯ್ಯ ಸೇರಿದಂತೆ ಸಿಬ್ಬಂದಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಕೆರೆಯಲ್ಲಿದ್ದ ಆನೆಯ ಮೃತದೇಹವನ್ನು ಜೆಸಿಬಿ ಮೂಲಕ ಹೊರತೆಗೆದ ನಂತರ ವನ್ಯಜೀವಿ ವೈದ್ಯರಾದ ಡಾ.ಚೆಟ್ಟಿಯಪ್ಪ ಅವರು ಕಾಡಾನೆಯ ಕಳೇಬರದ ಮರಣೋತ್ತರ ಪರೀಕ್ಷೆ ನಡೆಸಿದರು. ನಂತರ ಗುಂಡಿ ತೆಗೆದು ಸ್ಥಳದಲ್ಲೇ ಅಂತ್ಯ ಸಂಸ್ಕಾರ ನಡೆಸಲಾಯಿತು.

ಈ ಸಂದರ್ಭ ಉಪವಲಯ ಅರಣ್ಯ ಅಧಿಕಾರಿಗಳಾದ ಸಂಜಿತ್ ಸೋಮಯ್ಯ, ಸಂತೋಷ್ ಸೇರಿದಂತೆ ಆರ್‌ಆರ್‌ಟಿ ಹಾಗೂ ಕಾಡಾನೆ ಕಾರ್ಯಪಡೆ ತಂಡದ ಸಿಬ್ಬಂದಿಗಳ ಹಾಜರಿದ್ದರು.

ವಿದ್ಯುತ್ ಸ್ಪರ್ಶದಿಂದ ಆನೆ ಸಾವು



ಗೋಣಿಕೊಪ್ಪ: ವಿದ್ಯುತ್ ಸ್ಪರ್ಶಿಸಿ ಗಂಡು ಕಾಡಾನೆಯೊಂದು ಸಾವನ್ನಪ್ಪಿರುವ ಘಟನೆ ಅರುವತೋಕ್ಲು ಗ್ರಾಮದಲ್ಲಿ ಸಂಭವಿಸಿದೆ. ಸುಮಾರು 10 ವರ್ಷದ ಕಾಡಾನೆ. ಎರಡು ದಿನಗಳ ಹಿಂದೆ ಸಾವಿಗೀಡಾಗಿ ರಬಹುದು ಎಂದು ಅಂದಾಜಿಸಲಾಗಿದೆ.

ಈಶ್ವರ ರಾವ್ ಎಂಬುವರಿಗೆ ಸೇರಿದ ಕಾಫಿ ತೋಟದಲ್ಲಿ ದುರ್ಘಟನೆ ನಡೆದಿದ್ದು, 11 ಕೆ.ವಿ. ವಿದ್ಯುತ್ ಮಾರ್ಗದ ತಂತಿ ಕಂಬದ ಮೇಲೆ ಬಿದ್ದಿದೆ. ಕಬ್ಬಿಣದ ಕಂಬವಾಗಿರುವುದರಿಂದ ಆನೆ ಕಂಬಕ್ಕೆ ತಾಗಿದ ಸಂದರ್ಭ ವಿದ್ಯುತ್ ಹರಿದು ಸ್ಥಳದಲ್ಲಿಯೇ ಕುಸಿದು ಬಿದ್ದು ಪ್ರಾಣ ಬಿಟ್ಟಿದೆ. ಕಳೇಬರ ಶನಿವಾರ ಪತ್ತೆಯಾಯಿತು. ಸ್ಥಳಕ್ಕೆ ತಿತಿಮತಿ ಎಸಿಎಫ್ ಗೋಪಾಲ್, ಪೊನ್ನಂಪೇಟೆ ವಲಯದ ಅರಣ್ಯ ಅಧಿಕಾರಿಗಳ ತಂಡ ಭೇಟಿ ನೀಡಿ ಕ್ರಮಕ್ಕೆ ಮುಂದಾಗಿದೆ.

ಕೆ.ಎಂ.ಶಂಕರನಾರಾಯಣ ಶೆಟ್ಟಿ ನಿಧನ



ಕುಶಾಲನಗರ: ಮೂಲತಃ ಕಣಿವೆ ಗ್ರಾಮದ ವ್ಯಾಪಾರೋದ್ಯಮಿ, ಇಲ್ಲಿನ ಐಬಿ ರಸ್ತೆ ನಿವಾಸಿ ಕೆ.ಎಂ. ಶಂಕರನಾರಾಯಣ ಶೆಟ್ಟಿ(85) ಶನಿವಾರ ಸ್ವಗೃಹದಲ್ಲಿ ಹೃದಯಾಘಾತದಿಂದ ನಿಧನರಾದರು.

ಮೃತರು ಪತ್ನಿ, ಮಕ್ಕಳಾದ ಕುಶಾಲನಗರ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಕೆ.ಎಸ್.ನಾಗೇಶ್ ಸೇರಿದಂತೆ ಮೂವರು ಪುತ್ರರು ಹಾಗೂ ಅಪಾರ ಬಂಧುಮಿತ್ರರನ್ನು ಅಗಲಿದ್ದಾರೆ.

ಶನಿವಾರ ಮಧ್ಯಾಹ್ನ ಹಿಂದೂ ರುದ್ರಭೂಮಿಯಲ್ಲಿ ಮೃತರ ಅಂತ್ಯಕ್ರಿಯೆ ನಡೆಯಿತು.

ಪೊನ್ನಣ್ಣ ಪ್ರತಿಕೃತಿ ದಹನ ಖಂಡಿಸಿ ಕಾಂಗ್ರೆಸ್ ಪ್ರತಿಭಟನೆ



ಪೊನ್ನಣ್ಣ ಪ್ರತಿಕೃತಿಯನ್ನು ದಹಿಸಿದ ಬಿಜೆಪಿ ಕ್ರಮವನ್ನು ಖಂಡಿಸಿ ಕಾಂಗ್ರೆಸ್ ಪಕ್ಷ ಸಂಪಾಜೆ ಚೆಕ್ ಪೋಸ್ಟ್ ಬಳಿ ಪ್ರತಿಭಟನೆ ನಡೆಸಿತು.

ಮಡಿಕೇರಿ,ಜೂ.22– ಮುಖ್ಯಮಂತ್ರಿಗಳ ಕಾನೂನು ಸಲಹೆಗಾರ ಹಾಗೂ ವಿರಾಜಪೇಟೆ ಕ್ಷೇತ್ರದ ಶಾಸಕ ಎ.ಎಸ್.ಪೊನ್ನಣ್ಣ ಅವರ ಪ್ರತಿಕೃತಿಯನ್ನು ದಹಿಸಿದ ಬಿಜೆಪಿ ಕ್ರಮವನ್ನು ಖಂಡಿಸಿ ಕಾಂಗ್ರೆಸ್ ಪಕ್ಷ ಸಂಪಾಜೆ ಚೆಕ್ ಪೋಸ್ಟ್ ಬಳಿ ಪ್ರತಿಭಟನೆ ನಡೆಸಿತು.

ಬಾಯಿಗೆ ಕಪ್ಪುಪಟ್ಟಿ ಧರಿಸಿ ಮೌನ ಮೆರವಣಿಗೆ ನಡೆಸಿದ ಕಾಂಗ್ರೆಸ್ ಪದಾಧಿಕಾರಿಗಳು ಹಾಗೂ ಕಾರ್ಯಕರ್ತರು ಬಿಜೆಪಿ ನಡೆಯನ್ನು ತೀವ್ರವಾಗಿ ಖಂಡಿಸಿದರು. ಬಿಜೆಪಿ ಮಂದಿ ವಿಕೃತ ಮನಸ್ಥಿತಿಯನ್ನು ಪ್ರದರ್ಶಿಸಿದ್ದಾರೆ ಎಂದು ಆರೋಪಿಸಿದ ಪ್ರತಿಭಟನಾಕಾರರು, ವಿಕೃತ ಮನಸ್ಥಿತಿಯ ಪ್ರತಿಕೃತಿಯನ್ನು ಸಾಂಕೇತಿಕವಾಗಿ ದಹಿಸಿ ಅಸಮಾಧಾನ ವ್ಯಕ್ತಪಡಿಸಿದರು. ಪ್ರತಿಭಟನಾಕಾರರು ಚೆಕ್ ಪೋಸ್ಟ್ ಬಳಿ ರಾಷ್ಟ್ರೀಯ ಹೆದ್ದಾರಿ ಬಂದ್ ಮಾಡಲು ಮುಂದಾದಾಗ ಪೊಲೀಸರು ಇದಕ್ಕೆ ಅವಕಾಶ ನೀಡಲಿಲ್ಲ.

ಜಿಲ್ಲಾ ಕಾಂಗ್ರೆಸ್ ಸಾಮಾಜಿಕ ಜಾಲತಾಣದ ಜಿಲ್ಲಾಧ್ಯಕ್ಷ ಸೂರಜ್ ಹೊಸೂರು ಮಾತನಾಡಿ, ಬಿಜೆಪಿ ಶಾಸಕ ಪೊನ್ನಣ್ಣ ಅವರ ಪ್ರತಿಕೃತಿ ದಹನ ಮಾಡುವ ಮೂಲಕ ತನ್ನ ಪ್ರಜ್ಞಾಹೀನ ಮನಸ್ಥಿತಿಯನ್ನು ಪ್ರದರ್ಶಿಸಿದೆ. ಪ್ರತಿಭಟನೆಯ ಹಿಂದಿನ ರಾಜಕೀಯ ದುರುದ್ದೇಶ ಬಯಲಾಗಿದೆ ಎಂದು ಆರೋಪಿಸಿದರು.

ಕಾಂಗ್ರೆಸ್ ವಲಯಾಧ್ಯಕ್ಷ ಸುರೇಶ್ ಪಿ.ಎಲ್, ಚೆಂಬು ಅಧ್ಯಕ್ಷ ರವಿ ಹೊಸೂರು, ಪೆರಾಜೆ ಅಧ್ಯಕ್ಷ ಜಯರಾಮ್, ನಾಪೋಕ್ಲು ಬ್ಲಾಕ್ ಅಧ್ಯಕ್ಷ ಇಸ್ಮಾಯಿಲ್, ಸಾಮಾಜಿಕ ಜಾಲತಾಣದ ಉಪಾಧ್ಯಕ್ಷ ಡಾ.ನಿಶ್ಚಲ್ ದಂಬೆಕೋಡಿ, ಬ್ಲಾಕ್ ಕಾರ್ಯದರ್ಶಿ ಮನು, ಮಾಜಿ ಯುವ ಅಧ್ಯಕ್ಷ ಹನೀಫ್ ಸಂಪಾಜೆ, ಅಕ್ರಮ ಸಕ್ರಮ ಸಮಿತಿ ಸದಸ್ಯೆ ತುಳಸಿ, ನಾಪೋಕ್ಲು ಬ್ಲಾಕ್ ಮಹಿಳಾ ಅಧ್ಯಕ್ಷೆ ರಾಜೇಶ್ವರಿ ಕೆ.ಕೆ, ಅನುಷ್ಠಾನ ಸಮಿತಿ ಕಾರ್ಯದರ್ಶಿ ಬಷೀರ್, ಜಿ.ಪಂ ಮಾಜಿ ಸದಸ್ಯ ಮೊಹಿದ್ದೀನ್ ಕುಜ್ಞ, ಗ್ರಾ.ಪಂ ಸದಸ್ಯರಾದ ಆದಂ, ಕುಸುಮ, ಶಶಿಕಲಾ, ಭೂದೇವಿ, ಸೈದಾಲವಿ, ಪ್ರಮುಖರಾದ ತಿರುಮಲ ಸೋನಾ, ಭಾರತಿ ಕುಶಲ ಚೆಂಬು, ಸೋಮಣ್ಣ ಬಾಲಂಬಿ, ಚೆನ್ನಪ್ಪ, ಉಮೇಶ್ ನಿಡುಬೆ, ರಿತಿನ್, ರುನೈಜ್, ರಾಜೇಶ್, ಅಬ್ಬೂಬಕ್ಕರ್ ಪೆರಾಜೆ, ಶಿಂಹಾಬ್ ಮತ್ತಿತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಪ್ರತಿಭಟನೆ ನಡೆಸಿದ ಬಿಜೆಪಿ ವಿರುದ್ಧ ಕಾಂಗ್ರೆಸ್ ದೂರು ಪ್ರಕರಣ

ಕಾಂಗ್ರೆಸ್ಸಿನ ದಬ್ಬಾಳಿಕೆ, ಬೆದರಿಕೆಗೆ ಬಿಜೆಪಿ ಜಗ್ಗುವುದಿಲ್ಲ



ಮಡಿಕೇರಿಯಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡುತ್ತಿರುವ ಬಿಜೆಪಿ ಮುಖಂಡರು.

ಮಡಿಕೇರಿ,ಜೂ.22– ಪೆಟ್ರೋಲ್–ಡೀಸೆಲ್ ದರ ಹೆಚ್ಚಳ ಮಾಡಿರುವ ರಾಜ್ಯ ಸರ್ಕಾರದ ಕ್ರಮವನ್ನು ಖಂಡಿಸಿ ವಿರಾಜಪೇಟೆಯಲ್ಲಿ ಪ್ರತಿಭಟನೆ ನಡೆಸಿದ ಬಿಜೆಪಿ ವಿರುದ್ಧ ಪ್ರಕರಣ ದಾಖಲಿಸುವ ಮೂಲಕ ಕಾಂಗ್ರೆಸ್ ದಬ್ಬಾಳಿಕೆಯ ಮತ್ತು ಬೆದರಿಕೆಯ ತಂತ್ರ ಅನುಸರಿಸುತ್ತಿದೆ. ಇದಕ್ಕೆ ಬಿಜೆಪಿ ಎಂದಿಗೂ ಜಗ್ಗುವುದಿಲ್ಲ ಎಂದು ಜಿಲ್ಲಾ ಬಿಜೆಪಿ ಪ್ರಧಾನ ಕಾರ್ಯದರ್ಶಿ ವಿ.ಕೆ. ಲೋಕೇಶ್ ಹೇಳಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಇಂಧನ ದರ ಹೆಚ್ಚಳಕ್ಕೆ ಸಂಬಂಧಿಸಿದಂತೆ ರಾಜ್ಯದ ಎಲ್ಲಾ ತಾಲೂಕು ಕೇಂದ್ರಗಳಲ್ಲಿ ನಡೆದಂತೆ ವಿರಾಜಪೇಟೆಯಲ್ಲಿಯೂ ಪ್ರತಿಭಟನೆ ನಡೆದಿದೆ. ಹೀಗಿದ್ದೂ, ರಾಜ್ಯದ ಯಾವುದೇ ಭಾಗದಲ್ಲಿ ದಾಖಲಾಗದ ಪ್ರಕರಣವನ್ನು ವಿರಾಜಪೇಟೆಯಲ್ಲಿ ಬಿಜೆಪಿ ಪ್ರಮುಖರು ಮತ್ತು ಕಾರ್ಯಕರ್ತರ ವಿರುದ್ಧ ದಾಖಲಿಸಲಾಗಿದೆ. ಇಂತಹ ಪ್ರಕರಣಗಳಿಗೆ ಬಿಜೆಪಿ ಎಂದಿಗೂ ಬೆದರಲಾರದು. ಇದನ್ನು ಕಾನೂನಾತ್ಮಕವಾಗಿ ಎದುರಿಸುವುದಾಗಿ ಲೋಕೇಶ್ ನುಡಿದರು.

ಸಾರ್ವಜನಿಕ ಆಸ್ತಿ ಪಾಸ್ತಿಗೆ ಹಾನಿ, ಪೂರ್ವಾನುಮತಿ ಇಲ್ಲದೆ ಪ್ರತಿಭಟನೆ ನಡೆಸಲಾಗಿದೆ ಎಂದು ಬಿಜೆಪಿ ವಿರುದ್ಧ ದುರುದ್ದೇಶ ಪೂರ್ವಕವಾದ ಪ್ರಕರಣ ದಾಖಲಿಸಲಾಗಿದೆ. ಪ್ರತಿಭಟನೆಯಿಂದ ಯಾವುದೇ ಆಸ್ತಿಪಾಸ್ತಿಗೆ ಕಿಂಚಿತ್ತು ಹಾನಿಯಾಗಿಲ್ಲ ಮತ್ತು ಪ್ರತಿಭಟನೆಗೆ ಪೂರ್ವಾನುಮತಿಯನ್ನು ಪಡೆಯಲಾಗಿತ್ತು ಎಂದು ಲೋಕೇಶ್ ಸ್ಪಷ್ಟಪಡಿಸಿದರು.

ಜನ ಕಾಂಗ್ರೆಸ್‌ನ್ನು ತಿರಸ್ಕರಿಸಿದ್ದಾರೆ: ಕಳೆದ 1 ವರ್ಷಗಳ ಕಾಂಗ್ರೆಸ್ ಆಡಳಿತದಲ್ಲಿ ಅಭಿವೃದ್ಧಿ ಶೂನ್ಯವಾಗಿದೆ ಈ ಹಿನ್ನೆಲೆಯಲ್ಲಿ ಕಳೆದ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್‌ನ್ನು ಜನತೆ ತಿರಸ್ಕರಿಸಿರುವುದಲ್ಲದೆ, ವಿರಾಜಪೇಟೆ ಕ್ಷೇತ್ರದಲ್ಲಿಯೆ 32 ಸಾವಿರಕ್ಕೂ ಹೆಚ್ಚಿನ ಮತಗಳ ಮುನ್ನಡೆಯನ್ನು ನೀಡಿದ್ದಾರೆಂದು ತಿಳಿಸಿದ ಲೋಕೇಶ್, ಕಾಂಗ್ರೆಸ್ ಅವಧಿಯಲ್ಲಿ ನಡೆಯುವ ಯಾವುದೇ ಜನವಿರೋಧಿ ಕ್ರಮಗಳನ್ನು ಬಿಜೆಪಿ ಮುಂದೆಯೂ ಪ್ರತಿಭಟಿಸಲಿದೆ ಎಂದು ದೃಢವಾಗಿ ಹೇಳಿದರು. ವಿರಾಜಪೇಟೆ ಕ್ಷೇತ್ರದ ಹಿಂದಿನ ಶಾಸಕ ಕೆ.ಜಿ. ಬೋಪಯ್ಯ ಅವರ ಅವಧಿಯಲ್ಲಿ ಮಂಜೂರಾತಿ ದೊರೆತು ನಡೆದ ಭಾಗಮಂಡಲ ಮೇಲ್ಸೇತುವೆಯನ್ನು ಕಾಂಗ್ರೆಸ್ಸಿಗರು ತಮ್ಮ ಸಾಧನೆ ಎಂದು ಹೇಳಿಕೊಳ್ಳುತ್ತಿದ್ದಾರೆ. ಕಳೆದ ಒಂದು ವರ್ಷದ ಅವಧಿಯಲ್ಲಿ ಜಿಲ್ಲೆಯಲ್ಲಿ ಯಾವ ಅಭಿವೃದ್ಧಿ ಕಾರ್ಯಗಳನ್ನು ಮಾಡಿದ್ದೇವೆ ಎನ್ನುವುದು ಮತ್ತು ಮುಂದೆ ಯಾವ ಅಭಿವೃದ್ಧಿ ಕಾರ್ಯಗಳು ನಡೆಯಲಿದೆ ಎನ್ನುವುದನ್ನು ಶಾಸಕರು ತಿಳಿಸಲೆಂದು ಸವಾಲು ಹಾಕಿದರು.

ಕಾಂಗ್ರೆಸ್ ಅಧಿಕಾರಕ್ಕೆ ಬಂದ ಬಳಿಕ ಜಮ್ಮಾ ಜಾಗಗಳಲ್ಲಿನ ಮರದ ಹಕ್ಕನ್ನು ಕಸಿಯುವ ಪ್ರಯತ್ನ ನಡೆದ ಸಂದರ್ಭ ಬಿಜೆಪಿ ಅದನ್ನು ವಿರೋಧಿಸಿ ಪ್ರತಿಭಟನೆ ನಡೆಸಿದೆ. ಧಾರ್ಮಿಕ ಕೇಂದ್ರಗಳಲ್ಲಿನ ತಲೆತಲಾಂತರಗಳಿಂದ ಪೂಜಾ ಕಾರ್ಯಗಳಲ್ಲಿ ಬಳಸುತ್ತಿದ್ದ ಪ್ರಾಣಿಜನ್ಯ ಕೊಂಬು ಮೊದಲಾದವುಗಳನ್ನು ಕಸಿಯುವ ಪ್ರಯತ್ನವನ್ನು ಈ ಸರ್ಕಾರ ಮಾಡಿದೆ ಎಂದು ಆರೋಪಿಸಿದರು.

ಹೋರಾಟದ ಭಾಗ: ಜಿಲ್ಲಾ ಬಿಜೆಪಿ ಪ್ರಧಾನ ಕಾರ್ಯದರ್ಶಿ ಮಹೇಶ್ ಜೈನಿ ಮಾತನಾಡಿ, ದರ ಹೆಚ್ಚಳ ಖಂಡಿಸಿ ನಡೆಸಿದ ಪ್ರತಿಭಟನೆಯಲ್ಲಿ ಶಾಸಕರ ಪ್ರತಿಕೃತಿ ದಹಿಸಿರುವುದು ಹೋರಾಟದ ಭಾಗವಷ್ಟೆ ಎಂದು ಸಮರ್ಥಿಸಿಕೊಂಡರು. ಈ ಹಿಂದೆ ಕೆ.ಜಿ.ಬೋಪಯ್ಯ ಅಧಿಕಾರದಲ್ಲಿದ್ದ ಸಂದರ್ಭ ಇದೇ ಕಾಂಗ್ರೆಸ್ಸಿಗರು ಅವರ ಪ್ರತಿಕೃತಿ ದಹಿಸಿರಲಿಲ್ಲವೆ ಎಂದು ಪ್ರಶ್ನಿಸುವ ಮೂಲಕ ತಿರುಗೇಟು ನೀಡಿದರು. ಪ್ರತಿಭಟನೆ ನಡೆಸಿದ ಬಿಜೆಪಿಯವರ ಮೇಲೆ ಪೊಳ್ಳು ಪ್ರಕರಣ ದಾಖಲಿಸಿ ಅವರ ಆತ್ಮಸ್ಥೈರ್ಯ ಕುಗ್ಗಿಸುವ ಕಾಂಗ್ರೆಸ್ ಪ್ರಯತ್ನಗಳಿಗೆ ತಾವು ಜಗ್ಗುವುದಿಲ್ಲವೆಂದು ತಿಳಿಸಿದ ಮಹೇಶ್ ಜೈನಿ, ಮೊದಲು ಬಿಜೆಪಿಗರ ವಿರುದ್ಧದ ಪ್ರಕರಣವನ್ನು ಹಿಂದಕ್ಕೆ ಪಡೆಯುವಂತೆ ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ಬಿಜೆಪಿ ಪ್ರಧಾನ ಕಾರ್ಯದರ್ಶಿ ತಳೂರು ಕಿಶೋರ್ ಕುಮಾರ್, ಜಿಲ್ಲಾ ವಕ್ತಾರ ಬಿ.ಕೆ. ಅರುಣ್ ಕುಮಾರ್, ವಿರಾಜಪೇಟೆ ಮಂಡಲ ಅಧ್ಯಕ್ಷ ಮಂಜು ಗಣಪತಿ, ವಕ್ತಾರ ರಾಕೇಶ್ ದೇವಯ್ಯ ಇದ್ದರು.

ಭೂ ಪರಿವರ್ತನೆ, ಭೂ ವಿಲೇವಾರಿ ವಿರೋಧಿಸಿ ನಾಳೆ ಪ್ರತಿಭಟನೆ



ಎನ್.ಯು.ನಾಚಪ್ಪ

ಮಡಿಕೇರಿ,ಜೂ.22– ಸಿದ್ದಾಪುರದ ಸುಮಾರು 2400 ಎಕರೆ ಕಾಫಿ ತೋಟ ಸೇರಿದಂತೆ ಕೊಡಗು ಜಿಲ್ಲೆಯಾದ್ಯಂತ ನಡೆಯುತ್ತಿರುವ ಬೃಹತ್ ಭೂಪರಿವರ್ತನೆ ಮತ್ತು ಭೂ ವಿಲೇವಾರಿ ತಕ್ಷಣ ಸ್ಥಗಿತಗೊಳಿಸಬೇಕು ಎಂದು ಒತ್ತಾಯಿಸಿ ಜೂ.24ರಂದು ಗೋಣಿಕೊಪ್ಪ ಬಸ್ ನಿಲ್ದಾಣದಲ್ಲಿ ಮಾನವ ಸರಪಳಿ ಜನ ಜಾಗೃತಿ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಕೊಡವ ನ್ಯಾಷನಲ್ ಕೌನ್ಸಿಲ್ ಅಧ್ಯಕ್ಷ ಎನ್.ಯು.ನಾಚಪ್ಪ ತಿಳಿಸಿದ್ದಾರೆ.

ಸಿಎನ್‌ಸಿ ವತಿಯಿಂದ ಸೋಮವಾರ ಬೆಳಿಗ್ಗೆ 10.30 ಗಂಟೆಗೆ ಶಾಂತಿಯುತ ಮಾನವ ಸರಪಳಿ ನಿರ್ಮಿಸಿ ಕೊಡವ ಲ್ಯಾಂಡ್‌ನ ರಕ್ಷಣೆಗಾಗಿ ಹಕ್ಕೊತ್ತಾಯ ಮಂಡಿಸಲಾಗುವುದು ಎಂದು ಅವರು ಪತ್ರಿಕಾ ಹೇಳಿಕೆ ನೀಡಿದ್ದಾರೆ. ಸೋಮವಾರ ಗೋಣಿಕೊಪ್ಪದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಸರ್ವ ಕೊಡವರು ಪಾಲ್ಗೊಂಡು ಕೊಡವ ಲ್ಯಾಂಡ್‌ನ ರಕ್ಷಣೆಗಾಗಿ ಒಗ್ಗಟ್ಟು ಪ್ರದರ್ಶಿಸುವಂತೆ ಎನ್.ಯು.ನಾಚಪ್ಪ ಮನವಿ ಮಾಡಿದ್ದಾರೆ.

ಪೊನ್ನಣ್ಣ ಪ್ರತಿಕೃತಿ ದಹನ; ಕ್ಷಮಾಪಣೆಗೆ ಆಗ್ರಹ



ವೀಣಾ ಅಚ್ಚಯ್ಯ

ಮಡಿಕೇರಿ,ಜೂ.22– ಕೊಡಗಿನ ವಿಶಿಷ್ಟ ಸಂಸ್ಕೃತಿ ಪರಂಪರೆಗಳನ್ನು ಮರೆತು, ವಿರಾಜಪೇಟೆ ಕ್ಷೇತ್ರದ ಶಾಸಕರಾದ ಕೊಡವ ಸಮುದಾಯದ ಎ.ಎಸ್.ಪೊನ್ನಣ್ಣ ಅವರ ಪ್ರತಿಕೃತಿಯನ್ನು ಪ್ರತಿಭಟನೆಯ ಸಂದರ್ಭ ಬಿಜೆಪಿ ಪ್ರಮುಖರು ದಹಿಸಿರುವುದನ್ನು ಮಾಜಿ ಎಂಎಲ್‌ಸಿ ಶಾಂತೆಯಂಡ ವೀಣಾ ಅಚ್ಚಯ್ಯ ತೀವ್ರವಾಗಿ ಖಂಡಿಸಿದ್ದಾರೆ. ಈ ಬಗ್ಗೆ ಬಿಜೆಪಿ ಜಿಲ್ಲೆಯ ಜನತೆಯ ಕ್ಷಮಾಪಣೆ ಕೋರಬೇಕೆಂದು ಆಗ್ರಹಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ತಾನೊಬ್ಬ ಕೊಡವತಿಯಾಗಿ ಮಾತನಾಡುತ್ತಿದ್ದೇನೆಯೇ ಹೊರತು ರಾಜಕಾರಣಿಯಾಗಿ ಅಲ್ಲವೆಂದು ಸ್ಪಷ್ಟಪಡಿಸಿದ ಅವರು, ಇಂಧನ ದರ ಹೆಚ್ಚಳಕ್ಕೆ ಸಂಬಂಧಿಸಿದಂತೆ ವಿರಾಜಪೇಟೆಯಲ್ಲಿ ಬಿಜೆಪಿ ನಡೆಸಿದ ಪ್ರತಿಭಟನೆಯಲ್ಲಿ ಶಾಸಕ ಎ.ಎಸ್. ಪೊನ್ನಣ್ಣ ಅವರ ಪ್ರತಿಕೃತಿ ದಹಿಸಲಾಗಿದ್ದು, ಅದರಲ್ಲಿ ಸ್ಥಳೀಯ ಸಂಸ್ಕೃತಿಯ ಬಗ್ಗೆ ಅರಿವಿರುವ ಕೊಡವ ಮಹಿಳೆಯರು ಪಾಲ್ಗೊಂಡಿರುವ ಬಗ್ಗೆ ತೀವ್ರ ಬೇಸರ ವ್ಯಕ್ತಪಡಿಸಿದರು. ಬಿಜೆಪಿಯ ಇಂತಹ ನಡೆಗಳು ಆ ಪಕ್ಷದ ಅವನತಿಗೆ ಹಾದಿಯಾಗಿದೆ ಎಂದು ಕಟುವಾಗಿ ನುಡಿದರು. ಜಿಲ್ಲೆಯಲ್ಲಿ ಇಬ್ಬರು ಶಾಸಕರು ಉತ್ತಮ ಕೆಲಸ ಮಾಡುತ್ತಿರುವುದನ್ನು ಸಹಿಸಲಾಗದೆ ಅಸೂಯೆಯಿಂದ ಈ ರೀತಿಯ ಪ್ರತಿಭಟನೆಗಳನ್ನು ಮಾಡುತ್ತಿರುವುದು ಸರಿಯಲ್ಲ ಎಂದು ಅವರು ತಿಳಿಸಿದರು.

ಕೊಳ್ಳೇಗಾಲದಲ್ಲಿ ಹೆಣ್ಣು ಹುಲಿ ಸಾವು, ಗುಂಡ್ಲುಪೇಟೆಯಲ್ಲಿ ವಿದ್ಯುತ್ ಸ್ಪರ್ಶಿಸಿ ಚಿರತೆ ಬಲಿ



ಕೊಳ್ಳೇಗಾಲದ ವನ್ಯಜೀವಿ ವಿಭಾಗದ ಲೊಕ್ಕನಹಳ್ಳಿ ಅರಣ್ಯ ಪ್ರದೇಶದಲ್ಲಿ ಪತ್ತೆಯಾದ ಹುಲಿ ಅಂತ್ಯಕ್ರಿಯೆ ಮಾಡುತ್ತಿರುವುದು.

ಮೈಸೂರು,ಜೂ.22(ಎಂಟಿವೈ)– ಚಾಮರಾಜನಗರ ಜಿಲ್ಲೆಯ ಕೊಳ್ಳೇಗಾಲದ ವನ್ಯಜೀವಿ ವಿಭಾಗದ ಲೊಕ್ಕನಹಳ್ಳಿ ಅರಣ್ಯ ಪ್ರದೇಶದಲ್ಲಿ ಹೆಣ್ಣು ಹುಲಿಯೊಂದರ ಕಳೇಬರಹ ಪತ್ತೆಯಾಗಿದ್ದರೆ, ಗುಂಡ್ಲುಪೇಟೆ ತಾಲೂಕಿನ ನೇನೆಕಟ್ಟೆ ಗ್ರಾಮದ ಬಳಿ ಹೆಣ್ಣು ಚಿರತೆಯೊಂದು ವಿದ್ಯುತ್ ತಂತಿ ಸ್ಪರ್ಶಿಸಿ ಮೃತಪಟ್ಟಿದೆ.

ಬಿಳಿಗಿರಿ ರಂಗನಾಥ ಹುಲಿ ಸಂರಕ್ಷಿತ ಪ್ರದೇಶ ವ್ಯಾಪ್ತಿಗೆ ಬರುವ ಕೊಳ್ಳೇಗಾಲ ವನ್ಯಜೀವಿ ವಿಭಾಗದ ಲೊಕ್ಕನಹಳ್ಳಿ ಅರಣ್ಯ ಪ್ರದೇಶದಲ್ಲಿ ಗಸ್ತು ಸಿಬ್ಬಂದಿಗಳಿಗೆ ಹುಲಿಯೊಂದರ ಕಳೇಬರಹ ಕಂಡು ಬಂದಿತ್ತು. ಅದನ್ನು ಪರಿಶೀಲಿಸಿದಾಗ ಹುಲಿ ಮೃತಪಟ್ಟು ಎರಡು ದಿನ ಆಗಿರುವುದು ಖಚಿತವಾಯಿತು. ವಿಷಯ ತಿಳಿದು ಸ್ಥಳಕ್ಕೆ ಬಿಳಿಗಿರಿರಂಗನಾಥ ಹುಲಿ ಸಂರಕ್ಷಿತ ಪ್ರದೇಶ (ಬಿಆರ್‌ಟಿ) ಡಿಸಿಎಫ್ ದೀಪಾ ಜೆ.ಕಂಟ್ರಾಕ್ಟರ್, ಎಸಿಎಫ್ ನಂದಗೋಪಾಲ್, ವೈಲ್ಡ್ ಲೈಫ್ ವಾರ್ಡನ್ ಕೃತಿಕಾ ಆಲನಹಳ್ಳಿ, ಕೊಳ್ಳೇಗಾಲದ ಆರ್‌ಎಫ್‌ಓ ವಾಸು, ಪಶುವೈದ್ಯರಾದ ಡಾ.ವಾಸಿಂ ಮಿರ್ಜಾ, ಡಾ.ಶಿವರಾಜ್, ಸ್ವಯಂಸೇವಾ ಸಂಸ್ಥೆಯ ಪ್ರತಿನಿಧಿಯಾಗಿ ಮಲ್ಲೇಶಪ್ಪ ಹಾಗೂ ಸಿಬ್ಬಂದಿಗಳು ಪರಿಶೀಲಿಸಿದಾಗ ಮೃತಪಟ್ಟ ಹೆಣ್ಣು ಹುಲಿ 8–9 ವರ್ಷದ್ದಾಗಿದ್ದು, ವಯೋಸಹಜ ಸಮಸ್ಯೆಯಿಂದ ಮೃತಪಟ್ಟಿರುವುದಾಗಿ ದೃಢಪಟ್ಟಿದೆ.

ಬಂಡೀಪುರದ ಪಶುವೈದ್ಯ ಡಾ. ಮಿರ್ಜಾ ವಾಸಿಂ ಹಾಗೂ ಕೊಳ್ಳೇಗಾಲದ ಪಶುವೈದ್ಯ ಡಾ.ಶಿವರಾಜ್ ಅವರಿಂದ ಮರಣೋತ್ತರ ಪರೀಕ್ಷೆ ನಡೆಸಲಾಯಿತು. ಬಳಿಕ ನಿಯಮಾನುಸಾರ ಹುಲಿ ಕಳೇಬರಹ ಸುಟ್ಟು ಅಂತ್ಯಕ್ರಿಯೆ ನೆರವೇರಿಸಲಾಯಿತು.

ವಿದ್ಯುತ್ ಸ್ಪರ್ಶ ಚಿರತೆ ಬಲಿ: ಗುಂಡ್ಲುಪೇಟೆ ತಾಲೂಕಿನ ನೇನೆಕಟ್ಟೆ ಗ್ರಾಮದ ಬಳಿ ವಿದ್ಯುತ್ ತಂತಿ ಸ್ಪರ್ಶಿಸಿ 2–3 ವರ್ಷದ ಹೆಣ್ಣು ಚಿರತೆಯೊಂದು ಮೃತಪಟ್ಟಿದೆ. ವಿದ್ಯುತ್ ತಂತಿ ಹಾದು ಹೋಗಿದ್ದ ಪಕ್ಕದಲ್ಲಿದ್ದ ಮರವೇರಿ ವಿರಮಿಸಲು ಮುಂದಾದ ಹೆಣ್ಣು ಚಿರತೆಗೆ ಆಕಸ್ಮಿಕವಾಗಿ ವಿದ್ಯುತ್ ತಂತಿ ತಗುಲಿ ಸ್ಥಳದಲ್ಲೇ ಮೃತಪಟ್ಟಿದೆ.

ಗ್ರಾಮದ ರಸ್ತೆ ಬದಿ ಚಿರತೆಯೊಂದರ ಮೃತದೇಹ ಬಿದ್ದಿರುವುದನ್ನು ಗಮನಿಸಿದ ಗ್ರಾಮಸ್ಥರು ಅರಣ್ಯ ಸಿಬ್ಬಂದಿ ಗಮನಕ್ಕೆ ತಂದಿದ್ದರು. ಸ್ಥಳಕ್ಕೆ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶ ನಿರ್ದೇಶಕ ಎಸ್. ಪ್ರಭಾಕರನ್, ಎಸಿಎಫ್ ಜಿ.ರವೀಂದ್ರ, ಗುಂಡ್ಲುಪೇಟೆ ಬಫರ್ ಝೋನ್ ಆರ್‌ಎಫ್‌ಓ ಮಲ್ಲೇಶ್, ಪಶುವೈದ್ಯ ಡಾ. ಮಿರ್ಜಾ ವಾಸಿಂ, ವನ್ಯಜೀವಿ ಪರಿಪಾಲಕ ನಂಜುಂಡರಾಜೇ ಅರಸ್, ಡಿಆರ್‌ಎಫ್‌ಓ ಜಿ.ಪಿ.ಭರತ್, ಗಸ್ತುಪಾಲಕ ಪರಸಪ್ಪ ಹಾಗೂ ಇನ್ನಿತರರು ಚಿರತೆ ಮೃತದೇಹ ಪರಿಶೀಲಿಸಿದರು. ಸ್ಥಳ ಪರಿಶೀಲನೆ ವೇಳೆ ಮರದ ಮೇಲೆ ವಿದ್ಯುತ್ ತಂತಿ ಸ್ಪರ್ಶಿಸಿ ನೆಲಕ್ಕೆ ಬಿದ್ದಿರುವ ಕುರುಹುಗಳು ಪತ್ತೆಯಾದ ಹಿನ್ನೆಲೆಯಲ್ಲಿ ಚಿರತೆ ಸಾವಿಗೆ ನಿಖರ ಕಾರಣ ಖಚಿತವಾದ ಬಳಿಕ ಮರಣೋತ್ತರ ಪರೀಕ್ಷೆ ನಡೆಸಿ, ಚಿರತೆ ಮೃತದೇಹವನ್ನು ಅರಣ್ಯ ಪ್ರದೇಶದಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಯಿತು.



ಗುಂಡ್ಲುಪೇಟೆ ತಾಲೂಕಿನ ನೇನೆಕಟ್ಟೆ ಗ್ರಾಮದ ಬಳಿ ವಿದ್ಯುತ್ ತಂತಿ ಸ್ಪರ್ಶಿಸಿ, ಹೆಣ್ಣು ಚಿರತೆಯೊಂದು ಮೃತಪಟ್ಟಿರುವುದನ್ನು ಪರಿಶೀಲಿಸುತ್ತಿರುವ ಅರಣ್ಯಾಧಿಕಾರಿಗಳು.

ವಿದ್ಯಾರ್ಥಿನಿಲಯ, ವಸತಿ ಶಾಲೆಗಳ ಮೂಲಸೌಕರ್ಯ ಪರಿಶೀಲನೆಗೆ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಮಂಜುನಾಥ ಪ್ರಸಾದ್ ಸೂಚನೆ



ಜಿಲ್ಲಾ ಪ್ರಗತಿ ಪರಿಶೀಲನಾ ಸಭೆಯಲ್ಲಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಎನ್. ಮಂಜುನಾಥ ಪ್ರಸಾದ್ ಮಾತನಾಡಿದರು.

ಚಾಮರಾಜನಗರ, ಜೂ.22– ಜಿಲ್ಲೆಯ ವಿದ್ಯಾರ್ಥಿನಿಲಯ, ವಸತಿ ಶಾಲೆಗಳಲ್ಲಿ ಮಕ್ಕಳಿಗೆ ಒದಗಿಸಿರುವ ಮೂಲಸೌಲಭ್ಯಗಳನ್ನು ಪರಿಶೀಲಿಸುವಂತೆ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಎನ್.ಮಂಜುನಾಥ ಪ್ರಸಾದ್ ಅಧಿಕಾರಿಗಳಿಗೆ ಸೂಚನೆ ನೀಡಿದರು.

ನಗರದ ಜಿಲ್ಲಾ ಪಂಚಾಯತ್ ಕೆಡಿಪಿ ಸಭಾಂಗಣದಲ್ಲಿಂದು ನಡೆದ ಜಿಲ್ಲಾ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಜಿಲ್ಲೆಯ ಎಲ್ಲಾ ವಸತಿ ಶಾಲೆಗಳು ಹಾಗೂ ವಿದ್ಯಾರ್ಥಿನಿಲಯಗಳಲ್ಲಿ ಕಡ್ಡಾಯವಾಗಿ ವಿಸಿಟರ್ ಪುಸ್ತಕಗಳನ್ನು ಇಡಬೇಕು. ಸಮಾಜ ಕಲ್ಯಾಣ, ಪರಿಶಿಷ್ಟ ಪಂಗಡಗಳ ಹಾಗೂ ಹಿಂದುಳಿದ ವರ್ಗಗಳ ಇಲಾಖೆ ಅಧಿಕಾರಿಗಳ ಕರ್ತವ್ಯ ಮಾತ್ರವಲ್ಲದೇ, ಜಿಲ್ಲಾ ಮಟ್ಟದ ಎಲ್ಲಾ ಇಲಾಖಾ ಅಧಿಕಾರಿಗಳು ಆಗಾಗ್ಗೆ ವಸತಿ ಶಾಲೆಗಳು, ವಿದ್ಯಾರ್ಥಿನಿಲಯಗಳಿಗೆ ಭೇಟಿ ನೀಡಿ ವ್ಯವಸ್ಥೆಗಳನ್ನು ಪರಿಶೀಲಿಸಿ ಅಲ್ಲಿನ ಕುಂದುಕೊರತೆಗಳ ಬಗ್ಗೆ ವಿಸಿಟರ್ ಪುಸ್ತಕದಲ್ಲಿ ನಮೂದಿಸುವಂತೆ ಅವರು ನಿರ್ದೇಶನ ನೀಡಿದರು.

ಜಿಲ್ಲೆಯ ಕಾಡಂಚಿನ ಗ್ರಾಮಗಳಿಗೆ ರಸ್ತೆ, ವಿದ್ಯುತ್ ವ್ಯವಸ್ಥೆ, ಕುಡಿಯುವ ನೀರು ಸೇರಿದಂತೆ ಇತರ ಮೂಲಸೌಲಭ್ಯಗಳನ್ನು ಕಲ್ಪಿಸಲು ಅರಣ್ಯ ಇಲಾಖೆ ಅಡ್ಡಿಪಡಿಸಬಾರದು. ಸಾಮಾಜಿಕ ಅರಣ್ಯ ವಿಭಾಗದಿಂದ ಜನರಿಗೆ ವಿತರಿಸುವ ಸಸಿಗಳು ಹಾಗೂ ರಸ್ತೆಬದಿ ನೆಡುತೋಪಗಳನ್ನು ಕ್ರಮಬದ್ಧವಾಗಿ ನಿರ್ವಹಿಸಬೇಕು ಎಂದರು.

ಶಾಲಾ ಕೊಠಡಿ, ಸುತ್ತುಗೋಡೆ, ಅಂಗನವಾಡಿ ಕಟ್ಟಡಗಳು, ಶೌಚಾಲಯಗಳ ದುರಸ್ತಿ ಸೇರಿದಂತೆ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗಾಗಿ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಸೇರಿದಂತೆ ಎಲ್ಲಾ ಇಲಾಖೆಗಳು ಕೆಟಿಪಿಪಿ ನಿಯಮಾನುಸಾರ ನಿಗದಿತ ಅವಧಿಯಲ್ಲಿ ಟೆಂಡರ್ ಕರೆಯುವ ಪ್ರಕ್ರಿಯೆಗಳನ್ನು ಪೂರ್ಣಗೊಳಿಸಬೇಕು. ಟೆಂಡರ್ ಪ್ರಕ್ರಿಯೆ ಮುಗಿಸಿ ಅಭಿವೃದ್ಧಿಗೆ ವೇಗ ನೀಡಬೇಕು ಎಂದು ತಿಳಿಸಿದರು.

ಜಿಲ್ಲೆಯಲ್ಲಿ ಇತ್ತೀಚೆಗೆ ಉತ್ತಮ ಮಳೆಯಾಗಿದೆ. ಮುಂದೆಯೂ ಮಳೆಯಾಗುವುದಾಗಿ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ರೈತರಿಗೆ ಅಗತ್ಯವಾದ ಬಿತ್ತನೆ ಬೀಜ, ರಸಗೊಬ್ಬರ ಪೂರೈಕೆಯಲ್ಲಿ ಕೊರತೆಯಾಗದಂತೆ ಅಗತ್ಯ ದಾಸ್ತಾನು ಮಾಡಿಕೊಳ್ಳಬೇಕು ಎಂದು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳಾದ ಎನ್.ಮಂಜುನಾಥ ಪ್ರಸಾದ್ ಅಧಿಕಾರಿಗಳಿಗೆ ಸೂಚಿಸಿದರು.

ಇದೇ ವೇಳೆ ಮಾತನಾಡಿದ ಜಿಲ್ಲಾಧಿಕಾರಿ ಶಿಲ್ಪಾನಾಗ್, ಆಡಳಿತವನ್ನು ಚುರುಕುಗೊಳಿಸಲಾಗಿದೆ. ಜಿಲ್ಲೆಯಲ್ಲಿ ಉತ್ತಮ ಮಳೆಯಿಂದ ಕುಡಿಯುವ ನೀರಿನ ಪರಿಸ್ಥಿತಿ ಸುಧಾರಿಸಿದೆ. ಆರ್‌ಓ ಪ್ಲಾಂಟ್‌ಗಳನ್ನು ಸುಸ್ಥಿತಿಯಲ್ಲಿಟ್ಟುಕೊಳ್ಳಲಾಗಿದೆ. ಜಿಲ್ಲೆಯಲ್ಲಿ ಮಳೆ–ಗಾಳಿಯಿಂದ ಈ ಬಾರಿ ಬಾಳೆ ಬೆಳೆ ಸಾಕಷ್ಟು ನಷ್ಟವಾಗಿದ್ದು, ಫಸಲ್ ಭಿಮಾ ಯೋಜನೆಗೆ ಬಾಳೆ ಹಾಗೂ ತೆಂಗು ಬೆಳೆಯನ್ನು ಒಳಪಡಿಸಿದರೆ ರೈತರಿಗೆ ಅನುಕೂಲವಾಗಲಿದೆ. ಅಲ್ಲದೆ, ಜಿಲ್ಲೆಯಲ್ಲಿ ಅರಿಶಿಣ ಸಂಸ್ಕರಣಾ ಹಾಗೂ ಈರುಳ್ಳಿ ಶೇಖರಣಾ ಘಟಕ ತೆರೆಯಲು ಯೋಜನಾ ವರದಿ ಸಿದ್ದಪಡಿಸಲಾಗಿದೆ ಎಂದು ಸಭೆಗೆ ತಿಳಿಸಿದರು.

ಜಿಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಆನಂದ್ ಪ್ರಕಾಶ್ ಮೀನಾ, ಬಿಆರ್‌ಟಿ ಹುಲಿ ಸಂರಕ್ಷಿತ ಪ್ರದೇಶದ ಉಪ ಅರಣ್ಯ ಸಂರಕ್ಷಣಾಧಿಕಾರಿ ದೀಪಾ ಜೆ. ಕಾಂಟ್ರಾಕ್ಟರ್, ಮಲೆ ಮಹದೇಶ್ವರ ವನ್ಯಜೀವಿ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ಡಾ. ಸಂತೋಷ್‌ಕುಮಾರ್, ಕಾವೇರಿ ವ್ಯಜೀವಿ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ಸುರೇಂದ್ರ, ಹೆಚ್ಚುವರಿ ಜಿಲ್ಲಾಧಿಕಾರಿ ಗೀತಾ ಹುಡೇದ, ಜಿಪಂ ಉಪಕಾರ್ಯದರ್ಶಿ ಪಿ. ಲಕ್ಷ್ಮೀ ಇತರರು ಸಭೆಯಲ್ಲಿ ಉಪಸ್ಥಿತರಿದ್ದರು.

ತಮಿಳುನಾಡು ಕಳ್ಳಬಟ್ಟಿ ದುರಂತ: ಜಿಲ್ಲೆಯ ಹಳೇ ಅಡ್ಡೆಗಳ ಮೇಲೆ ಅಬಕಾರಿ ಅಧಿಕಾರಿಗಳ ದಿಢೀರ್ ದಾಳಿ

ಚಾಮರಾಜನಗರ: ತಮಿಳುನಾಡಿನಲ್ಲಿ ಕಳ್ಳಬಟ್ಟಿ ದುರಂತದಲ್ಲಿ ಹಲವರು ಸಾವನ್ನಪ್ಪಿದ ಹಿನ್ನೆಲೆ ಗಡಿ ಜಿಲ್ಲೆಯಲ್ಲಿ ಅಬಕಾರಿ ಅಧಿಕಾರಿಗಳು ಹಳೇ ಅಡ್ಡೆಗಳಿಗೆ ದಾಳಿ ಮಾಡಿದ್ದು ಮಾತ್ರವಲ್ಲದೆ, ಹಳೇ ಕೇಸ್‌ಗಳ ಆರೋಪಿಗಳ ಮನೆಗಳಲ್ಲಿ ತಪಾಸಣೆ ನಡೆಸುವ ಜೊತೆಗೆ ಕಳ್ಳಬಟ್ಟಿ ತಯಾರಿಕೆ ಬಗ್ಗೆ ಜಾಗೃತಿ ಮೂಡಿಸಿ, ಇಂಥ ಪ್ರಕರಣಗಳು ಕಂಡು ಬಂದರೆ ತಕ್ಷಣ ಮಾಹಿತಿ ನೀಡುವಂತೆ ಸೂಚನೆ ಕೊಟ್ಟಿದ್ದಾರೆ.

ಅಬಕಾರಿ ಉಪ ಆಯುಕ್ತ ನಾಗಶಯನ ಮಾರ್ಗದರ್ಶನದಲ್ಲಿ ಉಪ ಅಧೀಕ್ಷಕ ಮೋಹನ್ ಕುಮಾರ್, ಇನ್ಸ್‌ಪೆಕ್ಟರ್‌ಗಳಾದ ಸುನೀಲ್, ಉಮಾಶಂಕರ್, ಸುರೇಶ್, ಹನೂರು ಪೊಲೀಸ್ ಇನ್ಸ್‌ಪೆಕ್ಟರ್ ಮನೋಜ್‌ಕುಮಾರ್ ಹಾಗೂ ಸಿಬ್ಬಂದಿ ಚಾಮರಾಜನಗರ ತಾಲೂಕಿನ ಮೂಕನಪಾಳ್ಯ ಗ್ರಾಮದ ಹಳೇ ಆರೋಪಿಗಳ ಮನೆ ಹಾಗೂ ಕಳ್ಳಬಟ್ಟಿ ಸ್ಥಳಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿ, ಯಾವುದೇ ಅಕ್ರಮಗಳು ಇಲ್ಲದಿರುವುದನ್ನು ಖಚಿತಪಡಿಸಿಕೊಂಡಿದ್ದಾರೆ.

ಹನೂರು ತಾಲೂಕಿನ ಕೊತ್ತನೂರು, ಸಾಹೇಬರ ದೊಡ್ಡಿ ವೀರನಾಯ್ಕನ ದೊಡ್ಡಿ, ಮಾರಳ್ಳಿ, ದೊಮ್ಮನಗದ್ದೆ ಹಾಗೂ ಕಾಂಚಳ್ಳಿ ಗ್ರಾಮಗಳಲ್ಲಿ ಹಾಗೂ ಸುತ್ತಮುತ್ತಲ ಬೆಟ್ಟಗುಡ್ಡ ಪ್ರದೇಶಗಳಲ್ಲಿ ಕಳ್ಳಭಟ್ಟಿ ಮಾಡುತ್ತಿದ್ದ ಹಳೇ ಸ್ಥಳಗಳನ್ನು ಪರಿಶೀಲಿಸಿದ್ದಾರೆ. ಹಳೇ ಆರೋಪಿಗಳ ಮನೆಗಳ ಮೇಲೆ ದಾಳಿ ಮಾಡಿದ ಪೊಲೀಸರು ಯಾವುದೇ ರೀತಿಯ ಕಳ್ಳಬಟ್ಟಿ ತಯಾರಿಸದಂತೆ ತಿಳಿವಳಿಕೆ ಹೇಳಿದ್ದಾರೆ.

ಅಬಕಾರಿ ಉಪ ಅಧೀಕ್ಷಕ ನಾಗಶಯನ ಮಾಹಿತಿ ನೀಡಿ, ಈಗಾಗಲೇ ಚಾ.ನಗರ ಜಿಲ್ಲೆಯಲ್ಲಿ ಕಳ್ಳಬಟ್ಟಿಯನ್ನು ಸಂಪೂರ್ಣವಾಗಿ ನಿರ್ಮೂಲನೆ ಮಾಡಲಾಗಿದೆ. ತಮಿಳುನಾಡಿನಲ್ಲಿ ನಡೆದ ದುರಂತದಿಂದ ಮುನ್ನೆಚ್ಚರಿಕೆ ಕ್ರಮವಾಗಿ ಜಿಲ್ಲೆಯಲ್ಲಿ ದಿಢೀರ್ ಪರಿಶೀಲನೆ ನಡೆಸಿದ್ದು, ಯಾವುದೇ ರೀತಿ ಕಳ್ಳಬಟ್ಟಿ ಪ್ರಕರಣ ಕಂಡುಬಂದಿಲ್ಲ ಎಂದು ತಿಳಿಸಿದ್ದಾರೆ.

ಹರದನಹಳ್ಳಿಯಲ್ಲಿ ಸೆಸ್ಕ್‌ನಿಂದ ನಡೆದ ಜನಸಂಪರ್ಕ ಸಭೆ

ಹೊನ್ನೇಗೌಡನಹಳ್ಳಿಗೆ ವಿದ್ಯುತ್ ಸಂಪರ್ಕಕ್ಕೆ ಒತ್ತಾಯ



ಹರದನಹಳ್ಳಿ ಗ್ರಾಮದಲ್ಲಿರುವ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದ ಉಪ ವಿಭಾಗ ಕಚೇರಿಯಲ್ಲಿ ನಡೆದ ಜನಸಂಪರ್ಕ ಸಭೆಯಲ್ಲಿ ಸೆಸ್ಕ್ ಅಧಿಕಾರಿಗಳಿಗೆ ರೈತರು ದೂರು ಸಲ್ಲಿಸಿದರು.

ಚಾಮರಾಜನಗರ ಜೂ.22– ತಾಲೂಕಿನ ಮಣಜನೂರು ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿರುವ ತಮಿಳುನಾಡು ಗುಮಠಾಪುರಕ್ಕೆ ಹೊಂದಿಕೊಂಡಿರುವ ಕಂದಾಯ ಗ್ರಾಮದಲ್ಲಿ 14 ವಾಸದ ಮನೆಗಳಿದ್ದು, ರೈತರು 18 ಕೊಳವೆ ಭಾವಿಗಳನ್ನು ಹೊಂದಿದ್ದರೂ ವಿದ್ಯುತ್ ಸಂಪರ್ಕ ಇಲ್ಲದೇ ತೊಂದರೆ ಅನುಭವಿಸುತ್ತಿದ್ದಾರೆ ಎಂದು ಗ್ರಾಮಸ್ಥರು ಹಾಗೂ ರೈತರು ಇಂದು ಸೆಸ್ಕ್ ಅಧಿಕಾರಿಗಳಿಗೆ ದೂರು ಸಲ್ಲಿಸಿದರು.

ತಾಲೂಕಿನ ಹರದನಹಳ್ಳಿ ಗ್ರಾಮದಲ್ಲಿರುವ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದ ಉಪ ವಿಭಾಗ ಕಚೇರಿಯಲ್ಲಿ ನಡೆದ ಜನ ಸಂಪರ್ಕ ಸಭೆಯಲ್ಲಿ ಮಾತನಾಡಿದ ಗ್ರಾಮಸ್ಥರು, ಹೊನ್ನೇಗೌಡನ ಹಳ್ಳಿಯು (ಕೈಲಾಸ ಭೂಮಿ) 1835ರಿಂದ ಜಾರಿಯಲ್ಲಿದ್ದು ಸುಮಾರು 300 ಎಕರೆ ಉಳುಮೆ ಪ್ರದೇಶವನ್ನು ಹೊಂದಿದೆ, ಕೆಲವು ರೈತರು ಸ್ವಂತ ಜಮೀನಿನಲ್ಲಿ ಮನೆಗಳನ್ನು ನಿರ್ಮಿಸಿಕೊಂಡು ಕತ್ತಲೆಯಲ್ಲಿ ಜೀವನ ನಡೆಸುತ್ತಿದ್ದಾರೆ, 6 ಮಂದಿ ರೈತರು ಮಾತ್ರ ಸೋಲಾರ್ ಸಹಾಯದಿಂದ ವ್ಯವಸಾಯ ಮಾಡುತ್ತಿದ್ದಾರೆ, ವಿದ್ಯುತ್ ಇಲ್ಲದ ಪರಿಣಾಮ ಕಾಡು ಪ್ರಾಣಿಗಳ ಹಾವಳಿಯಿಂದ ಬೆಳೆದ ಫಸಲು ಹಾನಿಯಾಗುತ್ತಿದೆ, ಇದರಿಂದ ರೈತರು ಜೀವನ ನಡೆಸಲು ಕಷ್ಟವಾಗುತ್ತಿದೆ. ಹೀಗಾಗಿ ಅರಣ್ಯ ಇಲಾಖೆಯ ಸಹಕಾರ ಪಡೆದು ಗ್ರಾಮಕ್ಕೆ ವಿದ್ಯುತ್ ಸಂಪರ್ಕ ಕಲ್ಪಿಸಬೇಕೆಂದು ಮೇಗಾ ನಾಯಕ್ ಮನವಿ ಮಾಡಿದರು.

ಇದಕ್ಕೆ ಪ್ರತಿಕ್ರಿಯಿಸಿದ ಸೆಸ್ಕ್ ವಿಭಾಗದ ಲೆಕ್ಕಾಧಿಕಾರಿ ಭಾಸ್ಕರ್, ಹಿರಿಯ ಅಧಿಕಾರಿಗಳ ಗಮನಕ್ಕೆ ತರುವ ಮೂಲಕ ಸಮಸ್ಯೆಗಳನ್ನು ಬಗೆಹರಿಸುವುದಾಗಿ ತಿಳಿಸಿದರು. ಪುಟ್ಟರಾಜು ಎಂಬುವರು ಮಾತನಾಡಿ, ಹರದನಹಳ್ಳಿ ಉಪ ವಿಭಾಗಕ್ಕೆ ಹೆಚ್ಚುವರಿ ಲೈನ್‌ಮೆನ್‌ಗಳ ಅವಶ್ಯಕತೆ ಇದ್ದು ನೇಮಕ ಮಾಡಿಕೊಡುವಂತೆ ತಿಳಿಸಿದರು.


ಸಿದ್ದಯ್ಯನಪುರ ಗ್ರಾಮದ ವ್ಯಾಪ್ತಿಯಲ್ಲಿರುವ ಅನಧಿಕೃತ ಪಂಪ್‌ಸೆಟ್‌ಗಳಲ್ಲಿ ವಿದ್ಯುತ್ ಸಂಪರ್ಕ ಪಡೆದುಕೊಂಡಿದ್ದು, ಇವುಗಳನ್ನು ಪತ್ತೆ ಮಾಡಿ, ಕಡಿತಗೊಳಿಸಬೇಕು ಎಂದು ರಮೇಶ್ ಒತ್ತಾಯಿಸಿದರು. ಬಿಸಲವಾಡಿ ಗ್ರಾಮದ ರೈತ ವಿಜಯಕುಮಾರ್ ಸೋಲರ್ ಪಂಪ್‌ಸೆಟ್ ಅಳವಡಿಕೆಗಾಗಿ ಸೌರ ವಿದ್ಯುತ್ ಕಲ್ಪಿಸಿಕೊಳ್ಳಲು ಅರ್ಜಿ ಸಲ್ಲಿಸಿದ್ದು, ಶೀಘ್ರ ಮಂಜೂರಾತಿ ನೀಡಬೇಕೆಂದು ಮನವಿ ಮಾಡಿಕೊಂಡರು.

ಸಭೆಯಲ್ಲಿ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ದ್ರುಪದ್, ಕಂದಾಯ ಅಧಿಕಾರಿ ಮಹದೇವಸ್ವಾಮಿ, ಸಹಾಯಕ ಇಂಜಿನಿಯರ್‌ಗಳಾದ ವಸಂತ್ ಕುಮಾರ್, ನವೀನ್, ಸತೀಶ್, ರೀತೇಶ್, ಮಹದೇವ ಸ್ವಾಮಿ, ಮೊದಲಾದವರು ಇದ್ದರು.

ವಾರದ ಮಿತ್ರ
ಸಾಪ್ತಾಹಿಕ ಪುರವಣಿ
ಮೈಸೂರು ಮಿತ್ರ
ಭಾನುವಾರ 23-6-2024

● ಮಿರ್ಲೆ ಚಂದ್ರಶೇಖರ

ವಿಕಾರ ಮುಖಕ್ಕೆ ಅದೃಷ್ಟದ ಆಕಾರ!



ಮೆಲ್ ಗಿಬ್ಸನ್



ಐವತ್ತೈದು ವರ್ಷಗಳ ಹಿಂದೆ ಅಮೇರಿಕಾದ ನ್ಯೂಯಾರ್ಕ್‌ನಲ್ಲಿ ಇದ್ದ ಒಂದು ಕುಟುಂಬ ಜೀವನೋಪಾಯಕ್ಕಾಗಿ ಆಸ್ಟ್ರೇಲಿಯಾದಲ್ಲಿನ ಸಿಡ್ನಿಗೆ ಹೋಗುತ್ತದೆ. ಹನ್ನೊಂದು ಮಕ್ಕಳಿರುವ ಆ ಕುಟುಂಬದಲ್ಲಿ ಆರನೇ ಮಗನಿಗೆ ಹನ್ನೆರಡು ವರ್ಷ. ಆತ ಸುಂದರ ಹುಡುಗ ಹಾಗೂ ಸಾಹಸಿಗ. ಬಾಲ್ಯದಲ್ಲಿಯೇ ಆತನು ಸಿನಿಮಾ ಅಥವಾ ಸರ್ಕಸ್ ಕಲಾವಿದನಾಗಬೇಕೆಂಬ ಬಯಕೆಯುಳ್ಳವನಾಗಿದ್ದ.

ಒಂದು ಸಂಜೆ ನಿರ್ಜನವಾದ ಪ್ರದೇಶದಲ್ಲಿ ಮನೆಯ ಕಡೆ ನಡೆದು ಹೋಗುವಾಗ ಐದು ಜನ ಡಕಾಯಿತರು ಹಣಕ್ಕಾಗಿ ಬಾಲಕನ ಮೇಲೆ ಮಾರಕಾಸ್ತ್ರಗಳಿಂದ ದಾಳಿ ಮಾಡಿದರು. ಹುಡುಗ ಸಾಹಸಿಗನಾದ್ದರಿಂದ ಅವರೊಂದಿಗೆ ಸೆಣಸಾಡಿದ.

ಡಕಾಯಿತರು, ಆ ಹುಡುಗನನ್ನು ಮುಖ, ಮೂತಿ ಎನ್ನದೆ ಮಾರಣಾಂತಿಕವಾಗಿ ಚಚ್ಚಿದರು. ಕೊನೆಗೆ ಸತ್ತಿರಬಹುದೆಂದು ಅಲ್ಲೇ ಬಿಟ್ಟು ಹೋದರು. ಕೆಲಹೊತ್ತಿನ ನಂತರ ಗಸ್ತು ತಿರುಗುತ್ತಿದ್ದ ಪೊಲೀಸರು, ರಸ್ತೆಯಲ್ಲಿ ರಕ್ತದ ಮಡುವಿನಲ್ಲಿ ಬಿದ್ದಿದ್ದ ಆತನನ್ನು ಹೆಣವಿರಬೇಕೆಂದು ಶವಾಗಾರಕ್ಕೆ ಸಾಗಿಸಿದರು. ಅಲ್ಲಿ ವೈದ್ಯರು ದೇಹವನ್ನು ಪರೀಕ್ಷಿಸಿ, ಪ್ರಾಣ ಇರುವುದನ್ನು ಮನಗಂಡರು. ಹೊಸ ನರ್ಸ್ ಒಬ್ಬಳು ವಿರೂಪಗೊಂಡು ರಕ್ತಮಯವಾಗಿದ್ದ ಅವನ ಸ್ಥಿತಿಯನ್ನು ನೋಡಿ ಮೂರ್ಛೆ ಹೋದಳು. ಅವನ ಜಜ್ಜಿದ ಮುಖವು ಸೋರುತ್ತಿದ್ದ ರಕ್ತದಿಂದ ಕೂಡಿದ ಮಾಂಸದ ಮುದ್ದೆಯಾಗಿತ್ತು, ಮೂಗು ನೇತಾಡುತ್ತಿತ್ತು, ಹಲ್ಲುಗಳೆಲ್ಲ ಉದುರಿ ಹೋಗಿ, ದವಡೆಗಳೂ ಬರುಡೆಯಿಂದ ಬಹುತೇಕ ಬೇರ್ಪಟ್ಟಿದ್ದವು. ಒಂದು ಕಣ್ಣಿಗೆ ಸಂಪೂರ್ಣ ಹಾನಿಯಾಗಿತ್ತು. ಅದು ಗೂಡಿನಿಂದ ಹೊರಬಂದಿತ್ತು, ಕೈಕಾಲುಗಳ ಮೂಳೆ ಮುರಿದಿತ್ತು. ನುರಿತ ವೈದ್ಯರಿಂದ ವರ್ಷಗಟ್ಟಲೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ತರುವಾಯ ಸುರದ್ರೂಪಿಯಾಗಿದ್ದ ಹುಡುಗ ಕುರೂಪಿ ಮನುಷ್ಯನಾಗಿ ರೂಪುಗೊಂಡ. ಅವನಿಗೆ ಒಂದು ಕಣ್ಣಿಲ್ಲ, ಹಲ್ಲುಗಳಿಲ್ಲ, ಅವನೊಂದು ಜೀವಂತ ಮಾಂಸದ ಮುದ್ದೆಯಂತಿದ್ದ. ಕುರೂಪಿಯಾದ ಅವನನ್ನು ನೋಡಲು ಜನರು ಭಯಪಡುತ್ತಿದ್ದರು. ಭಯಂಕರವಾದ ಆಕೃತಿ, ಅಷ್ಟಾವಕ್ರನ ಅಣ್ಣ. ನೋಡಿದರೆ ಮೈ ನಡುಕ ತರುವಂತಹದ್ದು. ಅಂತಹ ರೂಪಸ್ಥನಿಗೆ ಎಲ್ಲೂ ಕೆಲಸ ಸಿಗಲಿಲ್ಲ. ಕೊನೆಗೆ ಮೊದಲು ಕಲಾವಿದನಾಗಿ ಸರ್ಕಸ್‌ಗೆ ಸೇರಬೇಕೆಂದು ಬಯಕೆ ಪಟ್ಟಿದ್ದನೋ ಅಲ್ಲಿಯೇ ಸಣ್ಣಪುಟ್ಟ ಕೆಲಸಗಳಿಗಾಗಿ ಸೇರಿಕೊಂಡ. ಪ್ರೇಕ್ಷಕರಿಗೆ ಅವನನ್ನು A Man with no Face ಎಂದು ಪರಿಚಯಿಸುತ್ತಿದ್ದರು. ಅಲ್ಲಿ ಮನುಷ್ಯನೆಂದು ಯಾರೂ ಗುರುತಿಸುತ್ತಿರಲಿಲ್ಲ. ತಿನ್ನಲು ಸರಿಯಾದ ಊಟವಿರಲಿಲ್ಲ, ಸಿಕ್ಕರೆ ತಿನ್ನಲು ಬಾಯಿಯಲ್ಲಿ ಹಲ್ಲುಗಳಿರಲಿಲ್ಲ, ಹಲ್ಲುಗಳನ್ನು ಕಟ್ಟಿಸಿಕೊಳ್ಳಲು ಅವನ ಬಳಿ ಹಣವಿರಲಿಲ್ಲ.

ಸಮಸ್ಯೆಗಳು ಹೇರಳವಾಗಿದ್ದರೂ ಚಿಕ್ಕಂದಿನ ಅಭ್ಯಾಸಗಳನ್ನು ಬಿಡದೆ ಪಾಲಿಸಿಕೊಂಡು ಬರುತ್ತಿದ್ದನು. ಬಿಡುವು ಸಿಕ್ಕಾಗಲೆಲ್ಲ ಚರ್ಚ್‌ಗೆ ಹೋಗಿ ಗಂಟೆಗಟ್ಟಲೆ ಕುಳಿತು ಧ್ಯಾನದಲ್ಲಿ ತಲ್ಲೀನನಾಗುತ್ತಿದ್ದ, ದುಡಿದಿದ್ದರಲ್ಲಿ ದಾನ ಧರ್ಮ ಮಾಡುತ್ತಿದ್ದ.

ಒಂದೆರಡು ವರ್ಷ ಹೀಗೆ ಅವನ ಜೀವನ ಕಳೆಯಿತು. ಚರ್ಚ್‌ನ ಫಾದರ್‌ರವರು ನಿತ್ಯವೂ ಬರುತ್ತಿದ್ದ ಅವನನ್ನು ನೋಡುತ್ತಿದ್ದರಿಂದ, ಮನುಷ್ಯ ಸ್ವರೂಪವನ್ನು ಕಳೆದುಕೊಂಡರೂ ಕಷ್ಟದಿಂದ ಬದುಕು ಸಾಗಿಸುತ್ತಿದ್ದ ಅವನ ಮೇಲಿನ ಅನುಕಂಪದಿಂದ ಅವನಿಗೆ ಏನಾದರೂ ಸಹಾಯ ಮಾಡಬೇಕೆಂಬ ಮನಸ್ಸಾಯಿತು. ಆಸ್ಟ್ರೇಲಿಯಾದ ಪ್ರತಿಬಾವಂತ ಪ್ಲಾಸ್ಟಿಕ್ ಸರ್ಜನ್ ಹಾಗೂ ಡೆಂಟಿಸ್ಟ್‌ರಿಂದ ಚರ್ಚ್ ಮೂಲಕವೇ ಚಿಕಿತ್ಸೆ ಕೊಡಿಸಿದರು.

> ಒಂದೆರಡು ವರ್ಷ ಹೀಗೆ ಅವನ ಜೀವನ ಕಳೆಯಿತು. ಚರ್ಚ್‌ನ ಫಾದರ್‌ರವರು ನಿತ್ಯವೂ ಬರುತ್ತಿದ್ದ ಅವನನ್ನು ನೋಡುತ್ತಿದ್ದರಿಂದ, ಮನುಷ್ಯ ಸ್ವರೂಪವನ್ನು ಕಳೆದುಕೊಂಡರೂ ಕಷ್ಟದಿಂದ ಬದುಕು ಸಾಗಿಸುತ್ತಿದ್ದ ಅವನ ಮೇಲಿನ ಅನುಕಂಪದಿಂದ ಅವನಿಗೆ ಏನಾದರೂ ಸಹಾಯ ಮಾಡಬೇಕೆಂಬ ಮನಸ್ಸಾಯಿತು. ಆಸ್ಟ್ರೇಲಿಯಾದ ಪ್ರತಿಬಾವಂತ ಪ್ಲಾಸ್ಟಿಕ್ ಸರ್ಜನ್ ಹಾಗೂ ಡೆಂಟಿಸ್ಟ್‌ರಿಂದ ಚರ್ಚ್ ಮೂಲಕವೇ ಚಿಕಿತ್ಸೆ ಕೊಡಿಸಿದರು.

ಆರು ತಿಂಗಳುಗಳ ಕಾಲ ಎಂಟು ಆಪರೇಷನ್ ನಡೆಯಿತು, ಕಳಚಿ ಬಿದ್ದಿದ್ದ ಕಣ್ಣಿಗೆ ಬದಲಾಗಿ ಗಾಜಿನ ಕಣ್ಣನ್ನು ಅಳವಡಿಸಿದರು. ದವಡೆಗಳ ವಕ್ರವನ್ನು ಸರಿಪಡಿಸಿದರು. ಅಂತೂ ಮನುಷ್ಯನ ರೂಪವನ್ನು ನೀಡಿದರು. ಕ್ರಮೇಣ ದಿನ ಕಳೆದಂತೆ ಆತ ಚೇತರಿಸಿಕೊಂಡ. ಬದುಕಿನಲ್ಲಿ ಆಗಬೇಕಿರುವ ಮದುವೆ ಮಕ್ಕಳೂ ಆಯಿತು. ಫಾದರ್‌ರವರ ಹೃದಯ ವೈಶಾಲತೆಯಿಂದ ಮರುರೂಪ ಪಡೆದ ಆ ಮನುಷ್ಯನೇ ಕಥಾನಾಯಕನಾಗಿ ಅವನದೇ ಕಥೆಯನ್ನಾದರಿಸಿ A Man without a face ಹೆಸರಿನ ಸಿನಿಮಾ ತೆಗೆಯಲಾಯಿತು. ಆ ಕಾಲಕ್ಕೆ ಸೂಪರ್ ಹಿಟ್ ಆಯಿತು. ನಂತರ ಒಂದರ ಹಿಂದೆ ಒಂದು ಸೂಪರ್‌ಡ್ಯೂಪರ್ ಹಿಟ್ ಫಿಲಂಗಳು ಬಂದವು, Summer City, Tim, The Hero, Mad Max, Brave Heart, Lathel Weapon ಹೀಗೆ ಐವತ್ತಕ್ಕೂ ಹೆಚ್ಚು ಚಿತ್ರಗಳು ಅವನು ನಾಯಕನಾಗಿ ನಟಿಸಿರುವ ಚಿತ್ರಗಳು. The Passion of Chist ಇವನೇ ನಿರ್ದೇಶಿಸಿದ ಸಿನಿಮಾ. Brave Heart ಸಿನಿಮಾದಲ್ಲಿ ನಿರ್ಮಾಪಕ, ನಿರ್ದೇಶಕ ಮತ್ತು ನಾಯಕ ನಟ ಎಲ್ಲವೂ ಇವನೆ.

ಈಗ ಬಹುಶಃ ಕೆಲವರಿಗೆ ಆ ನಾಯಕ ಯಾರೆಂದು ಗೊತ್ತಾಗಿರಬೇಕು, ಹೌದು ಅವನೇ ಹಾಲಿವುಡ್‌ನ ಪ್ರತಿಷ್ಟಿತ ನಟರುಗಳ ಸಾಲಿನಲ್ಲಿ ಹೆಸರು ಗಳಿಸಿ, ಮುಂಚೂಣಿಯಲ್ಲಿದ್ದ ಮೆಲ್‌ಗಿಬ್ಸನ್. ಪ್ರಸ್ತುತ ಇವನ ಆಸ್ತಿಯ ಅಂದಾಜು ಮೌಲ್ಯ 425 ಮಿಲಿಯನ್ ಡಾಲರ್ (3237 ಕೋಟಿ ರೂಪಾಯಿಗಳು). ಮೆಲ್‌ಗಿಬ್ಸನ್‌ಗೆ ಈಗ ಅರವತ್ತೇಳು ವರ್ಷ. ಗಳಿಕೆಯಲ್ಲಿ ಕುಬೇರನಾಗಿದ್ದರೂ ಎಂದಿನಂತೆ ಈಗಲೂ ಚರ್ಚ್ ಹತ್ತಿರ ದಾನ-ಧರ್ಮ ಮಾಡುತ್ತಿರುತ್ತಾನೆ.

ಅಮೇರಿಕಾ ದೇಶದ ನ್ಯೂಯಾರ್ಕ್‌ನ ಪೀಕ್‌ಸ್ಕಿಲ್‌ನಲ್ಲಿ 3 ಜನವರಿ 1956ರಂದು ಹೂಟ್ಟನ್‌ಗಿಬ್ಸನ್ ಮತ್ತು ಅನ್ನೆಪಾಟ್ರಿಷಿಯಾ ದಂಪತಿಯ ಮಗನಾಗಿ ಹುಟ್ಟಿ, ತನ್ನ ಹನ್ನೆರಡನೇ ವಯಸ್ಸಿಗೆ ಹೆತ್ತವರೊಂದಿಗೆ ಆಸ್ಟ್ರೇಲಿಯಾಕ್ಕೆ ಬಂದ. ಮೆಲ್ ಗಿಬ್ಸನ್ ಸಹೋದರಿಯ ಒತ್ತಾಸೆಯಿಂದ ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ಡ್ರಾಮಾಟಿಕ್ ಆರ್ಟ್‌ನಲ್ಲಿ ಕಲಿತವನಾಗಿದ್ದರಿಂದ ನಟನೆ ಸಲೀಸಾಯಿತು.


ಪ್ರಶಸ್ತಿ-ಪುರಸ್ಕಾರ: ಮೆಲ್‌ಗಿಬ್ಸನ್‌ನನಿಗೆ ಲೆಕ್ಕವಿಲ್ಲದಷ್ಟು ಪ್ರತಿಷ್ಠಿತ ಪ್ರಶಸ್ತಿಗಳು ದೊರೆತಿವೆ. ಪಟ್ಟಿ ಮಾಡುತ್ತಾ ಹೋದರೆ ಲೇಖನದ ಬದಲಾಗಿ ಪುಸ್ತಕವನ್ನೇ ಬರೆಯಬೇಕಾದೀತು. ಇಲ್ಲಿ ಹೆಸರಿಸಬಹುದಾದ ಹಾಗೂ ಯಾರೂ ಊಹಿಸಲಾಗದಿದ್ದ ಒಂದು ಪ್ರಶಸ್ತಿಯೆಂದರೆ 1985ರಲ್ಲಿ ಇವನಿಗೆ "Sexiest Man Alive" ಗೌರವ ಜನರಿಂದ ಲಭಿಸಿದ್ದು. ದೇಹವೆಲ್ಲ ಛಿದ್ರಛಿದ್ರವಾಗಿ ಮಾಂಸದ ಮುದ್ದೆಯಾಗಿದ್ದ ಕುರೂಪಿ ಮನುಷ್ಯನೊಬ್ಬ ಮುಂದೆ ಹಾಲಿವುಡ್‌ಗೆ ಪ್ರವೇಶಿಸಿ ಸೆಕ್ಸಿಯಸ್ಟ್ ಮ್ಯಾನ್ ಎಂದು ಜನರಿಂದ ಕರೆಸಿಕೊಳ್ಳುವುದು ಸುಲಭದ ಸಾಧನೆಯಲ್ಲ.

ಕಷ್ಟದ ಪರಿಸ್ಥಿತಿಗಳು ಎಂಥಹುದೇ ಬರಲಿ ಅವುಗಳನ್ನು ಮೆಲ್‌ಗಿಬ್ಸನ್‌ನಂತೆ ಧೈರ್ಯವಾಗಿ ಎದುರಿಸಿ ನಿಲ್ಲುವುದೇ "ಮನೋಧೈರ್ಯ".

ಡಿಸೆಂಬರ್ 2019-2022ರ ಅವಧಿಯಲ್ಲಿ ವಿಶ್ವದ ಮೂಲೆಮೂಲೆಯಲ್ಲಿ ಅಬ್ಬರಿಸಿ ಬೊಬ್ಬಿರಿದ ಕೊರೊನಾ ಕಹಳೆಯ ಕರ್ಕಶ ಸದ್ದು, ಟಿವಿ ನೋಡಲಿ, ಪತ್ರಿಕೆಗಳನ್ನು ಓದಲಿ, ಸ್ನೇಹಿತರೊಟ್ಟಿಗೆ ಮಾತನಾಡಲಿ ಎಲ್ಲರಲ್ಲೂ ವಿಷಯ ಒಂದೇ ಕೊರೊನಾ... ಕೊರೊನಾ...., ಕೇಳುವುದಕ್ಕೆ ಹೊಸ ಪದವಾದರು ಪ್ರಪಂಚದ 800 ಕೋಟಿ ಜನರಿಗೆ ಚಿರಪರಿಚಿತವಾಗಿರುವ, ಕೇಳಿದರೆ ಬೆಚ್ಚುವ ಶಬ್ದವಾಗಿತ್ತು ಸದ್ಯ ವಾಹಿನಿಗಳಲ್ಲಿ ಕೊರೊನಾ ಸುದ್ದಿಗಳು ಸತ್ತಿವೆ, ವೈಭವೀಕರಿಸಿ ಬಿತ್ತರಿಸಲು ಇತರೆ ವಿಷಯಗಳಿವೆ. ಇಲ್ಲದಿದ್ದರೆ ರೋಚಕ ವಿಷಯಗಳನ್ನು ಹುಡುಕಿ ಪ್ರಸಾರ ಮಾಡುತ್ತವೆ.

ಮಾಧ್ಯಮಗಳಲ್ಲಿ ಅಪಘಾತಗಳು ಹಾಗೂ ಅವುಗಳಿಂದ ಆಗುವ ಸಾವು ನೋವುಗಳ ಸುದ್ದಿಗಳು ಇಲ್ಲದ ದಿನವೇ ಇಲ್ಲ. ಜೀವನದಲ್ಲಿ ಅನಿರೀಕ್ಷಿತವಾಗಿ ಉದ್ಭವಿಸುವ ಸಮಸ್ಯೆಗಳನ್ನು ಎದುರಿಸಲು ಸಾಧ್ಯವಾಗದೆ ಜೀವನವನ್ನೇ ಅಂತ್ಯಗೊಳಿಸಿಕೊಂಡಿರುವ ಉದಾಹರಣೆಗಳು ನಮ್ಮ ಕಣ್ಣ ಮುಂದಿವೆ, ಜೀವನದಲ್ಲಿ ನೊಂದ ಜೀವಿಗಳಿಗೆ, ಮತ್ತೇ ಮೇಲೇಳಲಾಗದ ಸ್ಥಿತಿಯಲ್ಲಿ ಇರುವ ಜೀವಿಗಳಿಗೆ ಮೆಲ್ ಗಿಬ್ಸನ್‌ನ ಬದುಕು ಪ್ರೇರೇಪಣೆ ನೀಡಬಲ್ಲದು. ಬದುಕಿ ಏನಾದರೂ ಸಾಧಿಸಬಹುದು ಎಂಬ ಆಸೆಯನ್ನು ಚಿಗುರಿಸಬಲ್ಲದು. ಮಾಂಸದ ಮುದ್ದೆಯಾಗಿದ್ದವನು ಯಾರೂ ಊಹಿಸಲಾರದ ಮಟ್ಟಕ್ಕೆ ಏರಿದನೆಂದರೆ, ನಾವೇಕೆ ಸಣ್ಣಪುಟ್ಟ ಸಂಗತಿಗಳಿಗೆ ಹೆದರಬೇಕು. ಬಂದಿರುವ ರೋಗಕ್ಕೆ ಹಾಗೂ ಕಷ್ಟಗಳಿಗೆ ನಮ್ಮ ಮನೆಗಳಲ್ಲೇ, ನಮ್ಮ ಕೈಗಳಲ್ಲೇ ಔಷಧವಿದೆ, ಅದನ್ನು ಹೇಗೆ ಉಪಯೋಗಿಸಬೇಕು ಎಂಬ ಅರಿವಿನ ಕೊರತೆ ಇದ್ದವರಿಗೆ ತಳಮಟ್ಟದಿಂದ ಎದ್ದು ನಿಂತ ಸಾಧಕರ ಜೀವನವು ಪ್ರೇರಕ ಶಕ್ತಿಯಾಗುವುದು. ಒತ್ತಡದಲ್ಲಿರುವ ಇಂದಿನ ದಿನಗಳಲ್ಲಿ ಸಮಚಿತ್ತದಿಂದ ಬದುಕುವುದನ್ನು ರೂಡಿಸಿಕೊಳ್ಳಬೇಕಿದೆ. ಸಂಕಷ್ಟ ಕಾಲ ಯಾವಾಗ ಬರುತ್ತದೆ ಎಂಬುದನ್ನು ಊಹಿಸಲು ಸಾಧ್ಯವಿಲ್ಲ. ಇಸ್ರೇಲ್ ಪ್ಯಾಲೇಸ್ತೇನಿನ ಯುದ್ದದಲ್ಲಿ ಮೆಲ್ ಗಿಬ್ಸನ್ನಿನಂತೆ ಮಾಂಸ ಮುದ್ದೆಯಾಗಿರುವ ಮಂದಿಗಳು ಅದೆಷ್ಟೋ. ವಿಶ್ವದ ಜನತೆ ಜಾತಿಧರ್ಮಗಳ ಭೇದವಿಲ್ಲದೆ ಆಯುಧಗಳು, ಮದ್ದುಗುಂಡುಗಳು, ಬಾಂಬುಗಳನ್ನು ಬಳಸದೆ ಶಾಂತಿಯುತವಾಗಿ ನೆಲೆಸುವ ಕಾಲ ಬರುವ ಸೂಚನೆಗಳು ಕಾಣುತ್ತಿಲ್ಲ. ವೇಗದ ಜೀವನದಲ್ಲಿ ಅಶಾಂತಿ ತಾಂಡವಾಡುತ್ತಿರುವುದು ಸತ್ಯ ಯಾರೂ ನೆಮ್ಮದಿಯಾಗಿ ಬದುಕುತ್ತಿರುವಂತೆ ಕಾಣದು. ನಮ್ಮೆಲ್ಲರ ಅನುಭವಕ್ಕೆ ಬಂದ ಸಂಗತಿಯೆಂದರೆ ಇರುವ ದಿನಗಳೇ ಒಳ್ಳೆಯ ದಿನಗಳು ಬರುವ ದಿನಗಳು ಕಷ್ಟದ ದಿನಗಳೇ. ಹಾಗಾಗಿ ವರ್ತಮಾನದಲ್ಲಿ ಸಂತೋಷದಿಂದ ಇರೋಣ, ಚಿಂತನೆ ಇರಲಿ ಚಿಂತಿಸಿ ನೆಮ್ಮದಿ ಕಳೆದುಕೊಳ್ಳುವುದು ಎಷ್ಟು ಸರಿ...!?

ವಾರಭವಿಷ್ಯ



23.6.2024 ರಿಂದ 29.6.2024

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ:- ರವಿ-ಮಿಥುನ, ಚಂದ್ರ-ಧನುಸ್ಸು, ಮಕರ, ಕುಂಭ, ಮೀನ, ಕುಜ-ಮೇಷ, ಬುಧ-ಮಿಥುನ, ಗುರು-ವೃಷಭ, ಶುಕ್ರ-ಮಿಥುನ, ಶನಿ-ಕುಂಭ, ರಾಹು ಮೀನ ಮತ್ತು ಕೇತು-ಕನ್ಯಾ.

ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ ರತ್ನ'
'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು'
ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ,
೯ ಹಂತ, ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು.
ಮೊ.9740973224, 9739548720





ಮೇಷ (ಚು.ಚೆ.ಲ.ಲಿ.ಲು.ಲೆ.ಲೋ.ಅ)

ಸಾಧನೆಯ ಮಾರ್ಗ ತೆರೆದಿದೆ. ಆದರೆ ದ್ವಂದ್ವ ನಿಲುವಿನಿಂದ ಅಸಫಲತೆಯನ್ನು ಕಾಣುತ್ತಿರುವಿರಿ. ಸೈನ್ಯ, ಪೊಲೀಸು ಪಡೆಗೆ ಸೇರುವುದು, ಕಾರ್ಖಾನೆ ಕೆಲಸಕ್ಕೆ ಸೇರುವುದು ಶುಭಪ್ರದವಾಗಿದೆ. ಹೊಸ ಮಿತ್ರರ ಸ್ನೇಹ ಜೀವನದಲ್ಲಿ ಭರವಸೆಯನ್ನು ಮೂಡಿಸಲಿದೆ. ಕಲ್ಲು, ಗ್ರಾನೈಟ್ ವ್ಯಾಪಾರಿಗಳಿಗೆ ಹೇರಳ ಧನಲಾಭವಾಗುವುದು. ಜ್ಯೋತಿಷಿಗಳ ಭೇಟಿ ಶುಭ ಸೂಚನೆಯನ್ನು ನೀಡಲಿದೆ.

ಶ್ರೀ ವಿಘ್ನೇಶ್ವರ ಪೂಜೆ. ಶುಭ ಸಂಖ್ಯೆ-6



ವೃಷಭ (ಇ.ಉ.ಎ.ಒ.ವ.ವಿ.ವು.ವೆ.ವೊ)

ನೀವು ಯೋಚಿಸುವುದು ಒಂದು, ಆಗುವುದು ಮತ್ತೊಂದು. ಯೋಚಿಸದಿರಿ ಸೆಟ್ ಬ್ಯಾಕ್ ನಂತರ ಕಮ್ ಬ್ಯಾಕ್ ಇದ್ದೇ ಇರುತ್ತದೆ. ತಾಳ್ಮೆಯಿಂದ ಮುಂದುವರೆಯಿರಿ. ಕಷ್ಟ ಇದ್ದಾಗ ದುಡಿಮೆಯೇ ದೇವರು. ನಿಮ್ಮ ಮರ್ಯಾದೆಗೆ ಧಕ್ಕೆ ತರುವ ಕೆಲಸಕ್ಕೆ ಕೈ ಹಾಕದಿರಿ. ವಾರಾಂತ್ಯಕ್ಕೆ ವ್ಯವಹಾರ ಕುಶಲತೆಯಿಂದ ಸಫಲತೆಯನ್ನು ಕಾಣುವಿರಿ. ಮಾತಿನಂತೆ ನಡೆದು ಮನ್ನಣೆಗೆ ಪಾತ್ರರಾಗುವಿರಿ.

ಶ್ರೀ ಅಪರಾಜಿತಾ ಸ್ತೋತ್ರ ಪಠಿಸಿ. ಶುಭ ಸಂಖ್ಯೆ-8



ಮಿಥುನ (ಕ.ಕಿ.ಕು.ಘ.ಙ.ಛ.ಕೆ.ಕೊ.ಹ)

ವಾರದ ಆದಿಗೆ ಚಂದ್ರ ಶುಭ ಭಾವದಲ್ಲಿದ್ದು ನಿಮ್ಮ ಹೊಸ ತೀರ್ಮಾನಗಳು ಅಭಿವೃದ್ಧಿ ಪಥದ ಕಡೆಗೆ ಸಾಗುವುದು. ಗುರುಜನರ ಭೇಟಿಯಿಂದ ದಾಂಪತ್ಯದಲ್ಲಿ ಉಂಟಾಗಿದ್ದ ವಿರಸ ನಿವಾರಣೆ ಆಗುವುದು. ನ್ಯಾಯಾಲಯದ ವಿಚಾರಗಳಲ್ಲಿ ಹಿನ್ನಡೆಯನ್ನು ಅನುಭವಿಸಬೇಕಾದೀತು. ಮನೆಯಲ್ಲಿನ ಹಿರಿಯರ ಆರೋಗ್ಯದ ಕಡೆ ಗಮನ ನೀಡಿ.

ಶ್ರೀ ಸತ್ಯನಾರಾಯಣ ಪೂಜೆ. ಶುಭ ಸಂಖ್ಯೆ-5



ಕಟಕ (ಹೊ.ಹು.ಹೆ.ಹೊ.ಡ.ಡಿ.ಡು)

ಅಂದುಕೊಂಡಿದ್ದೆಲ್ಲಾ ನಡೆಯುವುದಿಲ್ಲ. ಹೊಂದಿಕೊಂಡು ಹೋಗುವುದೇ ಜೀವನ. ಕೆಲವೊಂದು ದುಡುಕು ತೀರ್ಮಾನಗಳಿಂದ ಆರ್ಥಿಕ ನಷ್ಟವನ್ನು ಅನುಭವಿಸುವಿರಿ. ಅಷ್ಟಮ ಶನಿದೇವನಿಂದ ಮನೆಯಲ್ಲಿ ಹೊಂದಾಣಿಕೆ ಕಡಿಮೆಯಾಗಿ ಅಶಾಂತಿ ತೋರುವುದು. ವಾರಮಧ್ಯಾನಂತರ ಮಾನಸಿಕ ಕ್ಲೇಶಗಳು ಕಡಿಮೆ ಆಗುವುದು. ಇಷ್ಟಕಾರ್ಯ ಸಿದ್ಧಿ, ಉತ್ತಮ ಆಹಾರ ವಿಹಾರಗಳನ್ನು ಕಾಣುವಿರಿ.

ಶ್ರೀದೇವಿ ಸ್ತುತಿ. ಶುಭ ಸಂಖ್ಯೆ-2



ಸಿಂಹ (ಮ.ಮಿ.ಮು.ಮೊ.ಮೆ.ಟ.ಟಿ.ಟು.ಟೆ)

ಕೃಷಿ ಹಾಗೂ ತೋಟಗಾರಿಕೆಯಿಂದ ಹೆಚ್ಚಿನ ಆದಾಯವನ್ನು ಗಳಿಸುವಿರಿ. ತಂದೆಯವರ ಕಡೆಯಿಂದ ಹಣದ ಸಹಾಯ ದೊರೆಯುವುದು. ಯಂತ್ರ ತಯಾರಿಕರಿಗೂ ಯಂತ್ರ ರಿಪೇರಿ ಮಾಡುವವರಿಗೂ ಬೇಡಿಕೆ ಹೆಚ್ಚುವುದು. ಹಾಗೂ ಧನಲಾಭ ಉಂಟಾಗುವುದು. ಅನಗತ್ಯ ಖರ್ಚು-ವೆಚ್ಚಗಳನ್ನು ನಿಯಂತ್ರಿಸಿ ಅನ್ಯಥಾ ಸಾಲ ಮಾಡಬೇಕಾದ ಪರಿಸ್ಥಿತಿ ಎದುರಾಗುವುದು. ಆರೋಗ್ಯ ಸಮಸ್ಯೆ ಕಾಡಬಹುದು.

ಶ್ರೀ ಮಾರುತಿ ದರ್ಶನ. ಶುಭ ಸಂಖ್ಯೆ-1



ಕನ್ಯಾ (ಟೊ.ಪ.ಪಿ.ಪು.ಷ.ಣ.ಠ.ಪೆ.ಪೊ)

ವಾರದಾರಂಭಕ್ಕೆ ಸ್ವಂತ ಶಕ್ತಿ ಹಾಗೂ ಯುಕ್ತಿಯ ವಿಶ್ವಾಸ ಹಾಗೂ ಭಯ ಕಾಡುವುದು. ಬಂಧು ಜನಗಳಲ್ಲಿ ವಿರೋಧ. 'ಅಟ್ಟಕ್ಕೆ ಹತ್ತದವನು ಬೆಟ್ಟವನ್ನು ಹತ್ತುವನೆ' ಎಂಬ ಪರಿಸ್ಥಿತಿ. ವಾರದ ಉತ್ತರಾರ್ಧಕ್ಕೆ ಅಧಿಕಾರಿ ವರ್ಗದವರ ಸಹಾಯ. ಪುಣ್ಯ ಕೆಲಸಗಳಲ್ಲಿ ಆಸಕ್ತಿ, ಆರೋಗ್ಯ ಸುಧಾರಿಸುವುದು. ಧನ-ಧಾನ್ಯ ಲಾಭ ಕೃಷಿಕರಿಗೆ ಸರ್ಕಾರದಿಂದ ನೆರವು. ತೀರ್ಥ ಕ್ಷೇತ್ರ ಸಂದರ್ಶನವನ್ನು ಕುಟುಂಬ ಸಮೇತ ಮಾಡಿ.

ಶ್ರೀ ಮನ್ನಾರಾಯಣ ನಾಮಸ್ತುತಿ. ಶುಭ ಸಂಖ್ಯೆ-8



ತುಲಾ (ರ.ರಿ.ರು.ರೆ.ರೊ.ತ.ತಿ.ತು.ತೆ)

ಸದ್ಯವಷ್ಟೇ ನಿಮ್ಮ ರಾಶ್ಯಾಧಿಪ ಶುಕ್ರನ ನಡಿಗೆ ಭಾಗ್ಯಸ್ಥಾನಕ್ಕೆ ಬಂದಿರುವುದರಿಂದ ವರಮಾನ ಅಧಿಕವಾಗುವುದು. ನೀತಿ ನಿಷ್ಠರೂ, ಸಂಪದ್ಯುಕ್ತರೂ, ಸುಖಿಯೂ ಆಗಿ ಕಾಲಯಾಪನೆ ಆಗುವುದು. ವೈಯಕ್ತಿಕ ಕೆಲಸಗಳಲ್ಲಿ ಸಫಲತೆಯನ್ನು ಕಾಣುವಿರಿ. ಐಷಾರಾಮಿ ವಸ್ತು ಖರೀದಿ. ಸ್ತ್ರೀ ಸುಖಾದಿಗಳನ್ನು ಪಡೆಯುವಿರಿ. ಪಾಲುದಾರಿಕೆ ವ್ಯವಹಾರದಲ್ಲಿ ಭಿನ್ನಾಭಿಪ್ರಾಯ ಉಂಟಾಗುವುದು.

ಶ್ರೀ ಶಕ್ತಿದೇವತೆ ಆರಾಧನೆ. ಶುಭ ಸಂಖ್ಯೆ-4



ವೃಶ್ಚಿಕ (ತೊ.ನ.ನಿ.ನು.ನೆ.ನೊ.ಯು.ಯಿ.ಯ

ಮಾತಿನ ಪ್ರಭಾವದಿಂದ ಕಾರ್ಯ ಕೈಗೂಡುವುದು. ಧಾರಾಳ ಹಣ ಸಂಪಾದನೆ ಆಗುವುದು. ಆದರೆ ರಾಹುಗ್ರಹ ಪ್ರಭಾವದಿಂದ ದುರ್ವಿನಿಯೋಗವಾಗುವುದು. ಹಣಕಾಸು ಸಂಸ್ಥೆ ಅಥವಾ ಬ್ಯಾಂಕ್ ಸಾಲಕ್ಕೆ ಪ್ರಯತ್ನ ಪಟ್ಟರೆ ಯಶಸ್ಸಿದೆ. ಹಾಗೆಯೇ ಹಣಕಾಸಿನ ಬಿಕ್ಕಟ್ಟು ಹಿತೈಷಿಗಳ ಸಹಕಾರದಿಂದ ನಿವಾರಣೆಯಾಗುವುದು. ಕೃತ್ರಿಮ ಗೆಳೆಯರಿಂದ ಜಾಗೃತರಾಗಿರಿ. ಸದ್ಗುರುಗಳ ದರ್ಶನದಿಂದ ಜೀವನ ಹಸನಾಗುವುದು.

ಶ್ರೀನೃಸಿಂಹಸ್ವಾಮಿಗೆ ಅಭಿಷೇಕ. ಶುಭ ಸಂಖ್ಯೆ-3



ಧನುಸ್ಸು (ಯೆ.ಯೊ.ಬ.ಬಿ.ಬು.ಧ.ಭ.ಢ.ಬೆ)

ವಾರದಾರಂಭಕ್ಕೆ ನಿಮ್ಮ ರಾಶಿಗೆ ಬರುವ ಚಂದ್ರನಿಂದ ವೈಯಕ್ತಿಕವಾಗಿಯೂ, ಸಾಮಾಜಿಕವಾಗಿಯೂ ಹಸನ್ಮುಖಿಗಳಾಗಿರುತ್ತೀರಿ. ಉನ್ನತ ಶಿಕ್ಷಣದ ಹಾದಿ ಸುಗಮವಾಗಿದೆ. ಹಿಂದೆ ಬೀಳದಿರಿ. ವಾರಮಧ್ಯೆ ಹಿತಶತ್ರುಗಳು ನಿಮ್ಮ ಮಹತ್ವದ ಕೆಲಸ ಕಾರ್ಯಗಳಿಗೆ ಅಡ್ಡಿಯನ್ನು ಉಂಟು ಮಾಡುವರು. ಸರ್ಕಾರಿ ನೌಕರರು ಅಕ್ರಮ ಕಾರ್ಯವೆಸಗಿ ತೊಂದರೆಗೆ ಗುರಿಯಾಗುವರು.

ಶ್ರೀದಕ್ಷಿಣಾಮೂರ್ತಿ ಸ್ತುತಿ. ಶುಭ ಸಂಖ್ಯೆ-7



ಮಕರ (ಬೊ.ಜ.ಜಿ.ಶಿ.ಶು.ಶೆ.ಶೊ.ಗ.ಗಿ.)

ಸಪ್ತಾಹದ ಆದಿಗೆ ಚಂದ್ರಗ್ರಹದ ಶುಭ ಸಂಚಾರ ನಿಮ್ಮ ಅಭಿವೃದ್ಧಿಗೆ ಪೂರಕವಾಗುವುದು. ವ್ಯಾಪಾರ, ವಹಿವಾಟುಗಳು ಪ್ರಗತಿಯ ಹಾದಿಯಲ್ಲಿ ಸಾಗುವುದು. ಸರ್ಕಾರಿ ನೌಕರರಿಗೆ ಬಡ್ತಿ ಯೋಗ ಉಂಟು. ನಿಮ್ಮ ನಿಗದಿತ ಕೆಲಸ ಕಾರ್ಯಗಳನ್ನು ಸಮಯಕ್ಕೆ ಸರಿಯಾಗಿ ಸಂಪನ್ನಗೊಳಿಸಿಕೊಳ್ಳುವಿರಿ. ಕಾರ್ಯನಿಮಿತ್ತ ದೂರ ಪ್ರಯಾಣಗಳು ಉಂಟಾಗುವುದು. ಕಳ್ಳಕಾಕರಿಂದ ಮಾಂಗಲ್ಯ ಸರ ರಕ್ಷಿಸಿಕೊಳ್ಳಿ.

ಶ್ರೀ ವಿಷ್ಣು ಉಪಾಸನೆ. ಶುಭ ಸಂಖ್ಯೆ-2



ಕುಂಭ (ಗು.ಗೆ.ಗೊ.ಸ.ಸಿ.ಸು.ಸೆ.ಸೊ.ದ)

ಗ್ರಹಗಳು ಕಾಲಾಧೀನವಾಗಿವೆ. ಬಯಸಿದ್ದೆಲ್ಲಾ ಸಿಗುವುದಿಲ್ಲ. ಸಿಕ್ಕಿದ್ದನ್ನೇ ಬಯಸಿಕೊಳ್ಳುವುದು ಜಾಣತನ. ಕೋರ್ಟು, ಕಚೇರಿಗಳಿಗೆ ವೃಥಾ ಅಲೆದಾಟ, ಅಧಿಕಾರಿಗಳಿಂದಲೂ ಬೇಸರ. ಈ ನಡುವೆ ಚಂದ್ರಗ್ರಹ ಪ್ರಭಾವದಿಂದ ಟ್ರಾವೆಲ್ ಏಜೆನ್ಸಿಯವರಿಗೆ ಉತ್ತಮ ಆದಾಯ. ಪ್ರೀತಿ-ಪ್ರಣಯ ವಿಷಯಗಳು ಸಪ್ತಪದಿಯ ಹಾದಿಯಲ್ಲಿ ಮುಕ್ತಾಯವಾಗುವ ಸೂಚನೆ ಕಂಡು ಬರುತ್ತದೆ.

ಶ್ರೀ ಶಿವಾಷ್ಟೋತ್ತರ ಪಠಿಸಿ. ಶುಭ ಸಂಖ್ಯೆ-6



ಮೀನ (ದಿ.ದು.ಖ.ಝ.ಥ.ತೆ.ದೊ.ಚ.ಚಿ)


ವಾರದ ಆದಿಗೆ ಆದಾಯದಲ್ಲಿ ಏರಿಕೆ ಕಂಡರೂ ಅದಕ್ಕೆ ತಕ್ಕಂತೆ ಖರ್ಚುಗಳೂ ಉಂಟಾಗುವುದು. ಗುರು-ಹಿರಿಯರನ್ನು ಭೇಟಿಯಾಗಿ, ಆಶೀರ್ವಾದ ಪಡೆಯುವುದರಿಂದ ಒಳಿತಾಗುವುದು. ನೂತನ ವಸ್ತ್ರಾಭರಣ ಮನೆಗೆ ಬರುವುದು. ಕಲಾ ಕ್ಷೇತ್ರದವರಿಗೂ, ಸೃಜನಶೀಲ ವ್ಯಕ್ತಿಗಳಿಗೂ ಗೌರವ, ಪ್ರಶಸ್ತಿಗಳು ದೊರೆಯುವ ಸಂಭವ. ವಿಷಾಹಾರದಿಂದ ಜಾಗೃತರಾಗಿರಿ. ಆರೋಗ್ಯದಲ್ಲಿ ಅಸ್ಥಿರತೆ ಕಾರಣ ವೈದ್ಯರ ಭೇಟಿ.

ಶ್ರೀ ದತ್ತಗುರು ದರ್ಶನ. ಶುಭ ಸಂಖ್ಯೆ-3

ಮಕ್ಕಳ ಚಿತ್ರಕಥೆ

ಮೇಷ್ಟ್ರು ಕೇಳಿದ ಪ್ರಶ್ನೆ


■ ಹೆಚ್.ಜಿ.ಎನ್.ಪ್ರಸಾದ್




ನೀವು ಗಿಡದ ಯಾವ ಭಾಗವಾಗಲು ಇಷ್ಟ ಪಡ್ತೀರಾ...?...ಏಕೆ? ಎಂದು ಮೇಷ್ಟ್ರು ಕೇಳಿದ್ರು. ಒಬ್ಬ ಹುಡುಗ ಎದ್ದು ನಿಂತು ಹೇಳಿದ "ಸರ್ ನಾನು ಎಲೆಯಾಗೋಕೆ ಇಷ್ಟಪಡ್ತೀನಿ....ಎಲೆ ದಣಿದು ಬಂದವರಿಗೆ ನೆರಳಾಗುತ್ತೆ. ಎಲ್ಲಾ ಜೀವಿಗಳಿಗೂ ಉಸಿರು ನೀಡುತ್ತೆ. ಒಣಗಿ ಉದುರಿದರೆ ಕೊಳೆತು ಗೊಬ್ಬರವಾಗುತ್ತೆ..!" ಎಂದ. ಮೇಷ್ಟ್ರು "ಶಭಾಷ್....! ಕುಳಿತಿಕೋ...!" ಎಂದರು.




ಮತ್ತೊಬ್ಬ ಹುಡುಗನಿಗೆ ಕೇಳಿದರು "ನೀನು ಏನಾಗ್ತೀಯಾ...?". ಅದಕ್ಕೆ ಆ ಹುಡುಗ ಸಾರ್... ನಾನು ಹೂವಾಗ್ತೀನಿ....ಏಕೆಂದರೆ ಹೂವನ್ನು ಎಲ್ಲರೂ ಮೆಚ್ಚುತ್ತಾರೆ. ಅದು ಬೀರುವ ಸುಗಂಧವನ್ನು ಎಲ್ಲರೂ ಇಷ್ಟಪಡುತ್ತಾರೆ. ದೇವರಿಗೂ ಹೂವಿನಿಂದಲೇ ಅಲಂಕಾರ ಮಾಡುತ್ತಾರೆ...!" ಎಂದ. ಮೇಷ್ಟ್ರು "ಗುಡ್" ಎಂದರು.




ನಂತರ ಮೇಷ್ಟ್ರು, ಮತ್ತೊಬ್ಬ ಮೂಲೆಯಲ್ಲಿ ಕುಳಿತಿದ್ದ ಹುಡುಗನಿಗೆ "ನೀನು ಏನಾಗ್ತೀಯಾ...?" ಎಂದು ಪ್ರಶ್ನಿಸಿದರು. ಆಗ ಆ ಹುಡುಗ, "ಸಾರ್, ನಾನು ಹಣ್ಣಾಗಲು ಬಯಸುತ್ತೇನೆ. ಏಕೆಂದರೆ, ಹಣ್ಣು ರುಚಿರುಚಿಯಾಗಿರುತ್ತೆ. ಚಿಕ್ಕವರೂ-ದೊಡ್ಡವರೂ ಎಲ್ಲರೂ ಇಷ್ಟಪಡುತ್ತಾರೆ. ಹಸಿದರೆ ಆಹಾರವಾಗುತ್ತೆ. ಮಾರಿದರೆ ದುಡ್ಡು ಬರುತ್ತೆ. ಕಷ್ಟದಲ್ಲಿ ಸಹಾಯವಾಗುತ್ತೆ. ಮೇಷ್ಟ್ರು "ವೆರಿ ಗುಡ್...!"ಎಂದರು.



ಮೇಷ್ಟ್ರು, ಮುಂದಿನ ಬೆಂಚಿನಲ್ಲಿ ಕುಳಿತಿದ್ದ ಹುಡುಗನಿಗೆ "ನೀನ್ ಏನಾಗ್ತೀಯೋ...?" ಎಂದು ಕೇಳಿದರು. ಅದಕ್ಕೆ ಆ ಹುಡುಗ, "ಸಾರ್, ನಾನು ರೆಂಬೆಯಾಗೋಕೆ ಇಷ್ಟಪಡುತ್ತೀನಿ...ಏಕೆಂದರೆ ರೆಂಬೆಗಳಲ್ಲಿ ಪಕ್ಷಿಗಳೆಲ್ಲಾ ಕುಳಿತು ವಿಶ್ರಾಂತಿ ಪಡೆಯುತ್ತವೆ. ಗೂಡುಗಳನ್ನು ಕಟ್ಟಿ ಮರಿಗಳನ್ನು ಹಾಕುತ್ತವೆ. ರೆಂಬೆ ಒಣಗಿ ಬಿದ್ದರೆ ಅದನ್ನು ಒಲೆಗೆ ಹಾಕುತ್ತಾರೆ...!" ಎಂದ ಮೇಷ್ಟ್ರು "ಫೈನ್....ಕೂತ್ಕೋ...!" ಎಂದರು.



ಮೇಷ್ಟ್ರು, ಕೈ ಎತ್ತಿದ್ದ ಒಬ್ಬ ಹುಡುಗನನ್ನು ಕಂಡು "ನೀನು ಏನಾಗ್ತೀಯಾ...?" ಎಂದರು. ಆಗ ಆ ಹುಡುಗ ಸಂಕೋಚದಿಂದ ಎದ್ದು ನಿಂತು,"ಸಾರ್, ನಾನು ಬೇರಾಗಲು ಇಷ್ಟಪಡುತ್ತೀನಿ. ಬೇರು ಭೂಮಿಯೊಳಗಡೆ ಗಟ್ಟಿ ಮಣ್ಣನ್ನು ಸೀಳಿಕೊಂಡು ಕಷ್ಟದಿಂದ ಬೆಳೆಯುತ್ತೆ. ಬೇರಿಗೆ ಬೆಟ್ಟ, ಗುಡ್ಡ, ಸೂರ್ಯ, ಚಂದ್ರ, ನಕ್ಷತ್ರ,ಮನುಷ್ಯ, ಪ್ರಾಣಿ ಪಕ್ಷಿಗಳು ಒಂದೂ ಕೂಡ ಕಾಣಿಸಲ್ವಂತೆ...ಆದರೂ ಅದು ಕೊರಗದೇ...ತನ್ನ ಪಾಡಿಗೆ ಸತ್ವ ಹೀರಿ ಗಿಡವನ್ನು ಬೆಳೆಸುತ್ತದಂತೆ.



ಹುಡುಗ ತನ್ನ ಮಾತನ್ನು ಮುಂದುವರೆಸುತ್ತಾ, "ನಾನೂ ಕೂಡ ಪ್ರಪಂಚ ನೋಡಿಲ್ಲ. ಬೇರು, ಕತ್ತಲಲ್ಲಿ ಹುಟ್ಟಿ... ಕತ್ತಲಲ್ಲೇ ಕಮರಿ ಹೋಗುತ್ತೆ. ಬೇರಿನಂತೆ ನಾನೂ ಕೂಡ ಅಡೆತಡೆಗಳನ್ನು ಎದುರಿಸಿ ಬೆಳೆಯಬೇಕು....ದುಃಖವಾದಾಗಲೆಲ್ಲಾ ಬೇರನ್ನು ನೆನೆದು ಸಮಾಧಾನ ಮಾಡ್ಕೋತೀನಿ...! ಎಂದ. ಮೇಷ್ಟ್ರು, ಅತ್ಯಾನಂದದಿಂದ ಆ ಅಂಧ ಹುಡುಗನ ಕೆನ್ನೆ ಚಿವುಟಿ, ಮುದ್ದಿಸಿ ಭಾವುಕರಾದರು.

ಹೈನುಗಾರಿಕೆಯಿಂದ ರೈತರ ಜೀವನಮಟ್ಟ ಸುಧಾರಣೆ

ಹಿರೇಹಳ್ಳಿ ಬಿ.ಕಾಲೋನಿಯಲ್ಲಿ ಬಿಎಂಸಿ ಕೇಂದ್ರ ಉದ್ಘಾಟಿಸಿದ ಶಾಸಕ ಅನಿಲ್



ಹಿರೇಹಳ್ಳಿ ಬಿ.ಕಾಲೋನಿ ಗ್ರಾಮದಲ್ಲಿ ಬಿಎಂಸಿ ಕೇಂದ್ರವನ್ನು ಶಾಸಕ ಅನಿಲ್ ಉದ್ಘಾಟಿಸಿದರು

ಹೆಚ್.ಡಿ.ಕೋಟೆ, ಜೂ.22– ತಾಲೂಕಿನಲ್ಲಿ ಹೈನುಗಾರಿಕೆಯಿಂದ ರೈತರ ಜೀವನಮಟ್ಟ ಸುಧಾರಿಸಿದೆ ಎಂದರೆ ಅದಕ್ಕೆ ಮೈಮುಲ್ ನಿರ್ದೇಶಕ ಈರೇಗೌಡರ ಪರಿಶ್ರಮ ಕಾರಣ ಎಂದು ಶಾಸಕ ಅನಿಲ್ ತಿಳಿಸಿದರು.

ತಾಲೂಕಿನ ಹಿರೇಹಳ್ಳಿ ಬಿ.ಕಾಲೋನಿ ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘದಲ್ಲಿ ನೂತನ ಬಿಎಂಸಿ ಕೇಂದ್ರ ಉದ್ಘಾಟಿಸಿ ಮಾತನಾಡಿದ ಅವರು, ಹೆಚ್.ಡಿ.ಕೋಟೆ ಹಾಗೂ ಸರಗೂರು ತಾಲೂಕಿನಾದ್ಯಂತ ರೈತರು ಕೃಷಿಯಲ್ಲಿ ಸಾಕಷ್ಟು ಸಮಸ್ಯೆಗಳನ್ನು ಎದುರಿಸುತ್ತಿದ್ದರು. ಇದನ್ನು ಮನಗಂಡು ಮೈಮುಲ್ ನಿರ್ದೇಶಕ ಈರೇಗೌಡರು ಹೈನುಗಾರಿಕೆಗೆ ಹೆಚ್ಚು ಒತ್ತು ನೀಡಿದ ಪರಿಣಾಮ ಸಾಕಷ್ಟು ಬಡ ಕುಟುಂಬಗಳು ಸುಧಾರಣೆ ಕಂಡಿವೆ ಎಂದರು.

ಸಹಕಾರ ಸಂಘಗಳಿಗೆ ಸರ್ಕಾರ ಸಬ್ಸಿಡಿ ಸಾಲದ ಜೊತೆಗೆ ಅನೇಕ ಸೌಲಭ್ಯಗಳನ್ನು ನೀಡಿದೆ. ಅವುಗಳನ್ನು ಸಂಘದ ಸದಸ್ಯರು ಹಾಗೂ ಹಾಲು ಉತ್ಪಾದಕರು ಸದ್ಬಳಕೆ ಮಾಡಿಕೊಂಡು ಆರ್ಥಿಕವಾಗಿ ಮುಂದೆ ಬರಬೇಕು. ಡೈರಿ ಅಭಿವೃದ್ಧಿಗೆ ಗುಣಮಟ್ಟದ ಹಾಲನ್ನು ಪೂರೈಕೆ ಮಾಡುವಂತೆ ತಿಳಿಸಿದರು.

ಮೈಮುಲ್ ನಿರ್ದೇಶಕ ಈರೇಗೌಡ ಮಾತನಾಡಿ, ತಾಲೂಕಿನಾದ್ಯಂತ 171 ಹಾಲು ಉತ್ಪಾದಕರ ಸಹಕಾರ ಸಂಘಗಳು, 28 ಬಿಎಂಸಿ ಕೇಂದ್ರಗಳಿದ್ದು, ದಿನಕ್ಕೆ ಒಂದು ಲಕ್ಷ ಲೀಟರ್ ಹಾಲು ಉತ್ಪಾದನೆಯಾಗುತ್ತಿದೆ ಎಂದ ಅವರು, ಸರ್ಕಾರದಿಂದ ಸಿಗುವ ಸವಲತ್ತುಗಳನ್ನು ಬಳಸಿಕೊಂಡು ಹೈನುಗಾರಿಕೆ ಕೈಗೊಳ್ಳುವ ಮೂಲಕ ಆರ್ಥಿಕವಾಗಿ ಸಬಲರಾಗಿ ಎಂದರು.

ಜಾನುವಾರುಗಳಿಗೆ ವಿಮೆ ಮಾಡಿಸಿದರೆ ಆಕಸ್ಮಿಕವಾಗಿ ಸಾವನ್ನಪ್ಪಿದ ಸಂದರ್ಭ ವಿಮೆ ಹಣ ರೈತರಿಗೆ ಸಿಗಲಿದೆ. ಅಲ್ಲದೆ ರೈತರ ಮಕ್ಕಳ ಉನ್ನತ ವ್ಯಾಸಂಗಕ್ಕೂ ಪ್ರೋತ್ಸಾಹ ನೀಡುವ ಜೊತೆಗೆ ವಿದ್ಯಾರ್ಥಿ ನಿಲಯದ ವ್ಯವಸ್ಥೆಯೂ ಇದೆ. ಇದನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದರು.

ಕಾರ್ಯಕ್ರಮದಲ್ಲಿ ಮೈಮುಲ್ ನಿರ್ದೇಶಕಿ ದಾಕ್ಷಾಯಿಣಿ, ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘ ಅಧ್ಯಕ್ಷೆ ಲಕ್ಷ್ಮಿ, ಕಾರ್ಯದರ್ಶಿ ಸಿ.ವಿ.ಜ್ಯೋತಿ, ಮೈಮುಲ್ ವ್ಯವಸ್ಥಾಪಕ ಜಿ.ಎನ್.ಸಂತೋಷ್, ವಿಸ್ತರಣಾಧಿಕಾರಿಗಳಾದ ಅರೀಫ್ ಇಕ್ಬಾಲ್, ಜಯಂತ್ ಕುಮಾರ್, ರಾಮಪ್ಪ ಬಾರ್ಕಿ, ನಾಗೇಶ್, ಗ್ರಾಪಂ ಸದಸ್ಯ ನಾಗನಾಯಕ, ಸಹಕಾರ ಸಂಘದ ನಿರ್ದೇಶಕರಾದ ನಾಗರತ್ನ, ರೇಣ್ಯಾ, ಕಲ್ಪನಾ, ಪುಟ್ಟತಾಯಮ್ಮ, ಪದ್ಮ, ಲಕ್ಷ್ಮಮ್ಮ, ಪವಿತ್ರ, ರತ್ನಮ್ಮ, ಸ್ವಾಮಿ, ಪುಟ್ಟೇಗೌಡ, ಪವನ್, ಬಸವರಾಜಪ್ಪ, ಕೃಷ್ಣೇಗೌಡ, ಮಂಜು, ಶ್ರೀನಿವಾಸ್ ಇನ್ನಿತರರಿದ್ದರು.

> ಮೈಸೂರು ಜಿಲ್ಲೆಯಲ್ಲಿ ಹಾಲು ಉತ್ಪಾದಕರ ಸಹಕಾರ ಸಂಘದ ನೂತನ ಕಟ್ಟಡಗಳಿಗೆ ಅತೀ ಹೆಚ್ಚು ಅನುದಾನ ಬಿಡುಗಡೆ ಮಾಡಿಸಿದ ಏಕೈಕ ಶಾಸಕ ಅನಿಲ್. ಮುಂದಿನ ದಿನಗಳಲ್ಲಿ ತಾಲೂಕಿನಾದ್ಯಂತ ಹೈನುಗಾರಿಕೆ ಪ್ರಗತಿಗೆ ಕ್ರಮ ಕೈಗೊಳ್ಳುತ್ತೇವೆ.
> -ಈರೇಗೌಡ, ಮೈಮುಲ್ ನಿರ್ದೇಶಕ

ದೇವಾಲಯ ಜೀರ್ಣೋದ್ಧಾರಕ್ಕೆ ಅನುದಾನ ನೀಡಲು ಮನವಿ



ಅನುದಾನ ನೀಡುವಂತೆ ಶಾಸಕ ಜಿ.ಡಿ.ಹರೀಶ್‌ಗೌಡ, ಸಚಿವ ಹೆಚ್.ಕೆ.ಪಾಟೀಲ್‌ಗೆ ಮನವಿ ಸಲ್ಲಿಸಿದರು.

ಹುಣಸೂರು, ಜೂ.22– ತಾಲೂಕಿನ ತರೀಕಲ್ಲು ಗ್ರಾಮದ ಕಾಶಿಲಿಂಗೇಶ್ವರ ದೇವಾಲಯದ ಜೀರ್ಣೋದ್ಧಾರ ಕಾಮಗಾರಿಗೆ 3 ಕೋಟಿ ಅನುದಾನ ನೀಡುವಂತೆ ಬೆಂಗಳೂರಿನ ವಿಧಾನ ಸೌಧದಲ್ಲಿ ಪ್ರವಾಸೋದ್ಯಮ ಸಚಿವ ಹೆಚ್.ಕೆ.ಪಾಟೀಲ್ ಅವರಿಗೆ ಶಾಸಕ ಜಿ.ಡಿ.ಹರೀಶ್‌ಗೌಡ ಮನವಿ ಮಾಡಿದರು.

ತಾಲೂಕಿನ ತರೀಕಲ್ಲು ಗ್ರಾಮದಲ್ಲಿ ಪುರಾತನ ಹಾಗೂ ಐತಿಹಾಸಿಕ ಹಿನ್ನೆಲೆ ಹೊಂದಿರುವ ವಿಜಯನಗರ ಕಾಲದ ಕಾಶಿಲಿಂಗೇಶ್ವರ ದೇವಾಲಯ ಜೀರ್ಣೋದ್ಧಾರಕ್ಕೆ ಸರ್ಕಾರ 2 ಕೋಟಿ ರೂ. ಅನುದಾನವನ್ನು ಧಾರ್ಮಿಕ ದತ್ತಿ ಮತ್ತು ಪುರಾತತ್ವ ಇಲಾಖೆ ಸಹಯೋಗದಲ್ಲಿ ಪ್ರವಾಸೋದ್ಯಮ ಇಲಾಖೆಯ ಮೂಲಕ ಮಂಜೂರು ಮಾಡಿತ್ತು. ಆದರೆ ಕಾಮಗಾರಿ ಪೂರ್ಣಗೊಳ್ಳದೆ ನನೆಗುದಿಗೆ ಬಿದ್ದಿತ್ತು. ಈ ಹಿನ್ನೆಲೆಯಲ್ಲಿ ಕಾಮಗಾರಿ ಪೂರ್ಣಗೊಳಿಸುವಂತೆ ಗ್ರಾಮಸ್ಥರು ಮಾಡಿದ ಮನವಿಗೆ ಸ್ಪಂದಿಸಿದ ಶಾಸಕ ಹರೀಶ್‌ಗೌಡ, ಬೆಂಗಳೂರಿನ ವಿಧಾನಸೌಧದಲ್ಲಿ ಪ್ರವಾಸೋದ್ಯಮ ಸಚಿವ ಹೆಚ್.ಕೆ.ಪಾಟೀಲ್ ಅವರಿಗೆ ಮನವಿ ಸಲ್ಲಿಸಿ ಅನುದಾನ ನೀಡುವಂತೆ ಮನವಿ ಮಾಡಿದ್ದಾರೆ.

ಸಾರಿಗೆ ಬಸ್ ಡಿಕ್ಕಿ: ವೃದ್ಧೆ ಸ್ಥಳದಲ್ಲೇ ಸಾವು

ನಂಜನಗೂಡು, ಜೂ.22– ರಸ್ತೆ ದಾಟುತ್ತಿದ್ದ ವೃದ್ಧೆಗೆ ಕೆಎಸ್ಆರ್‌ಟಿಸಿ ಬಸ್ ಡಿಕ್ಕಿ ಹೊಡೆದ ಪರಿಣಾಮ ಆಕೆ ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ನಗರದ ಬೈಪಾಸ್ ರಸ್ತೆಯ ಮೇದರ ಬೀದಿ ಬಳಿ ಶನಿವಾರ ನಡೆದಿದೆ.

ಮೇದರ ಕಾಲೋನಿಯ ಪಾರ್ವತಮ್ಮ(75) ಸಾವನ್ನಪ್ಪಿದವರು. ಈಕೆ ರಸ್ತೆ ಎಡ ಭಾಗದಲ್ಲಿದ್ದ ಸಾರ್ವಜನಿಕ ಶೌಚಾಲಯಕ್ಕೆ ತೆರಳಿ ಮನೆಗೆ ವಾಪಸ್ಸಾಗಲು ಬೈಪಾಸ್ ರಸ್ತೆ ದಾಟುತ್ತಿದ್ದ ವೇಳೆ ಚಾಮರಾಜನಗರ ಕಡೆಯಿಂದ ವೇಗವಾಗಿ ಬಂದ ಸಾರಿಗೆ ಬಸ್ ಡಿಕ್ಕಿ ಹೊಡೆದಿದೆ. ಪರಿಣಾಮ ತೀವ್ರ ಗಾಯಗೊಂಡ ಪಾರ್ವತಮ್ಮ ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ ಎಂದು ಸಂಚಾರಿ ಪೊಲೀಸರು ತಿಳಿಸಿದ್ದಾರೆ. ಈ ಸಂಬಂಧ ನಂಜನಗೂಡು ಸಂಚಾರಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ಬಾಕಿ ಪಾವತಿಸಿ ಸಕ್ಕರೆ ಕಾರ್ಖಾನೆಗಳು ಪ್ರಾರಂಭವಾಗಲಿ

ಕಬ್ಬು ಬೆಳೆಗಾರರ ಸಂಘದ ರಾಜ್ಯಾಧ್ಯಕ್ಷ ಕುರುಬೂರು ಶಾಂತಕುಮಾರ್ ಆಗ್ರಹ



ಸಭೆಯಲ್ಲಿ ಕುರುಬೂರು ಶಾಂತಕುಮಾರ್ ಮಾತನಾಡಿದರು.

ನಂಜನಗೂಡು, ಜೂ.22– ಬಣ್ಣಾರಿ ಅಮ್ಮನ್ ಹಾಗೂ ಮಹದೇಶ್ವರ ಸಕ್ಕರೆ ಕಾರ್ಖಾನೆಗಳು ರೈತರ ಬಾಕಿ ಹಣ ಪಾವತಿಸಿ ಕಾರ್ಖಾನೆ ಆರಂಭಿಸಬೇಕು ಎಂದು ರಾಜ್ಯ ಕಬ್ಬು ಬೆಳೆಗಾರರ ಸಂಘದ ರಾಜ್ಯಾಧ್ಯಕ್ಷ ಕುರುಬೂರು ಶಾಂತಕುಮಾರ್ ಆಗ್ರಹಿಸಿದರು.

ನಗರದ ಎಪಿಎಂಸಿ ಸಭಾಂಗಣದಲ್ಲಿ ಶನಿವಾರ ರೈತರ ಸಭೆ ನಡೆಸಿ ಮಾತನಾಡಿದ ಅವರು, ಕಾರ್ಖಾನೆಗಳು ಕಬ್ಬು ಅರೆಯುವ ಮುನ್ನಾ ಕಬ್ಬಿನ ದರ ಘೋಷಣೆ ಮಾಡಬೇಕು. ಉಪ ಉತ್ಪನ್ನಗಳ ಲಾಭ ಹಂಚಿಕೆ ಹಾಗೂ ಕಳೆದ ವರ್ಷದ ಬಾಕಿ ಹಣ ಟನ್‌ಗೆ 150 ರೂ. ವಿತರಣೆ ಮಾಡಬೇಕು. ಪ್ರಸಕ್ತ ಸಾಲಿಗೆ ಕೇಂದ್ರ ಸರ್ಕಾರ ಕಬ್ಬಿಗೆ 3400 ರೂ. ನಿಗದಿ ಮಾಡಿದೆ. ಇದಕ್ಕೆ ಹೆಚ್ಚುವರಿಯಾಗಿ ಬಣ್ಣಾರಿ ಅಮ್ಮನ್ ಕಾರ್ಖಾನೆಯವರು ಎಷ್ಟು ದರ ಕೊಡುತ್ತಾರೆ ಎಂಬುದನ್ನು ಘೋಷಣೆ ಮಾಡಲಿ ಎಂದರು.

ಕಬ್ಬಿನಿಂದ ಬರುವ ಸಕ್ಕರೆ ಇಳುವರಿಯನ್ನು ವರ್ಷದಿಂದ ವರ್ಷಕ್ಕೆ ಕಡಿಮೆ ತೋರಿಸಿ ರೈತರ ಎಫ್‌ಆರ್‌ಪಿ ಹಣದಲ್ಲಿ ಕಡಿಮೆ ನೀಡುತ್ತಿದ್ದಾರೆ. ಕಾರ್ಖಾನೆಗಳು ಉಪ ಉತ್ಪನ್ನಗಳ ಲಾಭ ಸೇರಿಸಿ ಅದಕ್ಕಿಂತ ಹೆಚ್ಚು ದರ ಕೊಡಬೇಕು ಎನ್ನುವ ನಿಯಮವನ್ನು ಗಾಳಿಗೆ ತೂರಿದೆ.

ಕಬ್ಬಿನ ಉತ್ಪಾದನೆ ಕಡಿಮೆ ಇರುವ ಕಾರಣ ಪಕ್ಕದ ಜಿಲ್ಲೆಯ ಕಾರ್ಖಾನೆಗಳು ಪ್ರಸಕ್ತ ಸಾಲಿನಲ್ಲಿ ಕಬ್ಬು ಸಾಗಾಣಿಕೆ ವೆಚ್ಚವನ್ನು ತಾವೇ ಭರಿಸಿಕೊಂಡು ರೈತರಿಂದ ಖರೀದಿಸುತ್ತಿವೆ. ಹೊಸದಾಗಿ ಕಬ್ಬು ಬಿತ್ತನೆ ಮಾಡುವ ರೈತರಿಗೆ ಎಕರೆಗೆ 8 ಸಾವಿರ ಪ್ರೋತ್ಸಾಹ ಧನ ನೀಡುತ್ತೇವೆ ಎನ್ನುತ್ತಿದ್ದಾರೆ. ಆಲೆಮನೆ ಬೆಲ್ಲ ತಯಾರಿಕೆದಾರರು ಹೆಚ್ಚು ದರ ಕೊಟ್ಟು ಕಬ್ಬು ಖರೀದಿ ಪೈಪೋಟಿಗೆ ಮುಂದಾಗಿದ್ದಾರೆ. ಆದ್ದರಿಂದ ರೈತರು ಜಾಗೃತರಾಗಿ ಉತ್ತಮ ಬೆಲೆ ಸಿಗುವ ಕಡೆ ಮಾರಾಟ ಮಾಡಲು ಮುಂದಾಗಬೇಕು. ರಾಜ್ಯ ಸರ್ಕಾರ ರೈತರ ಸಮಸ್ಯೆ ಬಗೆಹರಿಸಿ ಕಬ್ಬು ನುರಿಯಲು ಅನುಮತಿ ನೀಡಬೇಕು. ರೈತರು ಕಬ್ಬನ್ನು ಮುಕ್ತವಾಗಿ ಇಷ್ಟ ಬಂದ ಕಾರ್ಖಾನೆಗೆ ಸರಬರಾಜು ಮಾಡಲು ಅವಕಾಶ ಇರಬೇಕು ಎಂದರು.

ರಾಜ್ಯ ಸರ್ಕಾರ ರಾಜ್ಯದಲ್ಲಿ ಪೆಟ್ರೋಲ್, ಡೀಸೆಲ್ ಬೆಲೆ ಏರಿಕೆ ಮಾಡಿ ಕೃಷಿಯಲ್ಲಿ ಟ್ರಾಕ್ಟರ್, ಟಿಲ್ಲರ್ ಬಳಸುವ ರೈತರಿಗೆ ಮತ್ತಷ್ಟು ಸಂಕಷ್ಟ ಉಂಟು ಮಾಡಿದ್ದಾರೆ. ಹೀಗಾಗಿ ಏರಿಕೆ ಮಾಡಿರುವ ದರ ಇಳಿಸಬೇಕು ಎಂದರು.

ಸಭೆಯಲ್ಲಿ ಸಂಘದ ತಾಲೂಕು ಅಧ್ಯಕ್ಷ ವಿಜಯೇಂದ್ರ ನಾಗರಾಜು, ಶಿವಶಂಕರ್, ಬಸಪ್ಪಣ್ಣ ಮಂಜುನಾಥ್, ನೀಲಕಂಠಪ್ಪ, ಕಮಲಮ್ಮ, ಶಿವಶಂಕರ, ಗುರುರಾಜ ಉಪಸ್ಥಿತರಿದ್ದರು.

ಬೆಳೆ ವಿಮೆ ಯೋಜನೆ ಸದುಪಯೋಗಪಡಿಸಿಕೊಳ್ಳಿ



ಮಾಹಿತಿ ರಥಕ್ಕೆ ಚಾಲನೆ ನೀಡಲಾಯಿತು

ಹಂಪಾಪುರ, ಜೂ.22– ಸರ್ಕಾರ ಬೆಳೆ ವಿಮೆ ಯೋಜನೆ ಜಾರಿಗೆ ತಂದಿದ್ದು, ರೈತರು ಯೋಜನೆಯನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದು ಕೃಷಿ ಅಧಿಕಾರಿ ಸಿದ್ದಪ್ಪ ಸ್ವಾಮಿ ತಿಳಿಸಿದರು.

ಇಲ್ಲಿನ ರೈತ ಸಂಪರ್ಕ ಕೇಂದ್ರ ಆವರಣದಲ್ಲಿ 2024–25ನೇ ಸಾಲಿನ ಮುಂಗಾರು ಹಂಗಾಮಿನ ಕರ್ನಾಟಕ ರೈತ ಸುರಕ್ಷಾ ಪ್ರಧಾನಮಂತ್ರಿ ಫಸಲ್ ಬಿಮಾ (ವಿಮಾ) ಯೋಜನೆಯ ಮಾಹಿತಿ ರಥಕ್ಕೆ ಹಸಿರು ನಿಶಾನೆ ತೋರುವ ಮೂಲಕ ಮಾತನಾಡಿದ ಅವರು, 5 ದಿನಗಳ ಕಾಲ ಹಂಪಾಪುರ ಹೋಬಳಿಯ ಪ್ರತಿ ಗ್ರಾಪಂ ವ್ಯಾಪ್ತಿಗಳಲ್ಲಿ ಪ್ರಚಾರ ಮಾಡಲು ಮಾಹಿತಿ ರಥಕ್ಕೆ ಚಾಲನೆ ನೀಡಲಾಗಿದ್ದು, ರೈತರು ಬೆಳೆ ವಿಮೆ ಮಾಡಿಸಲು ಮುಂದಾಗಬೇಕು ಎಂದರು.

ಸಹಾಯಕ ತಾಂತ್ರಿಕ ವ್ಯವಸ್ಥಾಪಕಿ ರಕ್ಷಿತಾ ಮಾತನಾಡಿ, ರೈತರಿಗೆ ಮಾಹಿತಿ ನೀಡುವ ದೃಷ್ಟಿಯಿಂದ ಪ್ರಚಾರ ಮಾಹಿತಿ ರಥದ ಮೂಲಕ 5 ದಿನಗಳ ಕಾಲ ಪ್ರಚಾರ ಕೈಗೊಳ್ಳಲಾಗುತ್ತದೆ. ಆದ್ದರಿಂದ ರೈತರು ಹೆಸರುಕಾಳು, ಉದ್ದು, ಎಳ್ಳು, ಭತ್ತ, ಮುಸುಕಿನ ಜೋಳ, ಹತ್ತಿ, ಇನ್ನಿತರೆ ಬೆಳೆಗಳಿಗೆ ವಿಮೆ ಮಾಡಿಸಿಕೊಳ್ಳಬೇಕು ಎಂದು ಮನವಿ ಮಾಡಿದರು. ಈ ವೇಳೆ ತಾಲೂಕು ಕಬ್ಬು ಬೆಳೆಗಾರರ ಸಂಘದ ಅಧ್ಯಕ್ಷ ರಾಜೇಶ್, ಗ್ರಾಮಸ್ಥರು, ಇತರರಿದ್ದರು.

ವಿದ್ಯಾರ್ಥಿಗಳಿಗೆ ಸಾಮಾಜಿಕ ಪಿಡುಗುಗಳ ಬಗ್ಗೆ ಅರಿವು ಮೂಡಿಸಿ



ವಿದ್ಯಾರ್ಥಿಗಳಿಗೆ ಸಾಮಾಜಿಕ ಪಿಡುಗುಗಳ ಬಗ್ಗೆ ಅರಿವು ಮೂಡಿಸಲಾಯಿತು

ಹನಗೋಡು, ಜೂ.22– ಶಾಲಾ, ಕಾಲೇಜು ಹಂತದಲ್ಲೇ ವಿದ್ಯಾರ್ಥಿಗಳಿಗೆ ಸಾಮಾಜಿಕ ಪಿಡುಗುಗಳ ಬಗ್ಗೆ ಅರಿವು ಮೂಡಿಸಬೇಕು ಎಂದು ಗ್ರಾಮಾಂತರ ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್ ಎನ್.ಮುನಿಯಪ್ಪ ತಿಳಿಸಿದರು.

ಇಲ್ಲಿನ ಚಿಲ್ಕುಂದ ಗ್ರಾಮದ ಸರ್ಕಾರಿ ಪ್ರೌಢಶಾಲೆ ವಿದ್ಯಾರ್ಥಿಗಳಿಗೆ ಕಾನೂನಿನ ಬಗ್ಗೆ ಮಾಹಿತಿ ನೀಡಿ ಮಾತನಾಡಿದ ಅವರು, ಸಮಾಜದಲ್ಲಿ ಮಕ್ಕಳ ಮೇಲೆ ದೌರ್ಜನ್ಯ, ಅತ್ಯಾಚಾರ ಹಾಗೂ ಬಾಲ್ಯವಿವಾಹ ನಡೆಯುತ್ತಿವೆ. ಪಾಲಕರು ತಮ್ಮ ಬದುಕಿನ ಬವಣೆ ನೀಗಿಸಿಕೊಳ್ಳಲು ಚಿಕ್ಕ ಮಕ್ಕಳನ್ನು ಕೂಲಿ ಕೆಲಸಗಳಿಗೆ ಕಳುಹಿಸದೆ ಶಿಕ್ಷಣ ಕೊಡಿಸಲು ಮುಂದಾಗಬೇಕು ಎಂದು ತಿಳಿಸಿದರು.

ಅಪ್ರಾಪ್ತರು ವಾಹನ ಚಾಲನೆ ಮಾಡುವುದು ಕಾನೂನಿನ ಪ್ರಕಾರ ಅಪರಾಧ. ಆದ್ದರಿಂದ ಪ್ರಾಪ್ತ ವಯಸ್ಸಿಗೆ ಬಂದ ನಂತರ ಡ್ರೈವಿಂಗ್ ಲೈಸೆನ್ಸ್ ಪಡೆದು ವಾಹನ ಚಾಲನೆ ಮಾಡಬೇಕೆಂದು ಸಲಹೆ ನೀಡಿದರು.

ಇದೇ ವೇಳೆ ಬಾಲಕಾರ್ಮಿಕ ತಡೆ, ಎಫ್ಐಆರ್, ಬಾಲ್ಯವಿವಾಹ ಸೇರಿದಂತೆ ಮಕ್ಕಳ ಹಕ್ಕುಗಳು ಹಾಗೂ ಇಲಾಖೆ ಅಧಿಕಾರಿಗಳು ಬಳಸುವ ಪಿಸ್ತೂಲ್, ರೈಫಲ್, ಗಣಕಯಂತ್ರ, ಬಂದಿಖಾನೆ, ವಾಕಿಟಾಕಿ, ದಾಖಲಾತಿ ಸೇರಿದಂತೆ ಪೊಲೀಸ್ ಇಲಾಖೆಯ ಕರ್ತವ್ಯಗಳ ಬಗ್ಗೆ ಮಾಹಿತಿ ನೀಡಿದರು.

ಸಭೆಯ ಅಧ್ಯಕ್ಷತೆಯನ್ನು ಶಾಲೆ ಮುಖ್ಯ ಶಿಕ್ಷಕಿ ಮಾಲತಿ ವಹಿಸಿದ್ದರು. ಕಾರ್ಯಕ್ರಮದಲ್ಲಿ ಪೊಲೀಸ್ ಸಿಬ್ಬಂದಿಗಳಾದ ಮಹೇಶ್, ಮಂಜುನಾಥ್, ಸುಂದರರಾಜ್ ಸೇರಿದಂತೆ ಶಾಲಾ ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಹಾಜರಿದ್ದರು.

ರಂಗಸಮುದ್ರದಲ್ಲಿ ಯೋಗ ದಿನಾಚರಣೆ



ತಿ.ನರಸೀಪುರ, ಜೂ.22– ಯೋಗದಿಂದ ಮನಸ್ಸು ದೇಹ ಆರೋಗ್ಯವಾಗಿರಲಿದೆ ಎಂದು ಮೈಸೂರು ಜಿಲ್ಲಾ ಬಿಜೆಪಿ ಪ್ರಧಾನ ಕಾರ್ಯದರ್ಶಿ ಕೆ.ವಾಸುದೇವ್ ತಿಳಿಸಿದರು.

ತಾಲೂಕಿನ ರಂಗಸಮುದ್ರದ ಧ್ಯಾನ್ ಫಾರಂ ಹೌಸ್‌ನಲ್ಲಿ ನಡೆದ ಯೋಗ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಮನುಷ್ಯ ಆರೋಗ್ಯವಾಗಿರಲು ಯೋಗ ಸಹಾಯವಾಗಲಿದೆ. ಯೋಗ ಜ್ಞಾನದ ಭಾಗವಾಗಿದ್ದು, ಏಕಾಗ್ರತೆ ಹೆಚ್ಚಳಕ್ಕೆ ಸಹಕಾರಿಯಾಗಲಿದೆ ಎಂದರು.

ಅಂತರರಾಷ್ಟ್ರೀಯ ಯೋಗ ದಿನಕ್ಕೆ ಮಾತ್ರ ಯೋಗವನ್ನು ಸೀಮಿತಗೊಳಿಸದೆ, ನಿತ್ಯ ಯೋಗ ಮಾಡುವ ಮೂಲಕ ಆರೋಗ್ಯವಂತರಾಗಿರುವಂತೆ ಸಲಹೆ ನೀಡಿದರು.

ಪ್ರಾಚೀನ ಕಾಲದಿಂದಲೂ ದೇಶದಲ್ಲಿ ಯೋಗ ಸಂಸ್ಕೃತಿಯೊಂದಿಗೆ ಬೆರೆತಿದೆ. ಪ್ರತಿ ವರ್ಷ ಜೂ.21ರಂದು ವಿಶ್ವ ಯೋಗ ದಿನಾಚರಣೆ ಆಚರಿಸಲು ಪ್ರಧಾನಿ ನರೇಂದ್ರ ಮೋದಿ ಕಾರಣ. ಪ್ರಸ್ತುತ ಚೀನಾ, ಅಮೆರಿಕಾದಂತಹ ರಾಷ್ಟ್ರಗಳು ಯೋಗ ದಿನಾಚರಣೆಗೆ ಮುಂದಾಗಿವೆ. ಯೋಗ ಭೌತಿಕ, ಮಾನಸಿಕ ಆರೋಗ್ಯಕ್ಕಾಗಿ, ಒತ್ತಡದಿಂದ ಕೂಡಿರುವ ಮನುಷ್ಯನಿಗೆ ಅವಶ್ಯಕತೆ ಇದೆ ಎಂದ ಅವರು ನಮ್ಮ ಸಾಂಸ್ಕೃತಿಕ ರಾಜಧಾನಿ ಮೈಸೂರಲ್ಲಿ ವಿದೇಶಿಗರು ಯೋಗ ತರಬೇತಿ ಪಡೆಯುತ್ತಿರುವುದು ಶ್ಲಾಘನೀಯ ಎಂದರು.

ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬಾಲಕೃಷ್ಣ, ಪ್ರಧಾನ ಕಾರ್ಯದರ್ಶಿ ಎಂ.ವೆಂಕಟರಮಣಶೆಟ್ಟಿ, ಮಹಾಶಕ್ತಿ ಕೇಂದ್ರದ ಅಧ್ಯಕ್ಷ ಶಂಕರ್, ಗ್ರಾಪಂ ಸದಸ್ಯ ಮಹದೇವಸ್ವಾಮಿ, ಶಿವು, ಕೃಷ್ಣ, ಮಲ್ಲೇಶ, ಮಹೇಶ, ಪ್ರಸಾದ್ ಇತರರಿದ್ದರು.

ಹುಣಸೂರಲ್ಲಿ ಕೆಂಪೇಗೌಡ ಜಯಂತಿ ಪೂರ್ವಭಾವಿ ಸಭೆ



ಹುಣಸೂರಲ್ಲಿ ಕೆಂಪೇಗೌಡ ಜಯಂತಿ ಪೂರ್ವಭಾವಿ ಸಭೆ ನಡೆಯಿತು.

ಹುಣಸೂರು, ಜೂ.22– ನಗರದ ತಾಲೂಕು ಕಚೇರಿ ಸಭಾಂಗಣದಲ್ಲಿ ನಾಡಪ್ರಭು ಕೆಂಪೇಗೌಡ ಜಯಂತಿ ಪೂರ್ವಭಾವಿ ಸಭೆ ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ ಅಧ್ಯಕ್ಷ ತಹಸೀಲ್ದಾರ್ ಮಂಜುನಾಥ್ ನೇತೃತ್ವದಲ್ಲಿ ನಡೆಯಿತು.

ತಾಲೂಕು ಒಕ್ಕಲಿಗರ ಸಂಘದ ನಿರ್ದೇಶಕ ಬಿಳಿಕೆರೆ ಪ್ರಸನ್ನ ಮಾತನಾಡಿ, ಜೂ.27ರಂದು ನಾಡಪ್ರಭು ಕೆಂಪೇಗೌಡರ ಜಯಂತಿಯನ್ನು ಸರ್ಕಾರದ ನಿಯಮಾನಸಾರ ತಾಲೂಕು ಕಚೇರಿ ಒಳ ಸಭಾಂಗಣದಲ್ಲಿ ಸರಳವಾಗಿ ಆಚರಿಸುವುದು. ಮುಂದಿನ ದಿನಗಳಲ್ಲಿ ತಾಲೂಕು ಒಕ್ಕಲಿಗರ ಸಂಘದಿಂದ ಸಮಾಜದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಹಾಗೂ ಗಣ್ಯರಿಗೆ ಸನ್ಮಾನ ಕಾರ್ಯಕ್ರಮದೊಂದಿಗೆ ಅದ್ದೂರಿಯಾಗಿ ಆಚರಿಸಲಾಗುವುದು. ಇದಕ್ಕೆ ಎಲ್ಲರೂ ಸಹಕಾರ ನೀಡಬೇಕು ಎಂದು ಮನವಿ ಮಾಡಿದರು.

ತಹಸೀಲ್ದಾರ್ ಮಂಜುನಾಥ್ ಮಾತನಾಡಿ, ಸರ್ಕಾರ ನಿಗದಿಪಡಿಸಿರುವ ದಿನಾಂಕದಂದು ರಾಷ್ಟ್ರೀಯ ಹಬ್ಬಗಳ ಆಚರಣೆ ಸಮಿತಿಯಿಂದ ಜಯಂತಿ ಆಚರಿಸಲಾಗುವುದು. ಸಮಾಜದ ವತಿಯಿಂದ ತಾವು ಯಾವಾಗ ಬೇಕಾದರೂ ಜಯಂತಿ ಆಚರಿಸಬಹುದು. ಇದಕ್ಕೆ ಸಮಿತಿಯ ಯಾವುದೇ ಅಭ್ಯಂತರ ಇಲ್ಲ. ಕೆಂಪೇಗೌಡ ಜಯಂತಿಯಲ್ಲಿ ಸಾರ್ವಜನಿಕರು ಹಾಗೂ ಎಲ್ಲಾ ಸಂಘ ಸಂಸ್ಥೆಗಳು, ಜನಪ್ರತಿನಿಧಿಗಳು ಭಾಗವಹಿಸಿ ಕಾರ್ಯಕ್ರಮ ಯಶಸ್ವಿಗೊಳಿಸಬೇಕು ಎಂದು ಮನವಿ ಮಾಡಿದರು.

ಸಭೆಯಲ್ಲಿ ನಗರಸಭೆ ಮಾಜಿ ಸದಸ್ಯ ಯೋಗಾನಂದ, ನಾಡಪ್ರಭು ಕೆಂಪೇಗೌಡ ಯುವ ಪಡೆ ಕಾರ್ಯದರ್ಶಿ ಕೃಷ್ಣೇಗೌಡ, ಮುಖಂಡ ಉದಯಕುಮಾರ್ ಸೇರಿದಂತೆ ತಾಲೂಕಿನ ವಿವಿಧ ಇಲಾಖೆ ಅಧಿಕಾರಿಗಳು ಹಾಗೂ ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ ಸದಸ್ಯರು ಭಾಗವಹಿಸಿದ್ದರು.

ಕೋರ್ಟ್ ಆವರಣದಲ್ಲಿ ಯೋಗ ದಿನಾಚರಣೆ



ಹುಣಸೂರು, ಜೂ.22– ನಗರದ ಕೋರ್ಟ್ ಆವರಣದಲ್ಲಿ ಅಂತಾರಾಷ್ಟ್ರೀಯ ಯೋಗ ದಿನವನ್ನು ಆಚರಿಸಲಾಯಿತು. ಈ ವೇಳೆ 8ನೇ ಹೆಚ್ಚುವರಿ ನ್ಯಾಯಾಧೀಶ ಗೋವಿಂದಯ್ಯ, ಹಿರಿಯ ಶ್ರೇಣಿ ಪ್ರಥಮ ಸಿವಿಲ್ ನ್ಯಾಯಾಧೀಶೆ ಅನಿತಾ, ಕಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರಾದ ಮೀನು ಪಟೇಲ್, ವಕೀಲರ ಸಂಘದ ಉಪಾಧ್ಯಕ್ಷ ಹರೀಶ್ ಕುಮಾರ್, ಹಿರಿಯ ವಕೀಲರಾದ ಬಿ.ಎಸ್.ಯೋಗಾನಂದ್, ಉಷಾ, ಲಕ್ಷ್ಮೀಕಾಂತ್, ವಿಠೋಬಾ ರಾವ್ ಬೋಪಡೆ ಸೇರಿದಂತೆ ಅನೇಕ ಇತರರಿದ್ದರು.

ರೈತರು ಡೇರಿಗೆ ಗುಣಮಟ್ಟದ ಹಾಲು ಪೂರೈಕೆ ಮಾಡಿ



ಮಲ್ಲುಂಡಿ, ಜೂ22– ರೈತರು ಡೈರಿಗೆ ಗುಣಮಟ್ಟದ ಹಾಲು ಪೂರೈಕೆ ಮಾಡುವ ಮೂಲಕ ಮೈಮುಲ್ ಏಳಿಗೆಗೆ ಸಹಕರಿಸಿ ಎಂದು ಮೈಮುಲ್ ನಿರ್ದೇಶಕಿ ನೀಲಾಂಬಿಕೆ ತಿಳಿಸಿದರು.

ಗ್ರಾಮದಲ್ಲಿ ನೂತನ ಬಿಎಂಸಿ ಕೇಂದ್ರ ಉದ್ಘಾಟಿಸಿ ಮಾತನಾಡಿದ ಅವರು, ಸರ್ಕಾರದಿಂದ ಬರುವ ಸೌಲಭ್ಯಗಳನ್ನು ಪ್ರತಿಯೊಬ್ಬರೂ ಸದುಪಯೋಗಪಡಿಸಿಕೊಳ್ಳಿ ಎಂದರು.

ತಾಪಂ ಮಾಜಿ ಸದಸ್ಯ ಎಸ್.ಬಸವರಾಜ್ ಮಾತನಾಡಿ, ಹೈನುಗಾರಿಕೆಯಿಂದ ಆರ್ಥಿಕವಾಗಿ ಸಬಲರಾಗಬಹುದು. ಹೀಗಾಗಿ ಹಾಲು ಉತ್ಪಾದಕರು ಹೆಚ್ಚಾಗಿ ಹೈನುಗಾರಿಕೆಯಲ್ಲಿ ತೊಡಗಿಸಿಕೊಳ್ಳಿ ಎಂದರು.

ಈ ವೇಳೆ ಮೈಮುಲ್ ಮಾಜಿ ಅಧ್ಯಕ್ಷ ಕೆ.ಜಿ.ಮಹೇಶ್, ಡೈರಿ ಮಾಜಿ ಅಧ್ಯಕ್ಷ ಪುಟ್ಟಿಸುಬ್ಬಪ್ಪ, ಮಾಜಿ ಉಪಾಧ್ಯಕ್ಷ ಎಂ.ಶಿವಣ್ಣ, ಒಕ್ಕೂಟದ ಸಹಾಯಕ ವ್ಯವಸ್ಥಾಪಕ ಡಾ.ಅಕ್ಷಯ್ ಕುಮಾರ್, ಮಾರ್ಗ ವಿಸ್ತರಣಾಧಿಕಾರಿ, ಶಿವಕುಮಾರ್, ರಮ್ಯ, ಗ್ರಾಪಂ ಸದಸ್ಯ ಪಾಪ, ಶಿವಕುಮಾರ, ಮುಖಂಡರಾದ ಎಂ.ಎನ್.ಸತೀಶ್, ಗುರುಮಲ್ಲಪ್ಪ, ಸಣ್ಣಮಾದಪ್ಪ, ಪುಟ್ಟಸ್ವಾಮಿ, ಮಾಜಿ ನಿರ್ದೇಶಕರಾದ ಮಹದೇವಮ್ಮ, ಶಾಂತಮ್ಮ, ಸಿಇಓ ಮುತ್ತುರಾಜ್, ಸಿಬ್ಬಂದಿಗಳಾದ ನಂದೀಶ, ಶಿವಶಂಕರ್ ಸೇರಿದಂತೆ ಇತರರಿದ್ದರು.

ಆಹಾರ ವಿಹಾರದ ಜೊತೆಗೆ ಯೋಗವೂ ಮುಖ್ಯ

ಆಯುರ್ವೇದ ತಜ್ಞ ಡಾ.ಪ್ರಶಾಂತ್ ಬಿಂಜಲ್‌ಬಾವಿ



ವಿವೇಕಾನಂದ ಸ್ಮಾರಕ ಆಸ್ಪತ್ರೆ ಆವರಣದಲ್ಲಿ ಯೋಗ ದಿನ ಆಚರಿಸಲಾಯಿತು.

ಸರಗೂರು, ಜೂ.22– ಆಹಾರ ವಿಹಾರದ ಜೊತೆಗೆ ಯೋಗವೂ ಮುಖ್ಯ ಎಂದು ಆಯುರ್ವೇದ ತಜ್ಞ ಡಾ.ಪ್ರಶಾಂತ್ ಬಿಂಜಲ್‌ಬಾವಿ ಅಭಿಪ್ರಾಯಪಟ್ಟರು.

ಪಟ್ಟಣದ ವಿವೇಕಾನಂದ ಸ್ಮಾರಕ ಆಸ್ಪತ್ರೆ ಆವರಣದಲ್ಲಿ ವಿವಿಧ ಸಂಘ ಸಂಸ್ಥೆಗಳ ಆಶ್ರಯದಲ್ಲಿ ನಡೆದ ಯೋಗ ದಿನಾಚರಣೆಯಲ್ಲಿ ಮಾತನಾಡಿದ ಅವರು, ಪ್ರತಿಯೊಬ್ಬರೂ ಮನೆಯಲ್ಲಿ ಯೋಗಾಭ್ಯಾಸ ರೂಢಿಸಿಕೊಂಡರೆ ಆರೋಗ್ಯ ವೃದ್ಧಿಯಾಗುತ್ತದೆ ಎಂದರು.

ಯೋಗ ಶಿಕ್ಷಕಿ ಡಾ.ಶ್ರೀಗೌರಿ ಮಾತನಾಡಿ, ವಜ್ರಾಸನ ಮಾಡುವುದರಿಂದ ಅಜೀರ್ಣತೆ ಹೋಗಲಾಡಿಸಬಹುದು. ಸಾಮಾನ್ಯ ಯೋಗ ಮಾಡುವುದರಿಂದ ಬೊಜ್ಜು ಕಡಿಮೆ ಮಾಡಬಹುದು. ಮಂಡಿ ಮತ್ತು ಕೀಲು ನೋವನ್ನು ನಿಯಂತ್ರಿಸಬಹುದು. ಒತ್ತಡ ನಿರ್ವಹಣೆ ಮಾಡಬಹುದು. ಬಿಪಿ ಮತ್ತು ಸಕ್ಕರೆ ಕಾಯಿಲೆ ನಿಯಂತ್ರಣದಲ್ಲಿಡಬಹುದು ಎಂದು ಯೋಗದ ಪ್ರಯೋಜನಗಳ ಕುರಿತು ವಿವರ ನೀಡಿದರು.

ಈ ವೇಳೆ ವಿವೇಕಾನಂದ ಸ್ಮಾರಕ ಆಸ್ಪತ್ರೆ ವೈದ್ಯರಾದ ಡಾ.ಅಭಿಷೇಕ್, ಡಾ.ಮನೋಹರ್ ಪ್ರಸಾದ್, ಆಸ್ಪತ್ರೆ ವ್ಯವಸ್ಥಾಪಕ ಸಂಧ್ಯಾ, ಮಾನವ ಸಂಪನ್ಮೂಲ ವಿಭಾಗದ ಹಿರಿಯ ವ್ಯವಸ್ಥಾಪಕರಾದ ಸಿ.ಜೆ.ಬೀನಾ, ಆಯುರ್ವೇದ ಪಂಚಕರ್ಮ ಥೆರಪಿಸ್ಟ್ ರವಿಕುಮಾರ್, ಸಿಬ್ಬಂದಿ ಪ್ರತಾಪ್, ರೂಪೇಶ್, ಚಿನ್ನಮಹದೇವ್, ರಾಕೇಶ್, ಉಲ್ಲಾಸ್, ನುಜುಂಡಸ್ವಾಮಿ, ಪ್ರಕಾಶ್, ಗೋಪಾಲಕೃಷ್ಣ, ಬಂಗಾರಶೆಟ್ಟಿ, ಸುರೇಂದ್ರ, ಪ್ರಮೋದ್ ಸೇರಿದಂತೆ ಸಾರ್ವಜನಿಕರು ಭಾಗವಹಿಸಿದ್ದರು.

ಸಚಿವ ವೆಂಕಟೇಶ್‌ರಿಂದ ಸಹಕಾರ ಇಲಾಖೆ ದುರ್ಬಳಕೆ

ಮೈಮುಲ್ ಅಧ್ಯಕ್ಷ ಸ್ಥಾನದಿಂದ ವಜಾಗೊಳಿಸಲು ಹುನ್ನಾರ: ಪಿ.ಎಂ.ಪ್ರಸನ್ನ ಆರೋಪ



ಹುಣಸೂರು, ಜೂ.22– ತಮ್ಮನ್ನು ಮೈಮುಲ್ ಅಧ್ಯಕ್ಷ ಸ್ಥಾನದಿಂದ ವಜಾಗೊಳಿಸಲು ಸಚಿವ ಕೆ.ವೆಂಕಟೇಶ್ ಸಹಕಾರ ಇಲಾಖೆ ಅಧಿಕಾರಿಗಳನ್ನು ದುರ್ಬಳಕೆ ಮಾಡಿಕೊಳ್ಳುತ್ತಿದ್ದಾರೆ ಎಂದು ಮೈಮುಲ್ ಅಧ್ಯಕ್ಷ ಪಿ.ಎಂ.ಪ್ರಸನ್ನ ಕುಮಾರ್ ಆರೋಪಿಸಿದರು.

ಪ್ರಕರಣವೊಂದಕ್ಕೆ ಸಂಬಂಧಿಸಿದಂತೆ ನಗರದ ಸಹಕಾರ ಸಂಘಗಳ ನಿಬಂಧಕರ ಕಚೇರಿ ನ್ಯಾಯಾಲಯಕ್ಕೆ ಆಗಮಿಸಿದ ಅವರು, ಸುದ್ದಿಗಾರರೊಂದಿಗೆ ಮಾತನಾಡಿದರು.

ಕ್ಷೇತ್ರದಲ್ಲಿ ತಮ್ಮ ಪುತ್ರನ ರಾಜಕೀಯ ಭವಿಷ್ಯಕ್ಕಾಗಿ ಸಚಿವರು ಇಲ್ಲಸಲ್ಲದ ರಾಜಕೀಯ ಮಾಡುತ್ತಿದ್ದಾರೆ. ತಾವು ಕಗ್ಗುಂಡಿ ಗ್ರಾಮದ ಮತದಾರನಾಗಿದ್ದು, ಗ್ರಾಮದ ಡೇರಿ ಅಧ್ಯಕ್ಷನಾಗಿ, ಈ ಡೇರಿಯನ್ನು ಪ್ರತಿನಿಧಿಸಿ ಮೈಮುಲ್ ನಿರ್ದೇಶಕನಾಗಿ ಅಧ್ಯಕ್ಷನೂ ಆಗಿದ್ದು, ವಾಸಸ್ಥಳ ದೃಢೀಕರಣ ರದ್ದುಗೊಳಿಸುವುದಕ್ಕೆ ಬಾರಿ ಪ್ರಯತ್ನ ನಡೆಸಿದ್ದಾರೆ ಎಂದರು.

ಈ ಸಂಬಂಧ 2015ರಿಂದಲೂ ನ್ಯಾಯಾಲಯದಲ್ಲಿ ತಡೆಯಾಜ್ಞೆ ಇದ್ದರೂ, ಇದೀಗ ಮತ್ತೆ ವಾಸಸ್ಥಳ ದೃಢೀಕರಣ ರದ್ದತಿಗೆ ಸಹಕಾರ ಇಲಾಖೆ ಅಧಿಕಾರಿಗಳ ಮೂಲಕ ಒತ್ತಡ ಹಾಕುತ್ತಿದ್ದಾರೆ. ಅಲ್ಲದೇ ತಾಂತ್ರಿಕ ಕಾರಣ ಮುಂದೊಡ್ಡಿ ಕಗ್ಗುಂಡಿ ಡೇರಿಯ ಎಲ್ಲಾ ನಿರ್ದೇಶಕರಿಗೂ ನೋಟಿಸ್ ನೀಡಿದ್ದಾರೆ. ಮೈಮುಲ್ ಅಧ್ಯಕ್ಷ ಸ್ಥಾನದಿಂದ ಕೆಳಗಿಳಿಸುವಂತೆ ನಿರ್ದೇಶಕರ ಮೇಲೆ ಒತ್ತಡ ಹಾಕುತ್ತಿದ್ದಾರೆ ಎಂದು ಗಂಭೀರ ಆರೋಪ ಮಾಡಿದರು.

ಪಿರಿಯಾಪಟ್ಟಣ ತಾಲೂಕಿನ ಪಂಚವಳ್ಳಿ ಬಳಿ 60 ಕೋಟಿ ವೆಚ್ಚದ ಪಶು ಆಹಾರ ಘಟಕ ನಿರ್ಮಾಣಕ್ಕೆ ಹಿಂದೆಯೇ ಗುದ್ದಲಿ ಪೂಜೆ ನಡೆದಿದೆ. ಅದಕ್ಕೂ ತಕರಾರು ಒಡ್ಡಿದ್ದಾರೆ. ತಮ್ಮ ಅವಧಿಯಲ್ಲಿ ಮೈಮುಲ್ ಪ್ರಗತಿಗೆ ಹಲವು ಯೋಜನೆಗಳನ್ನು ಜಾರಿಗೆ ತಂದಿದ್ದೇನೆ. ಒಟ್ಟಾರೆ ತಮ್ಮನ್ನು ಕೆಳಗಿಳಿಸಲು ಸಚಿವರು ಜಿದ್ದಿಗೆ ಇಳಿದಿದ್ದಾರೆ. ಅಲ್ಲದೇ ನಂದಿನಾಥಪುರ ಆಡಳಿತ ಮಂಡಳಿ ವಜಾಗೊಳಿಸಿರುವ ಸಚಿವರು ಜಿಲ್ಲೆಗೆ 68 ಕೋಟಿ ಹಾಲಿನ ಪ್ರೋತ್ಸಾಹ ಧನ ಸರ್ಕಾರದಿಂದ ಬಾಕಿ ಬರಬೇಕಿದ್ದು, ಹಣವನ್ನು ಮಂಜೂರು ಮಾಡಿಸಲು ವಿಫಲವಾಗಿದ್ದಾರೆ. ಮುಖ್ಯಮಂತ್ರಿಗಳ ಕ್ಷೇತ್ರದಲ್ಲೇ ಅಧಿಕಾರ ದುರ್ಬಳಕೆಯಾಗುತ್ತಿರುವುದು ಯಾವ ನ್ಯಾಯ ಎಂದು ಪ್ರಶ್ನಿಸಿದ ಅವರು, ಇದು ಮುಂದುವರೆದಲ್ಲಿ ಸಹಕಾರಿಗಳು ಬೀದಿಗಿಳಿದು ಹೋರಾಟ ನಡೆಸಲಿದ್ದಾರೆ ಎಂದು ಎಚ್ಚರಿಸಿದರು.

ದೊಡ್ಡ ಬ್ಯಾಲಾಳು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಶಿವಣ್ಣ ಮಾತನಾಡಿ, ತಮ್ಮ ಅಧ್ಯಕ್ಷತೆಯಲ್ಲಿ ನಡೆಯಬೇಕಿದ್ದ ಸಂಘದ ಮಹಾಸಭೆ ಮುನ್ನಾ ದಿನ ತಮ್ಮ ವಿರುದ್ಧ ದೂರು ದಾಖಲಾಗುವಂತೆ ಸಚಿವ ವೆಂಕಟೇಶ್ ಅವರು ಚಿಂತನೆ ನಡೆಸಿ, ಸಭೆ ನಡೆಯದಂತೆ ನೋಡಿಕೊಂಡಿದ್ದಲ್ಲದೆ ಒಂದಿಲ್ಲೊಂದು ರೀತಿ ಕಿರುಕುಳ ನೀಡುತ್ತಾ ಬಂದಿದ್ದಾರೆ ಎಂದರು.

ದೇವರಾಜ ಅರಸರ ನಂತರ ಜಿಲ್ಲೆಯಲ್ಲಿ ಸಿದ್ದರಾಮಯ್ಯನವರು 2ನೇ ಬಾರಿ ಮುಖ್ಯಮಂತ್ರಿಯಾಗಿ ಹಿಂದುಳಿದವರು, ಬಡವರು ಶೋಷಿತರ ಧ್ವನಿಯಾಗಿ ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಿದ್ದು, ಇಂತಹ ನಾಯಕತ್ವದಲ್ಲಿ ವೆಂಕಟೇಶ್ ಸಚಿವರಾಗಿದ್ದುಕೊಂಡು ಬಡವರ ಕೆಲಸ ಮಾಡುವ ಬದಲು ಸಹಕಾರ ಸಂಘಗಳಲ್ಲಿ ಒಡಕು ಮೂಡಿಸುವುದು, ಸೂಪರ್ ಸೀಡ್ ಮಾಡಿಸುತ್ತಿರುವುದು ತರವಲ್ಲ. ತಮ್ಮ ವರ್ತನೆ ಬದಲಾಯಿಸಿಕೊಳ್ಳದಿದ್ದಲ್ಲಿ ಜಿಲ್ಲಾದ್ಯಂತ ಸಹಕಾರಿಗಳೊಳಗೂಡಿ ಪ್ರತಿಭಟನೆ ನಡೆಸಲಾಗುವುದೆಂದು ಎಚ್ಚರಿಸಿದರು.

ಈ ವೇಳೆ ಕಗ್ಗುಂಡಿ ಡೇರಿ ಉಪಾಧ್ಯಕ್ಷ ಕೆಟಿ. ಕೃಷ್ಣೇಗೌಡ ಹಾಗೂ ನಿರ್ದೇಶಕರು ಇದ್ದರು.

ಮೈಸೂರು ಮಿತ್ರ ಭಾನುವಾರ 23 ಜೂನ್ 2024

ಆರೋಗ್ಯಕರ ಸಮಾಜಕ್ಕೆ ಯೋಗ ಅನಿವಾರ್ಯ

●ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಪ್ರತಿಪಾದನೆ ●ರಾಜ್ಯಮಟ್ಟದ ಯೋಗ ಸಮ್ಮೇಳನಕ್ಕೆ ಚಾಲನೆ



ಮೈಸೂರಿನ ಕಲಾಮಂದಿರದಲ್ಲಿ ಶನಿವಾರ ನಡೆದ ರಾಜ್ಯಮಟ್ಟದ ಪ್ರಥಮ ಯೋಗ ಸಮ್ಮೇಳನದಲ್ಲಿ ಯೋಗಪಟಗಳು ಯೋಗ ನೃತ್ಯ ಪ್ರದರ್ಶಿಸಿ ಗಮನ ಸೆಳೆದರು.

ಮೈಸೂರು,ಜೂ.22(ಎಂಟಿವೈ)– ಧರ್ಮದ ಎಲ್ಲೆ ಮೀರಿರುವ ಯೋಗದ ಮೂಲಕ ಒತ್ತಡ ನಿವಾರಿಸಿಕೊಂಡು ಆರೋಗ್ಯ ಕಾಪಾಡಿಕೊಳ್ಳಬಹುದು ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಕಲಾಮಂದಿರದಲ್ಲಿ ಯೋಗ ಶಿಕ್ಷಕರ ಒಕ್ಕೂಟ ಆಯೋಜಿಸಿದ್ದ 'ರಾಜ್ಯ ಮಟ್ಟದ ಪ್ರಥಮ ಯೋಗ ಸಮ್ಮೇಳನ–2024'ವನ್ನು ಉದ್ಘಾಟಿಸಿ ಮಾತನಾಡಿದ ಅವರು, ಯೋಗಕ್ಕೆ ಯಾವುದೇ ಧರ್ಮದ ಎಲ್ಲೆ ಇಲ್ಲ. ನಿರ್ದಿಷ್ಟ ಧರ್ಮದವರೇ ಯೋಗ ಮಾಡಬೇಕು ಎಂಬ ನಿರ್ಬಂಧ ವಿಲ್ಲ. ಧರ್ಮಾತೀತವಾಗಿ ಎಲ್ಲಾ ಧರ್ಮಿಯರು ಯೋಗ ಮಾಡಬಹುದು. ಕಿರಿಯರಿಂದ ಹಿಡಿದು ವೃದ್ಧರ ತನಕವೂ ಅಭ್ಯಾಸ ಮಾಡಬಹುದು. ಆದರೆ, ಆಯಾ ವಯೋಮಾನಕ್ಕೆ ತಕ್ಕಂತಹ ಆಸನಗಳನ್ನು ಮಾಡಬೇಕು. ಇದರಿಂದ ಆರೋಗ್ಯವೂ ವೃದ್ಧಿಯಾಗುತ್ತದೆ, ಮನಸ್ಸಿನ ಏಕಾಗ್ರತೆ ಶಕ್ತಿ ಹೆಚ್ಚುತ್ತದೆ ಎಂದು ತಿಳಿಸಿದರು.

ಆರೋಗ್ಯಕರ ಸಮಾಜ ನಿರ್ಮಾಣ ಮಾಡಬೇಕಾದರೆ ಜನರು ಆರೋಗ್ಯ ದಿಂದ ಇರಬೇಕು. ದೇಶದ ಆಸ್ತಿಯೇ ಮಾನವಸಂಪನ್ಮೂಲ. ಪ್ರತಿಯೊಬ್ಬರು ಸಶಕ್ತ ಆಸ್ತಿಯಾಗಬೇಕಾದರೇ ಯೋಗಾ ಭ್ಯಾಸವನ್ನು ರೂಢಿಸಿಕೊಂಡು, ಆರೋಗ್ಯವಂತ ರಾಗಬೇಕು. ಆಗ ನಮ್ಮ ದೇಶ ವಿಶ್ವಮಟ್ಟದಲ್ಲಿ ಇನ್ನಷ್ಟು ಪ್ರಬಲವಾಗಲಿದೆ ಎಂದರು.

ಆಧ್ಯಾತ್ಮಿಕ ಅಭ್ಯಾಸಕ್ಕೆ ವೈಜ್ಞಾನಿಕ ಪದ್ಧತಿ ಯನ್ನು ಅಳವಡಿಸಿರುವುದೇ ಯೋಗ. ಆದ್ದರಿಂದ ನಿರಂತರವಾಗಿ ಯೋಗಾಭ್ಯಾಸ ದಲ್ಲಿ ತೊಡಗಿದರೆ ಮನುಷ್ಯನ ವ್ಯಕ್ತಿತ್ವ ಪರಿಪೂರ್ಣವಾಗಿ ಹೊರಹೊಮ್ಮುತ್ತದೆ. ಆತನಲ್ಲಿ ತೇಜಸ್ಸು ಹೆಚ್ಚಾಗಿ, ಶರೀರವನ್ನು ನಿಗ್ರಹಿಸುವ ದೃಢತೆ ಬೆಳೆಯುತ್ತದೆ. ಯೋಗ, ಧ್ಯಾನ, ಪ್ರಾಣಾಯಾಮದಿಂದ ಒಳ್ಳೆಯ ಪರಿಣಾಮಗಳು ತನ್ನಿಂದ ತಾನೇ ಉಂಟಾಗುತ್ತವೆ. ಆಧ್ಯಾತ್ಮಿಕ ಬೆಳವಣಿಗೆ ಯಾಗುತ್ತದೆ. ಆದ್ದರಿಂದ ಯೋಗಾಭ್ಯಾಸದ ಅನುಕೂಲವನ್ನು ಕೇವಲ ತಿಳಿದುಕೊಂಡ ರಷ್ಟೇ ಸಾಲದು, ಅದನ್ನು ರೂಢಿಸಿಕೊಳ್ಳಬೇಕು. ಇಚ್ಛಾಶಕ್ತಿಯಿಂದ ಶಿಸ್ತಿನಿಂದ ಯೋಗಾಭ್ಯಾಸ ಮಾಡಿದರೆ ಆರೋಗ್ಯಕರ ಸಮಾಜವನ್ನು ನಿರ್ಮಾಣ ಮಾಡಬಹುದು ಎಂದರು.

ಯೋಗಕ್ಕೆ ತನ್ನದೇ ಆದ ಪರಂಪರೆ ಇದೆ. ಸ್ವಾಮಿ ವಿವೇಕಾನಂದರು ಶಿಕಾಗೋ ನಗರದಲ್ಲಿ ನಡೆದ ವಿಶ್ವ ಧರ್ಮ ಸಮ್ಮೇಳನದಲ್ಲಿ ಭಾಗವಹಿಸಿ ಮಾತನಾಡುವ ಸಂದರ್ಭದಲ್ಲಿ ನಮ್ಮ ಯೋಗದ ಬಗ್ಗೆ ಪರಿಚಯ ಮಾಡಿಕೊಟ್ಟಿದ್ದಾರೆ. ಯೋಗದ ಮುಖಾಂತರ ನಮ್ಮ ದೇಶದ ಭವ್ಯ ಪರಂಪರೆ, ಸಂಸ್ಕೃತಿ, ಜ್ಞಾನವನ್ನು ವಿಶ್ವಕ್ಕೆ ತೋರ್ಪಡಿಸುವುದು ಸಾಧ್ಯ. ಪ್ರಸ್ತುತ ಸಂದರ್ಭದಲ್ಲಿ ಜನ ಒತ್ತಡ ಜೀವನದಲ್ಲಿ ಖಿನ್ನತೆಗೊಳಗಾಗುತ್ತಿದ್ದಾರೆ. ಇದರಿಂದ ಹೊರ ಬರಲು ಯೋಗಾಭ್ಯಾಸ ಉತ್ತಮ. ಮನಸ್ಸು ಹಾಗೂ ದೇಹಕ್ಕೆ ಚೈತನ್ಯ ಹಾಗೂ ತೇಜಸ್ಸು ಮೂಡಿಸುವ, ಮಾನಸಿಕ ಮತ್ತು ದೈಹಿಕ ಆರೋಗ್ಯ ಕಾಪಾಡುವ ಶಕ್ತಿಯೂ ಯೋಗಕ್ಕೆ ಇದೆ. ಏಕಾಗ್ರತೆ ಹೆಚ್ಚಿಸುವ ಯೋಗವನ್ನು ವಿದ್ಯಾರ್ಥಿಗಳು ಚಾಚೂತಪ್ಪದೆ ಮಾಡಬೇಕು. ಇದರಿಂದ ಚೆನ್ನಾಗಿ ಓದುವುದರೊಂದಿಗೆ ಆರೋಗ್ಯ ಕಾಪಾಡಿಕೊಳ್ಳಲು ವಿದ್ಯಾರ್ಥಿಗಳಿಗೆ ಯೋಗ ಒಂದು ಉತ್ತಮ ಮಾರ್ಗ ಎಂದು ಅಭಿಪ್ರಾಯಪಟ್ಟರು.

ಪಂತಜಲಿ ಯೋಗಾಶ್ರಮ ಟ್ರಸ್ಟ್ ಸಂಸ್ಥಾಪಕ ಪ್ರಕಾಶ ಗುರೂಜಿ ಮಹರ್ಷಿ ಪತಂಜಲಿ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿದರು. ಯೋಗ ಛಾಯಾಚಿತ್ರ ಪ್ರದರ್ಶನವನ್ನು ಹಿರಿಯ ಪತ್ರಕರ್ತ ಅಂಶಿ ಪ್ರಸನ್ನ ಕುಮಾರ್ ಉದ್ಘಾಟಿಸಿದರು. ಕಾರ್ಯಕ್ರಮದಲ್ಲಿ ಯೋಗ ಪಟುಗಳು ಯೋಗ ನೃತ್ಯ ಪ್ರದರ್ಶಿಸಿ ಗಮನ ಸೆಳೆದರು.

ಕಾರ್ಯಕ್ರಮದಲ್ಲಿ ರಾಮಕೃಷ್ಣ ಆಶ್ರಮದ ಅಧ್ಯಕ್ಷ ಸ್ವಾಮಿ ಮುಕ್ತಿದಾನಂದಜಿ, ಬೇಬಿ ಮಠದ ಡಾ.ತ್ರಿನೇತ್ರ ಮಹಾಂತ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಸಮ್ಮೇಳನದ ಸರ್ವಾಧ್ಯಕ್ಷ ಡಾ.ಕೆ.ಎಲ್. ಶಂಕರನಾರಾಯಣ ಜೋಯಿಷ್ ಅಧ್ಯಕ್ಷತೆ ವಹಿಸಿದ್ದರು. ಶಾಸಕ ಕೆ.ಹರೀಶ್ ಗೌಡ, ವಿಧಾನ ಪರಿಷತ್ ಸದಸ್ಯರಾದ ಡಾ.ಡಿ.ತಿಮ್ಮಯ್ಯ, ಸಿ.ಎನ್. ಮಂಜೇಗೌಡ, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್, ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವಿಭಾಗೀಯ ಉಪನಿರ್ದೇಶಕ ಡಾ.ಕೆ.ಹೆಚ್. ಪ್ರಸಾದ್, ಜಿಲ್ಲಾ ಆರೋಗ್ಯಾಧಿಕಾರಿ ಡಾ. ಪಿ.ಸಿ.ಕುಮಾರಸ್ವಾಮಿ, ಸರ್ಕಾರಿ ಆಯುರ್ವೇದ ಸಂಶೋಧನಾ ಕೇಂದ್ರ ಸಹಾಯಕ ನಿರ್ದೇಶಕ ಡಾ.ಲಕ್ಷ್ಮೀ ನಾರಾಯಣ ಶೆಣೈ, ಯೋಗ ಸಮ್ಮೇಳನ ಸಮಿತಿ ಅಧ್ಯಕ್ಷ ಡಾ.ಎಸ್.ಪಿ. ಯೋಗಣ್ಣ, ಪ್ರಧಾನ ಸಂಚಾಲಕ ಅನಂತ್ ಮತ್ತಿತರರು ಉಪಸ್ಥಿತರಿದ್ದರು.

ಶಾಲಾ ಹಂತದಲ್ಲೇ ಯೋಗ ಕಲಿಕೆ

ಅಗತ್ಯವಿರುವ ಯೋಗ ಶಿಕ್ಷಕರ ನೇಮಕ

ಮೈಸೂರು, ಜೂ.22(ಎಂಟಿವೈ)– ಶಾಲಾ ಹಂತದಲ್ಲಿಯೇ ವಿದ್ಯಾರ್ಥಿಗಳಿಗೆ ಯೋಗ ಕಲಿಸುವ ಕಾರ್ಯಕ್ರಮವನ್ನು ಮತ್ತೆ ಮುಂದುವರೆಸಲು ಉದ್ದೇಶಿಸಿದ್ದು, ಅದಕ್ಕಾಗಿ ಅಗತ್ಯ ಯೋಗ ಶಿಕ್ಷಕರನ್ನು ನೇಮಿಸಲು ಸರ್ಕಾರ ಕ್ರಮ ಕೈಗೊಳ್ಳುತ್ತದೆ. ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಈ ಮಾಹಿತಿ ನೀಡಿದ್ದಾರೆ.

ಮೈಸೂರಿನಲ್ಲಿ ನಡೆದ ಯೋಗ ಸಮ್ಮೇಳನದಲ್ಲಿ ಮಾತನಾಡಿದ ಅವರು, ವಿದ್ಯಾರ್ಥಿಗಳ ಆರೋಗ್ಯ ಕಾಪಾಡುವ ನಿಟ್ಟಿನಲ್ಲಿ ಯೋಗ ಮಹತ್ವದ ಪಾತ್ರ ವಹಿಸುತ್ತದೆ. ಈ ಕಾರಣದಿಂದಲೇ ಕಳೆದ ಹಲವು ವರ್ಷಗಳಿಂದ ಶಾಲೆಗಳಲ್ಲಿ ಯೋಗ ಕಲಿಸಲಾಗುತ್ತಿತ್ತು. ಆದರೆ, ಈ ಹಿಂದಿನ ಸರ್ಕಾರದ ಅವಧಿಯಲ್ಲಿ ಶಾಲೆಗಳಲ್ಲಿ ಯೋಗ ಕಲಿಸುವ ಕಾರ್ಯಕ್ರಮ ಸ್ಥಗಿತಗೊಂಡಿದೆ. ಈ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಯೋಗದ ಮಹತ್ವ ಅರಿತು ಶಾಲೆಗಳಲ್ಲಿ ಯೋಗ ಕಲಿಸುವ ಕಾರ್ಯಕ್ರಮ ಮುಂದುವರೆಸಲು ಬಯಸಿದ್ದಾರೆ. ಇದಕ್ಕಾಗಿ ಅಗತ್ಯ ಸಿದ್ಧತೆ ಮಾಡಿಕೊಳ್ಳಲಾಗುತ್ತದೆ. ಯೋಗ ಶಿಕ್ಷಕರನ್ನು ನಿಯೋಜಿಸಿ, ಸರ್ಕಾರಿ ಶಾಲೆಗಳ ಮಕ್ಕಳಿಗೂ ಯೋಗ ಹೇಳಿಕೊಟ್ಟು, ಅದರ ಮಹತ್ವ ತಿಳಿಸಲಾಗುತ್ತದೆ ಎಂದರು.

ಸಮಾಜದಲ್ಲಿ ಜನರು ಆರೋಗ್ಯವಾಗಿರಬೇಕು ಎನ್ನುವ ದೃಷ್ಟಿಯಿಂದ ಆರೋಗ್ಯ ಇಲಾಖೆಯ ಕ್ಷೇಮ ಕೇಂದ್ರಗಳಲ್ಲಿ ಯೋಗಾಭ್ಯಾಸ ಮಾಡಲು ಪ್ರತ್ಯೇಕ ಸ್ಥಳವನ್ನು ನಿಗದಿಗೊಳಿಸಲಾಗಿದೆ. ಇಲ್ಲಿ ಯೋಗ ಶಿಕ್ಷಕರು ಬಂದು ಯೋಗ ಹೇಳಿಕೊಡುತ್ತಾರೆ. ಕ್ಷೇಮ ಕೇಂದ್ರದ ಸುತ್ತಮುತ್ತಲಿನ ಜನರು ಬಂದು ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದು ಮನವಿ ಮಾಡಿದರು.

ವಿಶ್ವ ಯೋಗ ದಿನದ ಅಂಗವಾಗಿ ರಾಜ್ಯದ ವಿವಿಧ ವಸತಿ ಶಾಲೆಗಳು, ಆಶ್ರಮ ಶಾಲೆಗಳು, ಸರ್ಕಾರಿ ಶಾಲೆ–ಕಾಲೇಜುಗಳಲ್ಲಿ ಒಂದು ವಾರ ಕಾಲ ಯೋಗೋತ್ಸವ ಆಚರಣೆ ಮಾಡಲಾಯಿತು. ಇದರಿಂದ ಸುಮಾರು 6 ಲಕ್ಷಕ್ಕೂ ಹೆಚ್ಚು ಮಂದಿ ಯೋಗವನ್ನು ಅಭ್ಯಾಸ ಮಾಡಿದ್ದಾರೆ ಎಂದು ತಿಳಿಸಿದರು.

ರಾಜ್ಯದಲ್ಲಿ ಡೆಂಗ್ಯೂ ಪ್ರಕರಣ ನಿಯಂತ್ರಣಕ್ಕೆ ಅಗತ್ಯ ಕ್ರಮ

ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಭರವಸೆ

ಮೈಸೂರು, ಜೂ.22(ಎಂಟಿವೈ)– ರಾಜ್ಯದಲ್ಲಿ ಮಳೆಗಾಲ ಆರಂಭವಾಗಿರುವುದರಿಂದ ಚಿಕ್ಕಮಗಳೂರು ಸೇರಿದಂತೆ ವಿವಿಧೆಡೆ ಡೆಂಗ್ಯೂ ಪ್ರಕರಣ ಹೆಚ್ಚಾಗುತ್ತಿದ್ದು, ಅದನ್ನು ನಿಯಂತ್ರಿಸಲು ಅಗತ್ಯ ಕ್ರಮ ಕೈಗೊಳ್ಳಲಾಗಿದೆ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದ್ದಾರೆ.

ಮೈಸೂರಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಮಳೆಗಾಲದಲ್ಲಿ ಡೆಂಗ್ಯೂ ಪ್ರಕರಣಗಳು ಹೆಚ್ಚಾಗುತ್ತವೆ. ಮಳೆ ನೀರು ನಿಲ್ಲುವುದರಿಂದ ಸೊಳ್ಳೆಗಳ ಸಂಖ್ಯೆ ಹೆಚ್ಚಾಗಿ ಡೆಂಗ್ಯೂ ಹರಡುತ್ತದೆ. ಚಿಕ್ಕಮಗಳೂರು ಸೇರಿದಂತೆ ಕೆಲ ಜಿಲ್ಲೆಗಳಲ್ಲಿ ಡೆಂಗ್ಯೂ ಪ್ರಕರಣಗಳು ಹೆಚ್ಚಾಗಿ ವರದಿಯಾಗಿವೆ. ಈ ಹಿನ್ನೆಲೆಯಲ್ಲಿ ಡೆಂಗ್ಯೂ ಹರಡದಂತೆ ತೀವ್ರ ಕಟ್ಟೆಚ್ಚರ ವಹಿಸಲಾಗಿದೆ. ಈಗಾಗಲೇ ಡೆಂಗ್ಯೂ ನಿಯಂತ್ರಣಕ್ಕೆ ಬಂದಿದೆ ಎಂದರು.



ಡೆಂಗ್ಯೂವಿನಿಂದಾಗಿ ಸಾವಿನ ಪ್ರಕರಣ ವರದಿಯಾಗಿಲ್ಲ. ಬೇರೆ ಬೇರೆ ಕಾರಣಗಳಿಂದ ಕೆಲವು ಸಾವಿನ ಪ್ರಕರಣ ವರದಿಯಾಗಿದೆ. ಜನರು ಡೆಂಗ್ಯೂವಿನ ಎಚ್ಚರಿಕೆ ವಹಿಸಬೇಕು. ಸೊಳ್ಳೆಗಳಿಂದ ರಕ್ಷಣೆ ಪಡೆದುಕೊಳ್ಳಬೇಕು. ನೀರು ನಿಂತರೆ ಸೊಳ್ಳೆಗಳು ಹೆಚ್ಚಾಗುತ್ತವೆ. ಹಾಗಾಗಿ ಮನೆಗಳ ಮುಂದೆ ನೀರು ನಿಲ್ಲದಂತೆ ಜನರು ನೋಡಿಕೊಳ್ಳಬೇಕು. ಸೊಳ್ಳೆಗಳು ಉತ್ಪತ್ತಿಯಾಗದಂತೆ ನಿಗಾ ವಹಿಸಬೇಕು ಎಂದು ಸಲಹೆ ನೀಡಿದರು.

ಅಭ್ಯರ್ಥಿಗಳ ಆಯ್ಕೆಗೆ ಸಮಿತಿ: ಚನ್ನಪಟ್ಟಣ ವಿಧಾನಸಭಾ ಕ್ಷೇತ್ರ ಸೇರಿದಂತೆ ಉಪಚುನಾವಣೆ ನಡೆಯುವ ಮೂರು ಕ್ಷೇತ್ರಗಳಿಂದ ಕಾಂಗ್ರೆಸ್ ಅಭ್ಯರ್ಥಿ ಆಯ್ಕೆಗೆ ಸಂಬಂಧಿಸಿದಂತೆ ಮೂರು ಕ್ಷೇತ್ರಕ್ಕೂ ಪ್ರತ್ಯೇಕ ಸಮಿತಿ ರಚಿಸಲಾಗಿದೆ. ಚನ್ನಪಟ್ಟಣ ಕ್ಷೇತ್ರ ಸಮಿತಿಗೆ ಸಚಿವ ಎನ್.ಚಲುವರಾಯಸ್ವಾಮಿ ಅವರನ್ನು ನೇಮಿಸಲಾಗಿದೆ. ಆ ಸಮಿತಿಯಲ್ಲಿ ಕೂಲಂಕುಷ ಚರ್ಚೆ, ಸ್ಥಳೀಯ ಕಾರ್ಯಕರ್ತರು, ಮುಖಂಡರ ಅಭಿಪ್ರಾಯ ಪಡೆದು ವರದಿ ಸಲ್ಲಿಸಿದ ಬಳಿಕ ಅಭ್ಯರ್ಥಿ ಆಯ್ಕೆ ಪ್ರಕ್ರಿಯೆ ನಡೆಯುತ್ತದೆ ಎಂದರು.

ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಚನ್ನಪಟ್ಟಣ ಕ್ಷೇತ್ರದಿಂದ ಸ್ಪರ್ಧಿಸುವುದಾಗಿ ಹೇಳಿಲ್ಲ. ನಾನು ಕನಕಪುರದ ಶಾಸಕ ಎಂದಿದ್ದಾರೆ. ಪಕ್ಷ ಹೇಳಿದರೆ ಮಾತ್ರ ನಿರ್ಧರಿಸುವುದಾಗಿ ಒಮ್ಮೆ ಹೇಳಿದ್ದಾರೆ. ಲೋಕಸಭಾ ಚುನಾವಣೆಯಲ್ಲಿ ಸೋಲನನುಭವಿಸಿದ ಕಾರಣ ಡಿ.ಕೆ.ಶಿವಕುಮಾರ್ ಚನ್ನಪಟ್ಟಣಕ್ಕೆ ಹೋಗಿ ಪಕ್ಷದ ಕಾರ್ಯಕರ್ತರು, ಮುಖಂಡರೊಂದಿಗೆ ಚರ್ಚೆ ನಡೆಸಿ, ಲೋಕಸಭಾ ಚುನಾವಣಾ ಸೋಲಿನಿಂದ ಕಂಗೆಡದೆ, ಉಪಚುನಾವಣೆಯಲ್ಲಿ ಎಲ್ಲರೂ ಒಂದಾಗಿ ಕೆಲಸ ಮಾಡೋಣ ಎಂದು ಸಂದೇಶ ನೀಡಿದ್ದಾರೆ. ಮಾಜಿ ಸಂಸದ ಡಿ.ಕೆ. ಸುರೇಶ್ ಸಂಸದರಾಗಿ ಕ್ಷೇತ್ರ ಅಭಿವೃದ್ಧಿ ಮಾಡಿದ್ದಾರೆ. ಆದರೆ ಚುನಾವಣೆ ಸಂದರ್ಭದಲ್ಲಿ ವಿರೋಧ ಪಕ್ಷಗಳು ಸುಖಾಸುಮ್ಮನೆ ಟೀಕೆ ಮಾಡುತ್ತಿವೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ವಿಧಾನಪರಿಷತ್ ಸದಸ್ಯ ಸೂರಜ್ ರೇವಣ್ಣ ವಿರುದ್ಧ ಲೈಂಗಿಕ ದೌರ್ಜನ್ಯ ಆರೋಪ, ಅವರ ಪರ ಪ್ರಕರಣ ದಾಖಲಿಸಿರುವ ಬಗ್ಗೆ ಪ್ರತಿಕ್ರಿಯೆ ನೀಡಲು ನಿರಾಕರಿಸಿದ ಸಚಿವ ದಿನೇಶ್ ಗುಂಡೂರಾವ್, ನಾನು ಪತ್ರಿಕೆಯಲ್ಲಿ ಬಂದಿರುವ ಸುದ್ದಿ ನೋಡಿದ್ದೇನೆ. ಯಾರೋ ಹೋಗಿ ದೂರು ಕೊಟ್ಟಿದ್ದಾರೆ ಎಂದು ವರದಿಯಲ್ಲಿದೆ. ಪತ್ರಿಕೆ ಸುದ್ದಿ ನೋಡಿ ಪ್ರತಿಕ್ರಿಯೆ ನೀಡಲು ಸಾಧ್ಯವಿಲ್ಲ. ಕಾನೂನು ಇದೆ. ಅದರ ಪ್ರಕಾರ ವಿಚಾರಣೆ ಆಗುತ್ತದೆ ಎಂದರು.

ಪಾಲಿಕೆಯಿಂದ ಎಲ್ಲಾ 9 ವಲಯಗಳಲ್ಲಿ ರಸ್ತೆ ಗುಂಡಿ ಮುಚ್ಚುವ ಕಾರ್ಯ ಆರಂಭ

ಮೈಸೂರು, ಜೂ.22(ಆರ್‌ಕೆ)–ಮಳೆಯಿಂದಾಗಿ ರಸ್ತೆಗಳಲ್ಲಿ ಉಂಟಾಗಿರುವ ಗುಂಡಿಗಳನ್ನು ಮುಚ್ಚುವ ಕಾಮಗಾರಿಯನ್ನು ಮೈಸೂರು ಮಹಾನಗರ ಪಾಲಿಕೆ ಆರಂಭಿಸಿದೆ.



ಕಳೆದ ಒಂದು ತಿಂಗಳಿಂದ ಮೈಸೂರು ನಗರದಾದ್ಯಂತ ಎಲ್ಲಾ ರಸ್ತೆಗಳಲ್ಲಿ ಗುಂಡಿ ಬಿದ್ದು, ವಾಹನ ಸಂಚಾರಕ್ಕೆ ತೀವ್ರ ತೊಂದರೆಯಾಗುತ್ತಿದ್ದರಿಂದ ಸಮೀಕ್ಷೆ ನಡೆಸಿದ ಪಾಲಿಕೆ ಇಂಜಿನಿಯರ್‌ಗಳು ಗುಂಡಿ ಮುಚ್ಚಲು ಅಂದಾಜು ತಯಾರಿಸಿದ್ದರು.

ಪಾಲಿಕೆ ಆಯುಕ್ತ ಅಶಾದ್ ಉರ್ ರೆಹಮಾನ್ ಷರೀಫ್ ಅವರ ನಿರ್ದೇಶನದಂತೆ ಸೂಪರಿಂಟೆಂಡಿಂಗ್ ಇಂಜಿನಿಯರ್ ಕೆ.ಜೆ.ಸಿಂಧೂ ನೇತೃತ್ವದಲ್ಲಿ ಇ–ಟೆಂಡರ್ ಕರೆದು ಅರ್ಹ ಗುತ್ತಿಗೆದಾರರಿಗೆ ವಲಯಕ್ಕೆ ಒಬ್ಬರಂತೆ ಗುಂಡಿ ಮುಚ್ಚುವ ಕಾಮಗಾರಿ ಉಸ್ತುವಾರಿ ವಹಿಸಿ ಕಾರ್ಯಾದೇಶ ನೀಡಲಾಗಿತ್ತು.

ವಲಯಕ್ಕೆ 10 ಲಕ್ಷದಂತೆ ಪಾಲಿಕೆ ವ್ಯಾಪ್ತಿಯ 9 ವಲಯಗಳಿಗೆ 90 ಲಕ್ಷ ರೂ.ಗಳನ್ನು ಗುಂಡಿ ಮುಚ್ಚುವ ಕೆಲಸಕ್ಕೆ ನಿಗದಿ ಮಾಡಿ ಮಂಜೂರಾತಿ ನೀಡಲಾಗಿದೆ. ಪಾಲಿಕೆಯ ಜನರಲ್ ಗ್ರಾಂಟ್‌ನಲ್ಲಿ ಹಣ ಖರ್ಚು ಮಾಡುತ್ತಿದ್ದು, ಗುತ್ತಿಗೆದಾರರು ಶುಕ್ರವಾರದಿಂದ ಕಾಮಗಾರಿ ಆರಂಭಿಸಿದ್ದಾರೆ ಎಂದು ಸೂಪರಿಂಟೆಂಡಿಂಗ್ ಇಂಜಿನಿಯರ್ ಸಿಂಧೂ ತಿಳಿಸಿದ್ದಾರೆ.

ಮಳೆ ನಿಂತಿರುವುದರಿಂದ ವೈಜ್ಞಾನಿಕ ರೀತಿಯಲ್ಲಿ ರಸ್ತೆಗಳ ಗುಂಡಿ ಮುಚ್ಚುವ ಕಾಮಗಾರಿ ಆರಂಭವಾಗಿದ್ದು, ಎಲ್ಲಾ 9 ವಲಯ ಕಚೇರಿಗಳ ಅಭಿವೃದ್ಧಿ ಅಧಿಕಾರಿಗಳು, ಇಂಜಿನಿಯರ್‌ಗಳು ಗುರುತಿಸುವ ರಸ್ತೆಗಳಲ್ಲಿ ಗುತ್ತಿಗೆದಾರರು ಕೆಲಸ ಮಾಡಿಸಬೇಕೆಂದು ಸೂಚಿಸಲಾಗಿದೆ ಎಂದು ಅವರು ತಿಳಿಸಿದರು.

ವಲಯಾಧಿಕಾರಿಗಳು ಸ್ಥಳಕ್ಕೆ ತೆರಳಿ ಕಾಮಗಾರಿಯ ಗುಣಮಟ್ಟದ ಮೇಲ್ವಿಚಾರಣೆ ನಡೆಸಿ ವರದಿ ನೀಡಲಿದ್ದಾರೆ. ನಿಗದಿತ ಅವಧಿಯೊಳಗೆ ರಸ್ತೆಗಳ ಗುಂಡಿ ಮುಚ್ಚುವಂತೆ ತಾಕೀತು ಮಾಡಿರುವುದರಿಂದ ಮತ್ತೆ ಆಷಾಢ ಮಳೆ ಆರಂಭವಾಗುವುದರೊಳಗಾಗಿ ಕಾಮಗಾರಿ ಪೂರ್ಣಗೊಳ್ಳುವ ನಿರೀಕ್ಷೆ ಇದೆ ಎಂದು ಸಿಂಧೂ ತಿಳಿಸಿದ್ದಾರೆ.

ವಿವಿಧ ಯೋಜನೆಗಳಿಗೆ ಅರ್ಜಿ ಆಹ್ವಾನ

ಮೈಸೂರು, ಜೂ.22– ಬನ್ನೂರು ಪುರಸಭೆ ವ್ಯಾಪ್ತಿಯಲ್ಲಿ 2024–25ನೇ ಸಾಲಿನ ಡೇ–ನಲ್ಮ್ ಯೋಜನೆಯಡಿ ಸ್ವಯಂ ಉದ್ಯೋಗ, ಗುಂಪು ಉದ್ಯೋಗ, ಗುಂಪುಗಳ ಕ್ರೇಡಿಟ್ ಲಿಂಕೇಜ್, ಕೌಶಲ್ಯ ತರಬೇತಿ, ಪ್ರಧಾನಮಂತ್ರಿ ಕಿರು ಆಹಾರ ಸಂರಕ್ಷಣಾ ತಯಾರಿಕೆ, ಸ್ವ–ಸಹಾಯ ಗುಂಪುಗಳಿಗೆ ಕಾಫಿ ಮೈಕ್ರೋ ಎಂಟರ್‌ಪ್ರಿನರ್‌ಶಿಪ್ ರಚಿಸುವುದು, ಪ್ರಾದೇಶಿಕ ಮಟ್ಟದ ಒಕ್ಕೂಟ, ಸಾಮಾಜಿಕ ಕ್ರೋಢೀಕರಣ ಮತ್ತು ಸಾಂಸ್ಥಿಕ ಅಭಿವೃದ್ಧಿ ಗುಂಪುಗಳ ರಚನೆ ಬೀದಿಬದಿ ವ್ಯಾಪಾರಸ್ಥರ ಸೌಲಭ್ಯಕ್ಕಾಗಿ ಸರ್ಕಾರದಿಂದ ಗುರಿ ನಿಗದಿಪಡಿಸಿದ್ದು ಅದರನುಗುಣವಾಗಿ ಅರ್ಜಿ ಆಹ್ವಾನಿಸಲಾಗಿದೆ.


ಸಂಬಂದಪಟ್ಟ ಫಲಾನುಭವಿಗಳು ಜೂನ್ 29 ರೊಳಗಾಗಿ ಅರ್ಜಿಗಳನ್ನು ಬನ್ನೂರು ಪುರಸಭೆಯ ಮುಖ್ಯಾಧಿಕಾರಿಗಳ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ಕಚೇರಿಯ ದೂ.ಸಂ: 08227–276058, 08227–276111, ಪುರಸಭೆ ಕಚೇರಿಯ ವ್ಯವಸ್ಥಾಪಕರು ಹಾಗೂ ಡೇ–ನಲ್ಮ್ ಸಿಬ್ಬಂದಿಯನ್ನು ಸಂಪರ್ಕಿಸಬಹುದು ಎಂದು ಬನ್ನೂರು ಪುರಸಭೆಯ ಮುಖ್ಯಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಂಕಾದ ವರುಣ; ಕೆಆರ್‌ಎಸ್, ಕಬಿನಿ ಒಡಲು ಇನ್ನು ಬರಿದು!

ಮೈಸೂರು, ಜೂ.22(ಬಿಎಲ್‌ಯು)– ಪೂರ್ವ ಮುಂಗಾರಿನಲ್ಲಿ ಅರ್ಭಟಿಸಿದ ವರುಣ ನೈರುತ್ಯ ಮುಂಗಾರಿನಲ್ಲಿ ಮಂಕಾಗಿದ್ದಾನೆ. ಮಂಡ್ಯ ಜಿಲ್ಲೆಯ ಕೃಷ್ಣರಾಜ ಸಾಗರ ಹಾಗೂ ಮೈಸೂರಿನ ಕಬಿನಿ ಜಲಾಶಯಗಳ ಒಡಲು ಇನ್ನು ಬರಿದಾಗಿದೆ.

ಮೇ ತಿಂಗಳಲ್ಲಿ ಮೈಸೂರು ಸೇರಿದಂತೆ ಬಹಳಷ್ಟು ಕಡೆ ವಾಡಿಕೆಗಿಂತ ಹೆಚ್ಚಾಗಿಯೇ ಮಳೆಯಾಯಿತು. ನೈರುತ್ಯ ಮುಂಗಾರಿನಲ್ಲಿ ಉತ್ತಮ ಮಳೆಯಾಗಲಿದೆ ಎಂದು ನಿರೀಕ್ಷಿಸಲಾಯಿತು. ಹವಾಮಾನ ಇಲಾಖೆ ಕೂಡ ಈ ಬಾರಿ ವಾಡಿಕೆಗಿಂತ ಹೆಚ್ಚು ಮಳೆಯಾಗಲಿದೆ ಎಂದು ಮುನ್ಸೂಚನೆ ನೀಡಿತ್ತು.

ನೈರುತ್ಯ ಮುಂಗಾರು ಆರಂಭವಾದ ಜೂನ್ ಮೊದಲ ವಾರದಲ್ಲಿ ಹೆಚ್ಚು ಮಳೆಯಾಯಿತು. ಇದೇ ರೀತಿ ಜೂನ್ ಪೂರ್ತಿ ಮಳೆಯಾಗಲಿದೆ ಎಂಬ ನಿರೀಕ್ಷೆ ಇತ್ತು ರೈತರು ಕೃಷಿ ಚಟುವಟಿಕೆ ಆರಂಭಿಸಿದ್ದರು.



ಆದರೆ ಜೂನ್ ಎರಡನೇ ವಾರದಲ್ಲಿ ಮಳೆಯ ಪ್ರಮಾಣ ಕಡಿಮೆಯಾಯಿತು. ಈಗಂತೂ ಮಳೆಯ ಲಕ್ಷಣಗಳೇ ಕಾಣಿಸುತ್ತಿಲ್ಲ. ಇದರಿಂದ ಸಹಜವಾಗಿಯೇ ರೈತರು ಕಂಗಾಲಾಗಿದ್ದಾರೆ. ಕಳೆದ ವರ್ಷದಂತೆ ಈ ಬಾರಿಯೂ ಬರಗಾಲವೇ ಎಂಬ ಆತಂಕ ಅನ್ನದಾತರಲ್ಲಿ ಮನೆ ಮಾಡಿದೆ.

ಕೆಆರ್‌ಎಸ್ ಜಲಾಶಯಕ್ಕೆ ನೀರಿನ ಮೂಲ ಕೊಡಗು ಜಿಲ್ಲೆಯ ಮಳೆ. ಹಾಗೆಯೇ ಕಬಿನಿ ಜಲಾಶಯಕ್ಕೆ ಕೇರಳದ ವೈನಾಡು ನೀರಿನ ಮೂಲ. ಆದರೆ ಕೊಡಗಿನಲ್ಲೂ ಮಳೆಯಾಗುತ್ತಿಲ್ಲ, ವೈನಾಡಿನಲ್ಲೂ ಮಳೆಯ ಮಾರುತಗಳು ಕಾಣಿಸುತ್ತಿಲ್ಲ. ಇದರಿಂದ ಕೆಆರ್‌ಎಸ್ ಹಾಗೂ ಕಬಿನಿ ಜಲಾಶಯದಲ್ಲಿ ಒಳಹರಿವಿನ ಪ್ರಮಾಣ ಸಾವಿರ ಕ್ಯೂಸೆಕ್‌ನಷ್ಟಿದೆ.

ಕೆಆರ್‌ಎಸ್ ಜಲಾಶಯದ ಗರಿಷ್ಟ ಮಟ್ಟ 124.80 ಅಡಿಗಳಾಗಿದ್ದು, ಇಂದಿನ ಮಟ್ಟ 87.60 ಅಡಿಗಳಾಗಿದೆ. ಜಲಾಶಯಕ್ಕೆ 1,413 ಕ್ಯೂಸೆಕ್ ನೀರು ಹರಿದು ಬರುತ್ತಿದ್ದು, ಜಲಾಶಯದಿಂದ 798 ಕ್ಯೂಸೆಕ್ ನೀರು ಬಿಡಲಾಗುತ್ತಿದೆ.

ಕಬಿನಿ ಜಲಾಶಯದ ಗರಿಷ್ಟ ಮಟ್ಟ 2284 ಅಡಿಗಳಾಗಿದ್ದು, ಇಂದಿನ ಮಟ್ಟ 2264 ಅಡಿಗಳಾಗಿದೆ. ಜಲಾಶಯಕ್ಕೆ 910 ಕ್ಯೂಸೆಕ್ ಒಳಹರಿವಿದ್ದು 408 ಕ್ಯೂಸೆಕ್ ಹೊರಗೆ ಬಿಡಲಾಗುತ್ತಿದೆ

ಹಾರೋಹಳ್ಳಿ ಬಳಿ ಒತ್ತುವರಿ ತೆರವು

15 ಕೋಟಿ ಮೌಲ್ಯದ 10.26 ಎಕರೆ ಭೂಮಿ ಸರ್ಕಾರದ ವಶಕ್ಕೆ

ಮೈಸೂರು, ಜೂ. 22(ಆರ್‌ಕೆ)– ಮೈಸೂರು ತಾಲೂಕು, ಹಾರೋಹಳ್ಳಿ ಗ್ರಾಮದ ಬಳಿ ಒತ್ತುವರಿ ಮಾಡಿಕೊಂಡಿದ್ದ 15 ಕೋಟಿ ರೂ. ಬೆಲೆ ಬಾಳುವ 10.26 ಎಕರೆ ಭೂಮಿಯನ್ನು ತೆರವುಗೊಳಿಸಿದ ಜಿಲ್ಲಾಡಳಿತವು ಸರ್ಕಾರದ ವಶಕ್ಕೆ ಪಡೆದುಕೊಂಡಿದೆ.

ಜಿಲ್ಲಾಧಿಕಾರಿ ಡಾ. ಕೆ.ವಿ. ರಾಜೇಂದ್ರ ನಿರ್ದೇಶನದಂತೆ ಮೈಸೂರು ಉಪ ವಿಭಾಗಾಧಿಕಾರಿ ಕೆ.ಆರ್. ರಕ್ಷಿತ್, ತಹಸೀಲ್ದಾರ್ ಮಹೇಶ್‌ಕುಮಾರ್ ನೇತೃತ್ವದಲ್ಲಿ ಶುಕ್ರವಾರ ಕಾರ್ಯಾಚರಣೆ ನಡೆಸಿದ ಅಧಿಕಾರಿಗಳು ಒತ್ತುವರಿ ತೆರವುಗೊಳಿಸಿ ಭೂಮಿಯನ್ನು ಸರ್ಕಾರದ ವಶಕ್ಕೆ ಪಡೆದಿದ್ದಾರೆ.



ಜಿಲ್ಲಾಧಿಕಾರಿಗಳ ನಿರ್ದೇಶನದಂತೆ ಅಧೀನಾಧಿಕಾರಿಗಳು ಕಾರ್ಯಾಚರಣೆ ನಡೆಸುತ್ತಿರುವುದು

ತಾಲೂಕು ಸೂಪರ್‌ವೈಸರ್ ಪ್ರವೀಣ್, ಭೂಮಾಪಕರಾದ ವೆಂಕಟೇಶ್, ಮಹದೇವಸ್ವಾಮಿ, ಎಂ. ಮಹದೇವಸ್ವಾಮಿ, ಉಪ ತಹಸೀಲ್ದಾರ್ ಲತಾ ಜೆ. ಶರಣಮ್ಮ, ರೆವಿನ್ಯೂ ಇನ್ಸ್‌ಪೆಕ್ಟರ್ ಡಿ.ಎಸ್. ಶಂಕರ್, ಗ್ರಾಮ ಆಡಳಿತಾಧಿಕಾರಿಗಳಾದ ಅಬ್ದುಲ್ ರಶೀದ್, ಚಂದ್ರಮೌಳೇಶ್ವರ, ಮುಖೇಶ್, ಮಾರುತಿ ನಾಯಕ, ಹೇಮಂತಕುಮಾರ್, ನಾಡ ಕಚೇರಿ ಗುಮಾಸ್ತ ಮಂಜು ತೆರವು ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದು, ವರುಣ ಠಾಣೆ ಸಬ್ ಇನ್ಸ್‌ಪೆಕ್ಟರ್ ಚೇತನ್ ಹಾಗೂ ಸಿಬ್ಬಂದಿ ಪೊಲೀಸ್ ಬಂದೋಬಸ್ತ್ ಒದಗಿಸಿದ್ದರು.

ಮೈಸೂರು ತಾಲೂಕು, ವರುಣ ಹೋಬಳಿ, ಹಾರೋಹಳ್ಳಿ ಗ್ರಾಮದ ಸರ್ವೆ ನಂಬರ್ 274ರಲ್ಲಿ ಕರೀಗೌಡ ಎಂಬುವರು 2 ಎಕರೆ, ನಾರಾಯಣಗೌಡ 1 ಎಕರೆ, ಚಿಕ್ಕಲಿಂಗಯ್ಯ 1.20 ಎಕರೆ, ಮುದ್ದೇಗೌಡ 1.20 ಎಕರೆ ಸೇರಿದಂತೆ ಇತರರು ಸರ್ಕಾರಿ ಜಮೀನನ್ನು ಒತ್ತುವರಿ ಮಾಡಿಕೊಂಡಿದ್ದಾರೆಂದು ವಿಚಾರಣೆ ನಡೆಸಿದ ಉಪ ವಿಭಾಗಾಧಿಕಾರಿ ಕೆ.ಆರ್. ರಕ್ಷಿತ್ ತಿಳಿಸಿದ್ದರು.

ಸರ್ವೆ ನಂಬರ್ 274ರಲ್ಲಿ ನಡೆದಿರುವ ಎಲ್ಲಾ ಎಂಆರ್‌ಗಳನ್ನು ರದ್ದುಪಡಿಸಿ ಸದರಿ ಜಮೀನುಗಳಿಗೆ ಸಂಬಂಧಿಸಿದಂತೆ ಸರ್ಕಾರಿ ಹುಲ್ಲುಬನ್ನಿ ಎಂದು ಆರ್‌ಟಿಸಿ ಕಾಲಂ 9ರಲ್ಲಿ ನಮೂದಿಸಿ ಸರ್ಕಾರದ ಸುಪರ್ದಿಗೆ ಪಡೆಯುವಂತೆ ಅವರು ಸೂಚಿಸಿದ್ದರು. ಉಪವಿಭಾಗಾಧಿಕಾರಿಗಳ ನ್ಯಾಯಾಲಯದ ತೀರ್ಪಿನಂತೆ ಸದರಿ ಭೂಮಿ ಒತ್ತುವರಿ ತೆರವುಗೊಳಿಸಿ ಸರ್ಕಾರದ ವಶಕ್ಕೆ ಪಡೆಯುವಂತೆ ಜಿಲ್ಲಾಧಿಕಾರಿಗಳು ನೀಡಿದ ನಿರ್ದೇಶನದಂತೆ ಅಧೀನಾಧಿಕಾರಿಗಳು ಶುಕ್ರವಾರ ಯಶಸ್ವಿ ಕಾರ್ಯಾಚರಣೆ ನಡೆಸಿದ್ದಾರೆ.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಗುಂಟೂರು ಖಾರಂ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಮಹಾರಾಜ (ತ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಅರನ್‌ಮನೈ–4 (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಎ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಜಡ್ಜ್‌ಮೆಂಟ್ (ಕ)	4 ಪ್ರದರ್ಶನಗಳು
ರಾಜಕಮಲ್	
ಮಹಾರಾಜ (ತ)	4 ಪ್ರದರ್ಶನಗಳು
ಸಂಗಂ	
ಕೋಟಿ (ಕ)	4 ಪ್ರದರ್ಶನಗಳು
ಲಿಡೋ	
ಕರಟಕ ದಮನಕ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಬಹದ್ದೂರ್ (ಕ)	4 ಪ್ರದರ್ಶನಗಳು
ಪ್ರಭಾ	
ಬಹದ್ದೂರ್ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ಇನ್‌ಸೈಟ್ ಔಟ್ 2(3ಡಿ) (ಇಂ): ಬೆ.11ಕ್ಕೆ, ಪೋಕಿರಿ (ತ): ಮ.1ಕ್ಕೆ, ಹಮಾರೆ ಬಾರಹ್ (ಹಿಂ): ಸಂ.4.10ಕ್ಕೆ, ರಾ.7.05ಕ್ಕೆ, ಕ್ರಿಯೇಷನ್ಸ್ ಆಫ್ ದಿ ಗಾಡ್ಸ್ 1 (ಚೈ): ರಾ.10ಕ್ಕೆ.
ಸ್ಕ್ರೀನ್ 2	ಲವ್ ಲಿ (ಕ): ಬೆ.10.25ಕ್ಕೆ, ರಾ.7.10ಕ್ಕೆ, ಮುಂಜ್ಯಾ (ಹಿಂ): ಮ.1.35ಕ್ಕೆ, ಶಿವಮ್ಮ ಚಂದು ಚಾಂಪಿಯನ್ (ಹಿಂ): ಸಂ.4.10ಕ್ಕೆ, ನಡನ್ನ ಸಂಭವಂ (ಮ): ರಾ.10.15ಕ್ಕೆ.
ಸ್ಕ್ರೀನ್ 3	ಮಹಾರಾಜ (ತ): ಬೆ.10.30ಕ್ಕೆ, ಸಂ.4.15ಕ್ಕೆ, ಸಂಭವಾಮಿ ಯುಗೇ ಯುಗೆ (ಕ): ಮ.1.25ಕ್ಕೆ, ಉಲ್ಲೋಝುಕ್ಕು (ಮ): ರಾ.7.15ಕ್ಕೆ, ಜಹಂಗೀರ್ ನ್ಯಾಷನಲ್ ಯೂನಿವರ್ಸಿಟಿ (ಹಿಂ): ರಾ.9.50ಕ್ಕೆ.
ಸ್ಕ್ರೀನ್ 4	ಚಿಲ್ಲಿ ಚಿಕನ್ (ಕ): ಬೆ.10.50ಕ್ಕೆ, ಕೋಟಿ (ಕ): ಮ.1.25ಕ್ಕೆ, ಸಂ.6.45ಕ್ಕೆ, ರಾ.10ಕ್ಕೆ, ಇನ್‌ಸೈಟ್ ಔಟ್ (3ಡಿ)(ಇಂ): ಸಂ.4.40ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ಇನ್‌ಸೈಟ್ ಔಟ್ (3ಡಿ)(ಹಿಂ): ಬೆ.11ಕ್ಕೆ, ಇನ್‌ಸೈಟ್ ಔಟ್ (3ಡಿ)(ಇಂ): ಮ.1.20ಕ್ಕೆ, ಸಂ.4.20ಕ್ಕೆ, ಸಂ.6.40ಕ್ಕೆ, ಮುಂಜ್ಯಾ (ಹಿಂ): ರಾ.9ಕ್ಕೆ.
ಸ್ಕ್ರೀನ್ 2	ಮುಂಜ್ಯಾ (ಹಿಂ): ಬೆ.10ಕ್ಕೆ, ರಾ.7.35ಕ್ಕೆ, ರಾಕ್‌ಸ್ಟಾರ್ (ಹಿಂ): ಮ.12.45ಕ್ಕೆ, ಕೋಟಿ (ಕ): ಸಂ.4.05ಕ್ಕೆ, ರಾ.10.20ಕ್ಕೆ,
ಸ್ಕ್ರೀನ್ 3	ಚಂದು ಚಾಂಪಿಯನ್ (ಹಿಂ): ಬೆ.9.50ಕ್ಕೆ, ಮ.1ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ.
ಸ್ಕ್ರೀನ್ 4	ಕೋಟಿ (ಕ): ಬೆ.10.05ಕ್ಕೆ, ಮಹಾರಾಜ (ತ): ಮ.1.35ಕ್ಕೆ, ರಾ.7.05ಕ್ಕೆ, ಶಿವಮ್ಮ ಹರೆಹಂಚಿನಾಳ (ಕ): ಸಂ.4.40ಕ್ಕೆ, ಜಿಆರ್‌ಆರ್‌ಆರ್ (ಮ): ರಾ.10.10ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	ಕೋಟಿ (ಕ): ಮ.1ಕ್ಕೆ, ಸಂಭವಾಮಿ ಯುಗೇ ಯುಗೆ (ಕ): ಸಂ.4.05ಕ್ಕೆ, ಚಿಲ್ಲಿ ಚಿಕನ್ (ಕ): ರಾ.7.05ಕ್ಕೆ, ಮಹಾರಾಜ (ತ): ರಾ.9.30ಕ್ಕೆ.
ಸ್ಕ್ರೀನ್ 2	ದೇಸಾಯಿ (ಕ): ಸಂ.4.15ಕ್ಕೆ, ಕೋಟಿ (ಕ): ರಾ.7.45ಕ್ಕೆ
ಸ್ಕ್ರೀನ್ 3	ಪೋಕಿರಿ (ತ): ಮ.1.15ಕ್ಕೆ, ಲವ್ ಲಿ (ಕ): ಸಂ.4.20ಕ್ಕೆ, ರಾ.7.10ಕ್ಕೆ.
ಸ್ಕ್ರೀನ್ 4	ಲವ್ ಲಿ (ಕ): ಮ.1.30ಕ್ಕೆ, ಮಹಾರಾಜ (ತ): ಸಂ.6.45ಕ್ಕೆ, ಕೋಟಿ (ಕ): ರಾ.9.25ಕ್ಕೆ.

ಪಿವಿಆರ್ ಸಿನಿಮಾಸ್

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಚನ್ನಪಟ್ಟಣದಿಂದ ನಿಖಿಲ್ ಕುಮಾರಸ್ವಾಮಿ ಸ್ಪರ್ಧೆ ಬೇಡಿಕೆ

ಮೈಸೂರು, ಜೂ.22(ಎಂಟಿವೈ)– ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರ ರಾಜೀನಾಮೆಯಿಂದ ತೆರವಾಗಿರುವ ಚನ್ನಪಟ್ಟಣ ವಿಧಾನಸಭಾ ಕ್ಷೇತ್ರದ ಉಪ ಚುನಾವಣೆಯಲ್ಲಿ ನಿಖಿಲ್ ಕುಮಾರಸ್ವಾಮಿ ಅವರನ್ನು ಕಣಕ್ಕಿಳಿಸಬೇಕು ಎಂಬುದು ನಮ್ಮ ಬೇಡಿಕೆಯಾಗಿದ್ದು, ಕ್ಷೇತ್ರ ಬಿಟ್ಟುಕೊಡುವಂತೆ ಬಿಜೆಪಿಯೊಂದಿಗೆ ಮಾತುಕತೆ ನಡೆಯುತ್ತಿದೆ ಎಂದು ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ತಿಳಿಸಿದ್ದಾರೆ.



ಮೈಸೂರಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಚನ್ನಪಟ್ಟಣ ಜೆಡಿಎಸ್ ಭದ್ರಕೋಟೆಯಾಗಿದೆ. ಹೆಚ್.ಡಿ.ಕುಮಾರಸ್ವಾಮಿ ಅವರು ಈ ಕ್ಷೇತ್ರವನ್ನು ಪ್ರತಿನಿಧಿಸುತ್ತಿದ್ದರು. ಮಂಡ್ಯದಿಂದ ಲೋಕಸಭಾ ಚುನಾವಣೆಯಲ್ಲಿ ಗೆದ್ದು, ಇದೀಗ ಅವರು ಕೇಂದ್ರದಲ್ಲಿ ಮಂತ್ರಿಯಾಗಿರುವುದರಿಂದ ತೆರವಾದ ಕ್ಷೇತ್ರಕ್ಕೆ ನಡೆಯುವ ಉಪ ಚುನಾವಣೆಯಲ್ಲಿ ನಿಖಿಲ್ ಕುಮಾರಸ್ವಾಮಿ ಸ್ಪರ್ಧೆ ಮಾಡಬೇಕೆಂಬುದು ನಮ್ಮ ಆಸೆ ಎಂದರು.

ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರನ್ನು ಜನ ಈಗಾಗಲೇ ತಿರಸ್ಕರಿಸಿದ್ದಾರೆ. ಆದರೂ ಚನ್ನಪಟ್ಟಣ ಕ್ಷೇತ್ರದಲ್ಲಿ ಓಡಾಡುತ್ತಿದ್ದಾರೆ. ಲೋಕಸಭಾ ಚುನಾವಣೆಯಲ್ಲಿ ಅಲ್ಲಿನ ಜನ ತಕ್ಕ ಪಾಠ ಕಲಿಸಿದ್ದಾರೆ. ಜೆಡಿಎಸ್–ಬಿಜೆಪಿ ಮೈತ್ರಿ ಪರ ಜನ ಒಲವು ತೋರಿದ್ದಾರೆ. ಈ ಹಿನ್ನೆಲೆಯಲ್ಲಿ ಚನ್ನಪಟ್ಟಣ ಕ್ಷೇತ್ರವನ್ನು ಜೆಡಿಎಸ್‌ಗೆ ಬಿಟ್ಟುಕೊಡುವ ಬಗ್ಗೆ ಮಾತುಕತೆ ನಡೆದಿದೆ. ಈ ಬಗ್ಗೆ ಎರಡು ಪಕ್ಷಗಳ ನಾಯಕರು ಚರ್ಚಿಸಿ. ಅಂತಿಮ ತೀರ್ಮಾನ ಕೈಗೊಳ್ಳುತ್ತಾರೆ ಎಂದು ತಿಳಿಸಿದರು.

ಬೇಬಿ ಬೆಟ್ಟದಲ್ಲಿ ಟ್ರಯಲ್ ಬ್ಲಾಸ್ಟ್‌ಗೆ ಸಿದ್ಧತೆಗೆ ಸ್ವಾಮೀಜಿ ಆಕ್ಷೇಪ

ಮೈಸೂರು, ಜೂ.22(ಎಂಟಿವೈ)– ಪಾಂಡವಪುರ ತಾಲೂಕಿನ ಬೇಬಿ ಬೆಟ್ಟದಲ್ಲಿ ಟ್ರಯಲ್ ಬ್ಲಾಸ್ಟ್ ಗೆ ಸದ್ದಿಲ್ಲದೇ ಸಿದ್ಧತೆ ನಡೆಯುತ್ತಿದ್ದು, ಪರಿಸರಕ್ಕೆ ಮಾರಕವಾಗುವ ಟ್ರಯಲ್ ಬ್ಲಾಸ್ಟ್‌ಗೆ ಸರ್ಕಾರ ಅನುಮತಿ ನೀಡಬಾರದು ಎಂದು ಬೇಬಿ ಮಠದ ಶ್ರೀ ತ್ರಿನೇತ್ರ ಮಹಂತ ಶಿವಯೋಗಿ ಸ್ವಾಮೀಜಿ ಒತ್ತಾಯಿಸಿದ್ದಾರೆ.

ಮೈಸೂರಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಎಲ್ಲದಕ್ಕೂ ಸರ್ಕಾರವೇ ಅನುಮತಿ ನೀಡುತ್ತಿದೆ. ಗಣಿಗಾರಿಕೆಗೆ ಸಂಬಂಧಿಸಿದಂತೆ ಪ್ರತ್ಯೇಕ ಇಲಾಖೆಯಿದೆ. ಆ ಇಲಾಖೆ ಮೌನ ವಹಿಸಿದೆ. ಗಣಿಗಾರಿಕೆ ಪರಿಸರಕ್ಕೆ ಮಾರಕವಾಗಲಿದೆ. ಸರ್ಕಾರ ಇದನ್ನು ಗಂಭೀರವಾಗಿ ಪರಿಗಣಿಸಬೇಕು. ಟ್ರಯಲ್ ಬ್ಲಾಸ್ಟ್‌ನಿಂದಾಗುವ ಸಾಧಕ ಬಾಧಕಗಳನ್ನು ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದರು.

ರಾಜ್ಯದಲ್ಲಿ ಮುಂಗಾರು ಮಳೆ ಆರಂಭದಲ್ಲೇ ವಿಫಲವಾಗಿದೆ. ಮಳೆ ಕೊರತೆಯಿಂದಾಗಿ ಜಲಾಶಯಗಳಿಗೆ ನೀರು ಹರಿದು ಬಂದಿಲ್ಲ. ಕನ್ನಂಬಾಡಿ ಕಟ್ಟೆ ಭರ್ತಿಯಾದರೆ ಜನರ ಬದುಕು ಹಸನಾಗಲಿದೆ. ಇಲ್ಲದಿದ್ದರೆ ಜನರಿಗೆ ಸಂಕಷ್ಟ ಎದುರಾಗಲಿದೆ. ಮಳೆ ಕೈಕೊಟ್ಟರೆ ಸರ್ಕಾರ ಪರ್ಯಾಯ ಕ್ರಮಗಳನ್ನು ಕೈಗೊಳ್ಳಬೇಕು. ಪರಿಸ್ಥಿತಿ ನಿಭಾಯಿಸಲು ಈಗಿನಿಂದಲೇ ತಯಾರಿ ಮಾಡಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಬಿಜೆಪಿ ರಾಜ್ಯಾಧ್ಯಕ್ಷ ಸ್ಥಾನಕ್ಕೆ ಬೇಡಿಕೆ ಇಟ್ಟಿದ್ದೇನೆ



ವಿಜಯಪುರ, ಜೂ.22–ನನ್ನ ಮನವೊಲಿಕೆ ಪ್ರಯತ್ನಗಳು ನಡೆಯುತ್ತಲೇ ಇದ್ದು, ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಹುದ್ದೆ ನೀಡೋದಾಗಿ ಈಚೆಗೆ ನಾಗಕ್ಕೆ ಬಂದ ನಾಯಕರು ಭರವಸೆ ನೀಡಿದ್ದರು. ಆದರೆ, ನಾನು ವಿಜಯೇಂದ್ರನೇ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಹುದ್ದೆ ಇಟ್ಟುಕೊಳ್ಳಲಿ, ನಾನು ರಾಜ್ಯಾಧ್ಯಕ್ಷನಾಗುತ್ತೇನೆಂದು ಹೇಳಿದ್ದೇನೆ ಎಂದು ನಗರ ಶಾಸಕ ಬಸನಗೌಡ ಪಾಟೀಲ್ ಯತ್ನಾಳ ಹೇಳಿದರು. ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ ಹಾಗೂ ವಿಜಯೇಂದ್ರ ಜೊತೆ ಹೊಂದಾಣಿಕೆ ಆಗುವಂತೆ ಯತ್ನಾಳ್ ಮನವೊಲಿಕೆಗೆ ಪ್ರಯತ್ನಗಳು ನಡೆಯುತ್ತಲೇ ಇವೆ. ಆದರೆ ನಾನು ಅವರಿಗೆ ಕಾಂಪಿಟೇಟರ್ ಇದ್ದೇನೆ ಎಂದು ತಿಳಿಸಿದರು.

ಕಾಯ್ದೆ ಬದಲಾಗಲಿ: ಚನ್ನಪಟ್ಟಣ ಉಪಚುನಾವಣೆಯಲ್ಲಿ ಕಾಂಗ್ರೆಸ್‌ನಿಂದ ಡಿ.ಕೆ.ಶಿವಕುಮಾರ್ ಅಥವಾ ಡಿ.ಕೆ.ಸುರೇಶ ಸ್ಪರ್ಧೆ ಮಾಡುವ ಚರ್ಚೆ ನಡೆದಿರುವ ಕುರಿತು ಮಾತನಾಡಿದ ಅವರು, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಯಾರು ಬೇಕಾದರೂ ಸ್ಪರ್ಧೆ ಮಾಡಬಹುದು. ಆದರೆ ಚುನಾವಣೆ ಸ್ಪರ್ಧೆಯ ವಿಚಾರದಲ್ಲಿ ಚುನಾವಣಾ ಆಯೋಗ ಕೆಲ ಕಾಯ್ದೆಗಳನ್ನು ಮಾರ್ಪಾಡು ಮಾಡಬೇಕು. ಒಂದು ಕ್ಷೇತ್ರದಲ್ಲಿ ಸಂಸದ, ಶಾಸಕರು ಆಗಿರುವವರು ಮತ್ತೊಂದು ಕ್ಷೇತ್ರಕ್ಕೆ ಸ್ಪರ್ಧೆ ಮಾಡಲು ಅವಕಾಶ ನೀಡಬಾರದು. ಈ ಕುರಿತು ಹೊಸ ಕಾನೂನು ಜಾರಿ ಮಾಡಬೇಕೆಂದು ಯತ್ನಾಳ್ ಒತ್ತಾಯಿಸಿದರು.

ಕಳೆದ ಲೋಕಸಭಾ ಚುನಾವಣೆಯಲ್ಲಿ ನನಗೂ ಬಾಗಲಕೋಟೆ ಅಥವಾ ಬೆಳಗಾವಿಯಿಂದ ಸ್ಪರ್ಧೆ ಮಾಡುವಂತೆ ಹೇಳಲಾಗಿತ್ತು. ನಾನು ಸ್ಪರ್ಧೆ ಮಾಡಲಿಲ್ಲ. ಒಂದು ಕ್ಷೇತ್ರದಲ್ಲಿ ಶಾಸಕರಾಗಿದ್ದವರು, ಸಚಿವರಾಗಿದ್ದರೂ ಉಪಚುನಾವಣೆಗಳಲ್ಲಿ ಸ್ಪರ್ಧೆ ಮಾಡುವಂತಾಗಬಾರದು. ಈ ನಿಟ್ಟಿನಲ್ಲಿಯೂ ಕಾನೂನು ಜಾರಿಯಾಗಬೇಕು. ಉಪ ಚುನಾವಣೆ ನಡೆಯುವುದರಿಂದ ನೀತಿ ಸಂಹಿತೆ ಎರಡು ತಿಂಗಳು ಜಾರಿಯಲ್ಲಿರುತ್ತದೆ. ಇದರಿಂದ ಅಭಿವೃದ್ಧಿ ಕಾಮಗಾರಿಗಳು ಆಗಲ್ಲ. ಈ ಮೂಲಕ ಚುನಾವಣಾ ವಿಚಾರದಲ್ಲಿ ಹೊಸ ಕಾನೂನು ಜಾರಿಗೆ ತರಬೇಕು ಎಂದು ಆಗ್ರಹಿಸಿದರು.

ಗ್ಯಾರಂಟಿಗಾಗಿ ಬೆಲೆ ಏರಿಕೆ: ರಾಜ್ಯ ಸರ್ಕಾರದಿಂದ ಬೆಲೆ ಏರಿಕೆ ವಿಚಾರಕ್ಕೆ ಗರಂ ಆದ ಅವರು, ಈಗಾಗಲೇ ಪೆಟ್ರೋಲ್, ಡೀಸೆಲ್ ಬೆಲೆ ಏರಿಕೆ ಮಾಡಲಾಗಿದೆ. ಈಗ ಬಸ್ ದರವನ್ನು ಏರಿಕೆ ಮಾಡುತ್ತಿದ್ದಾರೆ. ರಾಜ್ಯ ಸರ್ಕಾರ ದಿವಾಳಿಯಾಗಿದೆ. ಗ್ಯಾರಂಟಿ ಯೋಜನೆಗಳು ಜೀವಂತವಾಗಿರಲು ಸರ್ಕಾರ ಬೆಲೆ ಏರಿಕೆ ಮಾಡುತ್ತಿದೆ. ಬೆಲೆ ಏರಿಕೆ ಮಾಡದಿದ್ದರೆ ಸರ್ಕಾರಿ ನೌಕರರ ಸಂಬಳ ನೀಡಲು ಸರ್ಕಾರದ ಬಳಿ ಹಣ ಇಲ್ಲದಂತಾಗಿದೆ. ಕಾಂಗ್ರೆಸ್ ಶಾಸಕರು, ಸಚಿವರು ಅಭಿವೃದ್ಧಿಗೆ ಅನುದಾನ ನೀಡುತ್ತಿಲ್ಲ ಎನ್ನುತ್ತಿದ್ದಾರೆ. ಗ್ಯಾರಂಟಿ ಯೋಜನೆಗಳು ಬೇಡವೆಂದು ಸಚಿವ ಚೆಲುವರಾಯಸ್ವಾಮಿ ಹೇಳಿದ್ದಾರೆ. ಗ್ಯಾರಂಟಿ ಯೋಜನೆಗಳನ್ನು ಬಂದ್ ಮಾಡಿದರೆ ಮತ್ತಷ್ಟು ಕಾಂಗ್ರೆಸ್‌ಗೆ ಪರಿಣಾಮ ಬೀರಲಿದೆ ಎಂದು ಮುಂದುವರಿಸಿಕೊಂಡು ಹೋಗುತ್ತಿದ್ದಾರೆ. ಗ್ಯಾರಂಟಿ ಯೋಜನೆಗಳಿಗಾಗಿ ಬೆಲೆ ಏರಿಕೆ ಮಾಡಲಾಗುತ್ತಿದೆ. ಮದ್ಯದ ದರವನ್ನು ಏರಿಕೆ ಮಾಡುತ್ತಿದ್ದಾರೆ, ಮದ್ಯದ ದರ ಏರಿಕೆ ಮಾಡಿದರೆ ಮಾಡಲಿ ಎಂದು ಹೇಳಿದರು.

ಸಚಿವರ ಕ್ಷೇತ್ರದಲ್ಲೇ ಜಮೀನು ಕಬಳಿಕೆ ಹುನ್ನಾರ: ಸರ್ಕಾರ ವ್ಯಾಪಕ ಭ್ರಷ್ಟಾಚಾರದಲ್ಲಿ ಭಾಗಿಯಾಗಿದೆ. ಎಲ್ಲ ಮಂತ್ರಿಗಳು ಲೂಟಿ ಮಾಡುತ್ತಿದ್ದಾರೆ. ಕಂದಾಯ ಸಚಿವರ ಕ್ಷೇತ್ರದಲ್ಲಿಯೇ ಇಬ್ಬರು ಸಚಿವರು ಜಮೀನು ನುಂಗೋ ಹುನ್ನಾರ ನಡೆಸಿದ್ದಾರೆ ಎಂದು ಯತ್ನಾಳ ಬಾಂಬ್ ಸಿಡಿಸಿದರು. ಬೆಂಗಳೂರಿನ ಹೃದಯ ಭಾಗದಲ್ಲಿನ ಸಾವಿರಾರು ಕೋಟಿ ರುಪಾಯಿ ಮೌಲ್ಯದ ಜಮೀನು ನುಂಗೋ ಹುನ್ನಾರ ನಡೆದಿದೆ. 20 ಎಕರೆ ಜಮೀನನ್ನು ನಕಲಿ ಕಾಗದ ಪತ್ರ ಮಾಡಿ ಬೇನಾಮಿಯಾಗಿ ಕಬಳಿಸಲು ಮುಂದಾಗಿದ್ದಾರೆ ಎಂದು ಶಾಸಕ ಯತ್ನಾಳ ಸ್ಫೋಟಕ ಹೇಳಿಕೆ ನೀಡಿದರು.

ಸ್ವಾತಿ ಮಲಿವಾಲ್ ಮೇಲೆ ಹಲ್ಲೆ ಪ್ರಕರಣ: ಬಿಭವ್‌ಕುಮಾರ್ ನ್ಯಾಯಾಂಗ ಬಂಧನ ಜುಲೈ 6 ರವರೆಗೆ ವಿಸ್ತರಣೆ

ನವದೆಹಲಿ, ಜೂ.22– ಎಎಪಿ ರಾಜ್ಯಸಭಾ ಸದಸ್ಯೆ ಸ್ವಾತಿ ಮಲಿವಾಲ್ ಅವರ ಮೇಲೆ ಹಲ್ಲೆ ನಡೆಸಿದ ಆರೋಪದ ಮೇಲೆ ಬಂಧನಕ್ಕೊಳಗಾಗಿರುವ ದೆಹಲಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ಅವರ ಆಪ್ತ ಕಾರ್ಯದರ್ಶಿ ಬಿಭವ್ ಕುಮಾರ್ ಅವರ ನ್ಯಾಯಾಂಗ ಬಂಧನವನ್ನು ನ್ಯಾಯಾಲಯ ಶನಿವಾರ ಜುಲೈ 6ರವರೆಗೆ ವಿಸ್ತರಿಸಿದೆ.

ಮೇ 13 ರಂದು ಮುಖ್ಯಮಂತ್ರಿಯವರ ಅಧಿಕೃತ ನಿವಾಸದಲ್ಲಿ ಸ್ವಾತಿ ಮಲಿವಾಲ್ ಮೇಲೆ ಹಲ್ಲೆ ನಡೆಸಿದ ಆರೋಪದ ಮೇಲೆ ಮೇ 18ರಂದು ಕುಮಾರ್ ಅವರನ್ನು ಬಂಧಿಸಲಾಗಿತ್ತು. ಕುಮಾರ್ ನ್ಯಾಯಾಂಗ ಬಂಧನ ಅವಧಿ ಇಂದಿಗೆ ಅಂತ್ಯಗೊಂಡ ಹಿನ್ನೆಲೆಯಲ್ಲಿ ಆರೋಪಿಯನ್ನು ವಿಡಿಯೋ ಕಾನ್ಫರೆನ್ಸ್ ಮೂಲಕ ಮೆಟ್ರೋಪಾಲಿಟನ್ ಮ್ಯಾಜಿಸ್ಟ್ರೇಟ್ ಗೌರವ್ ಗೋಯಲ್ ಅವರ ಮುಂದೆ ಹಾಜರು ಪಡಿಸಲಾಯಿತು. ವಿಚಾರಣೆ ನಡೆಸಿದ ಕೋರ್ಟ್, ಕುಮಾರ್ ನ್ಯಾಯಾಂಗ ಬಂಧನವನ್ನು ಜುಲೈ 6 ರವರೆಗೆ ವಿಸ್ತರಿಸಿದ್ದಾರೆ.

ಉಷ್ಣ ಅಲೆಗೆ ದೆಹಲಿ ತತ್ತರ: 4 ದಿನಗಳಲ್ಲಿ 435 ಮಂದಿ ಬಲಿ

ನವದೆಹಲಿ, ಜೂ.22– ನವದೆಹಲಿ ಸೇರಿದಂತೆ ಉತ್ತರ ಭಾರತದಲ್ಲಿ ಉಷ್ಣ ಅಲೆ ತನ್ನ ಆರ್ಭಟವನ್ನು ಮುಂದುವರಿಸಿದೆ. ಉಷ್ಣ ಗಾಳಿಯಿಂದಾಗಿ ಜನರು ಆಘಾತಕ್ಕೊಳಗಾಗಿ ನಿಂತಲ್ಲೇ ಕುಸಿದು ಬಿದ್ದು, ಉಸಿರು ಚೆಲ್ಲುತ್ತಿದ್ದಾರೆ. ಇದರ ಪರಿಣಾಮವಾಗಿ ದೆಹಲಿಯಲ್ಲಿ ಕಳೆದ 4 ದಿನಗಳಲ್ಲಿ ಬರೋಬ್ಬರಿ 435 ಮಂದಿ ಉಷ್ಣ ಸಂಬಂಧಿ ವ್ಯಾಧಿಗಳಿಂದ ಸಾವನ್ನಪ್ಪಿದ್ದಾರೆ.

ದೆಹಲಿಯ ಅತೀದೊಡ್ಡ ಸ್ಮಶಾನವಾದ ನಿಗಮಬೋಧ್ ಘಾಟ್ ನಲ್ಲಿನ ಪರಿಸ್ಥಿತಿಯನ್ನು ಗಮನಿಸಿದರೆ, ರಾಷ್ಟ್ರ ರಾಜಧಾನಿಯಲ್ಲಿ ಕೋವಿಡ್ ರೀತಿಯ ಪರಿಸ್ಥಿತಿ ನಿರ್ಮಾಣವಾಗಿದೆ ಎಂಬಂತಹ ಭಾವನೆ ಮೂಡುತ್ತಿದೆ. ಜೂನ್ 18 ಮತ್ತು 21 ನಡುವೆ 435 ಶವಗಳು ಸ್ಮಶಾನಕ್ಕೆ ಬಂದಿವೆ ಎಂದು ಸ್ಮಶಾನ ನಿರ್ವಹಣೆಯ ಅಧಿಕಾರಿಗಳು ಹೇಳಿದ್ದಾರೆ.

ಜೂನ್ 18 ರಂದು 97 ಮೃತದೇಹಗಳು ಅಂತಿಮ ವಿಧಿವಿಧಾನಕ್ಕೆ ಬಂದಿದ್ದವು. ಜೂನ್ 19ರಂದು ನಿಗಮಬೋಧ ಘಾಟ್‌ನಲ್ಲಿ ಸುಮಾರು 142 ಚಿತೆಗಳನ್ನು ಸುಡಲಾಯಿತು. ಈ ಅಂಕಿ ಅಂಶವು ಇದೂವರೆಗೆ ಘಾಟ್‌ಗೆ ಬಂದ ದೇಹಗಳ ಸರಾಸರಿ ಸಂಖ್ಯೆಗಿಂತ ಸುಮಾರು ಮೂರು ಪಟ್ಟು ಹೆಚ್ಚಾಗಿದೆ. ಸಾಂಕ್ರಾಮಿಕ ರೋಗ ಸಂದರ್ಭದಲ್ಲಿ ಒಂದು ದಿನದಲ್ಲಿ 253 ಶವಸಂಸ್ಕಾರಗಳನ್ನು ನಡೆಸಲಾಗಿತ್ತು. ಇದೀಗ ಅದೇ ರೀತಿಯ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ತಿಳಿಸಿದ್ದಾರೆ.

ಉಷ್ಣ ಅಲೆಯಿಂದಲೇ ಈ ಸಾವುಗಳು ಸಂಭವಿಸಿವೆ ಎಂದು ಅಧಿಕೃತವಾಗಿ ಸರ್ಕಾರ ಹೇಳದಿದ್ದರೂ, ವಾತಾವರಣ ಪರಿಸ್ಥಿತಿಯನ್ನು ಗಮಿಸಿದರೆ ಈ ಸಾವುಗಳಿಗೆ ಉಷ್ಣ ಅಲೆಯೇ ಕಾರಣ ಎಂದು ಅಧಿಕಾರಿಗಳು ಶಂಕಿಸಿದ್ದಾರೆ.

ಒಂದು ದಿನದಲ್ಲಿ ಸರಾಸರಿ 55 ಶವ ಸಂಸ್ಕಾರಗಳು ನಡೆಯುತ್ತಿವೆ. ಚಳಿಗಾಲದಲ್ಲಿ ಈ ಸಂಖ್ಯೆ ಸ್ವಲ್ಪ ಹೆಚ್ಚಾಗುತ್ತದೆ. ಶವಸಂಸ್ಕಾರಕ್ಕೆ ಜನರು ಸಾಲುಗಟ್ಟಿ ನಿಲ್ಲುತ್ತಿರುವುದನ್ನು ನೋಡಿದರೆ ಕೋವಿಡ್ ಪರಿಸ್ಥಿತಿ ನೆನಪಿಗೆ ಬರುತ್ತಿದೆ ಎಂದು ನಿಗಮ್ ಬೋಧ್ ಸಂಚಲನ್ ಸಮಿತಿಯ ಉಸ್ತುವಾರಿ ಸುಮನ್ ಕುಮಾರ್ ಗುಪ್ತಾ ಹೇಳಿದ್ದಾರೆ.

ಜೂನ್ 16ರಿಂದ ಉಷ್ಣ ಅಲೆಯಿಂದಾಗಿ ಸಾವಿನ ಸಂಖ್ಯೆ ಏರಿಕೆಯಾಗಲು ಆರಂಭವಾಗಿತ್ತು. ಅಂದು ಘಾಟ್‌ಗೆ 70 ಶವಗಳು ಅಂತ್ಯ ಸಂಸ್ಕಾರಕ್ಕೆ ಬಂದಿದ್ದವು. ನಂತರ ಈ ಸಂಖ್ಯೆ ಏರಿಕೆಯಾಗುತ್ತಲೇ ಇದ್ದವು. ಜೂ.20 ರಂದು, ಘಾಟ್‌ಗೆ 124 ಶವಗಳು ಬಂದಿದ್ದವು. ಆದಾಗ್ಯೂ, ಶುಕ್ರವಾರದ ಹವಾಮಾನ ಬದಲಾವಣೆ ಮತ್ತು ಬಿಸಿಲು ಕಡಿಮೆಯಾದ ಬಳಿಕ ಈ ಸಂಖ್ಯೆ 75ಕ್ಕೆ ಇಳಿಕೆಯಾಗಿತ್ತು ಎಂದು ತಿಳಿಸಿದ್ದಾರೆ.

ಅಯೋಧ್ಯೆ ರಾಮಮಂದಿರ ಪ್ರಾಣಪ್ರತಿಷ್ಠೆ ನೆರವೇರಿಸಿದ ಅರ್ಚಕ ಲಕ್ಷ್ಮಿಕಾಂತ್ ದೀಕ್ಷಿತ್ ನಿಧನ



ಅಯೋಧ್ಯೆ, ಜೂ.22– ಬರೋಬ್ಬರಿ 500 ವರ್ಷಗಳ ಬಳಿಕ ನಿರ್ಮಾಣಗೊಂಡ ಆಯೋಧ್ಯೆ ಭವ್ಯ ರಾಮಮಂದಿರ ಪ್ರಾಣ ಪ್ರತಿಷ್ಠೆ ನೆರವೇರಿಸಿದ ಪ್ರಧಾನ ಅರ್ಚಕ ಲಕ್ಷ್ಮಿಕಾಂತ್ ದೀಕ್ಷಿತ್ ನಿಧನರಾಗಿದ್ದಾರೆ.

86 ವರ್ಷದ ಲಕ್ಷ್ಮಿಕಾಂತ್ ದೀಕ್ಷಿತ್ ಕಳೆದ ಕೆಲ ದಿನಗಳಿಂದ ಅನಾರೋಗ್ಯದಿಂದ ಬಳಲುತ್ತಿದ್ದರು. ಇಂದು(ಜೂ.22) ಬೆಳಗ್ಗೆ ಲಕ್ಷ್ಮಿಕಾಂತ್ ದೀಕ್ಷಿತ್ ನಿಧನರಾಗಿದ್ದಾರೆ ಎಂದು ಕುಟುಂಬಸ್ಥರು ಮಾಹಿತಿ ನೀಡಿದ್ದಾರೆ. ಮಣಿಕಾಂತ್ ಘಾಟ್‌ನಲ್ಲಿ ಸಕಲ ಗೌರವಗಳೊಂದಿಗೆ ಲಕ್ಷ್ಮಿಕಾಂತ್ ದೀಕ್ಷಿತ್ ಅಂತ್ಯಕ್ರಿಯೆ ನಡೆಯಲಿದೆ.

ಜನವರಿ 22ರಂದು ಪ್ರಧಾನಿ ನರೇಂದ್ರ ಮೋದಿ ಅಮೃತ ಹಸ್ತದ ಮೂಲಕ ಬಾಲ ರಾಮ ಪ್ರಾಣಪ್ರತಿಷ್ಠೆ ನಡೆದಿತ್ತು. ಈ ಪ್ರಾಣಪ್ರತಿಷ್ಠೆಯಲ್ಲಿ ಪ್ರಧಾನ ಅರ್ಚಕರಾಗಿ ಲಕ್ಷ್ಮಿಕಾಂತ್ ದೀಕ್ಷಿತ್ ಕಾರ್ಯನಿರ್ವಹಿಸಿದ್ದರು. ಪ್ರಾಣಪ್ರತಿಷ್ಠೆಗೆ ಅರ್ಚಕರ ತಂಡ ಶ್ರದ್ಧಾ ಭಕ್ತಿಯಿಂದ ಪೂಜಾ ಕೈಂಕರ್ಯಗಳನ್ನು ನೆರವೇರಿಸಿತ್ತು. ಈ ಪೈಕಿ ದೀಕ್ಷಿತ್ ಪ್ರಧಾನ ಅರ್ಚಕರಾಗಿದ್ದರು. ಮೂಲತಃ ಮಹಾರಾಷ್ಟ್ರದ ಸೋಲಾಪುರ ಜಿಲ್ಲೆಯವರಾಗಿರುವ ಲಕ್ಷ್ಮಿಕಾಂತ್ ದೀಕ್ಷಿತ್, ಪೋಷಕರು ಸೇರಿದಂತೆ ಕೆಲ ತಲೆಮಾರು ವಾರಣಾಸಿಯಲ್ಲಿ ನೆಲೆಗೊಂಡಿದೆ. ಲಕ್ಷ್ಮಿಕಾಂತ್ ದೀಕ್ಷಿತ್ ನಿಧನಕ್ಕೆ ಪ್ರಧಾನಿ ಮೋದಿ, ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಸೇರಿದಂತೆ ಹಲವು ಗಣ್ಯರು ಸಂತಾಪ ಸೂಚಿಸಿದ್ದಾರೆ. ಬೇಸರ ಹಾಗೂ ನಿರಾಶಾದಾಯಕ ಸುದ್ದಿ ಕೇಳಿ ನೋವಾಗಿದೆ. ಸಂಗ್ವೇದ ವಿದ್ಯಾಲಯದ ಋಗ್ವೇದ ಪಂಡಿತರು, ಅರ್ಚಕರಾಗಿರುವ ಲಕ್ಷ್ಮಿಕಾಂತ್ ದೀಕ್ಷಿತ್ ನಿಧನ ಸುದ್ದಿಯಿಂದ ನೋವಾಗಿದೆ. ದೀಕ್ಷಿತ್ ಜಿ ಕಾಶಿಯ ಪುನರಜ್ಜೀವನಗೊಳಿಸುವಲ್ಲಿ ಪ್ರಮುಖ ಪಾತ್ರವಹಿಸಿದ್ದರು. ಕಾಶಿ ವಿಶ್ವನಾಥನ ಧಾಮ ಹಾಗೂ ಆಯೋಧ್ಯೆ ರಾಮ ಮಂದಿರ ಉದ್ಘಾಟನೆ ಹಾಗೂ ಪ್ರಾಣಪ್ರತಿಷ್ಠೆ ವೇಳೆ ದೀಕ್ಷಿತ್ ಜಿ ಮಾರ್ಗದರ್ಶನವನ್ನು ನಾನು ನೆನಪಿಸಿಕೊಳ್ಳುತ್ತೇನೆ. ಲಕ್ಷ್ಮಿಕಾಂತ್ ದೀಕ್ಷಿತ್ ನಿಧನ ಈ ಸಮಾಜಕ್ಕೆ ತುಂಬಲಾರದ ನಷ್ಟ ಎಂದು ಪ್ರಧಾನಿ ಮೋದಿ ಟ್ವೀಟ್ ಮಾಡಿದ್ದಾರೆ. ಕಾಶಿ ಧಾಮದ ಪಂಡಿತರು, ಆಯೋಧ್ಯೆ ರಾಮ ಮಂದಿರದ ಪ್ರಧಾನ ಅರ್ಚಕರಾಗಿರುವ ಅಚಾರ್ಯ ಲಕ್ಷ್ಮಿಕಾಂತ್ ದೀಕ್ಷಿತ್ ನಿಧನ ಆಧ್ಯಾತ್ಮಿಕ ಹಾಗೂ ಸಾಹಿತ್ಯ ಲೋಕಕ್ಕೆ ತುಂಬಲಾರದ ನಷ್ಟ, ಸಂಸ್ಕೃತ ಭಾಷೆ ಹಾಗೂ ಭಾರತೀಯ ಸಂಸ್ಕೃತಿ ಅಧ್ಯಯನ, ಯುವ ಸಮೂಹಕ್ಕೆ ಈ ಪರಂಪರೆ, ಸಂಸ್ಕೃತಿಯನ್ನು ತಲುಪಿಸುವ ಕಾರ್ಯ ಮಾಡಿದ ಆಚಾರ್ಯರು ಯಾವತ್ತಿಗೂ ನೆನಪಿನಲ್ಲಿರುತ್ತಾರೆ. ಭಗವಾನ್ ಶ್ರೀರಾಮ ಅವರ ಆತ್ಮಕ್ಕೆ ಶಾಂತಿ ಸಿಗಲು ಪ್ರಾರ್ಥಿಸುತ್ತೇನೆ ಎಂದು ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಟ್ವೀಟ್ ಮಾಡಿದ್ದಾರೆ.

PUBLIC NOTICE

My Client is intended to purchase below mentioned Schedule Property from Smt. Komala W/o M N Ramesh, she has acquired the title of the Schedule Property through Sale deed.

Any person having any right, title, interest, claim in or to the Schedule Property or any part thereof by way of any agreement, contract, lease, trust, inheritance, gift, possession, mortgage, exchange or any such deed/instrument of transfer, easement or otherwise, may submit their objection(s), claim(s) by direct or in writing with us at the under mentioned address through Registered Post along with the supporting documentary proof, within Seven (7) days from the date of this publication. Any objections received thereafter will not be binding on my Client and my Client shall proceed with the Sale.

SCHEDULE: Survey No. 377, measuring 3 Acre 20 Guntas, situated at Doddamaragowdanahalli Village, Ilvala Hobli, Mysore Taluk & District East By: Harish & Sathish's Property, West By: Sampath kumar & other's Property, South By : Sampath kumar & Chikkanna's Property, North By: Mallayaiah & Shivanna's Property.

Sd/- B.S.Leena Devi Papanna,
Advocate, Roll No. KAR1558/05,
9/1, V.V.Mohalla, Mysore,
Ph No. 9449135412
Date: 22.06.2024, Place: Mysore

IN THE PUBLIC TRUSTS REGISTRATION OFFICE
GREATER MUMBAI REGION, MUMBAI.
Dharmadaya Ayukta Bhavan, 1st Floor,
Sasmira Building, Sasmira Road, Worli, Mumbai- 400 030.

PUBLIC NOTICE OF INQUIRY
Change Report No. **DYCC/3029/2023**
Filed by: **Sr. Shruti Chacko**
In the matter of: **Society of the Servants of the Holy Spirit**
P.T.R. No. **F-1000 (Mumbai)**

To,
All concerned having interest :-

WHEREAS THE Reporting trustee of the above trust has filed a Change Report under Section 22 of the Maharashtra Public Trusts Act, 1950 for bringing the below described property on the record of the above named trust and an inquiry is to be made by the Deputy Charity Commissioner, Greater Mumbai Region, Mumbai viz.

1) Whether this property is the property of the Trust? and could be registered in the name of the above Trust?

DESCRIPTION OF THE PROPERTY

Please Add following Immovable Property at Public Trust Register

All that piece and parcel of below mentioned Agricultural land totally measuring 14 Acres 31 Guntas situated at Chittenahalli Village, Kasaba Hobli, Periyapatna Taluka, Maysore District, Karnataka:

Sr. No	Old Sy. Nos.	New Sy. Nos. Assigned after	Extent
1.	97/2, Block-11	106/2	37 Guntas
2.	97/2, Block-12	108	01 Acre 34 Guntas
3.	97/2, Block-13	109	04 Acres
4.	97/2, Block-14	112	04 Acres
5.	97/2, Block-15	113	04 Acres
		Total	**14 Acres 31 Guntas**

together with living and growing plants, erections and structures, electric connection, water connection, easementary rights of way and all the rights and improvements thereon and is bounded as:

East by: Lands of Sri. D. Kariyappa,
West by: Sy. No.106/1, Sy.No.107, Sy. No.110, Sy No.111 & Sy. No.114
South by: Lands belongs to Sri. C.P. Linge Gowda and Belthur Village Boundary,
North by: Bangalore Manglore Highway Road.

Total Consideration - 8,80,00,000/- (Rupees Eight Crore Eighty Lakhs only)

This is to call upon you to submit your objections, if any in the matter before the Deputy Charity Commissioner, Greater Mumbai Region, Mumbai at the above address in person or by a pleader within 30 days from the date of publication of this notice. Failing which the change report will be decided and disposed of on its own merits.

Given under my hand and seal of the Hon'ble Joint Charity Commissioner, Greater Mumbai Region, Mumbai.

This **17th** day of the month of **May, 2024.**

Seal

Sd/-
Superintendent- (J),
Public Trusts Registration Office,
Greater Mumbai Region, Mumbai.